ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ - ಪುಷ್ಪ : ೩೮

ಕೈಗನ್ನಡಿಯಲ್ಲಿ ಕನ್ನಡಿತಿ

ಲೇಖಕರು
ಡಾ.(ಶ್ರೀಮತಿ) ಜ್ಯೋತ್ಸ್ನಾ ಕಾಮತ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ
ಧಾರವಾಡ - ೫೮೦ ೦೦೧

೨೦೦೭-೨೦೦೮

ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆ – ಪುಷ್ಪ : ೩೮

ಕೈಗನ್ನಡಿಯಲ್ಲಿ ಕನ್ನಡಿತಿ

ಲೇಖಕರು

ಡಾ.(ಶ್ರೀಮತಿ) ಜ್ಯೋತ್ಸ್ನಾ ಕಾಮತ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ
ಧಾರವಾಡ – ೫೮೦ ೦೦೧

೨೦೦೭–೨೦೦೮

Kaigannaḍiyalli Kannaḍati by Dr, Smt. Jothasna Kamat, Bangalore.

Published by	:	Honourary Secretary Karnataka Historical Research Society, Dharwad-580001
Size	:	1/8 Demy
Paper used	:	60 CGSM Maplitho
Pages	:	156
Price	:	Rs. 75/-
Year	:	2008
Copies	:	1000

■■

ಕೈಗನ್ನಡಿಯಲ್ಲಿ ಕನ್ನಡಿತಿ

ಲೇಖಕರು	:	ಡಾ.(ಶ್ರೀಮತಿ) ಜ್ಯೋತ್ಸ್ನಾ ಕಾಮತ ಬೆಂಗಳೂರು ಆಕಾಶವಾಣಿಯ ನಿರ್ದೇಶಕಿ (ನಿ.) ರಾಜ್ಯಸಾಹಿತ್ಯ ಅಕಾಡೆಮಿ ಮತ್ತು ರಾಜ್ಯಪ್ರಶಸ್ತಿ ವಿಜೇತರು, ಬೆಂಗಳೂರು
ಪ್ರಕಾಶಕರು	:	ಗೌರವ ಕಾರ್ಯದರ್ಶಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲ ಧಾರವಾಡ – ೫೮೦ ೦೦೧ ೦೮೩೬–೨೪೪೧೧೩೧
ಹಕ್ಕುಗಳು	:	ಪ್ರಕಾಶಕರು ಮತ್ತು ಲೇಖಕರು
ವರ್ಷ	:	೨೦೦೮
ಪುಟಗಳು	:	೧೫೬
ಪ್ರತಿಗಳು	:	೧೦೦೦
ಬೆಲೆ	:	ರೂ. ೭೫/-
ಅಕ್ಷರ ಸಂಯೋಜಕರು	:	ವಚನ ಗ್ರಾಫಿಕ್ಸ, ಧಾರವಾಡ–೧
ಮುದ್ರಕರು	:	ಸರಸ್ವತೀ ಆಫ್‌ಸೆಟ್ ಮುದ್ರಣಾಲಯ ಶಿವಾಜಿ ಬೀದಿ, ಧಾರವಾಡ–೧

ಡಾ.ಎ.ಕೆ. ಶಾಸ್ತ್ರಿ
ನಿವೃತ್ತ ಅಧ್ಯಕ್ಷರು, ಇತಿಹಾಸ ವಿಭಾಗ,
ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಶಿರಸಿ

ಡಾ. ದೇವರಕೊಂಡಾರೆಡ್ಡಿ
ಪ್ರಾಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿ.ವಿ.
ಹಂಪಿ, ವಿದ್ಯಾರಣ್ಯ

ಡಾ. ಶಾಲಿನಿ ರಘುನಾಥ
ಅಧ್ಯಕ್ಷರು, ಜಾನಪದ ಅಧ್ಯಯನ ವಿಭಾಗ,
ಕರ್ನಾಟಕ.ವಿ.ವಿ.,ಧಾರವಾಡ

ಡಾ.ವೀರಣ್ಣ ರಾಜೂರ
ಅಧ್ಯಕ್ಷರು(ನಿ.), ಕನ್ನಡ ಅಧ್ಯಯನ ಪೀಠ ಮತ್ತು
ಸಂಯೋಜಕರು ಶ್ರೀ ಬಸವೇಶ್ವರ ಪೀಠ
ಕರ್ನಾಟಕ ವಿ.ವಿ., ಧಾರವಾಡ

ಡಾ. ಜೀವಿ.ಕುಲಕರ್ಣಿ
ಸಾಹಿತಿ
ನಿವೃತ್ತ ಕನ್ನಡ ಪ್ರಾಧ್ಯಾಪಕರು
ಎಂ.ವಿ.ಕಾಲೇಜು, ಅಂಧೇರಿ, ಮುಂಬಯಿ

ಡಾ. ಪಿ.ಆರ್. ಪಂಚಮುಖಿ
ಸಿ.ಎಂ.ಡಿ.ಆರ್.ದ ನಿವೃತ್ತ ನಿರ್ದೇಶಕರು,
ಧಾರವಾಡ

ಡಾ. ಅರಳುಮಲ್ಲಿಗೆ ಪಾರ್ಥಸಾರಥಿ
ನಿರ್ದೇಶಕರು, ಹರಿದಾಸ ಅಕಾದೆಮಿ, ಬೆಂಗಳೂರು ಮತ್ತು
ಅಧ್ಯಕ್ಷರು, ವಿಷ್ಣುಸಹಸ್ರನಾಮ ಟ್ರಸ್ಟ್, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಎಚ್.ಬಿ.
ನಿರ್ದೇಶಕರು,ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ,
ಬೆಂಗಳೂರು

ಮಂಡಲದ ಮುನ್ನುಡಿ

ಧಾರವಾಡದಲ್ಲಿರುವ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ದಕ್ಷಿಣ ಭಾರತದ ಪ್ರಾಚೀನ ಸಂಶೋಧನ ಕೇಂದ್ರಗಳಲ್ಲಿ ಪ್ರಸಿದ್ಧಿ ಪಡೆದ ಒಂದು ಸಂಸ್ಥೆಯಾಗಿದೆ. ಈ ಸಂಸ್ಥೆಯ ಕಿರುಪರಿಚಯವನ್ನು ಮಾಡಿಕೊಳ್ಳಲು ಬಯಸುವವರಿಗೆ ಇದರ ಸ್ಥಾಪನೆಯ ಪೂರ್ವದಲ್ಲಿ ಅಂದರೆ ೧೯೧೪ ರ ಮೊದಲು ಮತ್ತು ಅನಂತರದ ಕೆಲವು ಘಟನೆಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಈ ಉದ್ದೇಶದಿಂದ ಮತ್ತು ಈ ಘಟನೆಗಳು ಸ್ವಾರಸ್ಯ ಪೂರ್ಣವಾಗಿರುವುದರಿಂದ ಅವುಗಳನ್ನು ಇಲ್ಲಿ ಉಲ್ಲೇಖಿಸಲು ಬಯಸುತ್ತೇನೆ. ಮಂಡಲ ದಿಂದ ಪ್ರಕಟವಾದ ಪಂಚವಾರ್ಷಿಕ ವರದಿ (೧೯೨೦), ವಾರ್ಷಿಕ ವರದಿಗಳು, ಸ್ಮರಣ ಸಂಪುಟಗಳು ಮುಂತಾದವುಗಳು ಇಲ್ಲಿಯ ವಿಷಯಸಂಗ್ರಹಕ್ಕೆ ಆಧಾರವಾಗಿವೆ.

೧೯೧೪ ರ ಮೊದಲು ಬ್ರಿಟೀಷರ ಆಳ್ವಿಕೆಯಲ್ಲಿದ್ದ ಹಿಂದುಸ್ತಾನದ ವಿವಿಧ ಪ್ರಾಂತಗಳ ಜನರು ತಮ್ಮ ತಮ್ಮ ರಾಜರ, ರಾಜಪುರುಷರ, ತಮ್ಮ ಕವಿಗಳ, ಭಾಷೆಯ ಹೆಸರಿನಲ್ಲಿ ಜಯಘೋಷವನ್ನು ಮಾಡುತ್ತ ತಮ್ಮ ತಮ್ಮ ಪ್ರಾಂತದ ಗತವೈಭವವನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡತೊಡಗಿದ್ದರು. ಇಷ್ಟೇ ಅಲ್ಲ, ಪುಣೆಯ ಶ್ರೀಯುತ ಡಾಕ್ಟರ್ ರಾಮಕೃಷ್ಣ ಗೋಪಾಳ ಭಾಂಡಾರಕರ ಎಂಬ ಪ್ರಸಿದ್ಧ ಇತಿಹಾಸತಜ್ಞರು 'ದಕ್ಷಿಣಾಪಥದ ಪ್ರಾಚೀನ ಇತಿಹಾಸ' ಎಂಬ ಗ್ರಂಥವೊಂದನ್ನು ಬರೆದು ಅದರಲ್ಲಿ ಚಾಲುಕ್ಯರು, ರಾಷ್ಟ್ರಕೂಟರು ಇವರೇ ಮೊದಲಾದ ಅರಸುಮನೆತನದವರು ಮರಾಠಿಗರೆಂದು ವಾದಿಸುವುದಕ್ಕೆ ಪ್ರಯತ್ನಿಸಿದರು. ಕರ್ನಾಟಕಸ್ಥರಿಗೆ ಇತಿಹಾಸವೇ ಇಲ್ಲ ಎಂಬ ಅಪಪ್ರಚಾರವೂ ನಡೆಯಿತು. ಕನ್ನಡಿಗರ ಔದಾರ್ಯ, ಸಹನಶೀಲತೆ, ಕ್ಷಮೆ-ಶಾಂತಿ ಮೊದಲಾದ ಗುಣಗಳನ್ನು ಅವರ ದುರ್ಬಲತೆಯೆಂದು ಭಾವಿಸಿ ಅವರನ್ನು ಹತ್ತಿಕ್ಕುವ, ಅವರ ತೇಜೋಭಂಗ ಮಾಡುವ ಇಂಥ ಅನೇಕ ರೀತಿಯ ಸಂಚುಗಳು ನಡೆಯತೊಡಗಿದವು. ಕನ್ನಡ ಭಾಷೆಯ ಸಾಮಾನ್ಯ ಜನಸಮುದಾಯವು ತಮ್ಮ ಭವ್ಯ ಇತಿಹಾಸ ಹಾಗೂ ಗತವೈಭವದ ಬಗ್ಗೆ ಇನ್ನೂ ಅಜ್ಞಾನಾವಸ್ಥೆಯಲ್ಲಿಯೇ ಇದ್ದುದರಿಂದ ಇದಾವುದನ್ನೂ ಪ್ರತಿಭಟಿಸುವ ಸಂಘಟಿತವಾದ ಕಾರ್ಯವು ನಡೆಯಲಿಲ್ಲ. ಅನ್ಯಜನರಲ್ಲಿ ಭಾಷಾಭಿಮಾನವು ದಿನದಿನಕ್ಕೆ ವೃದ್ಧಿ ಹೊಂದುತ್ತಿರುವಾಗ ಕನ್ನಡಿಗರಲ್ಲಿ ಇತಿಹಾಸ ಜಾಗೃತಿಯಾಗಿರಲಿಲ್ಲ. ಇಂಥ ಸಮಯದಲ್ಲಿ ತಮ್ಮ ಇತಿಹಾಸವನ್ನೂ ಸಂಶೋಧಿಸಿ ತೆಗೆಯಬೇಕೆಂದು ಸ್ವಾಭಿಮಾನಿಗಳಾದ ಕೆಲವು ತರುಣ ಕನ್ನಡಿಗರಲ್ಲಿ ಲವಲವಿಕೆ ಹುಟ್ಟತೊಡಗಿತು. ಆದರೆ ಕನ್ನಡಿಗರ ಇತಿಹಾಸವನ್ನು ತಿಳಿಸುವ ಯಾವ ಪುಸ್ತಕಗಳೂ ಆಗ ಪ್ರಕಾಶಿತವಾಗಿರದಿದ್ದರಿಂದ ತಮಗೆ ಉಜ್ವಲವಾದ ಇತಿಹಾಸವೇ ಇಲ್ಲವೇ? ಎಂದು ಮನಸ್ಸಿನಲ್ಲಿ ಕೊರಗುತ್ತ ಕುಳಿತುಕೊಳ್ಳಬೇಕಾಯಿತು.

ಇಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕ್ರಿ.ಶ. ೧೯೧೪ ರಲ್ಲಿ ಶ್ರೀಮಾನ್ ರಾವಬಹಾದ್ದೂರ ಆರ್. ನರಸಿಂಹಾಚಾರ್ಯ ಮತ್ತು ಶ್ರೀ ಎಸ್. ಜಿ. ನರಸಿಂಹಾಚಾರ್ಯರು

ಸೇರಿ "೧೪ ನೆಯ ಶತಮಾನದ ಕೊನೆಯ ವರೆಗೆ ಆಗಿಹೋದ ಕರ್ನಾಟಕ ಕವಿಗಳ ಚರಿತೆ" ಎಂಬ ಗ್ರಂಥವನ್ನು ಬರೆದು ಪ್ರಸಿದ್ಧಿಸಿದ್ದರು. ಅದೇ ವರ್ಷ ಶ್ರೀಯುತ ವ್ಹಿ.ಬಿ. ಹಾಲಭಾವಿಯವರು ಕನ್ನಡ ಭಾಷೆಯಲ್ಲಿ "ವಿಜಯನಗರ ಸಾಮ್ರಾಜ್ಯದ ಇತಿಹಾಸ" ಎಂಬ ಗ್ರಂಥವನ್ನು ಬರೆದು ಪ್ರಕಾಶಪಡಿಸಿದರು. ಮುಂದೆ ೧೯೦೯ ರಲ್ಲಿ ಶ್ರೀಮಾನ್ ಆಲೂರು ವೆಂಕಟರಾಯರು ಶ್ರೀ ವಿದ್ಯಾರಣ್ಯರ ಚರಿತ್ರೆಯನ್ನು ಬರೆದು ಪ್ರಸಿದ್ಧ ಮಾಡಿದರು. ಕ್ರಿ.ಶ. ೧೯೧೨-೧೩ ರಲ್ಲಿ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತರು ಪುಣೆಯ ಪಟ್ಟಣದಲ್ಲಿ ಪ್ರಸಿದ್ಧವಾಗುವ "ಕೇಸರಿ" ಎಂಬ ಸುಪ್ರಸಿದ್ಧವಾದ ಮಹಾರಾಷ್ಟ್ರ ವಾರಪತ್ರಿಕೆಯಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕ (महाराष्ट्र व कर्नाटक) ಎಂಬ ಶೀರ್ಷಿಕೆಯ ಅಡಿಯಲ್ಲಿ ೭ ಲೇಖನಗಳನ್ನು ಬರೆದು, ಡಾಕ್ಟರ್ ಭಾಂಡಾರಕರರ ಮತಗಳನ್ನು ಸಪ್ರಮಾಣವಾಗಿ ಖಂಡಿಸಿ, ಚಾಲುಕ್ಯರು, ರಾಷ್ಟ್ರಕೂಟರು, ದೇವಗಿರಿಯ ಯಾದವರು ಇವರೇ ಮೊದಲಾದ ಅರಸು ಮನೆತನದವರೆಲ್ಲ ಕನ್ನಡಿಗರು ಎಂಬುದನ್ನು ಸ್ಪಷ್ಟವಾಗಿ ಸಿದ್ಧಪಡಿಸಿದರು ಹಾಗೂ ಕನ್ನಡ, ಮರಾಠಿ ವಾಙ್ಮಯಗಳ ಆಧಾರದಿಂದ ಪ್ರಾಚೀನ ಕಾಲದಲ್ಲಿ ಪುಣೆ, ನಾಸಿಕ, ಪೈಠಣ ಪಟ್ಟಣಗಳ ವರೆಗೆ ಎಂದರೆ ಗೋದಾವರಿ ನದಿಯ ವರೆಗೆ ಕನ್ನಡ ಭಾಷೆಯು ಪ್ರಚಾರ ದಲ್ಲಿತ್ತೆಂಬುದನ್ನು ಈ ಲೇಖನಮಾಲೆಯಿಂದ ಸ್ಪಷ್ಟಪಡಿಸಿದರು. ಶ್ರೀ ರಾಜಪುರೋಹಿತರ ಈ ಲೇಖನಮಾಲೆಯಿಂದ ಮಹಾರಾಷ್ಟ್ರ ಜನರಲ್ಲಿ ಕನ್ನಡಿಗರ ಇತಿಹಾಸದ ಬಗ್ಗೆ ನೆಲೆಗೊಂಡ ತಪ್ಪು ಕಲ್ಪನೆಗಳು ದೂರಾದವು ಮತ್ತು ಉತ್ತರ ಕರ್ನಾಟಕದ ಕನ್ನಡಿಗರಲ್ಲಿ ಕರ್ನಾಟಕದ ಇತಿಹಾಸದ ಬಗ್ಗೆ ಚೆನ್ನಾಗಿ ಅಭಿಮಾನವುಂಟಾಯಿತು. ತಮ್ಮದು ಅಪಾರ ಕೀರ್ತಿಗಳಿಸಿ ಮೆರೆದ ಭವ್ಯ ನಾಡು ಎಂಬ ಅರಿವು ಉಂಟಾಗಿ ಕರ್ನಾಟಕದ ಎಲ್ಲ ಕನ್ನಡಿಗರಲ್ಲಿ ಚೈತನ್ಯವುಂಟಾಯಿತು. ಈ ರೀತಿ ಗ್ರಂಥಪ್ರಕಾಶನ ಹಾಗೂ ಲೇಖನಗಳ ಮೂಲಕ ನಡೆಸಿದಂತೆ ಕೆಲವು ಹಿರಿಯರು ಕರ್ನಾಟಕ ಪ್ರಾಂತದ ವಿವಿಧ ಕಡೆಗಳಲ್ಲಿ ಹಾಗೂ ಹೊರಗೆ ಪ್ರವಚನ ಮಾಡುವ ಮೂಲಕವೂ ಕನ್ನಡಿಗರಲ್ಲಿಯ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಕಾರ್ಯವನ್ನು ಮುಂದುವರೆಸಿದರು.

ಕ್ರಿ.ಶ. ೧೯೧೪ ನೆಯ ಅಗಸ್ಟ್ ೩ ನೆಯ ತಾರೀಖಿನ ದಿನ ಶ್ರೀಯುತ ಆಲೂರು ವೆಂಕಟರಾಯರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ "ಕರ್ನಾಟಕದ ಗತ ವೈಭವ" ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಇವರ ಭಾಷಣದಿಂದ ಪ್ರಭಾವಿತರಾದ ಮತ್ತು ಸ್ವಾಭಿಮಾನದಿಂದ ಪ್ರೇರಿತರಾದ ಅಲ್ಲಿಯ ಕನ್ನಡ ವಿದ್ಯಾರ್ಥಿಗಳು ತಮ್ಮ ಒಬ್ಬ ಮಿತ್ರನ ಸ್ಮಾರಕಕ್ಕಾಗಿ ಕೂಡಿಸಿಟ್ಟ ಒಂದು ನೂರು ರೂಪಾಯಿಗಳನ್ನು ಶ್ರೀ ಆಲೂರು ವೆಂಕಟರಾಯರ ಕೈಯಲ್ಲಿ ಕೊಟ್ಟು, ಕರ್ನಾಟಕದ ಇತಿಹಾಸ, ಸಂಸ್ಕೃತಿ, ಶಿಲ್ಪ, ಕಲೆ ಮೊದಲಾದವುಗಳನ್ನು ಅಭ್ಯಾಸ ಮಾಡುವುದಕ್ಕಾಗಿ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ ಎಂಬ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಧಾರವಾಡದಲ್ಲಿ ಸ್ಥಾಪಿಸುವಂತೆ ಪ್ರಾರ್ಥಿಸಿದರು. ಶ್ರೀ ರುಕ್ಮಾಂಗದರಾವ ಗೋ. ದೇಶಪಾಂಡೆ, ಶ್ರೀ ವೆಂಕಟೇಶ ಬೆಳವಿ, ಶ್ರೀ ವೆಂಕಟೇಶ ಆಲಬಾಲ, ಶ್ರೀ ಹಣಮಂತ ಸೂರ್ಯವಂಶಿ, ಶ್ರೀ ಪ್ರಾಣೇಶ ಸಿದ್ಧಾಂತಿ, ಶ್ರೀ ಕೃಷ್ಣ ದೇಶಪಾಂಡೆ, ಶ್ರೀ ತಮಣಾಚಾರ್ಯ ಪುರೋಹಿತ, ಶ್ರೀ ಬಳವಂತರಾವ ದಾತಾರ, ಶ್ರೀ ರಂಗೋ ಕೃಷ್ಣ ಅಸುಂಡಿ, ಶ್ರೀ ರಾಮರಾವ ಸಾಲಿ, ಶ್ರೀ ವೆಂಕಟೇಶ ಡಂಬಳ ಇವರೇ ಮೊದಲಾದ ಡೆಕ್ಕನ್ ಕಾಲೇಜಿನ ಸ್ವಾಭಿಮಾನಿಗಳಾದ ಆ ಕನ್ನಡ ವಿದ್ಯಾರ್ಥಿಗಳನ್ನು

ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ವಿಶೇಷವಾಗಿ ಈ ಸಂದರ್ಭದಲ್ಲಿ ಅವರೆಲ್ಲರನ್ನು ಅತ್ಯಂತ ಗೌರವಪೂರ್ವಕವಾಗಿ ಸ್ಮರಿಸುತ್ತೇವೆ. ಈ ಎಲ್ಲ ತರುಣ ವಿದ್ಯಾರ್ಥಿಗಳ ಆಗ್ರಹದಿಂದ ಮತ್ತು ಶುಭೇಚ್ಛೆಯ ಪ್ರಕಾರ ಅದೇ ವರ್ಷ ಧಾರವಾಡದಲ್ಲಿ ವಿಜಯದಶಮಿಯ ಶುಭ ಮುಹೂರ್ತದಲ್ಲಿ (ದಿ. ೨೮-೯-೧೯೧೪) **"ಕರ್ನಾಟಕ ಇತಿಹಾಸ ಸಂಶೋಧಕ ಮಂಡಳ"** ಎಂಬ ಸಂಸ್ಥೆಯನ್ನು "ಶ್ರೀ ವೆಂಕಟರಾವ ಆಲೂರು, ಶ್ರೀರಾಮರಾವ ನರಗುಂದಕರ, ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತ, ಶ್ರೀ ನಾರಾಯಣರಾವ ದೇಶಪಾಂಡೆ, ಶ್ರೀ ನರಸಿಂಹಾಚಾರ್ಯ ಪುಣೇಕರ ಉರ್ಫ ಕಾವ್ಯಾನಂದ, ಶ್ರೀ ಕಡಪಾ ರಾಘವೇಂದ್ರ ರಾವ, ಶ್ರೀ ವಿಠ್ಠಲರಾವ ಜೋಶಿ, ಶ್ರೀ ಮುದವೀಡು ಕೃಷ್ಣರಾವ, ಶ್ರೀ ರಾಮರಾವ ಜವಳಿ, ಶ್ರೀ ಚಿದಂಬರರಾವ ಆಹೆಟ್ಟಿ, ಶ್ರೀ ಸುಬ್ಬರಾವ ಕುಲಕರ್ಣಿ, ಶ್ರೀ ಭೀಮರಾವ ಬೆಟಗೇರಿ, ಶ್ರೀ ವೆಂಕಟೇಶ ಹನುಮಂತ ಡಂಬಳ, ಶ್ರೀ ವೆಂಕಟೇಶ ಭೀಮಸೇನಾಚಾರ್ಯ ಡಂಬಳ ಈ ಹದಿನಾಲ್ಕು ಜನ ಖ್ಯಾತಿವೆತ್ತ ಸಂಶೋಧಕರೂ ಕನ್ನಡಾಭಿಮಾನಿಗಳೂ ಸೇರಿ ಸ್ಥಾಪಿಸಿದರು. ಈ ರೀತಿ ದೇಶದ ಮತ್ತು ಕರ್ನಾಟಕದ ಧೀಮಂತ ಸಂಸ್ಕೃತಿಯ ಮಹೋನ್ನತಿಯ ಸಾಕ್ಷಾತ್ಕಾರವನ್ನು ಜನಸಾಮಾನ್ಯರೂ ಪಡೆಯಬೇಕೆಂಬ ಹಂಬಲವುಳ್ಳ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ೧೯೧೪ ರಲ್ಲಿ ಜನ್ಮ ತಾಳಿತು. ನಂತರ ಕರ್ನಾಟಕದ ಗತವೈಭವವನ್ನು ಜನಸಾಮಾನ್ಯರಿಗೂ ತಿಳಿಸಿಕೊಟ್ಟು ಕನ್ನಡಿಗರಲ್ಲಿ ಸ್ವಾಭಿಮಾನವನ್ನು, ಜಾಗೃತಿಯನ್ನು, ದೇಶಾಭಿಮಾನವನ್ನು ಹೆಚ್ಚಿಸುವುದು, ಇದಕ್ಕಾಗಿ ಮೂಲಭೂತ ಆಧಾರಗಳಿಂದ ನಮ್ಮ ಕನ್ನಡ ನಾಡಿನ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಅಭ್ಯಾಸ ಮಾಡಿ ಈಗಿನ ಸಮಾಜಕ್ಕೆ ಉಪಯುಕ್ತವಾಗುವಂತೆ ಪುಸ್ತಕಗಳನ್ನು ಪ್ರಕಟಿಸುವುದು, ಪ್ರಾಚೀನ ಹಸ್ತಪ್ರತಿಗಳನ್ನು ಹಾಗೂ ದಾಖಲೆಗಳನ್ನು ಸಂಗ್ರಹಿಸಿ-ಸಂಶೋಧಿಸಿ ಅವುಗಳನ್ನು ಪ್ರಕಾಶಿಸುವುದು, ಉಪನ್ಯಾಸ-ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಮುಂತಾದ ಧ್ಯೇಯಗಳನ್ನಿಟ್ಟುಕೊಂಡು ಮಂಡಲವು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಯಪ್ರವೃತ್ತವಾಯಿತು. ಈ ಮಂಡಲವನ್ನು ೧೯೩೦ ರಲ್ಲಿ ನೋಂದಾಯಿಸಲಾಯಿತು.

ಮಂಡಲದ ಸ್ಥಾಪನೆಯಾದಾಗಿನಿಂದ ಇಲ್ಲಿಯ ವರೆಗೆ ನಡೆದ ಕೆಲವು ಪ್ರಮುಖ ಘಟನೆಗಳನ್ನು ಮತ್ತು ಕಾರ್ಯಸಾಧನೆಗಳನ್ನು ಸಂಕ್ಷೇಪದಲ್ಲಿ ಈಗ ತಮ್ಮ ಮುಂದಿಡಲು ಹೆಮ್ಮೆ ಎನಿಸುತ್ತದೆ.

೧. ಐತಿಹಾಸಿಕ ಸಮ್ಮೇಲನಗಳ ಪ್ರಾರಂಭ

ಉತ್ತರ ಕರ್ನಾಟಕದಲ್ಲಿ ಅಖಿಲ ಕರ್ನಾಟಕ ಐತಿಹಾಸಿಕ ಸಮ್ಮೇಲನಗಳನ್ನು ಮೊಟ್ಟಮೊದಲು ಪ್ರಾರಂಭಿಸಿದ ಖ್ಯಾತಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲಕ್ಕೆ ಸಲ್ಲುತ್ತದೆ. ೧೯೧೬ ರಲ್ಲಿ ನಡೆದ ಮೊದಲನೆಯ ಸಮ್ಮೇಲನಕ್ಕೆ ಶ್ರೀಯುತ ವೆಂಕಟರಾವ ಆಲೂರು ಇವರು, ೧೯೧೭ ರಲ್ಲಿ ನಡೆದ ಎರಡನೆಯ ಸಮ್ಮೇಲನಕ್ಕೆ ಶ್ರೀಯುತ ರಾಮಚಂದ್ರರಾವ ದೇಶಪಾಂಡೆ ಇವರು ಮತ್ತು ೧೯೧೮ ರಲ್ಲಿ ಜರುಗಿದ ಮೂರನೆಯ ಸಮ್ಮೇಲನಕ್ಕೆ ಮೈಸೂರ ಆರ್ಕಿಯಾಲಾಜಿಕಲ್ ಖಾತೆಯ ನಿರ್ದೇಶಕರಾಗಿದ್ದ ಶ್ರೀಮಾನ್ ರಾವ ಬಹಾದ್ದೂರ್ ಆರ್. ನರಸಿಂಹಾಚಾರ್ಯರು ಅಧ್ಯಕ್ಷರಾಗಿದ್ದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೇ ವರ್ಷದ ಮಹೋತ್ಸವ, ಮಂಡಲದ ರಜತಮಹೋತ್ಸವ, ಸುವರ್ಣಮಹೋತ್ಸವ, ನಂತರ ಕೆಲವು ವಿಶಿಷ್ಟ ಸಂದರ್ಭಗಳಲ್ಲಿಯೂ ಐತಿಹಾಸಿಕ ಸಮ್ಮೇಲನಗಳು ನಡೆದಿವೆ.

೨. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೆಯ ವರ್ಷದ ಸ್ಮಾರಕೋತ್ಸವ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೬೦೦ ನೆಯ ವರ್ಷದ ಮಹೋತ್ಸವವನ್ನು ೧೯೩೬ ರಲ್ಲಿ ಹಂಪೆಯಲ್ಲಿ ಅತಿ ವೈಭವದಿಂದ ಆಚರಿಸಲಾಯಿತು. ಆಗ ಲಕ್ಷಾವಧಿ ಜನರು ಸ್ವಯಂಪ್ರೇರಣೆಯಿಂದ ಈ ಉತ್ಸವದಲ್ಲಿಯ ಐತಿಹಾಸಿಕ ಸಮ್ಮೇಲನ- ಪ್ರದರ್ಶನ, ವಿಚಾರಗೋಷ್ಠಿಗಳು ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆನಂದಿಸಿದರು. ಇದೊಂದು ನ ಭೂತೋ ನ ಭವಿಷ್ಯತಿ ಯಾದ ಉತ್ಸವವಾಗಿತ್ತೆಂದು ಆ ಉತ್ಸವದಲ್ಲಿ ಭಾಗವಹಿಸಿದ್ದ ಹಿರಿಯರು ಹೇಳುತ್ತಿದ್ದುದನ್ನು ಅನೇಕರು ಕೇಳಿರಬಹುದು. ಸಾಂಸ್ಕೃತಿಕ ಸಮಾರಂಭದ ನೆನಪಿಗಾಗಿ "ವಿಜಯನಗರ ಸಿಕ್ಸ ಸೆಂಟೆನರಿ ಕೊಮ್ಮೆಮೋರೇಶನ ಹೊಲ್ಯುಮ್" ಎಂಬ ಹೆಸರಿನಲ್ಲಿ ಪ್ರಕಟವಾದ ಸಂಸ್ಮರಣ ಸಂಚಿಕೆಯಲ್ಲಿಯ ವಿದ್ವತ್ಪೂರ್ಣವಾದ ಇಂಗ್ಲೀಷ ಲೇಖನಗಳನ್ನು ಓದಿ, ಇತಿಹಾಸ ಸಂಶೋಧನೆಯ ಸಾಧನೆಗಳಲ್ಲಿಯೇ ಮುಂದುವರೆದ ಸಂಸ್ಥೆ ಎಂದು ಆಗಿನ ಬ್ರಿಟಿಷ ಸರಕಾರದಿಂದ ಮಂಡಲವು ಮನ್ನಣೆ ಪಡೆದು ದೇಶ-ವಿದೇಶದ ವಿದ್ವಾಂಸರ ಗಮನ ಸೆಳೆಯಿತು. ಪ್ರಧಾನ ಸಂಪಾದಕರಾಗಿ ಬಹು ಶ್ರಮ ವಹಿಸಿ ಈ ಸ್ಮರಣ ಸಂಚಿಕೆಯು ಪ್ರಕಾಶಕ್ಕೆ ಬರಲು ಕಾರಣರಾದವರು ಮಾನ್ಯ ಶ್ರೀ ಡಿ.ಪಿ. ಕರಮರಕರರು. ಇದೇ ಸಂದರ್ಭದಲ್ಲಿ ಇನ್ನೂ ಅನೇಕ ಗ್ರಂಥಗಳು ಪ್ರಕಟವಾದರೂ ಶ್ರೀಯುತ ಪಿ.ಬಿ.ದೇಸಾಯಿಯವರು ಕನ್ನಡದಲ್ಲಿ ಬರೆದ 'ವಿಜಯನಗರ ಸಾಮ್ರಾಜ್ಯ' ಮತ್ತು ಶ್ರೀ ಪೋತದಾರ ಶ್ರೀನಿವಾಸರಾಯರ 'ಸಚಿತ್ರವಿಜಯನಗರ' ಎಂಬ ಕೃತಿಗಳು ಉಲ್ಲೇಖನೀಯವಾಗಿವೆ.

೩. ಮಂಡಲದ ರಜತಮಹೋತ್ಸವ

೧೯೪೦ ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ರಜತಮಹೋತ್ಸವವನ್ನು ದಿಲ್ಲಿಯಲ್ಲಿರುವ ಭಾರತ ಸರಕಾರದ ಆರ್ಕಿಯಾಲಜಿ ಡಿಪಾರ್ಟಮೆಂಟಿನ ಡೈರೆಕ್ಟರ್ ಜನರಲ್ ಆಗಿದ್ದ ರಾವ ಬಹಾದ್ದೂರ ಕೆ.ಎನ್. ದೀಕ್ಷಿತ ಇವರ ಘನ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಆಚರಿಸಲಾಯಿತು. ಮಾನ್ಯ ದೀಕ್ಷಿತರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಂಡಲದ ಬಗ್ಗೆ ಹೇಳಿದ ಕೆಳಗಿನ ಮಾತುಗಳು ಉಲ್ಲೇಖನೀಯವಾಗಿವೆ.........................

"It is indeed a great pleasure to me to associate myself with the Silver Jubilee celebrations of the Karnataka Historical Research Society and I am grateful to you for the honour you have rendered me in asking me to preside over this happy function which enables me to express my appreciation of the great importance of the cause for which the Society stands.................

Nearly five years ago the Society successfully launched an ambitious project of celebrating the sexcentenary of the function of the Vijayanagara Empire which has immensely raised its prestige in the eyes of the Scientific world.................

The Society has been able to achieve great success in inducing the Provincial and Central Governments in devoting their attention to the unexplored rich field in the Karnataka.......................

Gentlemen, I have great pleasure in wishing the Society a long and useful career in the noble task of unravelling Karnataka's rich cultural past"

ಈ ರಜತಮಹೋತ್ಸವದಲ್ಲಿ ಮಂಡಲದ ಪರವಾಗಿ ನಡೆದ ಐತಿಹಾಸಿಕ ಸಮ್ಮೇಲನ, ಉಪನ್ಯಾಸಗಳು ಹಾಗೂ ಪ್ರದರ್ಶನ ಇವುಗಳು ವ್ಯವಸ್ಥಿತವಾಗಿ ನಡೆಯುವಂತೆ ಏರ್ಪಾಡು ಮಾಡಿದ ಮಂಡಲದ ಅಂದಿನ ಕಾರ್ಯದರ್ಶಿಗಳಾದ **ಶ್ರೀ ಡಿ.ಪಿ. ಕರಮರಕರರು** ಎಲ್ಲರ ಪ್ರಶಂಸೆಗೆ ಪಾತ್ರರಾದರು. ಇದೇ ಸಂದರ್ಭದಲ್ಲಿ ಅವರು ಮುಂಬೈ ಸರಕಾರಕ್ಕೆ ಸಂಸ್ಥೆಯ ಕಟ್ಟಡಕ್ಕಾಗಿ ಬೇಕಾದ ಸ್ಥಳದ ಬಗ್ಗೆ ಮನವಿ ಸಲ್ಲಿಸಿ ಈಗಿರುವ ಸ್ವಂತ ಸ್ಥಳವನ್ನು ಪಡೆದರು. ಅನೇಕ ವರ್ಷಗಳವರೆಗೆ ಬಾಡಿಗೆ ಮನೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಂಡಲಕ್ಕೆ ಕೇಂದ್ರ ರೇಲ್ವೆಮಂತ್ರಿಗಳಾದ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಧಾರವಾಡಕ್ಕೆ ಬಂದು ೧೯೫೬ ರಲ್ಲಿ ಇದೇ ಸ್ವಂತ ಸ್ಥಳದಲ್ಲಿ ಕಟ್ಟಡಕ್ಕಾಗಿ ಶಿಲಾನ್ಯಾಸವನ್ನು ನೆರವೇರಿಸಿದರು. ನಂತರ ಅಲ್ಲಿ ಒಂದು ಚಿಕ್ಕ ಕಾರ್ಯಾಲಯವನ್ನು ಕಟ್ಟಿಸಲಾಯಿತು. ಮಂಡಲದ ಸುವರ್ಣಮಹೋತ್ಸವದ ನಂತರ ೧೯೭೨ ರಲ್ಲಿ ಈಗಿನ ಎರಡು ಮಹಡಿ ಕಟ್ಟಡವು ಸಿದ್ಧವಾಗುವವರೆಗೆ ಮಂಡಲವು ಆ ಚಿಕ್ಕ ಕೊಠಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು.

೪. ನಿಃಸ್ವಾರ್ಥಸೇವೆ :-

ಕರ್ನಾಟಕದೊಳಗಿನ ಭವ್ಯವಾದ ಪಟ್ಟಣಗಳನ್ನೂ, ಗುಡಿ-ಗುಂಡಾರಗಳನ್ನೂ, ಹಾಗೂ ಐತಿಹಾಸಿಕ ಸ್ಥಳಗಳನ್ನೂ ಪ್ರತ್ಯಕ್ಷವಾಗಿ ನೋಡುವುದರಿಂದ ಹುಟ್ಟುವ ಸ್ಫೂರ್ತಿಯೂ ಅಭಿಮಾನವೂ ಕೇವಲ ಕಲ್ಪನೆಯಿಂದ ಬರಲಾರವು. ಇದಲ್ಲದೆ ಅವುಗಳನ್ನು ಪ್ರತ್ಯಕ್ಷವಾಗಿ ನೋಡಿದರೆ ಸುತ್ತಮುತ್ತಲಿನ ಪರಿಸ್ಥಿತಿಯು ಗೊತ್ತಾಗಿ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಚೆಲ್ಲಲು ಸಾಧ್ಯವಾಗುವದು. ಆದ್ದರಿಂದಲೇ ಹಿಂದಕ್ಕೆ ಮಂಡಲದ ಕೆಲವು ಸದಸ್ಯರು ತಮ್ಮ ಸ್ವಂತ ಖರ್ಚಿನಿಂದ ಸಂಚರಿಸಿ ಐತಿಹಾಸಿಕ ಮಾಹಿತಿಗಳನ್ನು ಸಂಗ್ರಹಿಸತೊಡಗಿದರು. ಮಂಡಲವು ಸ್ಥಾಪನೆಯಾದಾಗಿನಿಂದ ಅನೇಕ ವರ್ಷಗಳ ವರೆಗೆ ಅದರೊಂದಿಗಿದ್ದ ಶ್ರೀಯುತ ನಾ.ಶ್ರೀ. ರಾಜಪುರೋಹಿತರು ಕರ್ನಾಟಕದ ನೂರಾರು ಹಳ್ಳಿಗಳನ್ನು ಹಾಗೂ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿ ಅನೇಕ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿದರು. ಮಂಡಲದ ಇತಿಹಾಸ ಪ್ರಚಾರಕರೆಂದು ಕಾರ್ಯನಿರ್ವಹಿಸಿದ ಶ್ರೀ ರಾಜಪುರೋಹಿತರು ತಾವು ಹೋದಲ್ಲೆಲ್ಲಾ ಐತಿಹಾಸಿಕ ವಿಷಯಗಳ ಮೇಲೆ ವ್ಯಾಖ್ಯಾನಗಳನ್ನು ಕೊಡುವ ಮೂಲಕ ಉತ್ತರ ಕರ್ನಾಟಕದಲ್ಲಿ ಐತಿಹಾಸಿಕ ಜಾಗೃತಿಯನ್ನುಂಟು ಮಾಡಿದರು, ನೂರಾರು ಲೇಖನಗಳನ್ನು ಬರೆದರು, ಅನೇಕ ಅಪೂರ್ವ ದಾಖಲೆಗಳನ್ನು ಸಂಶೋಧಿಸಿದರು. ತಮ್ಮ ಮನೆ ಮಾರುಗಳನ್ನು ಲೆಕ್ಕಿಸದೇ ಸಂಶೋಧನೆಯೆಂಬ ವ್ರತದಲ್ಲಿ ದೀಕ್ಷಾಬದ್ಧರಾಗಿ ಮಂಡಲದ ಕಾರ್ಯವನ್ನು ನಿರ್ವಹಿಸಿದ ಶ್ರೀ ನಾ. ಶ್ರೀ. ರಾಜಪುರೋಹಿತರಂತಹ ಮಂಡಲದ ಅನೇಕ ಕರ್ಮಯೋಗಿಗಳ ಸಾಧನೆ ಅವರ್ಣನೀಯ.

೫. ಜನ್ಮಶತಮಾನೋತ್ಸವಗಳು

ಕರ್ನಾಟಕ ಕುಲಪುರೋಹಿತ ಶ್ರೀ ಆಲೂರು ವೆಂಕಟರಾಯರ ಜನ್ಮ ಶತಮಾನೋತ್ಸವವನ್ನು ೧೯೮೦ ರಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಕ.ವಿ.ವಿ.ದ

ಕುಲಪತಿಗಳಾದ ಶ್ರೀ ಸದಾಶಿವ ಒಡೆಯರ ಇವರು ಈ ಜನ್ಮಶತಮಾನೋತ್ಸವದ ಉದ್ಘಾಟಕರಾಗಿ ಆಗಮಿಸಿದ್ದರು. ಆಗ ಶೀ ಆಲೂರು ವೆಂಕಟರಾಯರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು. ಅದರಂತೆ ದಿ. ಶ್ರೀ ಸಾ. ಶ್ರೀ. ರಾಜಪುರೋಹಿತರ ಜನ್ಮಶತಮಾನೋತ್ಸವವನ್ನು ೧೯೮೭ ರ ಸಪ್ಟಂಬರನಲ್ಲಿ ಮಂಡಲದಲ್ಲಿ ವೈಭವದಿಂದ ಆಚರಿಸಲಾಯಿತು. ಶ್ರೀ ದ.ಪ. ಕರಮರಕರರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭಕ್ಕೆ ಶ್ರೀ ಪೇಜಾವರ ಸ್ವಾಮಿಗಳು ಉದ್ಘಾಟಕರಾಗಿ ಆಗಮಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ರಾಜಪುರೋಹಿತರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು ಮತ್ತು ಆಗ ಅನೇಕ ಇತಿಹಾಸ ಸಂಶೋಧಕರನ್ನು ಹಾಗೂ ಗಣ್ಯರನ್ನು ಸನ್ಮಾನಿಸಲಾಯಿತು.

೬. ಮಂಡಲದ ಸುವರ್ಣ ಮಹೋತ್ಸವ :-

೧೯೫೫ ರಿಂದ ೧೯೮೨ ರವರೆಗೆ ಅಂದರೆ ಸುಮಾರು ೨೭ ವರ್ಷಗಳ ದೀರ್ಘಾವಧಿಯವರೆಗೆ ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಮಂಡಲದ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಕಾರ್ಯಾಧ್ಯಕ್ಷರಾಗುವ ಮೊದಲು ಅವರು ಮುಂಬೈ ಸರಕಾರದ ಕನ್ನಡ ಸಂಶೋಧನ ಸಂಸ್ಥೆಯ (ಇವರ ನಿವೃತ್ತಿಯ ನಂತರ ಕರ್ನಾಟಕ ವಿಶ್ವವಿದ್ಯಾಲಯವು ಈ ಸಂಸ್ಥೆಯನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡಿದೆ) ಪ್ರಥಮ ನಿರ್ದೇಶಕರಾಗಿ ಹದಿನಾಲ್ಕು ವರ್ಷಗಳ ವರೆಗೆ ಅದನ್ನು ಕಟ್ಟಿ, ಬೆಳೆಸಿ, ಕರ್ನಾಟಕದ ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿಸಿದ್ದರು. ಆ ಪೂರ್ವದಲ್ಲಿ ನೀಲಗಿರಿ, ಉದಕಮಂಡಲಗಳಲ್ಲಿ ಇತಿಹಾಸ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದ ಇಂಥ ಅನುಭವಿಕರು ಮಂಡಲದ ಕಾರ್ಯಾಧ್ಯಕ್ಷರಾದ ನಂತರ ಮಂಡಲದ ಚಟುವಟಿಕೆಗಳು ಚುರುಕುಗೊಂಡು ವಿವಿಧೋನ್ಮುಖವಾಗಿ ಬೆಳೆದವು. ಇವರ ಕಾರ್ಯಾವಧಿಯಲ್ಲಿ ಮಂಡಲದ ಸುವರ್ಣ ಮಹೋತ್ಸವವು ಸಂಪನ್ನವಾಯಿತು.

೧೯೭೦ ರಲ್ಲಿ ಮಂಡಲದ ಸುವರ್ಣ ಮಹೋತ್ಸವವನ್ನು ಅಂದಿನ ಮೈಸೂರು ರಾಜ್ಯದ ರಾಜ್ಯಪಾಲರಾದ ಶ್ರೀಧರ್ಮವೀರರ ಘನ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಅಧ್ಯಕ್ಷೀಯ ಸ್ಥಾನದಿಂದ ಮಾನ್ಯ ಧರ್ಮವೀರರು ಮಂಡಲದ ಕಾರ್ಯಕಲಾಪಗಳನ್ನು ಪ್ರಶಂಸಿಸುತ್ತ " This Society has earned for itself the gratitude of all historians and those interested in history in this country and outside, for its zeal and enthusiasm ever since 1974 in unfolding the ancient glory and greatness of the Karnataka region. ಹಾಗೆಯೇ ಮುಂದುವರೆಯುತ್ತ .... The work of the learned societies such as the Karnataka Historical Research Society in unveiling our history is indeed invaluable. This Society has to its credit during the last five decades and more, achievements which have gone a long way not only in helping writers of history in this ancient land but also in providing guidelines for the proper appreciation of the study of history as such" ಎಂದು ಸಂಸ್ಥೆಯ ಸ್ಥಾಪನೆಯಿಂದ ಇಲ್ಲಿನವರೆಗಿನ ಸಾಧನೆಗಳನ್ನು ಸಂಕ್ಷೇಪಿಸಿ ಉದ್ಗರಿಸಿದ್ದಾರೆ.

ಆ ಸಮಯದಲ್ಲಿ ಪ್ರಾಚ್ಯವಸ್ತು ಸಂಶೋಧನೆಯ ಆಗ್ನೇಯ ವಲಯದ (S.W. Circle) ಮೇಲಾಧಿಕಾರಿಗಳಾದ ಶ್ರೀ ಎಸ್. ಆರ್. ರಾವ್ ಅವರ ಸಹಾಯ-ಸಹಕಾರಗಳಿಂದ

ಐತಿಹಾಸಿಕ ಸಮ್ಮೇಲನ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಜರುಗಿದ ಸಾಂಸ್ಕೃತಿಕ ಚಟುವಟಿಕೆಗಳನ್ನು ಮಾನ್ಯ ರಾಜ್ಯಪಾಲರು ಶ್ಲಾಘಿಸಿ, ಇಂತಹ ಉತ್ಕೃಷ್ಟ ಯೋಜನೆ-ಸಂಶೋಧನೆಗಳ ಮಹತ್ವಾಕಾಂಕ್ಷೆಯುಳ್ಳ ಮಂಡಲಕ್ಕೆ ಸರಕಾರ ಪುರಸ್ಕಾರ ನೀಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ಮಂಡಲದ ಆಗಿನ ಕಾರ್ಯಾಧ್ಯಕ್ಷರಾಗಿದ್ದ ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರ ಮಾರ್ಗದರ್ಶನದಲ್ಲಿ ಸಾಧಿಸಿದ ಮಂಡಲದ ವಿವಿಧ ಕಾರ್ಯಚಟುವಟಿಕೆಗಳನ್ನು ಕಂಡು ಮೆಚ್ಚಿದ ರಾಜ್ಯಪಾಲ ಶ್ರೀ ಧರ್ಮವೀರರು ಮಂಡಲದ ಕಟ್ಟಡಕ್ಕಾಗಿ ಸರಕಾರದಿಂದ ಧನಸಹಾಯವನ್ನು ಘೋಷಿಸಿದರು. ಮುಂದೆ ಒಂದು ವರ್ಷದಲ್ಲಿಯೇ ಈಗಿರುವ ಸ್ವಂತ ಕಟ್ಟಡವು ಅಸ್ತಿತ್ವಕ್ಕೆ ಬಂದಿತು.

೭. ಮಂಡಲದ ವಿವಿಧೋನ್ಮುಖ ಚಟುವಟಿಕೆಗಳು :-

"ಇತಿಹಾಸವೆಂದರೆ ಕೇವಲ ರಾಜಾ-ರಾಣಿ- ರಾಜಕುಮಾರ-ರಾಜಕುಟುಂಬದ ಚರಿತ್ರೆ, ರಾಜ-ಮಹಾರಾಜರ-ಸಾಮಂತರ ಹೋರಾಟ, ವೈಭವ- ಅಂತ್ಯಗಳ ಅಂತೆ-ಕಂತೆಗಳ ಕಥೆಯಲ್ಲ. ಇತಿಹಾಸದ ನಿಜವಾದ ಅಧ್ಯಯನವೆಂದರೆ ರಾಜ-ಮಹಾರಾಜರ ಚರಿತ್ರೆಯೊಂದಿಗೆ ಆ ಕಾಲದ ಆರ್ಥಿಕ- ಸಾಮಾಜಿಕ ಪರಿಸ್ಥಿತಿ, ಜನಜೀವನ, ಸಾಹಿತ್ಯ, ಸಂಸ್ಕೃತಿ, ಲಲಿತ ಕಲೆಗಳು, ಆ ಕಾಲದ ಆವಿಷ್ಕಾರಗಳು ಮುಂತಾದವುಗಳ ಪ್ರಾಮಾಣಿಕವಾದ ಅಧ್ಯಯನವಾಗಿದೆ ಮತ್ತು ಈ ಅಧ್ಯಯನದಿಂದ ಈಗಿನ ಸಮಾಜಕ್ಕೆ ಉಪಯುಕ್ತವಾಗುವ ವಿಷಯಗಳನ್ನು ಎತ್ತಿ ತೋರಿಸುವುದಾಗಿದೆ" ಎಂಬುದು ಕಾರ್ಯಾಧ್ಯಕ್ಷರಾದ ಶ್ರೀ ರಾ.ಸ್ವಾ. ಪಂಚಮುಖಿಯವರ ಸಿದ್ಧಾಂತವಾಗಿತ್ತು. ಮಾನ್ಯ ರಾಜ್ಯಪಾಲರಾದ ಶ್ರೀ ಧರ್ಮವೀರರು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ "............History is not merely a chronicle of kings and their battles but is essentially a compilation of human experience in all its varied aspects ಎಂದು ನುಡಿಯುತ್ತ ಇತಿಹಾಸದ ಅಧ್ಯಯನದ ವ್ಯಾಪಕತೆಯ ಇದೇ ಸಿದ್ಧಾಂತವನ್ನು ಒತ್ತಿ ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ದೇಶದ ಹಾಗೂ ಕರ್ನಾಟಕದ ಗತಕಾಲದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ವಿವೇಚಿಸಿ ಈಗಿನ ಸಮಸ್ಯೆಗಳಿಗೆ ಅತ್ಯಾಧುನಿಕ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವ ಉದ್ದೇಶದಿಂದ ಮಂಡಲದಲ್ಲಿ 'ಸಾಮಾಜಿಕ-ಆರ್ಥಿಕ ಸಂಶೋಧನಾ ಕೇಂದ್ರ' (ಸೋಶಿಯೋ ಎಕಾನಾಮಿಕ್ ರೀಸರ್ಚ ಸೆಂಟರ್) ಎಂಬ ವಿಭಾಗವು ಪ್ರಾರಂಭಿಸಲ್ಪಟ್ಟಿತು. ಈ ವಿಭಾಗದ ನಿರ್ವಹಣೆಗಾಗಿ ನಿಯಮಿಸಲ್ಪಟ್ಟ ಸಮಿತಿಗೆ ಭಾರತ ಸರಕಾರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ಪ್ರೊ. ಡಿ.ಟಿ. ಲಾಕಡಾವಾಲಾ ಇವರು ಪ್ರಮುಖ ನಿಯೋಜಕರಾಗಿಯೂ ಡಾ. ನಂಜುಂಡಪ್ಪ, ಡಾ. ವ್ಹಿ.ಆರ್. ಪಂಚಮುಖಿ, ಡಾ. ಪಿ.ಆರ್. ಪಂಚಮುಖಿ ಮತ್ತು ಮಂಡಲದ ಕಾರ್ಯಾಧ್ಯಕ್ಷರು ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದರು.

ಸಂಶೋಧನಾ ಕಾರ್ಯಗಳ ಜೊತೆಗೆ ಭಾರತೀಯ ಲಿಪಿಶಾಸ್ತ್ರವನ್ನು ಬೋಧಿಸುವ, ವಿಶೇಷವಾಗಿ ಕನ್ನಡ ಲಿಪಿಶಾಸ್ತ್ರದ ಬೆಳವಣಿಗೆಯನ್ನು ಕಲಿಸುವ ಉದ್ದೇಶದಿಂದ ಲಿಪಿಗಳ ಬೋಧನೆ ಪಾಠಣದ ರೀತಿಯನ್ನು ಸ್ನಾತಕೋತ್ತರ ಪದವೀಧರರವರೆಗೂ ಕಲಿಸಲು ಮಂಡಲವು ಮುಂದಾಯಿತು. ಕುತೂಹಲಕಾರಿಯಾದ ಈ ವಿಜ್ಞಾನವನ್ನು ಅರಿಯುವ

ಹಂಬಲದಿಂದ ಮದ್ರಾಸ್ (ಚೆನ್ನೈ), ಮುಂಬೈ, ನಾಸಿಕ ಮುಂತಾದ ಕಡೆಗಳಿಂದ ಜಿಜ್ಞಾಸು ಅಭ್ಯರ್ಥಿಗಳು ಬಂದರು. ವಿದ್ಯಾರತ್ನ ಆರ್.ಎಸ್. ಪಂಚಮುಖಿಯವರ ಮಾರ್ಗದರ್ಶನದಲ್ಲಿ ನಡೆದ ಎರಡು ಶಿಬಿರಗಳನ್ನು ಕಂಡು ಆಗಿನ ಕೇಂದ್ರವಿದ್ಯಾಮಂತ್ರಿಗಳಾಗಿದ್ದ ಡಾ.ವ್ಹಿ.ಕೆ.ಆರ್.ವಿ. ರಾವ್ ಮೊದಲಾದ ಗಣ್ಯರು ಶ್ಲಾಘಿಸಿದರು.

೮. ಮಂಡಲದ ಕೆಲವು ಪ್ರಮುಖ ಯೋಜನೆಗಳು :-

ದಕ್ಷಿಣ ಭಾರತದ ಮಹಾನ್ ಸಂತರೂ, ದಾರ್ಶನಿಕರೂ, ತತ್ವಜ್ಞಾನಿಗಳೂ ಆದ ಶ್ರೀರಾಘವೇಂದ್ರತೀರ್ಥರು ದೇಶ-ವಿದೇಶಗಳಲ್ಲಿ ತಮ್ಮ ಮಹಿಮೆಗಳಿಂದ ಮನೆಮಾತಾಗಿದ್ದಾರೆ. ಕೇವಲ ಪವಾಡಪುರುಷರಾಗಿರದೇ ೪೮ ಉದ್ಗ್ರಂಥಗಳನ್ನು ಬರೆದಿರುವ ಇವರು ತತ್ವಶಾಸ್ತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು. ಇವರು ಮೂರು ವೇದಗಳಿಗೆ ಬರೆದ ಭಾಷ್ಯವು 'ವೇದತ್ರಯವಿವೃತಿ' ಎಂದು ಪ್ರಸಿದ್ಧವಾಗಿದ್ದು, ಅದು ಈಗ ಜರ್ಮನಿ ದೇಶದಲ್ಲಿದೆ ಎಂದು ಪ್ರತೀತಿ. ಇವರು ಅನೇಕ ಹರಿದಾಸರಿಗೆ ಆಶ್ರಯ ಕೊಟ್ಟು ಹರಿದಾಸಪರಂಪರೆಯನ್ನು ಮತ್ತು ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದರು.

ಇಂಥ ಶ್ರೇಷ್ಠ ಸಂತ, ತತ್ವಜ್ಞಾನಿಗಳ ಎಲ್ಲ ಕೃತಿಗಳನ್ನೂ ಸಂಪಾದಿಸಿ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಲು ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಒಂದು ಬೃಹತ್ ಯೋಜನೆಯನ್ನು ಸಿದ್ಧಪಡಿಸಿದ್ದರು. ಈ ಯೋಜನೆಯ ಅಂಗವಾಗಿ ಅವರು ಶ್ರೀ ರಾಘವೇಂದ್ರ ತೀರ್ಥರಿಂದ ವಿರಚಿತವಾದ ೧. ತಂತ್ರದೀಪಿಕಾ, ೨. ಪ್ರಮಾಣಪದ್ಧತಿ ಟಿಪ್ಪಣಿ, ೩. ಬ್ರಹ್ಮಸೂತ್ರ ಭಾಷ್ಯ ಟೀಕಾ ತತ್ವಪ್ರಕಾಶಿಕಾ ಟಿಪ್ಪಣಿ ಭಾವದೀಪ (ನಾಲ್ಕು ಸಂಪುಟಗಳು) ಎಂಬ ಗ್ರಂಥಗಳನ್ನು ಪರಿಷ್ಕರಿಸಿ, ಸಂಪಾದಿಸಿ ಮಂಡಲದಿಂದ ಪ್ರಕಟಿಸಿದರು. ಈ ಯೋಜನೆಯು ಮುಂದುವರೆದಿದೆ.

ಕರ್ನಾಟಕದ ಹಾಗೂ ಭಾರತದ ಸಾಂಸ್ಕೃತಿಕ ಇತಿಹಾಸಗಳನ್ನು ಬರೆಯುವುದು, ಕರ್ನಾಟಕದ ಸಾಂಸ್ಕೃತಿಕ ವಸ್ತುಸಂಗ್ರಹಾಲಯವನ್ನು ಸಿದ್ಧಪಡಿಸುವುದು, ೨೦೧೪ ರಲ್ಲಿ ಮಂಡಲದ ಶತಮಾನೋತ್ಸವವನ್ನು ಆಚರಿಸುವುದು, ಆ ಸಂದರ್ಭದಲ್ಲಿ ಒಂದು ನೂರು ಗ್ರಂಥಗಳನ್ನು ಪ್ರಕಟಿಸುವುದು ಇವು ಮಂಡಲದ ಇತರ ಕೆಲವು ಕಾರ್ಯಯೋಜನೆಗಳು.

೯. ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಪ್ರಾಚ್ಯ ವಿದ್ಯಾ ಸಂಶೋಧನ ಕೇಂದ್ರ:-

ಪ್ರಾಚೀನ ಹಸ್ತಪ್ರತಿಗಳನ್ನು ಹಾಗೂ ಅನುಪಲಬ್ಧ ಗ್ರಂಥಗಳನ್ನು ಸಂಶೋಧಿಸಿ, ಸಂಪಾದಿಸಿ, ಪ್ರಕಟಿಸುವುದಕ್ಕಾಗಿ ಮಂಡಲದಲ್ಲಿ 'ವಿದ್ಯಾರತ್ನ ರಾ.ಸ್ವಾ. ಪಂಚಮುಖಿ ಪ್ರಾಚ್ಯವಿದ್ಯಾ ಸಂಶೋಧನಾ ಕೇಂದ್ರ' ಎಂಬ ವಿಭಾಗವನ್ನು ತೆರೆಯಲಾಗಿದೆ. ಈ ವಿಭಾಗದಿಂದ ಇದುವರೆಗೆ ತಾಂಬೂಲ ಮಂಜರಿ, ಕೃಷಿ ಪಾರಾಶರ, ಪಾಕ ದರ್ಪಣ, ಜ್ಞಾನ ಭೈಷಜ್ಯ ಮಂಜರಿ, ಸುನೀತಿ ಭಾಗವತ, ಸನ್ನೀತಿ ರಾಮಾಯಣ ಎಂಬ ಗ್ರಂಥಗಳನ್ನು ಸಂಶೋಧಿಸಿ ಪ್ರಕಟಿಸಲಾಗಿದೆ. ಕೇಂದ್ರ ಸರಕಾರದ ಧನಸಹಾಯದಿಂದ ಪ್ರಾಚೀನ ಕಾಲದ ಪದಾರ್ಥ ವಿಜ್ಞಾನ (ಫಿಜಿಕ್ಸ್), ರಸಾಯನ ಶಾಸ್ತ್ರ (ಕೆಮೆಸ್ಟ್ರಿ), ಆರೋಗ್ಯ ಶಾಸ್ತ್ರ (ಮೆಡಿಕಲ್ ಸಾಯಿನ್ಸ್), ಕೃಷಿ ವಿಜ್ಞಾನ (ಅಗ್ರಿಕಲ್ಚರಲ್ ಸೈನ್ಸ್) ಮತ್ತು ಸಸ್ಯ ವಿಜ್ಞಾನ (ಬಾಟನಿ) ಗಳ ಮೇಲೆ ಪಾರಿಭಾಷಿಕ ಶಬ್ದಗಳ ಐದು ಕೋಷಗಳನ್ನು ಸಿದ್ಧಪಡಿಸಲಾಗಿದೆ.

೧೦. ಮಂಡಲದ ಪ್ರಕಟಣೆಗಳು :-

ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಇದುವರೆಗೆ ಕನ್ನಡ, ಇಂಗ್ಲೀಷ, ಸಂಸ್ಕೃತ, ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಶ್ರೀ ಆಲೂರು ವೆಂಕಟರಾಯರ ೧) ವಿದ್ಯಾರಣ್ಯ ಚರಿತ್ರೆ, ೨) ಕರ್ನಾಟಕದ ಗತವೈಭವ ೩) ಕರ್ನಾಟಕ ವೀರರತ್ನಗಳು; ಶ್ರೀ ನಾ. ಶ್ರೀ. ರಾಜಪುರೋಹಿತರ ೧) ಶ್ರೀ ಸುರೇಶ್ವರಾಚಾರ್ಯರ ಚರಿತ್ರೆ ೨) ಕರ್ನಾಟಕದ ಇತಿಹಾಸ; ಶ್ರೀ ಶ್ರೀನಿವಾಸರಾವ ಪೋತದಾರರ 'ಸಚಿತ್ರ ವಿಜಯನಗರ' ಎಂಬ ಗ್ರಂಥಗಳು ಉಲ್ಲೇಖನೀಯವಾಗಿವೆ. ಶ್ರೀ ದ. ಪ. ಕರಮರಕರರು ಸಂಪಾದಿಸಿದ 'ವಿಜಯನಗರ ಸಾಮ್ರಾಜ್ಯ ಸ್ಮರಣ ಸಂಪುಟ (ಇಂಗ್ಲೀಷ್)' ಮತ್ತು ಶ್ರೀಪಾಂಡುರಂಗರಾವ ದೇಸಾಯಿಯವರ 'ವಿಜಯ ನಗರ ಸಾಮ್ರಾಜ್ಯ', 'ಶಾಸನಪರಿಚಯ' ಎಂಬ ಗ್ರಂಥಗಳು ಪ್ರಮುಖವಾಗಿವೆ. ವಿದ್ಯಾರತ್ನ ರಾ.ಸ್ವಾ. ಪಂಚಮುಖಿಯವರು ಕನ್ನಡದಲ್ಲಿ ೧) ಕರ್ನಾಟಕದ ಇತಿಹಾಸ (ಸಂಪುಟ-೧) ೨) ಕರ್ನಾಟಕದ ಅರಸು ಮನೆತನಗಳು ೩) ಸಂಸ್ಕೃತಿ ವಿಹಾರ; ಇಂಗ್ಲೀಷಿನಲ್ಲಿ ೧) ಡಿಸ್ಕ್ರಿಪ್ಟಿವ್ ಕೆಟಲಾಗ್ ೨) ಕರ್ನಾಟಕ ಸ್ಕಲ್ಪಚರ್ಸ್ ಮತ್ತು ಸಂಸ್ಕೃತದಲ್ಲಿ ೧) ತಂತ್ರದೀಪಿಕಾ, ೨) ಪ್ರಮಾಣ ಪದ್ಧತಿ ಟಿಪ್ಪಣಿ, ೩) ಬ್ರಹ್ಮಸೂತ್ರಭಾಷ್ಯ - ಟೀಕಾ-ಟಿಪ್ಪಣಿ (ಸಂಪಾದಿತ ಗ್ರಂಥಗಳು) ೪) ಸಪ್ತರಾತ್ರೋತ್ಸವ ಚಂಪೂ ಮತ್ತು ೫) ವೇದಾಪೌರುಷೇಯತ್ವವಾದ ಎಂಬ ಗ್ರಂಥಗಳನ್ನು ಬರೆದು ಮಂಡಲದಿಂದ ಪ್ರಕಾಶಪಡಿಸಿದರು. ಇವಲ್ಲದೇ ಡಾ. ವರದರಾಜ ಉಮರ್ಜಿಯವರ ೧) ಕರ್ನಾಟಕ ಪ್ರಾಕೃತ ಕವಿ ಚರಿತೆ ೨) ಕನ್ನಡ ಭಾಷೆಯ ಉಗಮ ಮತ್ತು ಬೆಳವಣಿಗೆ (ಇಂಗ್ಲೀಷಿನಲ್ಲಿ); ಪ್ರೊ. ಎಸ್. ಆರ್. ಶರ್ಮಾ ಇವರ 'ಜೈನಿಸಮ್ ಆ್ಯಂಡ್ ಕರ್ನಾಟಕ ಕಲ್ಚರ್' ಎಂಬ ಗ್ರಂಥ, ಪ್ರೊ. ಸಿ.ಎಸ್. ಕುಲಕರ್ಣಿಯವರ 'ಋಗ್ವೇದ ರಹಸ್ಯ' ಮತ್ತು ನಾರಾಯಣ ಶರ್ಮಾ ಇವರ 'ಕನ್ನಡ ನಾಡಿನ ಕಥೆಗಳು' ಇವೆಲ್ಲ ಮಂಡಲದ ಕೆಲವು ಉಲ್ಲೇಖನೀಯ ಪ್ರಕಟಣೆಗಳಾಗಿವೆ.

ಮಂಡಲವು ವಿದ್ವಾಂಸರ ಸಂಶೋಧನಾತ್ಮಕ ಲೇಖನಗಳಿಂದ ಕೂಡಿದ ಪತ್ರಿಕೆ (ಕರ್ನಾಟಕ ಹಿಸ್ಟೋರಿಕಲ್ ರಿವ್ಯೂ) ಯನ್ನೂ ಪ್ರಕಟಿಸುತ್ತಿದೆ.

ಪ್ರಾಚೀನ ಕರ್ನಾಟಕದ ಹಾಗೂ ಭಾರತದ ಗತವೈಭವವನ್ನು ಪ್ರಕಾಶಪಡಿಸಲು ಮಂಡಲದಲ್ಲಿ ಆಗಾಗ ವಿಚಾರ ಸಂಕಿರಣಗಳನ್ನು (ಸೆಮಿನಾರ್) ಮತ್ತು 'ಭಾರತ ವೈಭವದರ್ಶನ ಬೋಧನೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಈ ವರ್ಷ ಸುವರ್ಣಕರ್ನಾಟಕ ಮಹೋತ್ಸವ ನಿಮಿತ್ತ ವಿಶೇಷೋಪನ್ಯಾಸಗಳನ್ನು ವ್ಯವಸ್ಥೆ ಮಾಡಲಾಗಿದೆ.

ಮಂಡಲದ ಹುಟ್ಟಿನಿಂದ ಈ ವರೆಗಿನ ಬೆಳವಣಿಗೆಯನ್ನು ಆಲಂಕಾರಿಕವಾಗಿ ಹೀಗೆ ಹೇಳಬಹುದು-

ವಿವಿಧಸಂಶೋಧನಾ ಸಂಸ್ಥೆಗಳೆಂಬ ಬೀಜಗಳ ರಾಶಿಗಳೊಳಗಿಂದ, ಪುಣೆಯಲ್ಲಿದ್ದ ಕನ್ನಡಾಭಿಮಾನಿಗಳಾದ ವಿದ್ಯಾರ್ಥಿಗಳ ಪ್ರೇರಣೆ ಸಹಾಯಗಳೆಂಬ ಶ್ರಮದಾನದೊಂದಿಗೆ, ಶ್ರೀಯುತರಾದ ಆಲೂರು ವೆಂಕಟರಾವ, ನಾ. ಶ್ರೀ ರಾಜಪುರೋಹಿತ, ನಾರಾಯಣರಾವ ದೇಶಪಾಂಡೆ ಮೊದಲಾದ ಹದಿನಾಲ್ಕು ಜನರು, ಆರಿಸಿ ಹೊರತೆಗೆದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವೆಂಬ ಬೀಜವನ್ನು ಬಿತ್ತಲು ಶ್ರೀ ದ.ಪ. ಕರಮರಕರರು ಫಲವತ್ತಾದ

ಒಂದು ಕ್ಷೇತ್ರವನ್ನು ಒದಗಿಸಿದರು. ಆ ಕ್ಷೇತ್ರದಲ್ಲಿ ಬಿತ್ತಲ್ಪಟ್ಟ ಬೀಜವು ಪೂಜ್ಯರಾದ - ಶ್ರೀ ಆಲೂರು ವೆಂಕಟರಾವ, ಶ್ರೀ ನಾ. ಶ್ರೀ ರಾಜಪುರೋಹಿತ, ಶ್ರೀ ವ್ಹಿ.ಬಿ. ಹಾಲಭಾವಿ, ಶ್ರೀ ರಂಗನಾಥ ದಿವಾಕರ, ಶ್ರೀ ನಿಟ್ಟೂರು ಶ್ರೀನಿವಾಸರಾವ, ಶ್ರೀ ವ್ಹಿ.ಕೆ.ಆರ್.ವ್ಹಿ ರಾವ್, ಶ್ರೀ ದ. ಪ. ಕರಮಕರ, ಶ್ರೀ ನಾ.ಶ್ರೀ. ಕಮಲಾಪುರ, ಶ್ರೀ ವ್ಹಿ.ಬಿ. ನಾಯಕ ಮುಂತಾದವರಿಂದ ಅಂಕುರಿತವಾಗಿ ಬೆಳೆಯತೊಡಗಿತು. ಮಂಡಲವೆಂಬ ಈ ಸಸಿಯು ಬೆಳೆದು, ಮರವಾಗಿ ವಿದ್ಯಾರತ್ನ ಶ್ರೀ ರಾ. ಸ್ವಾ. ಪಂಚಮುಖಿಯವರ ಕಾಲದಲ್ಲಿ ಶಾಖೋಪಶಾಖೆಗಳಾಗಿ ಹೂ ಬಿಟ್ಟು ಫಲಗಳನ್ನು ಕೊಡುವ ಮಟ್ಟಕ್ಕೆ ಬಂದಿತು ಎಂದು ನಾವು ಈ ನಮ್ಮ ಮಂಡಲದ ಇದುವರೆಗಿನ ಬೆಳವಣಿಗೆ ಹಾಗೂ ಸಾಧನೆಗಳನ್ನು ಆಲಂಕಾರಿಕವಾಗಿ ಸಂಕ್ಷೇಪದಲ್ಲಿ ಚಿತ್ರಿಸಬಹುದು. ಈ ವೃಕ್ಷವು ನಶಿಸದಂತೆ ಪೋಷಿಸಿ, ಸಂಶೋಧನಾ ಪರಂಪರೆಯು ಅವ್ಯಾಹತವಾಗಿ ಮುಂದುವರೆಯುವಂತೆ ನೋಡಿಕೊಳ್ಳುವುದು ನಮ್ಮ-ನಿಮ್ಮೆಲ್ಲರ ಕರ್ತವ್ಯವಾಗಿದೆ.

೧೧. **ಕೃತಜ್ಞತಾ ಸಮರ್ಪಣೆ** :-

ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗಿನ ವಿವಿಧ ಅವಧಿಯಲ್ಲಿ ಶ್ರೀಯುತರಾದ ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ, ಡಾ ರಾಘವೇಂದ್ರರಾವ ಶಿರಹಟ್ಟಿ, ರಂಗನಾಥ ದಿವಾಕರ, ವ್ಹಿ.ಕೆ. ಆರ್.ವ್ಹಿ. ರಾವ, ನಿಟ್ಟೂರು ಶ್ರೀನಿವಾಸರಾವ, ರಾ.ಸ್ವಾ. ಪಂಚಮುಖಿ, ದ.ಪ. ಕರಮರಕರ, ರಾಜಾ ಎಸ್. ಜಿ. ಆಚಾರ್ಯ, ಶ್ರೀ ಶ್ರೀ ವಿಜ್ಞಾನನಿಧಿ ತೀರ್ಥರು ಈ ಮಹನೀಯರು ಮಂಡಲದ **ಅಧ್ಯಕ್ಷರಾಗಿಯೂ;** ಶ್ರೀ ಆರ್. ಜಿ. ದೇಶಪಾಂಡೆ, ಶ್ರೀ ಡಿ.ಪಿ.ಪತ್ರಾವಳಿ, ಶ್ರೀ ವ್ಹಿ.ಎನ್. ಜೋಗ, ಶ್ರೀ ವ್ಹಿ.ಬಿ. ಹಾಲಭಾವಿ, ಶ್ರೀ ರಾ.ಸ್ವಾ. ಪಂಚಮುಖಿ, ಶ್ರೀ ಜಿ.ಎಸ್. ಕೇಶವಾಯಿನ್, ಶ್ರೀ ಕೆ. ಅನಂತಾಚಾರ್ಯ, ಶ್ರೀ ಪಿ.ಆರ್. ಪಂಚಮುಖಿ ಈ ಮಹನೀಯರು ಮಂಡಲದ **ಕಾರ್ಯಾಧ್ಯಕ್ಷರಾಗಿಯೂ;** ಶ್ರೀ ರುಕ್ಮಾಂಗದರಾವ ದೇಶಪಾಂಡೆ, ಶ್ರೀ ರಂಗರಾವ ಕೃಷ್ಣ ಅಸುಂಡಿ, ಶ್ರೀ ಸಾಲಿ ರಾಮಚಂದ್ರರಾವ, ಶ್ರೀ ದತ್ತಾತ್ರೇಯ ಕರಮರಕರ, ಶ್ರೀ ಎ.ಟಿ. ಸಾಸನೂರ, ಶ್ರೀ ನಾ.ಶ್ರೀ ಕಮಲಾಪುರ, ಶ್ರೀ ಪಿ.ಬಿ. ದೇಸಾಯಿ ಶ್ರೀ ಸಿ.ಡಿ. ದೇಶಪಾಂಡೆ, ಶ್ರೀ ವ್ಹಿ.ಆರ್. ಮುಧೋಳಕರ, ಶ್ರೀ ವ್ಹಿ.ಬಿ. ನಾಯಕ, ಶ್ರೀ ಯು.ಬಿ. ಬೀಡಿ, ಶ್ರೀ ಪಿ.ಆರ್. ಪಂಚಮುಖಿ, ಶ್ರೀ ಕೆ.ಎಸ್. ಉಪಾಧ್ಯೆ, ಶ್ರೀ ಜೆ.ಎನ್. ಹಾವನೂರ, ಶ್ರೀ ಜಿ.ಜಿ. ನಾಡಗೀರ, ಶ್ರೀ ಎ.ಆರ್. ಪಂಚಮುಖಿ, ಶ್ರೀ ವ್ಹಿ. ಬಿ. ಅಣ್ಣಿಗೇರಿ ಇವರು ಮಂಡಲದ **ಕಾರ್ಯದರ್ಶಿಗಳಾಗಿಯೂ;** ಶ್ರೀ ಡಿ.ಪಿ. ಪತ್ರಾವಳಿ, ಶ್ರೀ ಜಿ.ಎಸ್. ಕುಲಕರ್ಣಿ, ಶ್ರೀ ಆರ್. ಬಿ. ಹಾವನೂರ್, ಶ್ರೀ ಎ.ಎಸ್. ರಾಯಚೂರು ಮೊದಲಾದವರು **ಖಜಾಂಚಿಗಳಾಗಿಯೂ,** ಶ್ರೀ ಆಲೂರು ವೆಂಕಟರಾವ, ಡಾ. ಎಸ್. ಸಿ. ನಂದೀಮಠ, ಡಾ. ಬಿ.ಎ. ಸಾಲೇತೊರೆ, ಶ್ರೀ ನಾ.ಶ್ರೀ. ಕಮಲಾಪೂರ, ಶ್ರೀ ರಾ. ಸ್ವಾ. ಪಂಚಮುಖಿ, ಡಾ. ವ್ಹಿ. ಆರ್. ಉಮರ್ಜಿ, ಡಾ. ಪಿ. ಆರ್. ಪಂಚಮುಖಿ, ಡಾ. ಎ. ಕೆ. ಶಾಸ್ತ್ರಿ ಮೊದಲಾದವರು ಕರ್ನಾಟಕ ಹಿಸ್ಟೋರಿಕಲ್ ರಿವ್ಯೂದ **ಸಂಪಾದಕರಾಗಿಯೂ** ಕರ್ನಾಟಕ ಇತಿಹಾಸ ಸಂಶೋಧನ ಮಂಡಲದಲ್ಲಿ ಸೇವೆ ಸಲ್ಲಿಸಿದ್ದಾರೆ.

ಈ ಎಲ್ಲ ಮಹನೀಯರಿಗೆ, ಮಂಡಲದ ಅಂದಿನ ಇಂದಿನ ಎಲ್ಲ ಅಧ್ಯಕ್ಷ-ಉಪಾಧ್ಯಕ್ಷರಿಗೆ, ಕಾರ್ಯಕಾರಿಣೀ ಸಭೆಯ ಸದಸ್ಯರಿಗೆ ಹಾಗೂ ಎಲ್ಲ ಸದಸ್ಯರಿಗೆ ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವದ ಈ ಶುಭಸಂದರ್ಭದಲ್ಲಿ ಅವರು

ಸಲ್ಲಿಸಿರುವ ಹಾಗೂ ಸಲ್ಲಿಸುತ್ತಿರುವ ಸೇವೆಯನ್ನು ಗಮನಿಸಿ ಕೃತಜ್ಞತಾಭಾವ ಪೂರ್ವಕ ನಮನಗಳನ್ನು ಸಲ್ಲಿಸುತ್ತೇವೆ. ಈ ಮಹನೀಯರು ಈ ಸಂಸ್ಥೆಯನ್ನು ಎಂಥ ಅಡೆತಡೆ, ತೊಂದರೆಗಳು ಬಂದರೂ ಸಂರಕ್ಷಿಸಿ ಬೆಳೆಸಿದ್ದಾರೆ. ಸಂಶೋಧನಾ ಪ್ರಪಂಚದಲ್ಲಿ ಇದಕ್ಕೊಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸುವ ಮೂಲಕ ಅನೇಕರಿಗೆ ಆಶ್ರಯಸ್ಥಾನರಾಗಿದ್ದಾರೆ. ಇದೇ ಸುಅವಸರದಲ್ಲಿ ಮಂಡಲದ ಉತ್ಕರ್ಷವನ್ನು ಬಯಸಿ ಕಾಲಕಾಲಕ್ಕೆ ಪ್ರೋತ್ಸಾಹಿಸಿದ ಹಾಗೂ ಪ್ರೋತ್ಸಾಹಿಸುತ್ತಿರುವ ಎಲ್ಲ ಕನ್ನಡಾಭಿಮಾನಿಗಳಿಗೆ ಮಂಡಲದ ಈಗಿನ ಎಲ್ಲ ಪದಾಧಿಕಾರಿಗಳೂ ಸದಸ್ಯರೂ ಆದ ನಾವೆಲ್ಲ ಮನಃಪೂರ್ವಕ ವಂದನೆಗಳನ್ನು ಸಮರ್ಪಿಸಲು ಬಯಸುತ್ತೇವೆ.

೧೨. ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವ

ಕನ್ನಡಾಭಿಮಾನಿಗಳೇ! ಮಂಡಲದ ಹಿತೈಷಿಗಳೇ! ಕರ್ನಾಟಕ ರಾಜ್ಯವು ಉದಯವಾಗಿ ೫೦ ವರ್ಷಗಳಾದ ಪ್ರಯುಕ್ತ ಕನ್ನಡಿಗರೆಲ್ಲರೂ ಈ ವರ್ಷವನ್ನು ವಿಶೇಷೋತ್ಸಾಹದಿಂದ ಆಚರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಕರ್ನಾಟಕದ ಸುವರ್ಣ ಮಹೋತ್ಸವವನ್ನು ಒಂದು ವಿಶಿಷ್ಟ ರೀತಿಯಿಂದ ಆಚರಿಸಲು ಮುಂದಾಗಿದೆ. ಮಂಡಲವು ಈ ವರ್ಷದಲ್ಲಿ ನಡೆಸಲು ವಿಶೇಷೋಪನ್ಯಾಸಗಳು, ವಿಸ್ತರಣೋಪನ್ಯಾಸಗಳು, ಗ್ರಂಥಪ್ರಕಾಶನ, ವಿಚಾರಸಂಕಿರಣ, ಡಿಪ್ಲೋಮಾ ಕೋರ್ಸ್‌ಗಳು ಮುಂತಾದ ಹಲವು ಯೋಜನೆಗಳನ್ನು ಹಾಕಿಕೊಂಡು ಕಾರ್ಯಪ್ರವೃತ್ತವಾಗಿದೆ. ಕರ್ನಾಟಕದ ಗತವೈಭವವನ್ನು ಈಗಿನ ಸಮಾಜಕ್ಕೆ ತಿಳಿಸಿ ಜನಜಾಗೃತಿ ಮಾಡುವ ಉದ್ದೇಶದಿಂದ ಹಮ್ಮಿಕೊಂಡಿರುವ ಈ ಯೋಜನೆಗಳ ಅಂಗವಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ೫೦ ಗ್ರಂಥಗಳನ್ನು ಪ್ರಕಾಶಪಡಿಸಲು ವಿದ್ವಾಂಸರಿಂದ ಕೃತಿಗಳನ್ನು ಆಹ್ವಾನಿಸಲಾಗಿತ್ತು. ನಮ್ಮ ಈ ಆಹ್ವಾನಕ್ಕೆ ಸ್ಪಂದಿಸಿ ವಿದ್ವಾಂಸರು ಕಳಿಸಿಕೊಟ್ಟ ಕೃತಿಗಳಲ್ಲಿ ಈಗ ಕರ್ನಾಟಕದ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ೫೦ ಕೃತಿಗಳನ್ನು ಪ್ರಕಾಶಪಡಿಸಲಾಗುತ್ತಿದೆ (ಅವುಗಳ ವಿವರವನ್ನು ಪ್ರತ್ಯೇಕ ಪುಟಗಳಲ್ಲಿ ಕಾಣಿಸಲಾಗಿದೆ).

ಕರ್ನಾಟಕದ ಇತಿಹಾಸ, ಸಂಸ್ಕೃತಿ, ಕಲೆ, ಸಾಹಿತ್ಯ ಇವೇ ಮೊದಲಾದ ವಿಷಯಗಳಲ್ಲಿ ಆಳವಾಗಿ ಅಧ್ಯಯನ ಮಾಡಿದ ಕರ್ನಾಟಕದ ವಿವಿಧ ವಿದ್ವಾಂಸರು ಕನ್ನಡದಲ್ಲಿ ಬರೆದ ಕೃತಿಗಳಿವು. ಈ ಕೃತಿಗಳು ನಮ್ಮ ಕರ್ನಾಟಕದ ಅಪೂರ್ವವಾದ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ, ಕರ್ನಾಟಕದ ಗತ ವೈಭವವನ್ನು ತಿಳಿಸಿ ಕನ್ನಡಿಗರಲ್ಲಿ ಸ್ವಾಭಿಮಾನವನ್ನು ಜಾಗೃತಗೊಳಿಸುತ್ತವೆ, ಭಾರತದೇಶದ ಇತರ ರಾಜ್ಯಗಳ ನಿವಾಸಿಗಳಲ್ಲಿ ಕನ್ನಡಿಗರ ಮೇಲಿನ ಗೌರವವನ್ನು ಹೆಚ್ಚಿಸುತ್ತವೆ. ಇವುಗಳ ಪ್ರಕಾಶನದಿಂದ ಸಂಶೋಧಕ ವಿದ್ವಾಂಸರಿಗೂ, ವಿದ್ಯಾರ್ಥಿಗಳಿಗೂ ಅನೇಕ ಉಪಯುಕ್ತ ಮಾಹಿತಿಗಳನ್ನೊದಗಿಸಿ ಹೆಚ್ಚಿನ ಸಂಶೋಧನೆಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಈ ಕೃತಿಗಳಲ್ಲದೇ ಕರ್ನಾಟಕದಲ್ಲಿ ಅತ್ಯಮೂಲ್ಯವಾದ ವಿಷಯಗಳನ್ನೊಳಗೊಂಡ ಅನೇಕ ಕೃತಿಗಳು ಇನ್ನೂ ಹಸ್ತಪ್ರತಿ ರೂಪದಲ್ಲಿದ್ದು, ಬೆಳಕು ಕಾಣದಾಗಿವೆ. ಕೆಲವು ಕೃತಿಗಳು ಮುದ್ರಿತವಾಗಿದ್ದರೂ ಈಗ ಅವಲೋಕನೆಗೆ ದೊರೆಯದಂತಾಗಿವೆ. ಇಂಥ ಅಮೂಲ್ಯ ಕೃತಿಗಳು ನಾಶವಾಗುವ ಮೊದಲೇ ಅವುಗಳನ್ನು ಪ್ರಕಾಶಕ್ಕೆ ತರುವುದು ಕನ್ನಡಿಗರಾದ ನಮ್ಮೆಲ್ಲರ

ಕರ್ತವ್ಯವಾಗಿದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಮಂಡಲದಿಂದ ಪ್ರಕಟವಾಗುತ್ತಿರುವ ಈ ೫೦ ಕೃತಿಗಳಲ್ಲದೇ ಈ ಸಂದರ್ಭದಲ್ಲಿ ಪ್ರಸಿದ್ಧ ವಿದ್ವನ್ಮಣಿಗಳಿಂದ ಬರೆಯಲ್ಪಟ್ಟ ಇಂಗ್ಲೀಷ ಹಾಗೂ ಕನ್ನಡ ಲೇಖನಗಳಿಂದ ಕೂಡಿದ ಒಂದು ಬೃಹತ್ ಸ್ಮರಣ ಸಂಪುಟವನ್ನೂ ಪ್ರಕಾಶಪಡಿಸಲಾಗುತ್ತಿದೆ.

ಈ ಕೃತಿಗಳಲ್ಲಿ ಐದಾರು ಕೃತಿಗಳು ಈ ಮೊದಲೇ ಬಹು ವರ್ಷಗಳ ಹಿಂದೆ ಮಂಡಲದಿಂದ ಪ್ರಕಾಶಿತವಾಗಿದ್ದರೂ ಈಗ ಅನುಪಲಬ್ಧವಾಗಿರುವ ಅವುಗಳನ್ನು ಪುನರ್ಮುದ್ರಿಸಬೇಕೆಂದು ಬಹುಜನರ ಬೇಡಿಕೆ ಇದ್ದುದರಿಂದ ಈ ಶುಭಾವಸರದ ಪ್ರಕಟಣೆ ಮಾಲೆಯಲ್ಲಿ ಅವುಗಳನ್ನು ಸೇರಿಸಿಕೊಳ್ಳಲಾಗಿದೆ.

ಈ ಎಲ್ಲ ಕೃತಿಗಳ ಲೇಖಕರು ಹಾಗೂ ಸಂಪಾದಕರು, ಇವುಗಳನ್ನು ಗಣಕ ಯಂತ್ರದ ಸಹಾಯದಿಂದ ಮುದ್ರಣಕ್ಕೆ ಸಿದ್ಧಪಡಿಸಿಕೊಟ್ಟ ಕುಶಲ ಯಾಂತ್ರಿಕರು, ಪ್ರೂಫ ನೋಡುವಲ್ಲಿ ಸಹಕರಿಸಿದ ಕಾರ್ಯಕರ್ತರು ಮತ್ತು ಚೆನ್ನಾಗಿ ಮುದ್ರಿಸಿ ಪುಸ್ತಕ ರೂಪಕ್ಕೆ ತಂದುಕೊಟ್ಟ ಮುದ್ರಣಾಲಯದ ಅಧಿಕಾರಿಗಳು ಹಾಗೂ ಎಲ್ಲ ಕರ್ಮಚಾರಿಗಳು ಇವರೆಲ್ಲರ ಸಹಾಯ ಸಹಕಾರಗಳನ್ನು ಮಂಡಲವು ಕೃತಜ್ಞತೆಯಿಂದ ಸ್ಮರಿಸುತ್ತದೆ. ಕೆಲವು ಗ್ರಂಥಗಳ ಮೊದಲಿನ ಪ್ರೂಫುಗಳನ್ನು ಮಂಡಲದ ಕಾರ್ಯಕರ್ತರು ತಿದ್ದಿದ ನಂತರ ಕೊನೆಯ ಪ್ರೂಫನ್ನು ಆಯಾ ಗ್ರಂಥದ ಲೇಖಕರೇ ತಿದ್ದಿ ಸಹಕರಿಸಿದ್ದಾರೆ. ಈ ಎಲ್ಲ ಲೇಖಕರಿಗೆ / ಸಂಪಾದಕರಿಗೆ ವಿಶೇಷ ಕೃತಜ್ಞತೆಗಳು. ಈ ಗ್ರಂಥಗಳ ಸಂಪಾದನೆಯ ಕಾರ್ಯದಲ್ಲಿ ಅಮೂಲ್ಯ ಸಲಹೆಗಳನ್ನಿತ್ತು ಸಹಕರಿಸಿದ ಸಲಹಾ ಮಂಡಳಿಯ ಖ್ಯಾತನಾಮರಾದ ವಿದ್ವಾಂಸರಿಗೆ ಗೌರವಪೂರ್ವಕ ವಂದನೆಗಳು.

ಈಗ ಪ್ರಕಟಿಸಲಾಗುತ್ತಿರುವ ಗ್ರಂಥಗಳಲ್ಲಿಯ ಎಲ್ಲ ವಿಷಯಗಳು ಆಯಾ ಗ್ರಂಥದ ಲೇಖಕರು / ಸಂಪಾದಕರು ತಮಗೆ ಉಪಲಬ್ಧವಾದ ದಾಖಲೆಗಳೊಂದಿಗೆ ಮಂಡಿಸಿದ ಸ್ವಂತ ವಿಚಾರಗಳಿಂದ ಹೊರಹೊಮ್ಮಿದವುಗಳಾಗಿವೆ. ಏನಾದರೂ ವಿವಾದಾತ್ಮಕ ವಿಷಯುಗಳು ಕಂಡುಬಂದರೆ ಅವುಗಳಿಗೆ ಮಂಡಲವು ಹೊಣೆಗಾರವಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬಯಸುತ್ತೇನೆ.

ಕರ್ನಾಟಕ ಇತಿಹಾಸ ಸಂಶೋಧನ ಮಂಡಲವು ಎಲೆಮರೆಯ ಕಾಯಿಯಂತಿದ್ದು ಅವಾಸ್ತವ ಪ್ರಚಾರ- ಖ್ಯಾತಿಗಳನ್ನು ಬಯಸದೇ ತನ್ನ ಅನಿಯಮಿತ ಹಾಗೂ ಮಿತವಾದ ಆದಾಯದಲ್ಲೇ ಉಪನ್ಯಾಸ, ವಿಚಾರ ಸಂಕಿರಣ, ಹಸ್ತ ಪ್ರತಿಗಳ ಸಂಶೋಧನೆ, ಗ್ರಂಥ ಪ್ರಕಾಶನ ಇವೇ ಮೊದಲಾದ ಮಾಧ್ಯಮಗಳ ಮೂಲಕ ಕರ್ನಾಟಕ ಮಾತೆಯ ನಿಷ್ಕಾಮ ಸೇವೆಯನ್ನು ಕರ್ತವ್ಯಭಾವನೆಯಿಂದ ಮಾಡುತ್ತ ಆಗಾಗ ಎದುರಾಗುತ್ತಿರುವ ತೊಂದರೆಗಳನ್ನು ಲೆಕ್ಕಿಸದೇ ಮುನ್ನಡೆದಿದೆ.

"ಸಂಸ್ಕೃತ - ಸಂಸ್ಕೃತಿಸೇವೆ - ಪ್ರಸಾರದಲ್ಲಿ, ಕರ್ನಾಟಕದಲ್ಲಿ ಮುಂಚೂಣಿಯಲ್ಲಿರುವ, ಶತಮಾನದ ಸಂಭ್ರಮದಲ್ಲಿರುವ ಮಾದರಿ ಸಂಸ್ಥೆ" ಎಂದು ಈ ಮಂಡಲವನ್ನು ಶ್ಲಾಘಿಸುತ್ತ ಇದರ ಅದ್ಭುತ ಸಾಧನೆಗಾಗಿ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿಗಳು ದಿ. ೩೦-೮-೨೦೦೭ ರಂದು ಶ್ರೀರಾಯರ ಆರಾಧನಾ ಶುಭಸಂದರ್ಭದಲ್ಲಿ ಕರ್ನಾಟಕ ಇತಿಹಾಸ ಸಂಶೋಧನ ಮಂಡಲಕ್ಕೆ **ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ** ಹಾಗೂ ೧ ಲಕ್ಷ ರೂ. ಪ್ರೋತ್ಸಾಹದೊಂದಿಗೆ ಫಲಮಂತ್ರಾಕ್ಷತೆಯನ್ನಿತ್ತು ಅನುಗ್ರಹಿಸಿದ್ದಾರೆಂದು ತಿಳಿಸಲು ಹರ್ಷವಾಗುತ್ತದೆ.

ಸುವರ್ಣ ಮಹೋತ್ಸವದ ಪ್ರಕಟಣೆಗಳಿಗೆ ಕರ್ನಾಟಕ ಸರಕಾರವು ಆಂಶಿಕ ಅನುದಾನವನ್ನಿತ್ತ ಕಾರಣಕ್ಕಾಗಿ ಸರಕಾರದ ಸಂಬಂಧಿಸಿದ ಎಲ್ಲ ಅಧಿಕಾರಿಗಳನ್ನು ಮಂಡಲವು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಸುವರ್ಣ ಕರ್ನಾಟಕದ ಸುವರ್ಣ ಮಹೋತ್ಸವದ ಅವಿಸ್ಮರಣೀಯವಾದ ಈ ಶುಭಾವಸರದಲ್ಲಿ ಕರ್ನಾಟಕದ ವಿದ್ವಾಂಸರು ತಂದು ಕೊಟ್ಟ ಗ್ರಂಥರೂಪದಲ್ಲಿರುವ ೫೦ ಪುಷ್ಪಗಳನ್ನು ಸೇರಿಸಿ ಸಿದ್ಧಪಡಿಸಲಾದ ಗ್ರಂಥಮಾಲೆಯನ್ನು ಕರ್ನಾಟಕ ಮಾತೆಯ ಅಡಿದಾವರೆಗಳಲ್ಲಿ ಸಮರ್ಪಿಸುತ್ತ ಮಂಡಲವು ಕೃತಕೃತ್ಯ ಭಾವವನ್ನು ಹೊಂದುತ್ತಿದೆ. ಜನೋಪಯೋಗಿಯಾದ ಇಂಥ ಸತ್ಕಾರ್ಯಗಳು ಮಂಡಲದಿಂದ ನಿರಂತರ ನಡೆಯುತ್ತಿರುವಂತೆ ಎಲ್ಲ ಹಿರಿಯರ ಆಶೀರ್ವಾದ ಹಾಗೂ ಕನ್ನಡಾಭಿಮಾನಿಗಳಾದ ತಮ್ಮೆಲ್ಲರ ಸದಿಚ್ಛೆ-ಪ್ರೋತ್ಸಾಹಗಳು ನಮ್ಮೊಂದಿಗೆ ಸದಾಕಾಲ ಇರಲಿ ಎಂದು ಪ್ರಾರ್ಥಿಸುತ್ತೇನೆ.

ವಿಜಯದಶಮೀ
ಗುರುವಾರ
೦೯-೧೦-೨೦೦೮

ಆ. ರಾ. ಪಂಚಮುಖಿ,
ಕಾರ್ಯಾಧ್ಯಕ್ಷ ಕ. ಇ. ಸಂ. ಮಂಡಲ,
ಮತ್ತು ಕಾರ್ಯನಿರ್ವಾಹಕ ಸಂಪಾದಕ
ಧಾರವಾಡ

ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ – ೦೧
ಕರ್ನಾಟಕ ಸುವರ್ಣ ಮಹೋತ್ಸವ ಗ್ರಂಥಮಾಲೆಯ ೫೦ ಕೃತಿಗಳು

ಕ್ರ. ಸಂ.	ಗ್ರಂಥದ ಹೆಸರು	ಲೇಖಕರ ಹೆಸರು

I. ಇತಿಹಾಸ

೧.	ಕರ್ನಾಟಕದ ಅರಸು ಮನೆತನಗಳು	ಶ್ರೀ ಎನ್. ಲಕ್ಷ್ಮೀನಾರಾಯಣ ಮತ್ತು ವಿದ್ಯಾರತ್ನ ಶ್ರೀ ಆರ್.ಎಸ್. ಪಂಚಮುಖಿ
೨.	ಕನ್ನಡ ನಾಡಿನ ಕಥೆಗಳು	ಶ್ರೀ ನಾರಾಯಣ ಶರ್ಮ
೩.	ಕನ್ನಡ ನಾಡಿನ ಮಿಂಚಿದ ಮಹಿಳೆಯರು	ಡಾ|| ಪಾಂಡುರಂಗರಾವ ದೇಸಾಯಿ
೪.	ಕರ್ನಾಟಕದ ಪ್ರಾಕೃತ ಕವಿಚರಿತೆ	ಡಾ|| ವ್ಹಿ.ಆರ್. ಉಮರ್ಜಿ
೫.	ಕರ್ನಾಟಕದ ಇತಿಹಾಸ	ವಿದ್ಯಾರತ್ನ ಶ್ರೀ ಆರ್.ಎಸ್. ಪಂಚಮುಖಿ
೬.	ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು	ಡಾ|| ಗಣಪತಿ ಗೌಡ
೭.	ಬಳ್ಳಾರಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ	ಶ್ರೀ ವಾಯ್. ಹನುಮಂತ ರೆಡ್ಡಿ
೮.	ಗತಕಾಲದ ಧಾರವಾಡ	ಪ್ರೊ. ಎನ್. ಎಚ್. ಕಟಗೇರಿ
೯.	ಯುದ್ಧಮಂಡಲಮಧ್ಯದೊಳಗೆ......	ಶ್ರೀ ಅತ್ತಿಮುರುಡು ವಿಶ್ವೇಶ್ವರ
೧೦.	ವಕೀಲ ರಾಮಪ್ಪನ ಕೈಫಿಯತ್ತು	ಡಾ|| ಎಚ್.ಎಸ್. ಗೋಪಾಲರಾವ
೧೧.	ಕರ್ನಾಟಕದ ಕೋಟೆ ಕೊತ್ತಲಗಳು ಭಾಗ–೧	ಡಾ|| ಎಸ್.ಕೆ. ಜೋಶಿ
೧೨.	ವಿಜಯ ನಗರ ಸಾಮ್ರಾಜ್ಯ	ಡಾ|| ಪಿ.ಬಿ. ದೇಸಾಯಿ

II. ಶಾಸನ

೧೩	ಶಾಸನ ಸರಸ್ವತಿ	ಡಾ || ಕೆ. ಆರ್. ಗಣೇಶ
೧೪	ಕದಂಬರ ಅರತಲೆಗದ್ದೆಯ ಅಪೂರ್ವ ತಾಮ್ರಶಾಸನ ಭಂಡಾರ	ಡಾ|| ಜಗದೀಶ, ಡಾ. ಸಾಮಗ, ಡಾ|| ಎಮ್.ವ್ಹಿ. ರಮೇಶ ಜೋಯಿಸ್
೧೫	ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ	ಡಾ|| ಎಚ್. ಜಯಮ್ಮ
೧೬	ಹಂಪೆಯ ಶಾಸನಗಳು	ಡಾ|| ಜಿ.ಎಸ್. ಭಗವತಿ
೧೭	ಕರ್ನಾಟಕ ಶಾಸನೋಕ್ತ ಮಹಿಳೆ : ಸಮೀಕ್ಷೆ–ಸಂಸ್ಕೃತಿ	ಡಾ|| ಚೆನ್ನಕ್ಕ ಪಾವಟೆ
೧೮	ಕರ್ನಾಟಕ ಶಾಸನಗಳಲ್ಲಿ ಶಾಪಾಶಯ	ಡಾ|| ದೇವರಕೊಂಡಾರೆಡ್ಡಿ

III. ಸಂಸ್ಕೃತಿ, ಧರ್ಮ, ಕಲೆ

೧೯	ಸಂಗಮರ ದೇವಾಲಯಗಳು	ಡಾ॥ ಸಿ. ಎಸ್. ಅಪರ್ಣ
೨೦	ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ (ನೃತ್ಯ)	ಡಾ॥ ಕರುಣಾ ವಿಜಯೇಂದ್ರ
೨೧	ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು	ಡಾ॥ ಡಿ. ಜಿ. ಕುಲಕರ್ಣಿ
೨೨	ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ	ಡಾ॥ ಎಮ್. ಎಸ್. ಕಡಪಟ್ಟಿ
೨೩	ಕಿಟೆಲ್ಸ ಕೋಶ – ಸಾಂಸ್ಕೃತಿಕ ಅಧ್ಯಯನ	ಡಾ. ಸುಧಾ ಎಸ್. ಕೌಜಗೇರಿ
೨೪	ಕರ್ನಾಟಕದ ಶೈವ ಶಿಲ್ಪಗಳು	ಡಾ॥ ಕೆ. ವಸಂತಲಕ್ಷ್ಮೀ

IV. ಕಲಾ ಪರಂಪರೆ

೨೫	ಬಾದಾಮಿಯ ಚಲುಕ್ಯರ ಶಾಸನಗಳು, ವಾಸ್ತು ಮತ್ತು ಶಿಲ್ಪಕಲೆ	ಡಾ॥ ಶ್ರೀನಿವಾಸ ವೆಂ. ಪಾಡಿಗಾರ
೨೬	ಪಟ್ಟದಕಲ್ಲು ದರ್ಶನ	ಡಾ॥ ಶೀಲಾಕಾಂತ ಪತ್ತಾರ
೨೭	ಉತ್ತರ ಕರ್ನಾಟಕದ ಪ್ರಾಚೀನ ಚಿತ್ತಾರಗಳು	ಶ್ರೀ ಎಮ್. ಎಮ್. ಜಗತಾಪ
೨೮	ಕರ್ನಾಟಕದ ಯಕ್ಷಗಾನ ಕಲಾಲೋಕ	ಶ್ರೀ ಜಿ. ಆರ್. ಪಾಂಡೇಶ್ವರ
೨೯	ಕನ್ನಡ ಯಕ್ಷಗಾನ ಮತ್ತು ಸಂಸ್ಕೃತದ ಕೂಟಿಅಟ್ಟಂ – ತೌಲನಿಕ ಅಧ್ಯಯನ	ಡಾ॥ ಜಿ. ಎಸ್. ಹೆಗಡೆ

V. ವಿವಿಧ ವಿಷಯಗಳ ಮೇಲಿನ ಕೃತಿಗಳು

೩೦	ಶ್ರೀಧರಾಚಾರ್ಯ ವಿರಚಿತ ತ್ರಿಶತಿಕಾ ಅಥವಾ ಪಾಣೀಗಣಿತಸಾರ	ಡಾ॥ ವೇಣುಗೋಪಾಲ ಹೆರೂರ
೩೧	ಭಾಸ್ಕರಾಚಾರ್ಯ ವಿರಚಿತ ಜ್ಯೋತ್ಪತ್ತಿ	ಡಾ॥ ವೇಣುಗೋಪಾಲ ಹೆರೂರ
೩೨	ಕನ್ನಡದ ಹಳಮೆ ಮತ್ತು ಇತರ ಸಂಪ್ರಬಂಧಗಳು	ಡಾ॥ ಶಾಲಿನಿ ರಘುನಾಥ ಭಟ್ಟ
೩೩	ಕನ್ನಡದಲ್ಲಿ ಮಹಾಭಾರತಗಳು ಮತ್ತು ಕುಮಾರವ್ಯಾಸ ಭಾರತ ನಿಘಂಟು	ಡಾ॥ ಎನ್ಕೆ. ಕುಲಕರ್ಣಿ
೩೪	ಕರ್ನಾಟಕದ ಸ್ಥಳನಾಮಗಳು –ಒಂದು ಅಧ್ಯಯನ	ಶ್ರೀ ಎಸ್.ಎಲ್. ದೇಶಪಾಂಡೆ

३४ ನಾ ಕಂಡ ಕರ್ನಾಟಕ	ಡಾ|| ಕೃಷ್ಣಾನಂದ ಕಾಮತ
३६ ಕರುನಾಡಿನ ಜನಜೀವನ	ಡಾ|| ಜ್ಯೋತ್ಸ್ನಾ ಕಾಮತ
३७ ಸುವರ್ಣ ಕರ್ನಾಟಕ	ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ
३८ i) ನಾಡು ಕಟ್ಟಿದವರು (ರೂಪಕ)	ಶ್ರೀ ಸಂಜೀವ ವ್ಹಿ. ಬೆಟಗೇರಿ
ii) ಹಂಪೆ-ರಾಮಾಯಣದ ಕಿಷ್ಕಿಂಧೆಯೆ?	ಡಾ|| ಅ. ಸುಂದರ
३९ ಕೈಗನ್ನಡಿಯಲ್ಲಿ ಕನ್ನಡಿತಿ	ಡಾ|| ಜ್ಯೋತ್ಸ್ನಾ ಕಾಮತ
४० ಆಲೂರು ವೆಂಕಟರಾವ : ವ್ಯಕ್ತಿ ಮತ್ತು ಸಾಧನೆ	ಡಾ|| ವಿ.ಎಸ್. ಆರಾಧ್ಯಮಠ
४१ ಕರ್ನಾಟಕದ ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳಗಳು	ಪ್ರೊ. ರಾಜೇಶ ಚಿಟಗುಪ್ಪಿ

VI. ಜಾನಪದ ಸಾಹಿತ್ಯ

४२ ಕರ್ನಾಟಕದ ಉರುಸುಗಳು	ಡಾ|| ಇಬ್ರಾಹಿಂ ಎಂ. ಮುಲ್ಲಾ
४३ ಉತ್ತರ ಕರ್ನಾಟಕದ ಜನಪದ ಸೋಗುಗಳು	ಡಾ|| ಎಸ್.ಆರ್. ರಾಮರಥ
४४ ಮಹಿಳಾ ಜಾನಪದ	ಡಾ|| ಶಾಲಿನಿ ಭಟ್ಟ ಮತ್ತು ಡಾ|| ಇಮ್ರಾಪುರ

VII. ಶಿವಶರಣರು ಮತ್ತು ವಚನ ಸಾಹಿತ್ಯ

४५ ಶರಣ ಸಂಚಯ	ಡಾ|| ವೀರಣ್ಣ ರಾಜೂರ
४६ ಶರಣರ ವಿಚಾರಕ್ರಾಂತಿ	ಪ್ರೊ.ಎಸ್.ಉಮಾಪತಿ
४७ ನಿಜಗುಣಶಿವಯೋಗಿಗಳು : ಜೀವನ-ಸಾಧನೆ	ಡಾ|| ಎಸ್. ಎಸ್. ಬಸುಪಟ್ಟದ
४८ ವೀರಶೈವ ತಾರಾವಳಿ ಸಾಹಿತ್ಯ	ಡಾ || ವೀರಣ್ಣ ರಾಜೂರ

VIII. ದಾಸ ಸಾಹಿತ್ಯ

४९ ಕರ್ನಾಟಕದ ಹರಿದಾಸ ಸಂಚಯ ಮತ್ತು ಸಾಹಿತ್ಯ ಚಿಂತನೆ	ಡಾ|| ಅರಳುಮಲ್ಲಿಗೆ ಪಾರ್ಥಸಾರಥಿ
५० ಕರ್ನಾಟಕದ ಹರಿದಾಸ ಸಾಹಿತ್ಯ	ವಿದ್ಯಾರತ್ನ ರಾ.ಸ್ವಾ. ಪಂಚಮುಖಿ

******

ಅರ್ಪಣೆ

ನಾಡಿನುದ್ದಕ್ಕೂ ಸಂಚರಿಸುತ್ತ ಗುಡಿ-ಗುಂಡಾರ, ಶಾಸನ, ಶಿಲ್ಪಗಳನ್ನೆಲ್ಲ ಕ್ಲಿಕ್ಕಿಸುತ್ತ, ಮಾದರಿಗಳನ್ನು ಕಾಯ್ದಿರಿಸುತ್ತ , ನನ್ನ ಇತಿಹಾಸ ಅಧ್ಯಯನಕ್ಕೆ ಗಟ್ಟಿ ಆಕರವನ್ನು ಒದಗಿಸುತ್ತಲೇ

ಕಣ್ಮರೆಯಾದ ಬಾಳಸಂಗಾತಿಯ ನೆನಪಿಗೆ

ಜ್ಯೋತ್ಸ್ನಾ ಕಾಮತ್



ದಿ. ಡಾ. ಕೃಷ್ಣಾನಂದ ಕಾಮತ್

ಲೇಖಕಿಯ ನುಡಿ

ಇತ್ತೀಚೆಗೆ, (22.5.2007)ರಂದು ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ ವತಿಯಿಂದ, 14.5.2007 ರಂದು ಬರೆದ ಪತ್ರ ಕೈಸೇರಿತು. ಸುವರ್ಣ ಕರ್ನಾಟಕ ಮಹೋತ್ಸವದ ಅಂಗವಾಗಿ ಐವತ್ತು ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯಡಿ ಒಂದು ಪುಸ್ತಕವನ್ನು ಬರೆದು ಕೊಡಲು ಅದರಲ್ಲಿ ವಿನಂತಿಸಲಾಗಿತ್ತು! ಕೇವಲ ಕತೆ, ಕಾದಂಬರಿ, ಹಾಸ್ಯ ಲೇಖಗಳಿಗೆ ಮಾತ್ರ ಬೇಡಿಕೆಯಿರುವ ಇಂದಿನ ದಿನಗಳಲ್ಲಿ ಸಂಶೋಧನಾ ಕೃತಿಗಳಿಗೂ ಬೆಲೆಯಿದೆ ಎಂದು ತಿಳಿದು ಹೆಚ್ಚಿನ ಸಂಭ್ರಮ-ಸಂತೋಷಗಳಾದವು. ಕೂಡಲೇ ಟ್ರಂಕಿನಲ್ಲಿ ರಾಶಿರಾಶಿಯಾಗಿ ಬಿದ್ದಿದ್ದ ಟಿಪ್ಪಣಿ, ಲೇಖ, ಪ್ರಕಟಿತ ಲೇಖಗಳನ್ನೆಲ್ಲ ಹೊರತೆಗೆದು ತಿರುವಿ ಹಾಕಿದೆ. ಅವುಗಳ ಆಧಾರಿತ ೧೭ ಬಿಡಿಚಿತ್ರಗಳನ್ನು ಬರೆದು ಓದುಗರೆದುರು ಇಟ್ಟಿದ್ದೇನೆ. ಈ ಒಂದು ಅಪೂರ್ವ ಅವಕಾಶವನ್ನು ಒದಗಿಸಿದ, ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ, ಕಾರ್ಯಾಧ್ಯಕ್ಷರಾದ ಶ್ರೀ ಆ. ರಾ. ಪಂಚಮುಖಿ ಅವರಿಗೆ, ಗೌರವ ಕಾರ್ಯದರ್ಶಿಗಳಿಗೆ ಹಾಗೂ ನನ್ನ ಹೆಸರು ಸೂಚಿಸಿದ ಶ್ರೀ ಎನ್. ಎಲ್. ಕುಲಕರ್ಣಿ ಇವರಿಗೆ ನನ್ನ ಮೊಟ್ಟಮೊದಲ ಕೃತಜ್ಞತೆಗಳು. ತೀರ ಅಲ್ಪಾವಧಿಯ ಪ್ರಯತ್ನ ಇದಾಗಿದೆ.

ಶೀರ್ಷಿಕೆಯ ಕುರಿತು ಒಂದು ಮಾತು. ದೊಡ್ಡ ನಿಲುವುಗನ್ನಡಿಗಳ ಯುಗದಲ್ಲಿ ಕೈಗನ್ನಡಿಯೇ! ಅನಿಸಬಹುದು. ಕೈಗನ್ನಡಿ, ಪ್ರಾಚೀನತೆಯ ಸಂಕೇತ. ಬೇಲೂರಿನ ದರ್ಪಣ ಸುಂದರಿ. ಕೈಗನ್ನಡಿ ಹಿಡಿದು ತನ್ನ ರೂಪ ನಿರುಕಿಸುವುದರಲ್ಲಿ ಮೈಮರೆತು, ಇಂದಿಗೂ ಅಸಂಖ್ಯರನ್ನು ಆಕರ್ಷಿಸುತ್ತಿದ್ದಾಳೆ. 'ತನ್ನ ತಾನರಿಯಲು' ಕೈಗನ್ನಡಿ ಕೊಂಚ ಸಹಾಯ ಮಾಡೀತು. ಸ್ವಲ್ಪ ಹೊರಳಿಸಿದರೆ ಆ, ಈ, ಇಣುಕು ನೋಟಗಳೂ ಕಂಡಾವು! ಪ್ರಾಚೀನ ಕನ್ನಡಿತಿಯ ಜೀವನ - ಸಾಧನೆಗಳ, ನೋವು ನಲಿವುಗಳ, ಇಣುಕು ನೋಟಗಳನ್ನು ತೋರಿಸುವ ಪ್ರಯತ್ನ 'ಕೈಗನ್ನಡಿಯಲ್ಲಿ ಕನ್ನಡಿತಿ'ಯಲ್ಲಿದೆ. ನನ್ನ ಕಿರು ಕೈಗನ್ನಡಿಯಲ್ಲಿ ಕಂಡ ಇತಿಹಾಸದ ನೋಟಗಳು ಇವು!

ಸಂಶೋಧನಾ ಕೃತಿಯಾದರೂ ಸಾಮಾನ್ಯ ಓದುಗರಿಗೆ ಸಹಾಯವಾಗುವಂತೆ ಸಾಧ್ಯವಿದ್ದಷ್ಟು ಸರಳ ಭಾಷೆಯಲ್ಲಿ ಬರೆದಿದ್ದೇನೆ. ಅಡಿಟಿಪ್ಪಣಿಗಳನ್ನು ಕೈಬಿಡಲಾಗಿದೆ. ಆಸಕ್ತರಿಗೆ ಸಹಾಯವಾಗಲೆಂದು ಆಧಾರ-ಋಣವನ್ನು ಕೊನೆಯಲ್ಲಿ ಕಾಣಿಸಿದ್ದೇನೆ.

ಕರ್ನಾಟಕದ ಸಾಮಾಜಿಕ ಇತಿಹಾಸದ ಪುನರ್ರಚನೆಗೆ ಸಮಕಾಲೀನ ಶಿಲ್ಪಗಳು ಬಹಳಷ್ಟು ಸಾಮಗ್ರಿ ಪೂರೈಸಿ ಗಟ್ಟಿ ನೆಲೆ ಒದಗಿಸುತ್ತವೆ! ಎಂದು ಮನವರಿಕೆ ಮಾಡಿಕೊಟ್ಟು, ಆ ದಿಸೆಯಲ್ಲಿ ಶ್ರಮಿಸಿದವರು, ನನ್ನ ಪತಿ ಡಾ! ಕೃಷ್ಣಾನಂದ ಕಾಮತರು. ಸ್ವತಃ ವಿಜ್ಞಾನಿ, ಸಾಹಿತಿ, ಛಾಯಾಚಿತ್ರಕಾರರಾಗಿದ್ದ ಅವರು ಕರ್ನಾಟಕದ ಇತಿಹಾಸದಲ್ಲೂ ಮೀರಿದ ಆಸಕ್ತಿ ತಾಳಿದ್ದರು. ಅಸಂಖ್ಯ ಶಿಲ್ಪ, ಚಿತ್ರಗಳನ್ನು ಕ್ಲಿಕ್ಕಿಸಿದ್ದಾರೆ. ನೂರಾರು, ಶಿಲ್ಪಾಧಾರಿತ ರೇಖಾಚಿತ್ರಗಳಲ್ಲಿ ಒಡಮೂಡಿಸಿದ್ದಾರೆ. ಕೆಲವನ್ನು ಇಲ್ಲಿ ಸೇರಿಸಿದ್ದೇನೆ. ಅವರು ಇದ್ದರೆ ಈ

ಪುಸ್ತಕವನ್ನು ಹೆಚ್ಚೆಚ್ಚು ರೇಖಾಚಿತ್ರಗಳನ್ನು, ಸಂದರ್ಭೋಚಿತವಾಗಿ ಮಾಡಿಕೊಟ್ಟು ಇನ್ನೂ ಹೆಚ್ಚು ಆಕರ್ಷಕವಾಗಿಸುತ್ತಿದ್ದರು. ಅವರಿಗೆ ಈ ಕೃತಿ ಅರ್ಪಿತವಾಗಿದೆ.

ಈ ಪುಸ್ತಕದಲ್ಲಿ ಸೇರಿಸಿದ 'ಲಲಿತ ಕಲೆಯ ಕ್ಷೇತ್ರದಲ್ಲಿ' (ಅಧ್ಯಾಯ ೪) ಈ ಮೊದಲು ಬೆಂಗಳೂರಿನ ಪ್ರೇಮ ಸಾಯಿ ಪ್ರಕಾಶನದಿಂದ ಪ್ರಕಟವಾದ ಮಹಿಳೆ 'ಅಂದು-ಇಂದು' (೨೦೦೧) ಮತ್ತು 'ಶಿಕ್ಷಣ ಕ್ಷೇತ್ರದಲ್ಲಿ'ಯ ಮಾಹಿತಿ ಮುಂಬೈ ವಿಶ್ವವಿದ್ಯಾಲಯವು ಪ್ರಕಟಿಸಿದ 'ಕರ್ನಾಟಕ ಶಿಕ್ಷಣ ಪರಂಪರೆ' (1988) ಕೃತಿಗಳಿಂದ ಆಯ್ದುಕೊಳ್ಳಲಾಗಿದೆ. ಸತಿಯ ಸಿಂಗಾರ ಲೇಖ ಡಾ|| ಎಂ. ಚಿದಾನಂದಮೂರ್ತಿ ಅಭಿನಂದನ ಸಮಿತಿಯು ಪ್ರಕಟಿಸಿದ ಗೌರವ ಸಂಪುಟವಾದ 'ಸಂಶೋಧನ' ಹೆಬ್ಬೊತ್ತಿಗೆ (೧೯೯೧) ಯಲ್ಲಿ ಪ್ರಕಟವಾಗಿದೆ. ಈ ಮೂರೂ ಸಂಸ್ಥೆಗಳಿಗೆ ಋಣಿ. ಉಲ್ಲಾಳದ ರಾಣಿ ಅಬ್ಬಕ್ಕನ ಕುರಿತ ನನ್ನ ಲೇಖ ೧೯೬೪ ರಷ್ಟು ಹಿಂದೆಯೇ ಕಸ್ತೂರಿ ಮಾಸ ಪತ್ರಿಕೆಯ ಜೂನ್ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾಗಿತ್ತು. ಆ ಬಳಿಕ ಲಭ್ಯವಾದ ಮಾಹಿತಿಯನ್ನು ಬಳಸಿ ಪುನಃ ಬರೆದಿದ್ದೇನೆ. ಈ ಮಾಹಿತಿಗಾಗಿ ಖ್ಯಾತ ಚರಿತ್ರಕಾರ, ಲೇಖಕ ಡಾ|| ಸೂರ್ಯನಾಥ ಕಾಮತರಿಗೆ ಕೃತಜ್ಞಳಾಗಿದ್ದೇನೆ. ಎರಡೂ ಸಂಸ್ಥೆಯವರಿಗೆ ಈ ಬಗ್ಗೆ ಆಭಾರಿಯಾಗಿದ್ದೇನೆ. ನನ್ನ ಪೂಜ್ಯ ಗುರುಗಳಾಗಿದ್ದ ಡಾ| ಬಿ. ಎ. ಸಾಲೆತೊರೆ, ಡಾ| ಪಿ.ಬಿ. ದೇಸಾಯಿ ಅವರು ನಿಕಟ ಸಂಪರ್ಕ ಹೊಂದಿದ್ದ ಧಾರವಾಡ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದಿಂದ ಈ ಪುಸ್ತಕ ಹೊರಬರುತ್ತಿರುವದು ನನ್ನ ಮಟ್ಟಿಗೆ ಅಭಿಮಾನದ ಮತ್ತು ಐತಿಹಾಸಿಕವಾದ ಘಟನೆಯಾಗಿ ಮಾರ್ಪಟ್ಟಿದೆ, ಕನ್ನಡಿಗರು ಇದನ್ನು ಸ್ವಾಗತಿಸುವರೆಂಬ ಭರವಸೆ.

೧೧೦ಶಶಿಕಿರಣ್
೧೮ನೆ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು-560055

ಜ್ಯೋತ್ಸ್ನಾ ಕಾಮತ್

ಒಂದು ಮುನ್ನೋಟ

೧೯೯೫ ರಲ್ಲಿ ಮೊದಲ ಬಾರಿಗೆ ಚೀನದ ಬೀಜಿಂಗ್ ನಗರದಲ್ಲಿ ವಿಶ್ವಸಂಸ್ಥೆಯ ಪರವಾಗಿ ಅಂತರ್‍ರಾಷ್ಟ್ರೀಯ ಮಹಿಳಾ ಸಮ್ಮೇಳನ ಏರ್ಪಟ್ಟಿತ್ತು. ಅನೇಕ ವಿಷಯಗಳಲ್ಲಿ ಅದು ವಿಶ್ವದ ಜನರ ಕಣ್ಣು ತೆರೆಸುವಂತಹದಾಗಿತ್ತು. ಪ್ರಪಂಚದ ಅರ್ಧಕ್ಕಿಂತ ಹೆಚ್ಚಿನ ಸ್ತ್ರೀಯರಿಗೆ ಶಿಕ್ಷಣವಿಲ್ಲ. ಮುಕ್ಕಾಲು ಸಂಖ್ಯೆಯವರಿಗೆ ಸರಿಯಾದ ಆರೋಗ್ಯ-ಪೋಷಣೆಗಳಿಲ್ಲ. ಬಹುಸಂಖ್ಯಾತರಿಗೆ ಮೂಲಭೂತ ಮಾನವಾಧಿಕಾರದ ಹಕ್ಕು ಬಾಧ್ಯತೆಗಳ ಅರಿವೇ ಇಲ್ಲ! ಬಡದೇಶಗಳಲ್ಲೆಲ್ಲ ಸರಕಿನಂತೆ ಹೆಣ್ಣುಗಳ ಮಾರಾಟ ನಡೆದೇ ಇದೆ. ಯಾವ ದೃಷ್ಟಿಯಿಂದ ನೋಡಿದರೂ ಭಾರತೀಯ ನಾರಿ ತನ್ನ ವಿಶ್ವ ಸೋದರಿಯರೊಡನೆ ಹೋಲಿಸಿದಲ್ಲಿ, ಕೊನೆಯ ಸಾಲಿನ ಶೋಷಿತ ದೇಶಗಳ ಸಾಲಿನಲ್ಲಿ ಸೇರ್ಪಡೆಯಾಗುತ್ತಾಳೆ! ಈ ಶೋಷಣೆ, ಆರ್ಥಿಕವಾಗಿ ಬಾಹ್ಯ ರೂಪದಲ್ಲಿ ಗೋಚರವಾದರೆ, ಸಾಮಾಜಿಕವಾಗಿ ಅದು ಅಗೋಚರವಾಗಿದೆ! ನಮ್ಮ ಸಂವಿಧಾನವೇನೋ ಪುರುಷರೊಂದಿಗೆ ಮಹಿಳೆಯರಿಗೆ ಸರ್ವಸಮಾನತೆ ಕೊಡಮಾಡಿದೆ. ಆದರೆ ೨೧ನೇ ಶತಮಾನದಲ್ಲೂ ಸಂಪ್ರದಾಯಬದ್ಧವಾಗಿಯೇ ಮುಂದುವರಿಯುತ್ತಿರುವ ಸಮಾಜದಲ್ಲಿ ಅದಕ್ಕೆ ಯಾವ ಬೆಲೆಯೂ ಇಲ್ಲ. ಹೀಗಾಗಿ ಮೇಲೆ ನಮೂದಿಸಿದ ಹಕ್ಕುಬಾಧ್ಯತೆಗಳ ಅರಿವಿಲ್ಲದ ಮೂರನೆಯ ವರ್ಗದಲ್ಲಿ ಭಾರತೀಯ ಮಹಿಳೆಯ ಸೇರ್ಪಡೆಯಾಗುತ್ತದೆ. ಕರ್ನಾಟಕವೂ ಹೊರತಾಗಿಲ್ಲ.

ಇತ್ತೀಚೆಗೆ ಸ್ತ್ರೀವಿಮೋಚನಾ ಚಳುವಳಿ, ಮಹಿಳಾ ಜಾಗೃತಿ ಸಂಸ್ಥೆಗಳು ಬೆಳೆದು ಬರುತ್ತಲಿವೆ. ಆದರೆ ಅವೆಲ್ಲ ನಗರಸ್ಥಿತ ಮಹಿಳೆಯರಿಗೆ ಮಾತ್ರ ತಲುಪುತ್ತಿವೆ. ಗ್ರಾಮಾಂತರ ಮಹಿಳೆಯರಿಗೆ ಅವು ಎಟುಕುವುದೇ ಇಲ್ಲ. ಹೀಗಾಗಿ ಸಾಮಾಜಿಕ ನ್ಯಾಯವೆಂಬುದು ಕಾಗದದ ಮೇಲೆ ಮಾತ್ರ ಉಳಿದುಕೊಂಡಿದೆ. ಇದಕ್ಕೆ ಕಾರಣ, ಶಿಕ್ಷಣದ ಕೊರತೆ, ಎನ್ನುವುದುಂಟು.

ಆದರೆ ಅಮೇರಿಕೆಯಂಥ ಶಿಕ್ಷಣದಲ್ಲಿ ಉನ್ನತ ಪ್ರಗತಿ ಪಡೆದ, ತಾಂತ್ರಿಕವಾಗಿ ಅತ್ಯುಚ್ಚ ಸ್ಥಾನ ಪಡೆದ, ಮಹಿಳೆಯನ್ನು ಬಾಹ್ಯಾಂತರಲೋಕಕ್ಕೆ ಕಳಿಸುವಷ್ಟು ಮುನ್ನಡೆ ಪಡೆದ ದೇಶದಲ್ಲೂ ಲಿಂಗ ಸಮಾನತೆ ಇಲ್ಲವೆನ್ನುವವರು ಇದ್ದಾರೆ. ಅದಕ್ಕಾಗಿ ಸುಮಾರು ೪೦ ವರ್ಷಗಳ ಹಿಂದೆ, ಅಲ್ಲಿ ಮಹಿಳೆಯರು 'ಲಿಬ್' ಕ್ರಾಂತಿಯನ್ನು ಸಂಘಟಿಸಿ ಹೋರಾಡಬೇಕಾಯಿತು. ಜಗತ್ತಿನಲ್ಲೆ ಮುಂದುವರಿದ ದೇಶ, ಇನ್ನೂ ಮಹಿಳಾ ಅಧ್ಯಕ್ಷಳನ್ನು ಹೊಂದಿಲ್ಲ. ನಮ್ಮನ್ನಾಳಿದ ಬ್ರಿಟಿಷರು ಮಹಿಳಾ ಪ್ರಧಾನಿಯನ್ನು ಪಡೆದದ್ದು ಇತ್ತೀಚೆಗೆ. ಜರ್ಮನಿಯು, ಮಹಿಳಾ ಚಾನ್ಸಲರ್ (ಅಧ್ಯಕ್ಷ) ಪಡೆದದ್ದು ಇನ್ನೂ ಈಚೆಗೆ ! ಭಾರತವು ಮಹಿಳಾ ಪ್ರಧಾನಿಯನ್ನು ಕಂಡು ನಾಲವತ್ತು ವರ್ಷ ದಾಟಿದೆ ! ಹತ್ತು ಹಲವು ಕ್ಷೇತ್ರಗಳಲ್ಲಿ ಲಿಂಗ ತಾರತಮ್ಯ ತಮ್ಮಲ್ಲಿ ಮುಂದುವರೆದಿದೆ! ಎಂದು ಅಮೇರಿಕೆ ಯುರೋಪಗಳ ಸ್ತ್ರೀವಾದಿಗಳ ಆಕ್ಷೇಪ ! ಇಪ್ಪತ್ತೊಂದನೆಯ ಶತಮಾನದಲ್ಲಿ, ಮುಂದುವರಿದ ದೇಶಗಳ ಪಾಡು ಹೀಗಿದ್ದರೆ, ಪ್ರಾಚೀನ, ಮಧ್ಯ ಯುಗದಲ್ಲಿ, ನಮ್ಮ ನಾಡಿನ ಹೆಂಗಳೆಯರ ಸ್ಥಿತಿ ಹೇಗಿದ್ದಿರಬಹುದು?

ಸ್ವಾತಂತ್ರ್ಯಕ್ಕೆ ಸ್ತ್ರೀ ಅನರ್ಹಳೆಂದು ಮನುವು ಸಾರಿದ ಬಳಿಕ ೨೦೦೦ ವರ್ಷಗಳಲ್ಲಿ ಹಿಂದೆ ಇದ್ದ ಸ್ಥಿತಿ ಏಕಪ್ರಕಾರವಾಗಿ ಮುಂದುವರಿಯಿತೇ? ಅಥವಾ ಭಿನ್ನವಾಗಿ ಬೆಳೆಯಿತೇ? ಶಾಸನ, ಕಾವ್ಯ, ಧರ್ಮಶಾಸ್ತ್ರಗಳೆಲ್ಲ, ಹೆಣ್ಣನ್ನು ಕಂಡ ಬಗೆ ಹೇಗೆ? ಹಿಂದಿನ ಕನ್ನಡ ನಾರಿ, ಎಂದೆಂದಿಗೂ ಕತ್ತಲೆಯಲ್ಲೇ ತನ್ನ ಬಾಳನ್ನು ಕಳೆದಳೇ? ತನ್ನ ನಾಡವರಿಗೆ ಆಕೆಯ ಕೊಡುಗೆ ಏನು?

ಈ ಅಂಶಗಳನ್ನು ಕನ್ನಡ ನಾಡಿನ ಚರಿತ್ರೆಯ ಹಿನ್ನೆಲೆಯಲ್ಲಿ ಅವಲೋಕಿಸಿದಾಗ, ಇಂದಿನಂತೆಯೇ ಪರಸ್ಪರ ವಿರೋಧಿ ಅಂಶಗಳು ಕಾಣುತ್ತವೆ. ಧರ್ಮಶಾಸ್ತ್ರಗಳು ಕಡ್ಡಾಯವಾಗಿಸಿದ್ದ, ಅಂಶಗಳಿಗಿಂತ ಭಿನ್ನವಾಗಿ ಅಂದಿನ ನಾರಿಯರು ಬದುಕಿದ್ದಾರೆ. ತಮ್ಮದೇ ವಿಧದಲ್ಲಿ ನಾಡಿಗೆ ಕೈಂಕರ್ಯವನ್ನು ಕೊಡಮಾಡಿದ್ದಾರೆ. ಮೀರಿದ ಧೈರ್ಯ, ಸ್ಥೈರ್ಯಗಳನ್ನು ಮೆರೆದಿದ್ದಾರೆ. ಎದುರಾಳಿಗಳಿಂದ ಭೇಷ್ ಅನಿಸಿಕೊಂಡಿದ್ದಾರೆ ! ಇಲ್ಲಿ ಉಲ್ಲೇಖಿಸಲ್ಪಟ್ಟ ನಾಲ್ವರು ರಾಣಿಯರ ಕುರಿತ ಮಾಹಿತಿ, ಕನ್ನಡೇತರ ಆಕರಗಳಿಂದ ಪಡೆದದ್ದು, ಎನ್ನುವುದನ್ನು ಮರೆಯುವಂತಿಲ್ಲ! ಸಾಮಾನ್ಯ ನಂಬಿಕೆಯಂತೆ ಹಿಂದಿನ ಮಹಿಳೆಯರೆಲ್ಲರೂ ಶಿಕ್ಷಣದಿಂದ ವಂಚಿತರಾಗಿದ್ದರು, ಎನ್ನುವ ಹಾಗಿಲ್ಲ. ಕಾವ್ಯಗಳು, ಶಾಸನ - ಶಿಲ್ಪಗಳು, ವಿದ್ಯಾವಂತೆಯರ ಕುರಿತು ಸಾರುತ್ತವೆ. ಆಧುನಿಕ ಮಾನದಂಡದ ಶಾಲೆ - ಕಾಲೇಜುಗಳ ಸಹ ಶಿಕ್ಷಣದೊಂದಿಗೆ ಅಂದಿನ ವಿದ್ಯಾ ಕ್ರಮವನ್ನು ಅಳೆಯುವಂತಿಲ್ಲ. ಹಾಗೆ ನೋಡಿದರೆ ಅಂದಿನ ಹೆಚ್ಚಿನ ಗಂಡಸರೂ ಅಕ್ಷರಾಭ್ಯಾಸದಿಂದ ವಂಚಿತರಾಗಿದ್ದರು. ಜೀವನೋಪಯೋಗಿ ಕಲೆ, ಗೃಹವಿಜ್ಞಾನ, ಓದು ಬರಹಗಳು, ವ್ಯಾವಹಾರಿಕ ರೂಪದಲ್ಲಿ ಮಹಿಳೆಯರಿಗೆ ಲಭ್ಯವಿದ್ದವು. ಅದನ್ನು ಬಳಸಿ , ಸಮಾಜೋಪಯೋಗಿಯಾಗಿ ಅಂದಿನ ಮಹಿಳೆಯರು ಬಾಳಿದರು. ಅಷ್ಟೇ ಅಲ್ಲ, ಶಾಸನ, ಶಿಲ್ಪ, ಕಟ್ಟಡ, ಕೆರೆ, ಬಾವಿ, ದೇವಾಲಯಗಳ ರೂಪದಲ್ಲಿ ತಮ್ಮ ಕೆಲ ಕುರುಹುಗಳನ್ನು ಉಳಿಸಿ ಹೋಗಿದ್ದಾರೆ. ಅವರ ಈ ಕೊಡುಗೆಯನ್ನು ಚಾರಿತ್ರಿಕ ಆಧಾರಗಳಿಂದ ಇಲ್ಲಿಯ ಬರಹಗಳಿಂದ ಅರಿಯಬಹುದಾಗಿದೆ.

ಭಾರತದಲ್ಲಿ ಈಗಲೂ, ಒಂದೇ ಕಾಲಮಾನದಲ್ಲಿ ಸ್ತ್ರೀಯರ ಸ್ಥಾನಮಾನಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ವಿವಿಧ ಹಂತಗಳಲ್ಲಿವೆ. ಬೇರೆ ಬೇರೆ ರಾಜ್ಯಗಳಾದ ಬಂಗಾಲ, ಬಿಹಾರ, ಉತ್ತರಪ್ರದೇಶ, ಮಧ್ಯಪ್ರದೇಶಗಳಿಂದ ಮೈಸೂರು ಬೆಂಗಳೂರಿಗೆ ಅಸಂಖ್ಯ ಟೂರಿಸ್ಟ್ ಜನರು ಬಂದುಹೋಗುತ್ತಾರಷ್ಟೆ. ತುಂಬ ಜನರಿಗೆ ಇಲ್ಲಿಯ ಅಂಗಡಿ ಮುಂಗಟ್ಟುಗಳನ್ನು ಹೆಣ್ಣುಮಕ್ಕಳೇ ನಡೆಸುತ್ತಿರುವುದು, ಮುಖ್ಯವಾಗಿ ತರಕಾರಿ, ಹೂವು, ಹಣ್ಣು, ಬಟ್ಟೆ ವ್ಯಾಪಾರ ಮಾಡುತ್ತಿರುವುದು ವಿಸ್ಮಯದ ಅಂಶವಾಗಿದೆ. ಅವರ ಪ್ರದೇಶದಲ್ಲಿ ಗಂಡಸರ ರಕ್ಷಣೆಯಿಲ್ಲದೆ ಗೃಹಿಣಿಯರ ಓಡಾಟ ಕೂಡ ಕಲ್ಪಿಸಲಾಗದ್ದು! ಕರ್ನಾಟಕದಲ್ಲಿ ತೀರ ಹಿಂದಿನ ಕಾಲದಿಂದಲೂ ಸುಗಂಧ, ಹೂಗಳ ವ್ಯಾಪಾರವನ್ನು ಮಹಿಳೆ ಮಾಡುತ್ತಿದ್ದು ಕಾವ್ಯಗಳಲ್ಲಿ ಅದರ ಉಲ್ಲೇಖವಿದೆ. ಮಧ್ಯಯುಗದಲ್ಲಿ ಕರ್ನಾಟಕದಲ್ಲಿ ಕಂಡುಬರುವ ವೈವಿಧ್ಯಮಯ ಜೀವನವು ಸಮಕಾಲೀನ ಕನೋಜ, ಗುಜರಾಥ, ಕಾಶ್ಮೀರ, ಉತ್ತರ ಹಾಗೂ ಮಧ್ಯ ದೇಶಗಳಲ್ಲಿ ಕಂಡುಬರುತ್ತಿರಲಿಲ್ಲ. ಆಡಳಿತ, ಶಿಕ್ಷಣಾದಿಗಳನ್ನು ಗಮನಿಸಿದರೆ, ಭಾರತದ ಇತಿಹಾಸದಲ್ಲಿ, ತಿರುತಿರುಗಿ ವಿದ್ವಾಂಸರು ಉದಹರಿಸುವುದು ಕನ್ನಡ ನಾಡಿನ ಉದಾಹರಣೆಗಳನ್ನೇ! ಇದಕ್ಕೆ

ಕಾರಣ ಇಲ್ಲದಿಲ್ಲ. ಶಾಸನಗಳಲ್ಲಿ ಚಿತ್ರಿತವಾದ ಸ್ತ್ರೀ ಸಮಾಜ, ಸಾಕಷ್ಟು ಉಜ್ವಲವಾಗಿದೆ. ಜೊತೆಗೆ ವಿಜಯನಗರ ಕಾಲದಲ್ಲಿ, ಆ ಬಳಿಕವೂ ಕರ್ನಾಟಕವನ್ನು ಸಂದರ್ಶಿಸಿದ ವಿದೇಶಿಯರ ವೃತ್ತಾಂತಗಳು ಲಭ್ಯವಿವೆ. ಇವೆರಡೂ ಇತರ ಪ್ರದೇಶಗಳ ಇತಿಹಾಸಕ್ಕಿಂತ ಕರ್ನಾಟಕದ ನಾರಿಯರ ಚರಿತ್ರೆಯನ್ನು ಹೆಚ್ಚು ಸ್ಫುಟವಾಗಿ ಅರಿಯಲು ಸಹಾಯಮಾಡುತ್ತವೆ. ಕಾವ್ಯಗಳು, ಸ್ಮೃತಿ ವ್ಯಾಖ್ಯಾನಗಳು ಸಮಕಾಲೀನ ಶಾಸ್ತ್ರಗ್ರಂಥಗಳೂ ಅಂದಿನ ಮಹಿಳಾ-ಸ್ಥಾನಮಾನಗಳ ಮೇಲೆ ಬೆಳಕು ಚೆಲ್ಲುತ್ತವೆ.

ಚಾಂದಬೀಬಿ, ಬಿಜಾಪುರದ ಆದಿಲ್‌ಶಾಹಿಗಳ ಸೊಸೆಯಾಗಿ ಕರ್ನಾಟಕಕ್ಕೆ ಕೀರ್ತಿ ತಂದವಳು. ಆದರೆ ಅವಳು ನಿಜವಾದ ಪರಾಕ್ರಮವನ್ನು ಮೆರೆದದ್ದು ಮೊಗಲ್ ಚಕ್ರವರ್ತಿ ಅಕಬರನ ಸೈನ್ಯ ಎದುರಿಸಿ ಕಾದಿದ್ದು, ಶತ್ರುಗಳನ್ನು ಸದೆ ಬಡಿದದ್ದು, ಕೊನೆಗೆ ಆಹುತಿಯಾದದ್ದು ತನ್ನ ತವರಾದ ಅಹಮ್ಮದ ನಗರದ ನಿಜಾಮ ಶಾಹಿಗಳ ಸಲುವಾಗಿ ಕರ್ನಾಟಕದ ಪರಿಧಿಗೆ ಹೊರತಾಗಿದೆ.ಹೀಗಾಗಿ ಅವಳ ಚರಿತ್ರೆಯನ್ನು ಕೈಬಿಡಲಾಗಿದೆ.

ಆಡಳಿತ ಕ್ಷೇತ್ರದಲ್ಲಿ, ರಣರಂಗದಲ್ಲಿ, ಲೋಕ-ಕಲ್ಯಾಣದಲ್ಲಿ, ಸಂಸ್ಕೃತಿ ಪೋಷಣೆಯಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ಸಾಹಿತ್ಯಕ್ಷೇತ್ರದಲ್ಲಿ ಕನ್ನಡಿತಿಯರು ಮೆರೆದಿದ್ದಾರೆ. ಜನಾಂಗವಿಡೀ ಸದೃಢವಾಗಿ ರೂಪಿತಗೊಳ್ಳಲು, ಮಡದಿಯಾದವಳ, ತಾಯಾದವಳ ಹೊಣೆ ಹೆಚ್ಚಿನದು. ಈ ದಿಸೆಯಲ್ಲಿ ಕನ್ನಡ ನಾರಿಯರ ಕೊಡುಗೆ ಹಿರಿದಾಗಿಯೇ ಇದೆ. ಈ ಕೊಡುಗೆಯ ಪಕ್ಷಿನೋಟ ಇಲ್ಲಿದೆ.

ಜೊತೆಗೆ, ಅಂದಿನ ಸ್ತ್ರೀಯರ ಉನ್ನತಿಗೆ ಅಷ್ಟೊಂದು ಸಹಾಯಕಾರಿಯಾಗದ ಸಮಾಜವ್ಯವಸ್ಥೆಯ ಹೊಳಹುಗಳನ್ನೂ ಕೊಡಲಾಗಿದೆ. ಗೃಹಿಣಿಯರು, ವಿಧವೆಯರು, ವೇಶ್ಯೆಯರು, ತಮ್ಮ ಪರಿಮಿತಿಯೊಳಗೆ ಸಹಾಯಕಾರಿಯಾಗಿ ಬಾಳಿದ ಬಗೆಯನ್ನು ನೆನಪಿಸಿಕೊಳ್ಳಲಾಗಿದೆ.

ಸುವರ್ಣ ಕರ್ನಾಟಕದ ಸಂದರ್ಭದಲ್ಲಿ, ಕೆಲವು ಕ್ಷೇತ್ರಗಳಲ್ಲಿ ಕನ್ನಡಿತಿಯ ಸಾಧನೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು "ಕೈಗನ್ನಡಿಯಲ್ಲಿ ಕನ್ನಡಿತಿ" ಬಿಂಬಿಸುತ್ತದೆ.

ಇಲ್ಲಿ ಸೇರ್ಪಡೆಯಾದ ರೇಖಾಚಿತ್ರಗಳು, ಬೇರೆ ಬೇರೆ ಶತಮಾನಗಳಲ್ಲಿ ರಚಿತವಾದ ಶಿಲ್ಪ, ಭಿತ್ತಿಚಿತ್ರ ಹಾಗೂ ಕಲ್ಲಚ್ಚಿನ ಗ್ರಂಥಗಳಲ್ಲಿ ರೂಪಿತವಾದವುಗಳ ಪ್ರತಿಕೃತಿಗಳಾಗಿವೆ. ಕಾಲಕಾಲಕ್ಕೆ ಕೃಷ್ಣಾನಂದ ಕಾಮತರು ಕ್ಲಿಕ್ಕಿಸಿ ಅವುಗಳನ್ನು ಆಧರಿಸಿ ಸ್ವತಃ ರೇಖಿಸಿದವುಗಳಾಗಿವೆ. ಮೂಲಕೃತಿಗಳು ಕೆಲವೆಡೆ ತ್ರುಟಿತವಾಗಿದ್ದರೂ ಸಮಕಾಲೀನ ಜನಜೀವನವನ್ನು ಪ್ರತಿಬಿಂಬಿಸುತ್ತವೆ. ಹೀಗಾಗಿ ಹಿಂದಿನ ಕನ್ನಡಿಗರ ಜೀವನವನ್ನು ಅರಿಯಲು ಆಸಕ್ತಿಯುಳ್ಳವರಿಗೆ ಇವು ಅಧಿಕೃತ ದಾಖಲೆಗಳಾಗಿವೆ.

ಡಾ. ಜ್ಯೋತ್ಸ್ನಾ ಕಾಮತ.

ಪರಿವಿಡಿ

ಭಾಗ -I : ಸಾಧನೆ

೧. ಆಡಳಿತ ಕ್ಷೇತ್ರದಲ್ಲಿ

ಸಾಮಾನ್ಯವಾಗಿ ಸಮಕಾಲೀನ ಉತ್ತರ ಭಾರತದ ಇತರ ಪ್ರದೇಶಗಳಲ್ಲಿ ಕಂಡುಬಾರದ ಬೆಳವಣಿಗೆಯೆಂದರೆ ಕನ್ನಡಿತಿಯರು ಅನೇಕ ರೀತಿಯಲ್ಲಿ ಆಡಳಿತ ನಡೆಸಿದ್ದು. ಅಂಥ ಕೆಲ ನಿದರ್ಶನಗಳನ್ನು ನೋಡಬಹುದು.

i. ಆಡಳಿತಗಾತಿ ಅರಸಿಯರು : ಗ್ರಾಮ, ಊರು, ನಾಡು ಪ್ರಾಂತಗಳನ್ನು ಯಶಸ್ವಿಯಾಗಿ ಆಳಿದ ಅನೇಕ ಮಹಿಳೆಯರ ಹೆಸರುಗಳು ದೊರೆಯುತ್ತವೆ. ಕರ್ನಾಟಕದ ಪ್ರಸಿದ್ಧ ಅರಸರಲ್ಲಿ ಒಬ್ಬನಾದ ವಿಕ್ರಮಾದಿತ್ಯನಿಗೆ ಅನೇಕ ಹೆಂಡಂದಿರು, ಪಿರಿಯ ಕೇತುಲದೇವಿ, ಜೋಗಬ್ಬರಸಿ, ಲಕ್ಷ್ಮಾದೇವಿಯರು ಅಜ್ಜಡಿ, ದ್ರೋಣಪುರಿ, ಕನ್ನವಳ್ಳಿಗಳನ್ನು ಆಳಿದರು. ಇರಿವ ಆರಲ್ ಮೂನೂರು ಇಂಗುಣಿಗೆಯ ಆಡಳಿತ ವಹಿಸಿಕೊಂಡಿದ್ದ ಜಾಕಲೆ ಬೆಡಂಗ ಸತ್ಯಾಶ್ರಯನ ಮಗಳು ರೇವಕಬ್ಬರಸಿ, ಪೊಸವೂರನ್ನೂ ಆಳುತ್ತಿದ್ದಳು. ಈಕೆ ಜೈನ ಮತಸ್ಥೆ, ವಿಕ್ರಮಾದಿತ್ಯನಿಗೆ ನೆಚ್ಚಿನ ರಾಣಿಯಾಗಿದ್ದಳು. ಆಕೆಯನ್ನು ಸ್ವಧರ್ಮದತ್ತ ಒಲಿಸಲು ದೊರೆ ಪ್ರಯತ್ನಪಟ್ಟನಂತೆ. ಆದರೆ ಯಶಸ್ವಿಯಾಗಲಿಲ್ಲ.

ಒಮ್ಮೆ ವ್ಯಾಪಾರಿಯೊಬ್ಬ ಅವಳ ಬಳಿ ತಂದಿದ್ದ ಮುಹುಮಾಣಿಕ್ಯ (ಜಿನ)ನ ಪ್ರತಿಮೆಯನ್ನು, ಆಕಸ್ಮಿಕವಾಗಿ ಅಲ್ಲಿ ಬಂದ ದೊರೆ ಗಮನಿಸಿ ಅದರ ಮಾಟಕ್ಕೆ ಮರುಳಾದ. ಅಷ್ಟೇ ಅಲ್ಲ, ಆಕೆಯ ಹುಟ್ಟೂರಿನಲ್ಲಿ ಅದನ್ನು ಪ್ರತಿಷ್ಠಾಪಿಸಲು ಸೂಚನೆಯಿತ್ತನೆಂದು ಶಾಸನವೊಂದು ಸಾರುತ್ತದೆ. ತನ್ನ ಇಪ್ಪತ್ತೆರಡು ರಾಣಿಯರಿಗೆ ಬೇರೆ ಬೇರೆ ಗ್ರಾಮ, ಊರು, ನಗರ, ಪ್ರದೇಶ, ನಾಡುಗಳ ಆಡಳಿತ ವಹಿಸಿಕೊಟ್ಟ ಈ ಅರಸನು ಅಂತಃಕಲಹವನ್ನು ಜಾಣ್ಮೆಯಿಂದ ತಪ್ಪಿಸಿದ್ದನು.

ii. ಊರೊಡತಿ : ಸಾತೇನ ಹಳ್ಳಿಯ ಸೆಟ್ಟಿಕವ್ವೆ ಊರೊಡತಿಯಾಗಿ ಒಳ್ಳೆಯ ಆಡಳಿತ ನಡೆಸಿದ ವಿಚಾರವನ್ನು 13ನೇ ಶತಕದ ಶಾಸನವೊಂದರಲ್ಲಿ ನೋಡಬಹುದು. ಈ ಸೆಟ್ಟಿಕವ್ವೆ, ಇತರ ಸಾಮಾನ್ಯ ಹೆಂಗಸರಂತೆ ಮೊರ, ಬುಟ್ಟಿ, ತಂಬಿಗೆ, ಹುಟ್ಟು, ಸಟ್ಟುಗ, ಕೊಡ, ಒರಳು, ಅಕ್ಕಿ ಎಂದು ಕೇವಲ ಗೃಹಕೃತ್ಯದ ಸಾಧನಗಳ ಬಗ್ಗೆಯೇ ಯೋಚಿಸಿ ಕೋಟಲೆಗೊಳ್ಳುವವಳಾಗಿರಲಿಲ್ಲ.

ಕೋಣವತ್ತಿಯ ಅಧಿಪೋತ್ತಮೆಯಾಗಿ ಖಳರನ್ನು ಕೊಂದು, ಕಳ್ಳರ ಸುಲಿಗೆಯನ್ನು ನಿಲ್ಲಿಸಿ, ಕೀಟಲೆ ಕೊಡುವವರನ್ನು ಶಿಕ್ಷಿಸಿ, ದುರ್ಗೆಯಂತೆ ಆಳಿದಳು. ಸಾರ್ವಜನಿಕರಿಗಾಗಿ ಆಗಾಗ ಧರ್ಮಪ್ರಸಂಗಗಳನ್ನು ಏರ್ಪಡಿಸುತ್ತ, ಹರಿಹರೇಶ್ವರನ ದೇವಾಲಯವನ್ನು ಕಟ್ಟಿಸಿದಳು. ಬಣಜಿಗರ ಪಟ್ಟಣವೆನ್ನಿಸಿದ ಸಾತೇನಹಳ್ಳಿಯಲ್ಲಿ ಧರ್ಮೋನ್ನತಿಗೆ ಕಾರಣಳಾಗಿದ್ದಳು. ನಾಗರಿಕ ಚಟುವಟಿಕೆಗಳಲ್ಲೆಲ್ಲ ಸಕ್ರಿಯ ಭಾಗವಹಿಸಿದ್ದಳು.

ಮಹಾಪ್ರಭುವಿಣಿ, ಪಸಾಯಿತೆ ಮುಂತಾದ ಮಹತ್ವದ ಸ್ಥಾನಗಳನ್ನು ಅಂದಿನ ಮಹಿಳೆಯರು ಅಲಂಕರಿಸಿದ್ದರು.

iii. ನಾಡಗೌಡಿತಿ (ನಾಳ್‌ಗಾವುಂಡಿ) : ನಾಡಿನ ಆಡಳಿತಗಾತಿಯಾಗಿ ಹೆಸರುವಾಸಿಯಾದವಳು ನಾಳ್‌ಗಾವುಂಡಿ ಜಕ್ಕಿಯಬ್ಬೆ. ಆಕೆಯ ಪತಿ ಸತ್ತರಸ ನಾಗಾರ್ಜುನನೆಂಬ ನಾಳ್(ಡ) ಗಾವುಂಡ, ನಾಗರಖಂಡ ಎಪ್ಪತ್ತು ಗ್ರಾಮಗಳಿಗೆ ಅಧಿಪತಿಯಾಗಿದ್ದ. ಆತನ ನಿಧನದ ತರುವಾಯ ಸಮರ್ಥಳಾಗಿದ್ದ ಆತನ ಪತ್ನಿ ಜಕ್ಕಿಯಬ್ಬೆಯೇ ಆ ಸ್ಥಾನವನ್ನು ಅಲಂಕರಿಸಲು ಯೋಗ್ಯಳೆಂದು ಅರಸನು ತೀರ್ಮಾನಿಸಿ ನಾಡಗೌಡನ ಸ್ಥಾನಕ್ಕೆ ಆವಳನ್ನು, ನೇಮಿಸಿದ.

ಹಲವಾರು ಪೆರ್ಗ್ಗಡೆ (ಹೆಗ್ಗಡೆ)ಗಳ ಕಾರ್ಯಭಾರದ ಮೇಲಾಡಳಿತ, 'ನಾಡಗೌಡ' ಹುದ್ದೆಯ ಹೊಣೆಯಾಗಿತ್ತು. ಪ್ರಾಚೀನ ಮತ್ತು ಮಧ್ಯಯುಗದ ಕರ್ನಾಟಕದಲ್ಲಿ 'ನಾಡು', ಎಂಬುದು ಸಾಮ್ರಾಜ್ಯದ ಮುಖ್ಯ ಘಟಕವಾಗಿದ್ದು, ನಾಡಿನ ಕಂದಾಯ ವಸೂಲಿ ಹಾಗೂ ನೀರಾವರಿಯ ವ್ಯವಸ್ಥೆ, ಕರವಸೂಲಿ, ದತ್ತಿಗಳ ವಿತರಣೆ ಮತ್ತು ಕೊಡುಕೊಳಿಯ ಒಪ್ಪಂದಗಳೆಲ್ಲ ನಾಡಗೌಡನ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಈಗಿನ ಡಿವಿಜನಲ್ ಕಮೀಷನರ್ ಹುದ್ದೆಯನ್ನು ಈ ನಾಡಗೌಡ/ಗೌಡತಿಯದು ಬಹುಮಟ್ಟಿಗೆ ಹೋಲುತ್ತಿತ್ತು. ಹೆಚ್ಚಿನ ಸಾಮಾಜಿಕ ಹೊಣೆಯೊಂದಿಗೆ ಇಂಥ ಹೊಣೆಯನ್ನು ಜಕ್ಕಿಯಬ್ಬೆ ಯಶಸ್ವಿಯಾಗಿ ನಿರ್ವಹಿಸಿದಳು. ಮುಂದೆ ಅವಳ ಆರೋಗ್ಯ ಕೆಡಲಾರಂಭಿಸಿದಾಗ, ಅವಳ ಮಗಳಿಗೇ ಯಾವತ್ತೂ ಜವಾಬ್ದಾರಿಯನ್ನು ವಹಿಸಿಕೊಟ್ಟಳು. ಬಹುಶಃ ಮಗಳಿಗೂ-ನಾಡಗೌಡಿಕೆಯ ಹೊಣೆಯ ತರಬೇತಿಯನ್ನು ಚೆನ್ನಾಗಿ ನೀಡಿದ್ದಳೆಂದು ತೋರುತ್ತದೆ.·ನಾಡಗೌಡನ ಹುದ್ದೆ ತಂದೆಯಿಂದ ಮಗನಿಗೆ ಬರುವುದು ಮಗನ ಯೋಗ್ಯತೆಯನ್ನು ಅವಲಂಬಿಸಿತ್ತು. ಆತ ಸಮರ್ಥನಿಲ್ಲದಾಗ ಕಿತ್ತು ಹಾಕುವ ಅಧಿಕಾರ ನಾಡಸಭೆಗೆ ಇತ್ತು. ಜಕ್ಕಿಯಬ್ಬೆಯಂತೆ ಮಗಳೂ ಒಳ್ಳೆಯ ಆಡಳಿತಗಾತಿಯಾಗಿರಬಹುದು.

iv. ಪ್ರಾಂತಾಧಿಕಾರಿಣಿ : ನಾಡಿಗಿಂತ ದೊಡ್ಡಭಾಗ ಪ್ರಾಂತವಾಗಿತ್ತು. ಪ್ರಾಂತವು ಈಗಿನ ಚಿಕ್ಕ ರಾಜ್ಯದಂತೆ ಇರುತ್ತಿತ್ತು. ಚಾಲುಕ್ಯ ದೊರೆ ಮೊದಲನೇ ಸೋಮೇಶ್ವರನ ರಾಣಿ ಮೈಳಲದೇವಿ ಆಳುತ್ತಿದ್ದ ಬನವಾಸಿಯು, ಹನ್ನೆರಡು ಸಾವಿರ ಗ್ರಾಮಗಳನ್ನು ಒಳಗೊಂಡ ಚಾಲುಕ್ಯ ಸಾಮ್ರಾಜ್ಯದ ಅತಿಮುಖ್ಯ ವಿಭಾಗವಾಗಿತ್ತು. ಚಾಲುಕ್ಯ ಜಯಸಿಂಹನ ಸೋದರಿ ಅಕ್ಕಾದೇವಿ ಕಿಸುಕಾಡು ಪ್ರಾಂತವನ್ನು ನಾಲ್ವತ್ತು ನಾಲ್ಕು ವರ್ಷಗಳ ಕಾಲ (ಕ್ರಿ. ಶ. ೧೦೨೪-೧೦೬೮) ಆಳಿದಳು. ಈಕೆಯ ದೀರ್ಘ ಆಡಳಿತದಲ್ಲಿ ತೊರಗಲೆಯ ಅರವತ್ತು ಗ್ರಾಮ,

ಮಾಸಿಯವಾಡಿಯ ಎಪ್ಪತ್ತು ಮತ್ತು ಬಾಗಡಗೆಯ ಎಪ್ಪತ್ತು ಹಳ್ಳಿಗಳು ಕಿಸುಕಾಡು ಪ್ರಾಂತಕ್ಕೆ ಸೇರ್ಪಡೆಯಾದವು. ಅಂದಿನ ವಿದ್ಯಾಸಂಸ್ಥೆಗಳಾದ ಬ್ರಹ್ಮಪುರಿ ಮತ್ತು ಅಗ್ರಹಾರಗಳಿಗೆ ಅಕ್ಕಾದೇವಿ ಕೊಡುಗೈ ದಾನ ನೀಡಿದ್ದಳು. ಪೆರೂರಿನ ಅಗ್ರಹಾರದಲ್ಲಿ ಐದು ನೂರು ಛಾತ್ರರಿದ್ದರು. ಅವಳ ವಿದ್ಯಾಪಕ್ಷಪಾತದಿಂದಾಗಿ "ಅಖಿಳ ವಿದ್ಯಾರ್ಥಿಜನಾವಳಿ ನಂದಿನಿ" ಎಂಬ ಕೀರ್ತಿ ಪಡೆದಿದ್ದಳು. ಬಂಡೆದ್ದ ಗೋಕಾಗೆಯ ಮುಖಂಡನನ್ನು ಸೋಲಿಸಿ 'ರಣಭೈರವಿ' ಎಂಬ ಬಿರುದನ್ನು ಹೊಂದಿದ್ದಳು. ಹಲವಾರು ನಾಯಕರು ಅವಳ ಮುಖಂಡತ್ವವನ್ನು ಮನ್ನಿಸಿದ್ದರು. ಬನವಾಸಿ ರಾಜ್ಯದ ಒಡೆಯ ಮಯೂರಶರ್ಮನು ಅವಳ ಪತಿಯಾಗಿದ್ದ. ಆದರೆ ಪತಿಗಿಂತ ಹೆಚ್ಚಿನ ದಕ್ಷತೆ, ಸಾಮರ್ಥ್ಯಗಳನ್ನು ಈಕೆ ಹೊಂದಿದಂತೆ ತೋರುತ್ತದೆ! ವೀರಪಾಂಡ್ಯದೇವನ ಪತ್ನಿ ಬಲ್ಲಮಹಾದೇವಿ, ಬಾರಹಕನ್ಯಾಪುರ (ಬಾರಕೂರು) ಪ್ರಾಂತ ಆಳಿದಂತೆ ಹೊಯ್ಸಳ ಮೂರನೆಯ ಬಲ್ಲಾಳನ ರಾಣಿ ಕಿಕ್ಕಾಯಿ ಅಥವಾ ಚಿಕಾಯಿ ತಾಯಿ ತುಳುಪ್ರಾಂತವನ್ನು ತನ್ನ ಪತಿಯ ನಿಧನದ ನಂತರವೂ ಆಳಿದ ನಿದರ್ಶನವಿದೆ.

ಭಾಗುಬಾಯಿಯು ಹೇಡ, ಕಣಂಬಾಡಿ ಮತ್ತು ತರ್ದವಾಡಿಗಳನ್ನು ಕ್ರಿ.ಶ. ೧೨೩೯ರಿಂದ ೧೨೪೫ರ ವರೆಗೆ ಆಳಿ ಆ ವಿಭಾಗದ 'ಸರ್ವಾಧಿಕಾರಿಣಿ'ಯಾಗಿದ್ದಳಲ್ಲದೇ ಯಾದವ ಅರಸು ಸಿಂಘಣನಿಂದ 'ಪರಮವಿಶ್ವಾಸಿ'ಯೆಂಬ ಬಿರುದು ತಳೆದಿದ್ದಳು. ಲಕ್ಷ್ಮಿಯೆಂಬಾಕೆ ತನ್ನ ಸೋದರನು ಕಾಳಗದಲ್ಲಿ ಮಡಿದಿದ್ದರಿಂದ ಪ್ರಾಂತಾಧಿಕಾರವನ್ನು ವಹಿಸಿಕೊಂಡಿದ್ದಳು.

'ದುರ್ಗಾಧಿಪತಿ'ಯಾಗಿದ್ದ ಮಹಾದೇವಿಯನ್ನು ಶಾಸನವೊಂದು ಹೊಗಳುತ್ತದೆ. ಸ್ಥಳೀಯ ರಕ್ಷಣಾ ಪಡೆಯ ಮತ್ತು ನ್ಯಾಯದಾನದ ಮೇಲಾಡಳಿತದಿಂದಾಗಿ ಈ ಹುದ್ದೆ ಈಗಿನ ರಾಜ್ಯಪಾಲರಿಗಿಂತ ಹೆಚ್ಚು ಅಧಿಕಾರಯುತವಾಗಿತ್ತು.

ರಾಣಿಯರಾಗಿ ಮೆರೆದ ಚೆನ್ನಭೈರಾದೇವಿ, ಅಬ್ಬಕ್ಕದೇವಿ, ಕೆಳದಿಯ ಚೆನ್ನಮ್ಮ ಮತ್ತು ಬೆಳವಡಿ ಮಲ್ಲಮ್ಮನ ಆಡಳಿತ ಸಾಮರ್ಥ್ಯದ ಜೊತೆಗೆ ಧೈರ್ಯ-ಸ್ಥೈರ್ಯಗಳು ಹಿಂದಿನಿಂದ ನಡೆದು ಬಂದ ನಾಡಿನ ಪರಂಪರೆಯ ದ್ಯೋತಕಗಳಾಗಿವೆ.

●

೨. ಧೈರ್ಯ- ಶೌರ್ಯಗಳಲ್ಲಿ

i. ವೀರವನಿತೆಯರು : ಕನ್ನಡ ನಾಡಿನ ಉದ್ದಗಲಕ್ಕೂ ಹಳ್ಳಿಹಳ್ಳಿಗಳಲ್ಲಿ ಹರಡಿಕೊಂಡಿರುವ ವೀರಗಲ್ಲು ಹಲವು ಪ್ರಕಾರದವಾಗಿವೆ. ಊರಿನ, ನಾಡಿನ ಹಿತರಕ್ಷಣೆಗೆ ಮುನ್ನುಗ್ಗಿ ಇಲ್ಲವಾದವರು, ಅರಸನ ಅಡಿಯಾಳಾಗಿ ಜೀವನ ಮುಡುಪಿಟ್ಟವರು, ಕಾಡುಪ್ರಾಣಿಗಳನ್ನು ಎದುರಿಸಿ ಸತ್ತವರು, ತುರುಕಾಳಗದಲ್ಲಿ ಮಡಿದವರು ಇವರೆಲ್ಲರ ನೆನಪಿಗೆ ಬಂದು-ಬಾಂಧವರು, ಆತ್ಮೀಯರು, ಇನ್ನಿತರರು ವೀರಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ತುರುಕಾಳಗದ ವೀರಗಲ್ಲುಗಳು ಹೇರಳವಾಗಿವೆ. ಹಿಂದಿನವರ ಸಂಪತ್ತು ಎನಿಸಿಕೊಂಡ ದನಕರುಗಳನ್ನು ಅಪಹರಿಸುವುದು ತೀರ ಸಾಮಾನ್ಯವಾಗಿತ್ತು. ಯುದ್ಧಮಾಡಲು ಕೂಡ ಇಂಥ 'ತುರುಗಾಳ'ಗವನ್ನು ನೆಪವಾಗಿ ಬಳಸುತ್ತಿದ್ದರು.

ಆದರೆ ಸ್ವಯಂ ಪ್ರೇರಣೆಯಿಂದ, ತುರುಗಾಳಗದಲ್ಲಿ ಪಾಲ್ಗೊಂಡು ಹೋರಾಡಿ ಮಡಿದ ವೀರ ಮಹಿಳೆಗೆ ನಿಲ್ಲಿಸಿದ ವೀರಗಲ್ಲು ಒಂದಿದೆ.

ಕ್ರಿ. ಶ. ೧೦೪೧ರಲ್ಲಿ, ಸರಕೂರು ಎಂಬ ಗ್ರಾಮದ ದನಕರುಗಳನ್ನು ವೈರಿಗಳು ಅಪಹರಿಸಿಕೊಂಡು ಹೋಗುತ್ತಾರೆ. ಆಗ ಮಾಚ ಗಾವುಂಡನ ಮಗಳು ಲಕ್ಷ್ಮಮ್ಮನೆಂಬಾಕೆ ಮುನ್ನುಗ್ಗಿ, ಅಪಹರಿಸಿದ ತುರುಗಳನ್ನೆಲ್ಲ ಹಿಂದಕ್ಕೆ ಹೊರಡಿಸುತ್ತಾಳೆ. ಆ ಹೋರಾಟದಲ್ಲಿ ಆಕೆ ಸಾಯುತ್ತಾಳೆ. ಊರವರಿಗೆ ಆದ ಅನ್ಯಾಯ ಸಹಿಸಲಾರದೇ, ಧೈರ್ಯದಿಂದ ಮುನ್ನುಗ್ಗಿ ಅವರೆಲ್ಲರ ದನಕರುಗಳನ್ನು ತಿರುಗಿ ತಂದು ಪ್ರಾಣ ತೆತ್ತ, ಬಹುಶಃ ಚಿಕ್ಕವಯಸ್ಸಿನವಳಾದ ಈ ವೀರರಮಣಿಯ ನೆನಪಿಗೆ ವೀರಗಲ್ಲನ್ನು ನಿಲ್ಲಿಸಿದ್ದಾರೆ.

ಶ್ರವಣಬೆಳ್ಗೊಳದ ಹತ್ತನೆಯ ಶತಮಾನದ ವೀರಗಲ್ಲೊಂದು ಸಾವಿಯಬ್ಬೆ ಎಂಬ ಕೆಚ್ಚೆದೆಯ ಮಹಿಳೆಯ ಸಾಹಸವನ್ನು ನಿರೂಪಿಸುತ್ತದೆ. ಧೋರನ ಮಗ, ಲೋಕವಿದ್ಯಾಧರನೆಂಬಾತನ ಪತ್ನಿಯಾಗಿದ್ದ ಸಾವಿಯಬ್ಬೆ ಸಜ್ಜನಿಕೆ, ರೂಪ, ಪೆಂಪುಗಳಲ್ಲಿ ಮಿಗಿಲಾಗಿದ್ದಳು. ಶಾಸನ ಪಾಠ, ಅಂದರೆ ಆಕೆ ಹೋರಾಡಿ ಸಾವನ್ನಪ್ಪಿದ ಪ್ರಸಂಗವನ್ನು ನಿರೂಪಿಸುವ ಭಾಗವೇ ಒಡೆದು ಹೋಗಿದೆ. ಆಕೆಯ ಸ್ತುತಿಯ ಪದ್ಯಗಳು ಉಳಿದುಕೊಂಡಿವೆ. "ಸಾಯಲೆಂದು .... ಪೆಂಡತಿಯೆ" ಎಂಬ ಶಬ್ದಗಳಿಂದ ಈಕೆ ಗಂಡನ ಸಾವಿನ ಸೇಡನ್ನು ತೀರಿಸಿಕೊಳ್ಳಲು, ಸ್ವತಃ ಕಾದಿ ಮಡಿದಿರಬೇಕು ಅನಿಸುತ್ತದೆ. ವೀರಗಲ್ಲಿನ ಕಾದಾಟದ ಹಂತ

ನಿರೂಪಿಸುವಲ್ಲಿ ಕುದುರೆಯನ್ನೇರಿದ ಮಹಿಳೆಯೊಬ್ಬಳು ಖಡ್ಗ ಹಿಡಿದು, ಆನೆಯ ಮೇಲೆ ಕುಳಿತ ಖಡ್ಗಧಾರಿಯನ್ನು ಎದುರಿಸುತ್ತಿರುವಂತೆ ಕೆತ್ತಲಾಗಿದೆ. ಜೈನಮತದವಳಾದ ಸಾವಿಯಬ್ಬೆ, ತೀರ್ಥಂಕರನ ಪಾದ ಸೇರಿದಳು! ಎಂದು ಮೇಲಿನ ಹಂತ ಚಿತ್ರಿಸುತ್ತದೆ (ಚಿತ್ರ1)



ಚಿತ್ರ - 1. ಸಾವಿಯಬ್ಬೆ (ಶ್ರವಣಬೆಳ್ಗೊಳದ ಸ್ಮಾರಕ)

ಶಿವಮೊಗ್ಗದ ಶಿಕಾರಿಪುರದಲ್ಲಿ ದೊರೆತ ವೀರಗಲ್ಲು ಕ್ರಿ. ಶ. ೧೧೪೬ನೇ ವರ್ಷದ್ದು. ತನ್ನ ತಂದೆಯುನ್ನು ಹೋರಾಟದಲ್ಲಿ ಕೊಂದವನ ಸೇಡು ತೀರಿಸಲು, ಸ್ವತಃ ಹೋರಾಟಕ್ಕಿಳಿದು ಮಡಿದ ಹರಿಯಕ್ಕನೆಂಬ ಮಹಿಳೆಯ ನೆನಪಿಗೆ ನಿಲ್ಲಿಸಿದ ವೀರಗಲ್ಲು ಇದಾಗಿದೆ. ವೈರಿಯ ಜುಟ್ಟನ್ನು ಹಿಡಿದೆಳೆದು ಆಕ್ರೋಶದಿಂದ ಆತನನ್ನು ಇರಿಯುತ್ತಿರುವ ಚಿತ್ರ, ಹರಿಯಕ್ಕನ ಪರಾಕ್ರಮ ಸಾರುತ್ತದೆ. ವೀರಗಲ್ಲುಗಳನ್ನು ಕಂಡರಿಸುವ ಕ್ರಮದಂತೆ, ಹರಿಯಕ್ಕನನ್ನು ದೊಡ್ಡ ಆಕಾರದಲ್ಲಿ ಹಾಗೂ ಆಕೆಯ ವೈರಿಯನ್ನು ಕಿರಿದಾಗಿ ಚಿತ್ರಿಸಲಾಗಿದೆ (ಚಿತ್ರ - 2)



ಚಿತ್ರ - 2. ಹರಿಯಕ್ಕ, ತನ್ನ ತಂದೆಯನ್ನು ಕೊಂದಾತನ ಸೇಡು ತೀರಿಸಿಕೊಳ್ಳುತ್ತಿದ್ದಾಳೆ. (ಶಿಕಾರಿಪುರದ ವೀರಗಲ್ಲು ೧೧೪೬.)

ಚಾಗಲದೇವಿ ಎಂಬಾಕೆ ಒಂದು ಊರಿನ ಮೇಲೆ ದಾಳಿಯಿಟ್ಟ ವಿಚಾರ ಅಪೂರ್ಣ ಶಾಸನವೊಂದರಿಂದ ಗೊತ್ತಾಗುತ್ತದೆ. ಬೊಮ್ಮಾಂಬೆಯೆಂಬಾಕೆ ಗಂಡನೊಡನೆ ಕಾಳಗದ ಕಣಕ್ಕೆ ಇಳಿದು ಮಡಿದಳು. ಅರಸರೊಡನೆ ರಾಣಿಯರೂ ಯುದ್ಧ ಮತ್ತು ವಿಜಯಯಾತ್ರೆಗಳಲ್ಲಿ ಪಾಲುಗೊಳ್ಳುತ್ತಿದ್ದರು. 'ಪಯಣವೀಡು' (ಮಿಲಿಟರಿ ಕ್ಯಾಂಪ್)ಗಳಲ್ಲಿ ಇಳಿದುಕೊಳ್ಳುತ್ತಿದ್ದರು. ಹೊಯ್ಸಳರಾಣಿ ಉಮಾದೇವಿ, ಸಿಂದರಾಜಮಲ್ಲಿದೇವನೆಂಬಾತನ ವಿರುದ್ಧ ದಂಡಯಾತ್ರೆ ಕೈಕೊಂಡಿದ್ದಳು. ಗಂಗ ಸೇನಾಪತಿಯೋರ್ವನ ಪತ್ನಿ ಲಕ್ಷ್ಮೀದೇವಿ 'ರಾಜಕಾರ್ಯೇ ನೀತಿವಧು, ರಣೇ ಜಯತಿ' ಎಂದು ಶಾಸನವೊಂದರಲ್ಲಿ ವರ್ಣಿಸಲ್ಪಟ್ಟಿದ್ದಾಳೆ.

ಒನಕೆಯ ಓಬವ್ವನ ಕತೆ ಸುಪರಿಚಿತವಾಗಿದೆ. ಒಂದು ಜಾನಪದ ಹಾಡಿನಲ್ಲಿ, ಚಿತ್ರದುರ್ಗದ ರಾಜ ಮದಕರಿಯು ಕೇವಲ ೧೨ ವರ್ಷದ ಬಾಲಕನಾಗಿದ್ದು, ಆತನ ಅಜ್ಜಿ ಗಂಡುಗಲಿ ಓಬವ್ವ ರಾಜ್ಯವಾಳುತ್ತಿದ್ದ ಪ್ರಸಂಗದ ನಿರೂಪಣೆಯಿದೆ. ರಾಯದುರ್ಗದ ದಳಪತಿಯು, ಚಿತ್ರದುರ್ಗವು ಓರ್ವ ಹೆಣ್ಣಿನ ಕೈಯಲ್ಲಿದೆ! ಅದನ್ನು ಆಕ್ರಮಿಸುವುದು ಕಷ್ಟವಲ್ಲ ಎಂದು ಊರಿನ ಗಡಿಯಲ್ಲಿ ಮೇಯುತ್ತಿದ್ದ ಗೋವುಗಳನ್ನು ಅಪಹರಿಸುತ್ತಾನೆ. ಇಂಥ ಗೋಗ್ರಹಣ ಪ್ರಸಂಗಗಳು ಯುದ್ಧಕ್ಕೆ ಆಹ್ವಾನ ಕೊಟ್ಟಂತೆ. ಆ ಕೂಡಲೆ ಓಬವ್ವ ರೇಗಿ ದಂಡುಗಟ್ಟಿಕೊಂಡು ಹೋಗಿ ವೈರಿಯ ಮೇಲೆ ಎರಗುತ್ತಾಳೆ. 'ಹೆಣ್ಣಿನ ಗಂಡುತನ' ಕಂಡು ಬೆಚ್ಚಿದ ದಳಪತಿಯು ದನಗಳನ್ನು ಬಿಟ್ಟು ಓಡಿ ಹೋಗುತ್ತಾನೆ. ಓಬವ್ವ ಅಷ್ಟಕ್ಕೇ ಬಿಡದೇ ಅವನನ್ನು ನಾಡಿನಾಚೆಯ ತನಕ ಬೆನ್ನಟ್ಟಿ ಸಾಕೆನಿಸಿ ಬಿಡುತ್ತಾಳೆ.

ಸುಗ್ಗಲದೇವಿಯೆಂಬಾಕೆ ದೊಡ್ಡ ಹಾವೊಂದನ್ನು ಹಿಡಿದು ಹಾಕಿ, ಜನರ ಮೆಚ್ಚಿಗೆ ಪಡೆದ ವಿಚಾರ ಶಾಸನವೊಂದರಲ್ಲಿದೆ.

ಕುದುರೆ ಸವಾರಿ, ಆನೆ ಸವಾರಿ ಬಲ್ಲ ಹೆಂಗಳೆಯರ ಉಲ್ಲೇಖ ಕಾವ್ಯಗಳಲ್ಲಿ ಬರುತ್ತದೆ. ಕ್ಷತ್ರಿಯ ಜನಾಂಗದಲ್ಲಿ, ಆಳುವ ವರ್ಗದವರಲ್ಲಿ ಮಹಿಳೆಯರಿಗೆ ವಿವಿಧ ಶಸ್ತ್ರಾಸ್ತ್ರಗಳನ್ನು ಬಳಸುವ ಬಗೆ, ಯುದ್ಧಶಾಸ್ತ್ರದ ಪರಿಚಯ ಹಾಗೂ ಆಡಳಿತದಲ್ಲಿ ಅದನ್ನು ಉಪಯುಕ್ತವಾಗಿಸುವ ಪರಿಗಳನ್ನು ಬೋಧಿಸಲಾಗುತ್ತಿತ್ತು. ಅವನ್ನು ಸಮರ್ಥವಾಗಿ ಬಳಸಿದ ಮಹಿಳೆಯರು ಇದ್ದರೂ ಅವರ ಕುರಿತಾದ ಹೆಚ್ಚಿನ ವಿವರಗಳು ಸಿಗುವುದಿಲ್ಲ. ಆದರೂ ೧೬ - ೧೭ ಶತಮಾನದಲ್ಲಿ ತಮಗೆ ದೊರೆತ ಯುದ್ಧ ತರಬೇತಿಯನ್ನು ಯೋಗ್ಯ ರೀತಿಯಲ್ಲಿ ಪ್ರಯೋಗಿಸಿದ ವೀರರಾಣಿಯರ ಬಗ್ಗೆ ಕೆಲವು ವಿವರಗಳು ದೊರೆಯುತ್ತವೆ. ಅಂಥ ನಾಲ್ವರ ಉದಾಹರಣೆಗಳನ್ನು ನೋಡಬಹುದು.

ಧೈರ್ಯ - ಸ್ಥೈರ್ಯ ಮೆರೆದ ರಾಣಿಯರು

ವಿಜಯನಗರ ಸಾಮ್ರಾಜ್ಯದ ಅಳಿಗಾಲದ ನಂತರ ಹಲವು ಮಾಂಡಲಿಕರು ಸ್ವತಂತ್ರರಾದರು. ಅನೇಕ ಪಾಳಯ-ಪಟ್ಟುಗಳು ಕನ್ನಡ ನಾಡಿನುದ್ದಕ್ಕೂ ಕಾಣಿಸಿಕೊಂಡವು. ಒಗ್ಗಟ್ಟಿನ ಕೊರತೆ, ಈ ನಾಡನ್ನು ತೀರ ಪ್ರಾಚೀನ ಕಾಲದಿಂದಲೂ ಕಾಡುತ್ತಿದೆ. ವಿದೇಶೀಯರು ಅಥವಾ ಪ್ರಬಲನಾದ ದೂರದ ದೇಶದ ದೊರೆ ದಾಳಿ ಮಾಡಿದಾಗ ನೆರೆಹೊರೆಯ, ತನ್ನ ನಾಡ ಬಾಂಧವರಿಗೆ ಸಮಯಕ್ಕೆ ಸಹಾಯ ನೀಡದೇ ಇದ್ದು, ಮತ್ತು ಸೋತು ದುರ್ಬಲವಾದ ಆ ನಾಡನ್ನು ಕಬಳಿಸಿದ "ಪರಾಕ್ರಮಶಾಲಿ"ಗಳಿದ್ದಾರೆ. ಅತ್ಯಂತ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ, ಜಯಶೀಲರಾದ ರಾಣಿಯರನ್ನು ಕನ್ನಡ ನಾಡು ಕಂಡಿದೆ. ಇಂಥ ಕಲಿತನ ಮೆರೆದ ನಾಲ್ವರು ಅರಸಿಯರನ್ನು ನೆನಪಿಸಿಕೊಳ್ಳಬಹುದಾಗಿದೆ. ಭಾರತ ಇತಿಹಾಸದಲ್ಲಿ ಕತ್ತಲೆಯ, ಹತಾಶೆಯ ಅವಧಿಯೆಂದು ಪರಿಗಣಿಸಲ್ಪಡುವ 17ನೇ ಶತಮಾನದಲ್ಲಿಯೇ ಈ ನಾಲ್ಕು ಅರಸಿಯರು ಆಳಿದ್ದು ವಿಶೇಷ!

I. ಚೆನ್ನಭೈರಾದೇವಿ: (೧೫೬೨-೧೬೦೬) ಸಾಳ್ವರೆಂಬ ಮನೆತನದವರು, ಉತ್ತರಕನ್ನಡ ಜಿಲ್ಲೆಯ ಗೇರುಸೊಪ್ಪೆಯಲ್ಲಿ (ಜಗತ್‌ಪ್ರಸಿದ್ಧ ಜೋಗ್‌ಜಲಪಾತದ ನಾಡು) ೧೫ನೇ ಶತಮಾನದಿಂದಲೂ ರಾಜ್ಯವಾಳುತ್ತಿದ್ದು, ಜೈನ ಮತಾವಲಂಬಿಗಳಾಗಿದ್ದರು. ಮೂಲತಃ ತುಳುನಾಡಿನವರಾಗಿದ್ದ ಇವರಲ್ಲಿ ಅಳಿಯ ಸಂತಾನ ಪದ್ಧತಿಯಿತ್ತು. ಇವರಲ್ಲಿ ಮೂವರು ರಾಣಿಯರಾಗಿ ಹೋಗಿದ್ದಾರೆ. ಅಜ್ಜಿ ಮೊಮ್ಮಗಳು ಚೆನ್ನಭೈರಾದೇವಿ ಎಂಬ ಹೆಸರಿನವರಾಗಿದ್ದಾರೆ. ಇವರಲ್ಲಿ ಮೊಮ್ಮಗಳಾದ ಚೆನ್ನಭೈರಾದೇವಿ ಪರಾಕ್ರಮಶಾಲಿಯಾಗಿದ್ದಳು. ಸುಮಾರು ಐವತ್ತಾರು ವರ್ಷಗಳ ಕಾಲ ರಾಜ್ಯವಾಳಿದ ಈಕೆಯ ಜೀವನ ತನ್ನ ರಾಜ್ಯವನ್ನು ಬೇರೆ ಬೇರೆ ಆಕ್ರಮಣಕಾರರಿಂದ ರಕ್ಷಿಸಿಕೊಳ್ಳುವುದರಲ್ಲೇ ಕಳೆಯಿತು. ಇಷ್ಟೊಂದು ದೀರ್ಘಕಾಲ ಆಳಿದ ಅರಸಿಯರು ಭಾರತದಲ್ಲಿ ಅಪರೂಪವಾಗಿದ್ದಾರೆ.

ಈ ಕಾಲದಲ್ಲಿ ಚಿಕ್ಕ ಚಿಕ್ಕ ಪ್ರದೇಶಗಳನ್ನು ಆಳುತ್ತಿದ್ದ ತುಂಡರಸರು, ಪಾಳಯಗಾರರು ಮಹಿಳೆಯರು ಇದ್ದರೂ ಅವರ ಕುರಿತಾದ ತಮ್ಮ ಹೆಚ್ಚಿನ ತರಬೇತಿಯನ್ನು ಯೋಗ್ಯ ರೀತಿಯಲ್ಲಿ ಪ್ರಯೋಗಿಸಿದ ವೀರರಾಣಿಯರ ಬಗ್ಗೆ ಕಡಿಮೆ ವಿವರಗಳು ದೊರೆಯುತ್ತವೆ. ಅಂಥ ಮೂವರ ಉದಾಹರಣೆಗಳನ್ನು ನೋಡಬಹುದು. ಈಗಿನ ಒಂದು ತಾಲೂಕಿನ ಕ್ಷೇತ್ರಕ್ಕಿಂತ ಕಡಿಮೆ ಕ್ಷೇತ್ರಕ್ಕೆ 'ರಾಜ-ಮಹಾರಾಜ"ರೆನಿಸಿಕೊಳ್ಳುತ್ತಿದ್ದವರು ಅಸಂಖ್ಯರಿದ್ದರು. ಪರಸ್ಪರ ಕಾದಾಟದಲ್ಲೇ ಇವರ ಆಡಳಿತ ಕಳೆಯುತ್ತಿತ್ತು.

ಆದರೆ ಈ ಸಾಳ್ವರಾಣಿಯು ತಕ್ಕಮಟ್ಟಿಗೆ ದೊಡ್ಡ ಪ್ರದೇಶಕ್ಕೆ ಒಡತಿಯಾಗಿದ್ದಳು. ಅದಕ್ಕಿಂತ ಹೆಚ್ಚಾಗಿ ಹೊನ್ನಾವರ, ಭಟ್ಕಳಗಳಂಥ ಆ ಕಾಲದ ಅಂತರ್‌ರಾಷ್ಟ್ರೀಯ ಮಹತ್ವದ ಬಂದರಗಳ ನಾಡೂ ಮಿರ್ಜಾನ ಬೈಂದೂರು, ಅಂಕೋಲೆಗಳಂಥ ಒಳನಾಡನ್ನು ಜೋಡಿಸುವ ಚಿಕ್ಕ ರೇವುಗಳ ಪ್ರದೇಶವೂ, ಗೋಕರ್ಣದ ಮುಖ್ಯ ಯಾತ್ರಾಸ್ಥಳವೂ ಇವಳ ಆಡಳಿತಕ್ಕೆ ಒಳಪಟ್ಟಿತ್ತು. ಶಾಸನಗಳು ಇವಳನ್ನು ಹೈವ, ತುಳುವ ಮತ್ತು ಕೊಂಕಣಗಳ 'ಮಹಾಮಂಡಳೇಶ್ವರ' ಎಂದು ಕರೆದಿವೆ. ಈಗಿನ ಉತ್ತರಕನ್ನಡ, ದಕ್ಷಿಣ ಕನ್ನಡ ಹಾಗೂ ಕರಾವಳಿಯ, ಗೋವೆಯ, ಮಲಬಾರ ತನಕ ದಕ್ಷಿಣದ ಕಿನಾರೆಯವರೆಗಿನ ಪ್ರದೇಶವನ್ನು ಚೆನ್ನಭೈರಾದೇವಿ ಆಳುತ್ತಿದ್ದಳು. ಸಾಳ್ವರು ವಿಜಯನಗರದ ಸಾರ್ವಭೌಮತ್ವವನ್ನು ಒಪ್ಪಿಕೊಂಡಂತೆ ಅವಳ ಪ್ರದೇಶದ ಒಡೆತನವನ್ನು ವಿಜಯನಗರದ ಅರಸರು ಒಪ್ಪಿಕೊಳ್ಳಲೇಬೇಕಾಗಿತ್ತು. ಏಕೆಂದರೆ ಭಟಕಳಕ್ಕೆ ಯುದ್ಧ ಸಾಮಗ್ರಿಗಳಾದ ತೋಪು, ಮದ್ದು-ಗುಂಡುಗಳು ಹಾಗೂ ಉತ್ತಮ ತಳಿಯ ಕುದುರೆಗಳು ಪರ್ಶಿಯ ಹಾಗೂ ಕೊಲ್ಲಿ ರಾಷ್ಟ್ರಗಳಿಂದ ನೇರವಾಗಿ ಬರುತ್ತಿದ್ದವು. ವಿಜಯನಗರದವರಂತೆ ವಿಜಾಪುರದ ಆದಿಲ್‌ಶಾಹಿಗಳಿಗೂ ಇವುಗಳ ಅಗತ್ಯವಿತ್ತು. ಸಾಗಾಟದ ಆಯಕಟ್ಟಿನ ಸ್ಥಳಗಳನ್ನು ನಿಯಂತ್ರಿಸುತ್ತಿದ್ದ ರಾಣಿಯ ಸ್ನೇಹ-ವಿಶ್ವಾಸಗಳನ್ನು ಪಡೆಯಲು ವಿಜಯನಗರ, ವಿಜಾಪುರಗಳ ಹಿರಿಯ ಅರಸರು ಕಾತುರರಾಗಿರುತ್ತಿದ್ದರು.

ಅಲ್ಲದೇ ಈಕೆಯ ನಾಡು ಸಂಪದ್ಭರಿತವಾಗಿತ್ತು. ಅದಾಗಲೇ ಗೋವೆಯಲ್ಲಿ ತಳ ಊರಿದ್ದ ಪೋರ್ಚುಗೀಸರು ಈ ಪ್ರದೇಶದ ಹೆಸರಾಂತ ಸಾಂಬಾರ ಪದಾರ್ಥಗಳಿಗೆ ಮುಖ್ಯವಾಗಿ ಕರಿಮೆಣಸಿಗೆ ಬಲು ದೊಡ್ಡ ಗಿರಾಕಿಗಳಾಗಿದ್ದರು. ಆದರೆ ಸಮುದ್ರಗಳ್ಳತನದಲ್ಲಿ ಕುಖ್ಯಾತರಾಗಿದ್ದ ಈ ಜನ, ಶತ್ರು ಮಿತ್ರರೆಂಬ ಭೇದ ಮಾಡದೇ ಎಲ್ಲ ಆಳರಸರಿಗೂ ಕಿರುಕಳ ಕೊಡುತ್ತಿದ್ದರು. ಕಡಲಕರೆಯ ಜನಕ್ಕಂತೂ ದುಃಸ್ವಪ್ನವಾಗಿದ್ದರು. ಹೀಗಾಗಿ ಅವರನ್ನು ಹದ್ದುಬಸ್ತಿನಲ್ಲಿಡಲು ರಾಣಿಯು ವಿಜಾಪುರ ಮತ್ತು ಕಾಲಿಕತ್ತದ ಝಾಮೋರಿನನೊಡನೆ ಗುಪ್ತ ಒಪ್ಪಂದ ಮಾಡಿಕೊಂಡಿದ್ದಳು. ಅರಬಸ್ತಾನ್, ಪರ್ಷಿಯ ದೇಶಗಳೊಂದಿಗೆ ಸಹ, ರಾಣಿಯು ಸ್ವತಂತ್ರ ವಾಣಿಜ್ಯ ಸಂಪರ್ಕ ಹೊಂದಿದ್ದಳು.

ರಾಣಿಯ ಒಪ್ಪಂದಗಳು ಸಮಯಕ್ಕೆ ಒದಗಲಿಲ್ಲ. ೧೫೭೦ರ ಸುಮಾರಿಗೆ ಪೋರ್ಚುಗೀಸ್ ಯುದ್ಧ ನೌಕೆಯೊಂದು ಹೊನ್ನಾವರದ ಬಳಿ ಸಾರಿತು. ಅದನ್ನು ವಶ ಮಾಡಿಕೊಳ್ಳುವ ಯೋಜನೆ ಮೊದಲಿನಿಂದ ಇದ್ದ ಸುಳುವು ರಾಣಿಗಿತ್ತಾದರೂ ವಿಜಾಪುರದವರ ಸಹಾಯವನ್ನು ಆಕೆ ನಿರೀಕ್ಷಿಸಿದ್ದು ಹುಸಿಹೋಯಿತು. ಎದೆಗೆಡದೇ ರಾಣಿ ಸ್ವತಃ ಬಂದೂಕುಧಾರಿಯಾಗಿ ಹೊನ್ನಾವರಕ್ಕೆ ಸಾಗಿದಳು. ನಾಲ್ಕು ದಿನಗಳ ಕಾಳಗದ ನಂತರ ಪೋರ್ಚುಗೀಸರು ಸೋತರು. ರಾಣಿಯು ಕೊಡಮಾಡಿದ ಅವರ ನಿವೇಶನಗಳೂ, ಫ್ಯಾಕ್ಟರಿಯೂ ನೆಲಸಮವಾಗಿ, ತಡವಾಗಿ ಬಂದ ಝಾಮೋರಿನ ಹಾಗೂ ವಿಜಾಪುರದವರ ಸಹಾಯದಿಂದ ಪೋರ್ಚುಗೀಸರನ್ನು ರಾಣಿ, ಪೂರ್ಣವಾಗಿ ಮಣ್ಣು ಮುಕ್ಕಿಸಿದಳು. ಆ ನಂತರವೇ ಅವರು ರಾಣಿಯ ಘನತೆಯನ್ನು ಮನಗಂಡು ವ್ಯಾಪಾರದ ಶರತ್ತುಗಳನ್ನು ಪಾಲಿಸುತ್ತ ಬಂದರು. 'ಕರಿಮೆಣಸಿನ ರಾಣಿ' (ರೈನಾ-ಡಾ-ಪಿಮೆಂಟಾ) ಎಂದು ಕರೆದ ಈ ರಾಣಿಯ ಪರಾಕ್ರಮವನ್ನು ಪೋರ್ಚುಗೀಸ್ ದಾಖಲೆಗಳು ವರ್ಣಿಸುತ್ತವೆ. ವರ್ಷವೊಂದಕ್ಕೆ ಐದುನೂರು ಖಂಡಿ ಕರಿಮೆಣಸಿನ ಮುಂಗಡ ಹಣವನ್ನು ಈ ವಿದೇಶಿಯರಿಂದ ಪಡೆಯುವ ಜಾಗ್ರತೆಯನ್ನು ಆಕೆ ವಹಿಸಿದ್ದಳು.

ಪೋರ್ಚುಗೀಸರಿಗೆ ಬುದ್ಧಿ ಕಲಿಸಿದರೂ ನೆರೆಹೊರೆಯ ಅರಸರಿಂದಾಗಿ ಈಕೆಗೆ ನೆಮ್ಮದಿಯೆಂಬುದೇ ಇರಲಿಲ್ಲ. ಬೀಳಗಿಯ ತುಂಡರಸರು ಆಗಾಗ ಅವಳಿಗೆ ಸೇರಿದ ಊರುಗಳ, ಗ್ರಾಮಗಳ ಅತಿಕ್ರಮಣ ಮಾಡುತ್ತಲೇ ಇರುತ್ತಿದ್ದರು. ಬಿಳಗಿಯ ರಂಗರಾಜ ಎರಡು ಬಾರಿ ಸೋತರೂ ತನ್ನ ಚಟುವಟಿಕೆ ನಿಲ್ಲಿಸಿರಲಿಲ್ಲ. ಇನ್ನು, ದೊಡ್ಡ ರಾಜ್ಯವನ್ನು ಹೊಂದಿದ ಕೆಳದಿಯ ನಾಯಕರಂತೂ ಗೇರುಸೊಪ್ಪೆಯನ್ನು ನುಂಗಲು ಹೊಂಚು ಹಾಕಿಯೇ ಇದ್ದರು. ಚೆನ್ನಭೈರಾದೇವಿಯ ಆಡಳಿತದ ಅವಧಿ ತನ್ನನ್ನೂ, ರಾಜ್ಯವನ್ನೂ ರಕ್ಷಿಸಿಕೊಳ್ಳುವದರಲ್ಲಿಯೇ ಕಳೆಯಿತು.

ವಿದೇಶೀಯರಿಗಿಂತ ನಮ್ಮ ಜನರೇ ನಮ್ಮವರ ಶತ್ರುಗಳಾದ ಸಂದರ್ಭಗಳು, ಕ್ರಿ.ಶ. ಪೂ. ಅಲೆಕ್ಸಾಂಡರನ ಕಾಲದಿಂದಲೂ ನಮ್ಮೆದುರು ಇವೆ. ಪೋರ್ಚುಗೀಸರ ವಿರುದ್ಧ ರಾಣಿಗೆ ಸಹಾಯಮಾಡದ, ಬಿಳಗಿ -ಕೆಳದಿ ರಾಜ್ಯಗಳು ವೈವಾಹಿಕ ಸಂಬಂಧ ಹೊಂದಿ ಒಂದಾದವು. ಈಗ ರಾಣಿಯನ್ನು ಸೋಲಿಸಲು ಸಂಘಟಿತ ಪ್ರಯತ್ನ ನಡೆಯಿತು. ಕೊನೆಗೂ ಕೆಳದಿಯ

ವೆಂಕಟಪ್ಪನಾಯಕ, ಚೆನ್ನಭೈರಾದೇವಿಯನ್ನು ಸೋಲಿಸಿ, ಗೇರುಸೊಪ್ಪಾರಾಜ್ಯವನ್ನು ತನ್ನದಕ್ಕೇ ಸೇರಿಸಿ, ಸಾಯುವವರೆಗೂ ರಾಣಿಯನ್ನು ಸೆರೆಮನೆಯಲ್ಲಿ ಕೊಳೆ ಹಾಕುವುದರಲ್ಲಿ ಯಶಸ್ವಿಯಾದ.

ಸ್ವತಃ ಜೈನಮತಸ್ಥಳಾಗಿದ್ದರೂ ರಾಣಿಯು ಉಪ್ಪುಂದದ ಶಾಂತಿಕಾ ಪರಮೇಶ್ವರಿ, ಭುವನಗಿರಿಯ ಆಂಜನೇಯ, ಭಟಕಳದ ಕೇತಪ್ಪ ನಾರಾಯಣ, ಬೈಂದೂರಿನ ಶನೀಶ್ವರ ದೇವಾಲಯಗಳಿಗೆ ದಾನ ನೀಡಿದ್ದಾಳೆ. ರಾಜ್ಯದ ಕ್ರೈಸ್ತ, ಮುಸ್ಲಿಂ ಪ್ರಜೆಗಳ ಪ್ರಾರ್ಥನಾ ಮಂದಿರಗಳ ನಿರ್ಮಾಣಕ್ಕೆ ಅನುಕೂಲ ಮಾಡಿಕೊಟ್ಟಿದ್ದಳು. ಸಾಹಿತ್ಯ ಕಲೆಗಳಿಗೆ ಆಶ್ರಯವಿತ್ತಿದ್ದಳು. ಸಾಳ್ವ, ವಾದಿ ವಿದ್ಯಾನಂದ, ವರ್ಧಮಾನ, ಕವಿಗಳು ಇವಳ ಆಶ್ರಯದಲ್ಲಿದ್ದರು.

ii. ಉಲ್ಲಾಳದ ರಾಣಿ ಅಬ್ಬಕ್ಕ ದೇವಿ :

(ಕ್ರಿ.ಶ.ಸು ೧೫೭೦-೧೬೨೫) ಸುಮಾರು ಕ್ರಿ.ಶ.೧೫೪೦ ರಿಂದ ೧೬೨೫ರ ವರೆಗೆ ದಕ್ಷಿಣ ಕನ್ನಡ ಕರಾವಳಿಯಲ್ಲಿರುವ ಉಲ್ಲಾಳದಲ್ಲಿ, ಆಳಿದ ಪರಾಕ್ರಮಶಾಲಿ ರಾಣಿ, ಚೌಟರ ಅಬ್ಬಕ್ಕದೇವಿ. ಈಕೆಯ ಕೆಚ್ಚೆದೆ ಹಾಗೂ ವಿಕ್ರಮಗಳ ಬಗ್ಗೆ ಹುಟ್ಟು ನಾಡಿನಲ್ಲೇ ಹೆಚ್ಚಿನ ವಿವರಗಳು ದೊರೆಯದಿದ್ದರೂ ಹೊರನಾಡುಗಳಲ್ಲಿ ಹೆಚ್ಚಿನ ಕೀರ್ತಿ ಹರಡಿದ್ದು ವಿಶೇಷವಾಗಿದೆ. ಪರ್ಶಿಯದ ಚಕ್ರವರ್ತಿಯಿಂದ ಪೋರ್ಚುಗೀಸರನ್ನು ಈಕೆ ಸೋಲಿಸಿದ ವಿಚಾರವನ್ನು ತಿಳಿದುಕೊಂಡು ಇಟಾಲಿಯನ್ ಪ್ರವಾಸಿ ಪೀಟ್ರೊಡೆಲ್ಲಾ ವಾಲೆ, ತನ್ನ ಭಾರತ ಪ್ರವಾಸದಲ್ಲಿ ಏನಿದ್ದರೂ ಅವಳನ್ನು ಕಂಡೇ ಹೊಗಬೇಕೆಂದು ನಿರ್ಧರಿಸಿದ್ದ. ಅದರಂತೆ ಕ್ರಿ. ಶ. ೧೬೨೩ರಲ್ಲಿ ಆತನು, ಕರ್ನಾಟಕದಲ್ಲಿ ವ್ಯಾಪಕ ಸಂಚಾರ ಕೈಕೊಂಡ. ಆಗ ಆತ ಅವಳನ್ನು ಕಂಡು ಬರೆದಿಟ್ಟ ಪತ್ರಮಾಹಿತಿ ಬಲು ಮುಖ್ಯವಾಗಿದೆ. ಪೋರ್ಚುಗೀಸರ ದಾಖಲೆಗಳು ಮತ್ತು ಚೌಟರ ಮೂಲ ಪ್ರಾದೇಶಿಕ ಸಾಮಗ್ರಿಯಿಂದ ಈ ವೀರರಾಣಿಯ ಕುರಿತು ಕೊಂಚ ಮಾಹಿತಿ ಸಿಗುತ್ತದೆ.

ಕ್ರಿಸ್ತಶಕದ ಹದಿನೈದು ಹದಿನಾರನೆಯ ಶತಮಾನದಲ್ಲಿ ಯುರೋಪಿನ ಸ್ಪೇನ್, ಪೋರ್ಚುಗಾಲ ದೇಶಗಳು ಜಗತ್ತಿನಲ್ಲೇ ಬಲಾಢ್ಯ ಸಾಮ್ರಾಜ್ಯಗಳಾಗಿ ಮೆರೆದಿದ್ದವು. ಇಡಿಯ ಅಮೇರಿಕ ಖಂಡ ಜಯಿಸಿದ್ದಲ್ಲದೇ, ತಮ್ಮ ನೌಕಾಬಲದಿಂದ ಪೂರ್ವ ದಿಕ್ಕಿನ ಹಲವಾರು ದೇಶಗಳಲ್ಲಿ ತಳಊರಿದ್ದು, ಪೋರ್ಚುಗೀಸರು ಗೋವಾವನ್ನು ಗೆದ್ದು ಧಾರ್ಮಿಕ ಅತ್ಯಾಚಾರಗಳನ್ನು ಎಸಗಿದ್ದು, ಇತಿಹಾಸ! ಗೋವಾದಂತೆಯೇ ಪಶ್ಚಿಮ ಕರಾವಳಿಯ ಕರ್ನಾಟಕ ಪ್ರದೇಶದಲ್ಲೂ ನೆಲೆಯೂರಲು ಪೋರ್ಚುಗೀಸರು ಒಂದೇ ಸವನೆ ಪ್ರಯತ್ನಿಸುತ್ತಲೇ ಇದ್ದರು. ಈ ನಾಡಿನ ಸಂಭಾರ ಪದಾರ್ಥಗಳಿಗೆ ಮುಖ್ಯವಾಗಿ ಕರಿಮೆಣಸಿಗೆ ಯುರೋಪದಲ್ಲಿ ವಿಪರೀತ ಬೇಡಿಕೆಯಿದ್ದು, ಮಸಾಲೆ ಸಾಮಾನುಗಳ ವ್ಯಾಪಾರದ ಏಕಸ್ವಾಮ್ಯತೆಗೆ ಅರಬ್ ಹಾಗೂ ಪೋರ್ಚುಗೀಸ್‌ರ ನಡುವೆ ನಿರಂತರ ಘರ್ಷಣೆ ನಡೆದೇ ಇತ್ತು. ಜೊತೆಗೆ ಅಂದಿನ ಯುದ್ಧಗಳಿಗೆ ಅತ್ಯವಶ್ಯವಾಗಿದ್ದ ಉತ್ತಮ ತಳಿಯ ಕುದುರೆಗಳನ್ನು ಪಡೆಯಲು ಅರಬ್ ಹಾಗೂ ಇತರ ಪಾಶ್ಚಾತ್ಯದೇಶಗಳ ಸಹಕಾರ, ವಿಜಯನಗರದವರಿಗೆ ಹಾಗೂ ಬಿಜಾಪೂರದ ಆದಿಲ್‌ಶಾಹಿಗಳಿಗೆ

ಬೇಕಿತ್ತು. ಇವುಗಳ ಸಾಗಾಟ ಮಂಗಳೂರು, ಭಟಕಳ, ಹೊನ್ನಾವರ, ಕಾರವಾರ ಬಳಿಯ ಅಂಜದೀವ್‌ಗಳಂಥ ಅಂತರ್ ರಾಷ್ಟ್ರೀಯ ಬಂದರಗಳಿಂದ ನಡೆಯುತ್ತಿತ್ತು. ಹೀಗಾಗಿ ಈ ಬಂದರುಗಳ ಆಧಿಪತ್ಯಕ್ಕಾಗಿ ಸಣ್ಣ ದೊಡ್ಡ ಕಾಳಗಗಳು ನಡೆದೇ ಇದ್ದವು. ವಿಜಯನಗರ ಸಾಮ್ರಾಜ್ಯವು ಬಲಾಢ್ಯವಾಗಿದ್ದಾಗ, ವಿದೇಶೀಯರ ಆಟ ನಡೆಯಲಿಲ್ಲ.

ಆದರೆ ಕ್ರಿ.ಶ. ೧೫೬೫ರ ರಕ್ಕಸಗಿ ಕಾಳಗದ ಬಳಿಕ ಈ ಪ್ರದೇಶದಲ್ಲಿ ರಕ್ಷಣೆ ಕ್ಷೀಣಿಸಿತು. ಆಗ ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಹಲವರು ಜೈನ ತುಂಡರಸರು ಆಳುತ್ತಿದ್ದು, ಅವರೆಲ್ಲ ವಿಜಯನಗರದ ಪ್ರಭುತ್ವಕ್ಕೆ ಒಳಪಟ್ಟವರು. ಈಗ ಸ್ವತಂತ್ರರಾಗಬಯಸಿದರು. ಇವರಲ್ಲಿ ಗೇರಸೊಪ್ಪಾ, ಹಾಡುವಳ್ಳಿಯ ಸಾಳ್ವರು, ಕಾರ್ಕಳದ ಭೈರರಸರು, ಬಂಗಾಡಿಯ ಬಂಗರು, ಮೂಲ್ಕಿಯ ಸಾವಂತರು, ಹೊಸಂಗಡಿಯ ಬಿನ್ನಾಣಿಗಳು, ಪುತ್ತಿಗೆ ಅಥವಾ ಮೂಡಬಿದಿರೆಯ ಚೌಟರು, ವೇಣೂರಿನ ಅಜಿಲರು ಬೈಲಂಗಡಿಯ ಮೂಲರು ಉಲ್ಲೇಖನಿಯರು. ಇವರಲ್ಲಿ ಬಂಗಾಡಿಯ ಬಂಗರು ಮತ್ತು ಚೌಟರು ನಮಗೆ ಮುಖ್ಯರಾಗಿದ್ದಾರೆ. ಅಬ್ಬಕ್ಕದೇವಿ ಚೌಟರ ರಾಣಿಯಾಗಿ, ಬಂಗರ ಅರಸನನ್ನು ಮದುವೆಯಾಗಿದ್ದಳು.

ಈ ತುಂಡರಸರೆಲ್ಲ ಐದರಿಂದ ನೂರು, ಗ್ರಾಮಗಳನ್ನು ಆಳುತ್ತಿದ್ದು ಪರಸ್ಪರ ಕಾದಾಟಗಳ ಜೊತೆಗೆ ವಿಜಯನಗರದ ಸಾರ್ವಭೌಮತ್ವದ ವಿರುದ್ಧ ಸದಾ ಬಂಡಾಯದಲ್ಲಿ ನಿರತರಾಗಿರುತ್ತಿದ್ದರು. ವಿಜಯನಗರ ಆಡಳಿತವು ಈ ಉಸ್ತುವಾರಿಯನ್ನು ಕೆಳದಿಯ ನಾಯಕರಿಗೆ ವಹಿಸಿದ್ದರಿಂದ, ಕೆಲ ಕಾಲ ಶಾಂತಿ ನೆಲೆಸಿತ್ತು. ಬಳಿಕ ಕೆಳದಿ ನಾಯಕರೇ ಕರಾವಳಿಯ ಒಡೆಯರಾಗಿ ಗೇರುಸೊಪ್ಪಾ ಹಾಡುವಳ್ಳಿಯನ್ನು ತನ್ನದಾಗಿಸಿಕೊಂಡರು. ಅಲ್ಲಿಯ ವೀರ ರಾಣಿ ಚೆನ್ನಭೈರಾದೇವಿಯನ್ನು ಆಮರಣ ಪರ್ಯಂತ ಬಂದಿಯಾಗಿಸಿದ್ದನ್ನು ಕಾಣುತ್ತೇವೆ.

ನಿಧಾನವಾಗಿ, ಪೋರ್ಚುಗೀಸರು, ತುಂಡರಸರಿಗೆ ಸಮುದ್ರಗಳ್ಳರಿಂದ ರಕ್ಷಣೆ ನೀಡುವ ಭರವಸೆ ಕೊಡುತ್ತ ಅವರಿಂದ ಕಪ್ಪಕಾಣಿಕೆ ಎತ್ತಲಾರಂಭಿಸಿದರು. ಚೌಟರಾಣಿ ಹಿರಿಯ ಅಬ್ಬಕ್ಕನಿಗೆ ಈ ಕಪ್ಪದ ಭಾರ ತುಂಬ ಹೆಚ್ಚಾಗಿದ್ದರಿಂದ ಆಕೆ ಪ್ರತಿಭಟಿಸಿದಳು. ಪ್ರತಿಯಾಗಿ ಪೋರ್ಚುಗೀಸರು ಬಂಗಾಡಿಯ ಬಂಗರಾಜನ ಸಹಾಯದಿಂದ ಅವಳನ್ನು ಸೋಲಿಸಿದರು. ಮಂಗಳೂರಿನಲ್ಲಿ ಪೋರ್ಚುಗೀಸರ ಭದ್ರ ಕೋಟೆಯಿತ್ತು. ಅಲ್ಲಿಂದ ಈ ಚಿಕ್ಕ ರಾಜ್ಯಗಳ ಮೇಲೆ ಆಕ್ರಮಣ ಸುಲಭವಾಗುತ್ತಿತ್ತು. ಬಂಗ, ಚೌಟರ ಮಧ್ಯ ವೈಷಮ್ಯ ಇದ್ದೇ ಇತ್ತು.

ಆದರೆ ವಿಧಿ ವೈಚಿತ್ರ್ಯ! ಒಂದೇ ಜನಾಂಗಕ್ಕೆ ಸೇರಿದ ಬಂಗರಾಜ ಲಕ್ಕಪ್ಪನಿಗೂ ಹಿರಿಯ ಅಬ್ಬಕ್ಕ ರಾಣಿಯ ಮಗಳು, ಕಿರಿಯ ಅಬ್ಬಕ್ಕನಿಗೂ ಮದುವೆ ಆಯಿತು. ಲಕ್ಕಪ್ಪರಾಯ, ಪೋರ್ಚುಗೀಸರ ಕೃಪಾಕಟಾಕ್ಷಕ್ಕೆ ಹಾತೊರೆದರೆ ಈ ಅಬ್ಬಕ್ಕ ಅವರ ಧರ್ಮಾಂಧತೆ, ನಿರ್ದಯತೆಗಳನ್ನು ಮನಸಾ ದ್ವೇಷಿಸುತ್ತಿದ್ದಳು. ಅಳಿಯ ಸಂತಾನ ಜಾರಿಯಲ್ಲಿರುವ ಸಂಪ್ರದಾಯದಂತೆ, ತಾಯಿಯ ಬಳಿಕ ಗಂಡು ಸಂತಾನವಿಲ್ಲದೇ ಪಟ್ಟಕ್ಕೆ ಬಂದ ಕಿರಿಯ

ಅಬ್ಬಕ್ಕ, ತನ್ನೆರಡು ಮಕ್ಕಳನ್ನು ಉಳ್ಳಾಲದಲ್ಲಿಯೇ ಬೆಳೆಸಿದಳು. ಆಕೆಯ ಪತಿ ಬಂಗರಾಜ ಬಂಗಾಡಿಯಲ್ಲೇ ಬೇರೆಯಾಗಿ ಇರತೊಡಗಿದ. ಮೂಲರ ಮನೆತನದ ಹೆಣ್ಣನ್ನು ಮದುವೆಯಾದ. ಮೊದಲೇ ಇದ್ದ ದಾಂಪತ್ಯದ ವಿರಸ ಬೆಳೆದು ಬೇರ್ಪಡುವಂತೆ ಆಯಿತು.

ಅಬ್ಬಕ್ಕ ಮುಂದಾಲೋಚನೆಯಿಂದ ಕೆಳದಿಯ ವೆಂಕಟಪ್ಪ ನಾಯಕ ಹಾಗೂ ಮಲಬಾರದ ಝಾಮೋರಿನ (ಸಮುದ್ರಿನ್) ಜೊತೆಗೆ ಉತ್ತಮ ರಾಜಕೀಯ ಸಂಬಂಧ ಬೆಳೆಸಿದ್ದಳು. ಪೋರ್ಚುಗೀಸರು ಕರಾರು ಹಾಕಿದಂತೆ, ಉಲ್ಲಾಳ ರಾಜ್ಯದಲ್ಲಿ ಬೆಳೆದ ಕರಿಮೆಣಸಾದಿಯಾಗಿ ಯಾವತ್ತೂ ಸಂಬಾರ ಸಾಮಗ್ರಿಗಳನ್ನು ಅವರಿಗೇ ತೀರ ಕಡಿಮೆ ದರಕ್ಕೆ ಪೂರೈಸಬೇಕಾಗಿತ್ತು. ಇದೇ ಷರತ್ತು ಭತ್ತ ಹಾಗೂ ನೇಯ್ದ ಬಟ್ಟೆಗೂ ಅನ್ವಯಿಸುತ್ತಿತ್ತು. ತನ್ನ ಪ್ರಜೆಗಳ ಶೋಷಣೆಗೆ ಒಪ್ಪಲಾರದೇ ರಾಣಿ ಝಾಮೋರಿನನ ಸಹಾಯದಿಂದ ಸ್ವತಂತ್ರವಾಗಿ ಮಸಾಲೆ ಸಾಮಾನುಗಳನ್ನು ಹಡಗು ಮೂಲಕ ಅರೇಬಿಯಕ್ಕೆ ಕಳಿಸಿದಳು. ಇದರಿಂದ ಸಿಟ್ಟಿಗೆದ್ದ ಪೋರ್ಚುಗೀಸರು ಯುದ್ಧ ನೌಕೆಗಳೊಂದಿಗೆ ಬಂದು ಉಲ್ಲಾಳವನ್ನು ಸುತ್ತುವರಿದರು. ಈ ಮೊದಲು ಚಿಕ್ಕಪುಟ್ಟ ಘರ್ಷಣೆಯಲ್ಲಿ ರಾಣಿಯದೇ ಮೇಲುಗೈಯಾಗಿರುತ್ತಿತ್ತು. ಈ ಬಾರಿ ರಾಣಿಯನ್ನು ಸದೆಬಡೆಯುವುದು ಅವರ ಉದ್ದೇಶವಾಗಿತ್ತು.

ರಾಣಿ ಅಳುಕಲಿಲ್ಲ. ಮಧ್ಯರಾತ್ರಿಯ ಹೊತ್ತಿಗೆ ಅವಳ ಸೈನ್ಯದಲ್ಲಿದ್ದ ಸಾಹಸಿಗಳಾದ ಮೊಗೇರರು (ಮೀನುಗಾರರು) ಹಾಗೂ ಮಾಪಿಳ್ಳೆಗಳು ಸಣ್ಣ ಸಣ್ಣ ದೋಣಿಗಳಲ್ಲಿ ಸಮುದ್ರಹೊಕ್ಕರು. ನೂರಾರು ತೆಂಗಿನಗರಿಗಳಿಂದ ಮಾಡಿದ ಸೂಟೆಗಳೆಂಬ ಸೊಡರುಗಳನ್ನು ಕ್ಷಣಾರ್ಧದಲ್ಲಿ ಉರಿಸಿ, ಪೋರ್ಚುಗೀಸರ ಹಡಗುಗಳ ಮೇಲೆ ಎಸೆದರು. ಹಡಗುಗಳ ಹಾಯಿಗಳೆಲ್ಲ ಬೆಂಕಿ ಹತ್ತಿ ಉರಿಯತೊಡಗಿದವು. ದಿಕ್ಕೆಟ್ಟ ಸೈನಿಕರು ಸಮುದ್ರಕ್ಕೆ ಹಾರಿ ಈಜಲು ಯತ್ನಿಸಿದರು. ಆದರೆ ರಾಣಿಯ ಸೈನಿಕರ ಖಡ್ಗ ಈಟಿಗಳಿಗೆ ಬಲಿಯಾದರು. ಎರಡು ಹಡಗುಗಳು ಮುಳುಗಿದವು. ಎರಡುನೂರು ಪೋರ್ಚುಗೀಸ ಸೈನಿಕರು ಸತ್ತರು. ಮಿರಾಂಡಾ ಮತ್ತು ಡಿ ಮೆಲ್ಲೋ ಎಂಬ ಸೇನಾನಿಗಳೇ ಕಣ್ಮರೆಯಾದರು, ಎಂಬ ವಿಚಾರ ಪೋರ್ಚುಗೀಸರ ಮೂಲದಿಂದ ತಿಳಿಯುತ್ತದೆ.

ಕ್ರಿ. ಶ. ೧೬೧೮ರಲ್ಲಿ ಈ ಘಟನೆ ನಡೆಯಿತು. ಆ ಬಳಿಕ ಪೋರ್ಚುಗೀಸರು ರಾಣಿಗೆ ಹೆದರಿ ನಡೆದುಕೊಂಡರು. ವಿಶ್ವದಲ್ಲಿಯೇ ಬಲಾಢ್ಯ ನೌಕಾಸಾಮ್ರಾಜ್ಯ, ಭಾರತದ ಮೂಲೆಯ ಚಿಕ್ಕರಾಜ್ಯದ ರಾಣಿಯಿಂದ ಸೋಲು ಅನುಭವಿಸಿತ್ತು. ಪ್ರಪಂಚದಲ್ಲಿ ಅದು ದೊಡ್ಡ ಸುದ್ದಿಯಾಯಿತು. ಈಗಾಗಲೇ ಉಲ್ಲೇಖಿಸಿದಂತೆ ಇಟಾಲಿಯನ್ ಪ್ರವಾಸಿ, ಪೀಟ್ರೊ ಡೆಲ್ಲಾ ವಾಲೆ, ಅಬ್ಬಕ್ಕನ ಪರಾಕ್ರಮದ ಬಗ್ಗೆ ಅರಿತದ್ದು, ಇಸ್ಪಹಾನ್ (ಪರ್ಶಿಯಾ)ದಲ್ಲಿ. ಆತ ಭೇಟಿ ಮಾಡಿದ ಪರ್ಶಿಯನ್ ಚಕ್ರವರ್ತಿ ಷಾ ಅಬ್ಬಾಸನ ಮೂಲಕ ಮಂಗಳೂರನ್ನು ಕ್ರಿ. ಶ. ೧೬೨೩ರಲ್ಲಿ ತಲುಪಿದ ಪೀಟ್ರೊ, ರಾಣಿಯ ಭೇಟಿಗೆ ಉಲ್ಲಾಳಕ್ಕೆ ಹೊರಟ.

ಸಮೀಪದಲ್ಲೆ ಬಂಗಾಡಿ ರಾಜ (ಅಬ್ಬಕ್ಕನ ಪತಿ) ನ "ಬಂಗೇರ್‌ವನ್" ಹತ್ತಿತು. ರಾಜನು ಓಡಿ ಹೋಗಿದ್ದರಿಂದ ಅದು ಕೆಳದಿಯ ವಶವಾಗಿತ್ತು ಎಂದು ಡೆಲಾವಾಲೆ ಬರೆಯುತ್ತಾನೆ. ಅಲ್ಲಿಂದ ಉಲ್ಲಾಳಕ್ಕೆ ದೋಣಿಯಿಂದ ಪಯಣಿಸಿದ.ಜೊತೆಗೆ ದುಭಾಷಿಯನ್ನೂ ಕರೆದುಕೊಂಡ. ಆದರೆ ರಾಣಿ ಉಲ್ಲಾಳದಲ್ಲಿ ಇರಲಿಲ್ಲ. ಮಣೇಲಿಗೆ ಹೋಗಿದ್ದಳು. ನದಿಯನ್ನು ಅಡ್ಡಗಟ್ಟಿ ನೀರಾವರಿಗೆ ಸಹಾಯವಾಗುವ ಕೆಲಸದ ಉಸ್ತುವಾರಿಗೆ ಹೋಗಿದ್ದಳೆಂದು ಸ್ಥಳೀಯರು ಹೇಳಿದರು. ಪಿಟ್ರೊ ಡೆಲಾವಾಲೆ, ಕಾಯುತ್ತಿದ್ದಂತೆ ಆಕೆ ಮಧ್ಯಾಹ್ನ ತನ್ನ ಬೀಡಿಗೆ ಬರಲಿರುವ ವಿಚಾರ ತಿಳಿಯಿತು. ಊರಲ್ಲಿದ್ದ ಒಂದೇ ರಸ್ತೆಯ ಬಳಿ ಆತ ನಿಂತುಕೊಂಡ.

ರಾಣಿಯೇ ಬೀದಿಯಲ್ಲಿ ನಡೆದು ಬರುತ್ತಿದ್ದುದನ್ನು ಕಂಡೆ. ಮುಂದೆ ನಾಲ್ಕಾರು ಸಿಪಾಯಿಗಳಿದ್ದರು. ಇಲ್ಲಿಯ ಪದ್ಧತಿಯಂತೆ ಹೆಚ್ಚು ಬಟ್ಟೆ ಹಾಕದೇ ಅರೆಬೆತ್ತಲೆ ಆಗಿದ್ದರು. ಸೊಂಟಕ್ಕೆ ಬಟ್ಟೆ, ಹೆಗಲ ಮೇಲೆ ಅಡ್ಡವಾಗಿ ಹೊದ್ದುಕೊಂಡ ವಸ್ತ್ರ, ಕೈಯಲ್ಲಿ ಕತ್ತಿ, ಗುರಾಣಿ ಇದ್ದವು. ಹಿಂದೆಯೂ ಅಷ್ಟೇ ಸಿಪಾಯಿಗಳು. ಅವರಲ್ಲಿ ಒಬ್ಬಾತ ತಾಳೆಗರಿಯ ಕೊಡೆಯನ್ನು ರಾಣಿಯ ಮೇಲೆ ಹಿಡಿದದ್ದ. ರಾಣಿಯ ಮೈಬಣ್ಣ ಕಪ್ಪಗೆ. ಆಕೆ ದಪ್ಪಗಿದ್ದರೂ ನಡಿಗೆ ಚುರುಕಾಗಿತ್ತು. ಮಂದವಾದ ಬಿಳಿಯ ಹತ್ತಿ ಸೀರೆ ಉಟ್ಟಿದ್ದಳು. ಕಾಲಿಗೆ ಪಾದರಕ್ಷೆಗಳಿರಲಿಲ್ಲ. ರಾಣಿ ಸೀರೆಯ ಹೊರತಾಗಿ, ತೋಳು ಎದೆಯ ಮೇಲೆ ಇನ್ನೊಂದು ಬಟ್ಟೆ ಹಾಗೂ ತಲೆ ಮುಚ್ಚುವ ಬಟ್ಟೆಯಿಲ್ಲದೇ ಬೇರೆ ಉಡುಪು ತೊಟ್ಟಿರಲಿಲ್ಲ ಎಂದು ಡೆಲಾ ವಾಲೆ ಬರೆದಿದ್ದಾನೆ.

ಈ ರೀತಿಯ ರಾಣಿಯ ಉಡುಪು ಹಿಂದೆ, ಇಂದು, ಎಂದೆಂದಿಗೂ ಆಶ್ಚರ್ಯವುಂಟುಮಾಡುವಂತಹದೇ ! ಅಬ್ಬಕ್ಕರಾಣಿ ನಿಜಕ್ಕೂ ಜನಸಾಮಾನ್ಯರಂತೆಯೇ, ಅವರಿಗಾಗಿಯೇ ಬಾಳಿ ಬದುಕಿದ ಧೀರೆಯಾಗಿದ್ದಳು. "In brief her aspect and habit (ವ್ಯಕ್ತಿತ್ವ ಹಾಗೂ ಉಡುಪು) represented rather a dirty kitchen woman, or a laundress than a delicate and noble queen" (ಆಕೆಯ ಬಾಹ್ಯ ರೂಪದಿಂದ ಓರ್ವ ಅಡಿಗೆಯವಳಂತೆಯೋ, ಅಗಸಗಿತ್ತಿಯಂತೆಯೊ ಕಂಡಳೇ ಹೊರತು, ಕೋಮಲಾಂಗಿ, ಧೀರೋದಾತ್ತ ರಾಣಿಯಂತೆ ಕಾಣಲಿಲ್ಲ ! ಎಂದು ಡೆಲ್ಲಾ ವಾಲೆ ಉದ್ಗರಿಸಿದ್ದಾನೆ.

ಆದರೆ ನಂತರದ ಮಾತುಕತೆಯಲ್ಲಿ ಆಕೆಯ ಘನತೆ ಹೆಚ್ಚೆ ಸ್ಪಷ್ಟವಾಗುತ್ತ ಬಂದಿತು. ಈ ವಿದೇಶಿಯನು ನಮಸ್ಕರಿಸಿ ನಿಂತ ಬಳಿಕ ದುಭಾಷಿಯ ಮೂಲಕ ಮಾತುಕತೆ ನಡೆಯಿತು. ರಾಣಿಯು ಡೆಲಾವಾಲೆಯ ಪೂರ್ವಾಪರಗಳನ್ನೆಲ್ಲ ತಿಳಿದುಕೊಂಡಳು. ಭಾರತದಲ್ಲಿ ಆತ ನೋಡಿದ, ಭೇಟಿ ಮಾಡಿದ ಸಂಗತಿಗಳನ್ನು ಅರಿತಳು. ಬಳಿಕ "ಮಹಾ ತುರುಕ (The Great Turk), ಪರ್ಶಿಯದ ಚಕ್ರವರ್ತಿ, ಮೊಗಲ ಸಮ್ರಾಟ ಮತ್ತು ವೆಂಕಟಪ್ಪ ನಾಯಕ ಇಂಥವರನ್ನೆಲ್ಲ, ಮಹಾಮಹಿಮರನ್ನು ಕಂಡಿರುವಿರಿ. ಈಗ ಈ ಕಾಡಿನಲ್ಲಿ ಮತ್ತೇನು ನೋಡಲು ಬಂದಿರಿ" ಎಂದು ಕೇಳಿದಳು.

ಅದಕ್ಕೆ ಡೆಲ್ಲಾವಾಲೆ ಹೆಸರಾಂತರಾದ ತಮ್ಮನ್ನು ನೋಡಲೆಂದೇ ಬಂದೆ. ಅದು ಸಾರ್ಥಕವಾಯಿತು ಎಂದನು. ಇದರಿಂದ ರಾಣಿ ಸಂತುಷ್ಟಳಾದಂತೆ ಕಂಡಳೆಂದು ಡೆಲ್ಲಾವಾಲೆ ಬರೆದಿದ್ದಾನೆ. ಸ್ತ್ರೀ ಸಹಜ ಕಾರುಣ್ಯದಿಂದ, ಕಾಣದ ದೇಶಗಳಲ್ಲೆಲ್ಲ ಒಂಟಿಯಾಗಿ ಅಲೆಯುವ ನಿಮಗೆ ಕಾಯಿಲೆ, ಕಸಾರೆ ಬಂದರೆ ನೋಡಿಕೊಳ್ಳುವವರು ಯಾರು? ಎಂದು ಸ್ತ್ರೀಸಹಜ ಕಾರುಣ್ಯದಿಂದ ರಾಣಿ ಕೇಳಿದಳು.

ಅದಕ್ಕೆ ಡೆಲ್ಲಾವಾಲೆ 'ನಾನು ನಂಬಿದ ದೇವರು ಹೋದೆಡೆಯಲ್ಲೆಲ್ಲ ನನ್ನೊಡನಿದ್ದಾನೆ!' ಎಂದು ಉತ್ತರಿಸಿದ.

ರಾಣಿ, ಹಲವಾರು ಪ್ರಶ್ನೆಗಳನ್ನು ಕೇಳಿದಳು. ಆತ ಸಮರ್ಪಕವಾಗಿ ಉತ್ತರಿಸಿದ. ಸಾಕಷ್ಟು ಹೊತ್ತು ನಿಂತೇ ಮಾತನಾಡಿದ ಬಳಿಕ ಆತನ ವಾಸ್ತವ್ಯ ಊಟೋಪಚಾರದ ವ್ಯವಸ್ಥೆ ಮಾಡುವಂತೆ ಹೇಳಿ ಮತ್ತೆ ಕಾಣುವುದಾಗಿ ಹೇಳಿ ರಾಣಿ ಬೀಳ್ಕೊಂಡಳು.

ಆಕೆಯ ದರ್ಬಾರದ ಭೇಟಿಗಾಗಿ ಡೆಲ್ಲಾವಾಲೆ ಕೆಲ ದಿನ ಕಾದ. ಎರಡು ಮೂರು ಬಾರಿ ಯತ್ನಿಸಿದ. ಆದರೆ ಪುನಃ ರಾಣಿ ಹೇಳಿ ಕಳಿಸಲಿಲ್ಲ. ಆದರೆ ಆತನನ್ನು ಸಂಶಯದಿಂದ ಕಾಣುವುದಾಗಲಿ, ಪತ್ತೆದಾರಿ ಕೆಲಸವನ್ನಾಗಲಿ ಮಾಡಲಿಲ್ಲ. ಭೇಟಿಯನ್ನು ಮುಂದೂಡುತ್ತ ಕಳೆದಳು.

ಪರ್ಶಿಯದ ಚಕ್ರವರ್ತಿಯಂತೆಯೇ ಉಲ್ಲಾಳದ ರಾಣಿ ಘನವಂತಳು, ಪ್ರಜಾವಾತ್ಸಲ್ಯವುಳ್ಳವಳು. ವ್ಯಾಜ್ಯಗಳ ತೀರ್ಮಾನವನ್ನು ಸ್ವತಃ ಮಾಡುತ್ತಾಳೆ. ಕಾಮಗಾರಿಗಳಲ್ಲಿ ಆಸಕ್ತಿವಹಿಸಿ ಪ್ರಜೆಗಳ ಹಿತರಕ್ಷಣೆಯಲ್ಲಿ ಮಗ್ನಳಾಗಿರುತ್ತಾಳೆ ಎಂದು ಪೀಟ್ರೊಡೆಲ್ಲಾವಾಲೆ ಬರೆದಿದ್ದಾನೆ. ಸ್ವತಃ ಕಣ್ಣಾರೆ ಕಂಡು ಬರೆದಿಟ್ಟ ಆತನ ವೃತ್ತಾಂತ, ೧೭ನೇ ಶತಮಾನದ ಕರ್ನಾಟಕದ ಕರಾವಳಿಯ ಚರಿತ್ರೆ ಅರಿಯಲು ಅಪೂರ್ವ ದಾಖಲೆಯಾಗಿದೆ. ಈ ವೃತ್ತಾಂತವಿಲ್ಲದಿದ್ದರೆ ಚೌಟ ರಾಣಿ ಅಬ್ಬಕ್ಕನ ಕುರಿತ ಅಪೂರ್ವ ವಿವರಗಳು ನಮಗೆ ದೊರೆಯುತ್ತಿರಲಿಲ್ಲ. ಡೆಲ್ಲಾವಾಲೆಯು ಕಂಡು ದಾಖಲಿಸಿದ ನೂರಾರು ಘಟನೆಗಳಲ್ಲಿ ಪೋರ್ಚುಗೀಸರಿಗೆ ಬುದ್ಧಿ ಕಲಿಸಿದ ಈ ದಿಟ್ಟ ರಾಣಿಯ ಚರಿತ್ರೆ ಎದ್ದು ನಿಲ್ಲುತ್ತದೆ.

iii. **ಬೆಳವಡಿ ಮಲ್ಲಮ್ಮ :** (೧೬೬೦-೧೭೧೭) ಸ್ವಾದಿ ಸಂಸ್ಥಾನದ ರಾಯಕುವರಿ ಮಲ್ಲಮ್ಮ, ಮೀರಿದ ಶೌರ್ಯದಿಂದ ಶಿವಾಜಿಯಂಥ ಮಹಾ ಸೇನಾಪತಿಯನ್ನು ಎದುರಿಸಿದ ಘಟನೆ ಹೆಚ್ಚಿನ ಚಾರಿತ್ರಿಕ ಮಹತ್ವದ್ದು. ಈಚೆಗೆ ಹೊರಬಿದ್ದ ಶಿವಾಜಿಯ ಸೊಸೆ ತಾರಾಬಾಯಿ ಬರೆಸಿದ ಛತ್ರಪತಿ ಶಿವಾಜಿಯ ಚರಿತ್ರೆಯಾದ 'ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ' ಎಂಬ ಮರಾಠೀ ಗ್ರಂಥದ ಕನ್ನಡ ಅನುವಾದ, ಈ ರಾಣಿಯ ಅನುಪಮ ಧೈರ್ಯದ ಮೇಲೆ ಹೆಚ್ಚಿನ ಬೆಳಕು ಬೀರುತ್ತದೆ. ಚಿಕ್ಕಂದಿನಿಂದಲೇ ಅಣ್ಣ ಸದಾಶಿವ ನಾಯಕನೊಡನೆ ಮಲ್ಲಮ್ಮನಿಗೆ ಉತ್ತಮ ಶಿಕ್ಷಣ ಲಭಿಸಿತ್ತು. ತಂದೆ ಮಧುಲಿಂಗ ನಾಯಕನು ಇತರ ಗಂಡು ಹೆಣ್ಣು ಹುಡುಗಿಯರ

ಜೊತೆಗೆ ಅರಮನೆಯ ಪಾಠಶಾಲೆಯಲ್ಲಿ ವಿದ್ಯಾಭ್ಯಾಸದ ಏರ್ಪಾಡು ಮಾಡಿದ್ದು ವಿಶೇಷ! ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಪರಿಣತಿ, ಸಾಹಿತ್ಯ ವ್ಯಾಕರಣ, ಇನ್ನಿತರ ಶಾಸ್ತ್ರಗಳ ಪರಿಚಯ ಜೊತೆಗೆ ಯುದ್ಧ ವಿದ್ಯೆಯಲ್ಲಿ ಉತ್ತಮ ತರಬೇತಿ ಮಲ್ಲಮ್ಮನಿಗೆ ದೊರೆಯಿತು. ಮುಂದೆ ಬೆಳವಡಿಯ ಸಂಸ್ಥಾನದ ದೇಸಾಯಿ, ಈಶ ಪ್ರಭುವಿನ ರಾಣಿಯಾಗಿ ಹೋದಾಗ, ಅಲ್ಲಿಯ ಮಹಿಳೆಯರಿಗೆ ಯುದ್ಧ ತರಬೇತಿ ನೀಡಿ, ಪಡೆಯೊಂದನ್ನು ನಿರ್ಮಿಸಿದಳು. ಈಕೆ ತನ್ನ ಬಾಲ್ಯದಲ್ಲಿ ಪಡೆದ ವಿಶೇಷ ಪರಿಣತಿಯ ಸದುಪಯೋಗವಾಗಲು ಸಹಾಯವಾಯಿತು.

ಕ್ರಿ.ಶ. ೧೬೭೭ರ ಸುಮಾರಿಗೆ ಛತ್ರಪತಿ ಶಿವಾಜಿಯು ೫೦,೦೦೦ ಸೈನಿಕರೊಂದಿಗೆ ಕರ್ನಾಟಕ, ಆಂಧ್ರ, ತಮಿಳುನಾಡಿನ ಉತ್ತರಭಾಗದಲ್ಲಿ ದಂಡೆತ್ತಿ ಬಂದನು. ಹಲವು ಯುದ್ಧಗಳಲ್ಲಿ ಗೆದ್ದು, ಇತರರಿಂದ ಕಪ್ಪಕಾಣಿಕೆ ಎತ್ತುತ್ತ ಪ್ರಸಿದ್ಧ ಕ್ಷೇತ್ರಗಳನ್ನು ಸಂದರ್ಶಿಸಿ ತಿರುಗಿ ಬರುವಾಗ ಬೆಳವಡಿ ಸಂಸ್ಥಾನಕ್ಕೆ ಸೇರಿದ ಯಾದವಾಡದಲ್ಲಿ ಬೀಡುಬಿಟ್ಟನು.

ಅದಾಗಲೇ ಮೊಗಲರನ್ನೆದುರಿಸಿದ ಈ ಮಹಾ ಪರಾಕ್ರಮಶಾಲಿಯ ಬಗ್ಗೆ ಗೌರವ ತಾಳಿದ್ದ ಈಶ ಪ್ರಭುವು, ಶಿವಾಜಿಗೆ ಯೋಗ್ಯ ರೀತಿಯ ಸತ್ಕಾರ ಒದಗಿಸಲು ಆತುರನಾಗಿದ್ದ. ಆದರೆ ಲೂಟಿಯನ್ನೇ ಮೈಗೂಡಿಸಿಕೊಂಡಿದ್ದ ಶಿವಾಜಿಯ ಸೈನಿಕರು, ಸುತ್ತಮುತ್ತಲು ಗ್ರಾಮಗಳ ಹಸು, ಎಮ್ಮೆಗಳನ್ನೆಲ್ಲ ಶಿಬಿರದವರ ಉಪಯೋಗಕ್ಕೆಂದು ಹೊಡೆದುಕೊಂಡು ಬಂದರು. ಹಳ್ಳಿಗರಿಗೆಲ್ಲ ವಿವಿಧ ಉಪಟಳಗಳನ್ನು ಕೊಡಲು ಪ್ರಾರಂಭಿಸಿದರು. ಇದರ ಕುರಿತಾಗಿ ಮಾತನಾಡಲು ಹೋದ ದೂತನನ್ನು ಮರಾಠರು ಅವಮಾನಿಸಿ ಕಳಿಸಿದರು. ಉಪಾಯವಿಲ್ಲದೇ ಈಶಪ್ರಭು ಯುದ್ಧಕ್ಕೆ ಅಣಿಯಾದ. ಆದರೆ ಮಲ್ಲಮ್ಮನು ಆತನನ್ನು ತಡೆದು, ಗೋವುಗಳನ್ನು ಬಿಡಿಸಿಕೊಳ್ಳಲು ಮೊದಲು ಯತ್ನಿಸುವುದು ಒಳ್ಳೆಯದೆಂದು ಸ್ತ್ರೀ ಸೈನಿಕರೊಂದಿಗೆ ಸ್ವತಃ ಸಜ್ಜಾಗಿ ಹೊರಟಳು. ಇವರನ್ನೆಲ್ಲ ಮರಾಠಾ ಸೈನಿಕರು ಅಪಹಾಸ್ಯ ಮಾಡಿದ್ದರಿಂದ ಸಹಿಸಲಾಗದೆ ಒಂದೇ ಗಂಟೆಯೊಳಗೆ ಹತ್ತು ಹನ್ನೆರಡು ಜನರನ್ನು ಕೊಂದದ್ದೇ ಅಲ್ಲದೇ ಸುಮಾರು ಇನ್ನೂರು ಜನರನ್ನು ಗಾಯಗೊಳಿಸಿದಳು. ಇದಕ್ಕೆ ಸಿದ್ಧತೆಯಿರದ ಗಾಬರಿಗೊಂಡ ಮರಾಠಾಸೇನಾಪತಿ ಆ ಕೂಡಲೇ ಜಾನುವಾರಗಳನ್ನು ಬಿಡುಗಡೆ ಮಾಡಿದ.

ಈ ವರ್ತಮಾನ ಕೇಳಿದ ಶಿವಾಜಿಗೆ ರೇಗಿತು. ಬೆಳವಡಿಯನ್ನು ಆಕ್ರಮಿಸಲು ಆಜ್ಞೆಯಿತ್ತ. ಆದರೆ ಈಶ ಪ್ರಭುವಿಗಾಗಲಿ, ಆತನ ಮನೆಯವರಿಗಾಗಲಿ ಪೆಟ್ಟಾಗದಂತೆ ನೋಡಿಕೊಳ್ಳುವ ಸೂಚನೆ ಕೊಡಲು ಮರೆಯಲಿಲ್ಲ. ಕೋಟೆಯಲ್ಲಿ ಧಾನ್ಯ-ನೀರು, ಮದ್ದುಗುಂಡುಗಳ ಸಂಗ್ರಹವೇನೊ ಇತ್ತು. ಆದರೆ ಕೋಟೆ ಬಾಗಿಲು ಮುಚ್ಚಿದರೆ ಹೊರಗಿನ ಸಹಾಯ, ಸಕಾಲಕ್ಕೆ ತಲುಪುವ ಸಾಧ್ಯತೆ ಇರಲಿಲ್ಲ. ಚಿಕ್ಕ ಪಡೆಯೊಂದಿಗೆ ಈಶಪ್ರಭು ಕಾದಾಟಕ್ಕಿಳಿದ. ಆದರೆ ಅವನಿಗೆ ಪ್ರಾಣಾಂತಿಕ ಏಟು ಬಿದ್ದಿತು. ಬೇರೆಡೆ ಯುದ್ಧಕ್ಕಿಳಿದ ಮಲ್ಲಮ್ಮ ಈ ಸುದ್ದಿ ತಿಳಿದೊಡನೆ ಗುಪ್ತಮಾರ್ಗದಿಂದ ಪತಿಯನ್ನು ಒಯ್ದು ಎಡೆ ತಲುಪಿದಳು. ಪತ್ನಿಯನ್ನು ಕಂಡೊಡನೆ ಈಶ ಪ್ರಭುವು, ಯುದ್ಧವನ್ನು ಮುಂದುವರಿಸಿ ಶಿವಾಜಿಯನ್ನು ಸೋಲಿಸುವಂತೆ ಹೇಳಿ ಕೊನೆಯುಸಿರು ಎಳೆದ.

ಪತಿಗೆ ಕೊಟ್ಟ ಮಾತು ನೆರವೇರಿಸಲು, ಮಲ್ಲಮ್ಮ ಒಂದು ವರ್ಷದ ಮಗನನ್ನು ಹೂಲಿಯ ಮಠದ ಸಿದ್ಧವೀರ ಯೋಗಿರಾಜರ ಸಂರಕ್ಷಣೆಯಲ್ಲಿ ಬಿಟ್ಟು ಯುದ್ಧ ಸನ್ನದ್ಧಳಾದಳು. ಇತ್ತ ಶಿವಾಜಿಯು ಕೋಟೆಯ ಮುತ್ತಿಗೆ ಮುಂದುವರಿಸಲು ಮಾರ್ಗದರ್ಶನವಿತ್ತು, ಅಂಬಾಭವಾನಿಯ ಭಕ್ತನಾಗಿದ್ದರಿಂದ ಸ್ಥಳೀಯವಾಗಿ ಜಗದಂಬೆಯೆಂದೇ ಪೂಜಿಸಲ್ಪಡುತ್ತಿದ್ದ ಕೊಂಚ ದೂರದ ಗ್ರಾಮದಲ್ಲಿದ್ದ ದ್ಯಾಮವ್ವನ ಗುಡಿಗೆ ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಲು ಹೊರಟ.

ಆದರೆ ಪೂಜೆ ಸಲ್ಲಿಸಿ ಪ್ರಸಾದಕ್ಕೆ ಕಾಯುತ್ತಿದ್ದಾಗ ಛತ್ರಪತಿಯ ಇಚ್ಛೆಗೆ ವಿರುದ್ಧವಾಗಿಯೇ ಹೂ ಬಿತ್ತಂತೆ! ಚಿಂತಾಕ್ರಾಂತವಾಗಿ ಹಿಂದಿರುಗುತ್ತಿದ್ದಾಗ, ಕೋಟೆ ಕಾಳಗಕ್ಕೆ ಬೇರೆ ವ್ಯವಸ್ಥೆ ಮಾಡಿದ, ಮಲ್ಲಮ್ಮ ತನ್ನ ಪಡೆಯೊಂದಿಗೆ ಬಂದು ಆತನ ಸಂಗಡಿಗರನ್ನು ಸುತ್ತುವರಿದಳು. ಚಕಿತನಾದ ಛತ್ರಪತಿ, ಖಡ್ಗ ಹಿರಿದು ತನ್ನತ್ತ ಆವೇಶದಿಂದ ನುಗ್ಗಿ ಬಂದ, ರಣಚಂಡಿಯ ರೂಪದ ಮಲ್ಲಮ್ಮನನ್ನು ಕಂಡು ಕ್ಷಣಾರ್ಧದದಲ್ಲಿ ಪರಿಸ್ಥಿತಿಯನ್ನು ಅರ್ಥೈಸಿಕೊಂಡ. ಅಂಬಾಭಾವಾನಿಯ ಸ್ತುತಿಯನ್ನು ಪ್ರಾರಂಭಿಸಿದ. ರಾಣಿಗೆ ಸಾಷ್ಟಾಂಗವೆರಗಿದ. "ತಾಯಿ, ನಿಮ್ಮ ಪತಿಯನ್ನು ದೈಹಿಕವಾಗಿ ನೋಯಿಸದೇ ಸೆರೆಹಿಡಿದು ತರಲು ನಿರ್ದೇಶನವಿತ್ತರೂ ದುಷ್ಟನೊಬ್ಬ ಅವರನ್ನು ಸಂಹರಿಸಿದ. ಆತನನ್ನು ಶಿಕ್ಷಿಸಿದ್ದೇನೆ. ನೀವು ನನ್ನ ಮಾತೃ ಸದೃಶರು! ಇಷ್ಟಾಗಿಯೂ ನನ್ನ ತಲೆ ಕಡಿದು ಹಾಕುವ ಮನಸ್ಸಿದ್ದರೆ ನಾನು ಸಿದ್ಧ" ಎಂದು ತಲೆಯೊಡ್ಡಿ ನಿಂತ ವೀರಾಧಿ ವೀರನನ್ನು ಮಲ್ಲಮ್ಮ ದಿಟ್ಟಿಸಿ ನೋಡಿದಳು. ತಪ್ಪು ಕಲ್ಪನೆಯಿಂದ ನಡೆದ ಘೋರ ಪ್ರಮಾದದ ಅರಿವು ಇಬ್ಬರು ಕೆಚ್ಚೆದೆಯ ಜೀವಿಗಳಿಗೆ ಹೆಚ್ಚಿನ ದುಃಖ ನೀಡಿತ್ತು.

ಈಗ ರುದ್ರರೂಪಿ ಮಲ್ಲಮ್ಮ ಶೋಕಾರ್ತೆಯಾದಳು. ಕಾಲಿಗೆರಗಿದ ಶಿವಾಜಿಯನ್ನು ಕ್ಷಮಿಸಿದಳು. ಕ್ಷಣದಲ್ಲಿ ತನ್ನ ಮುಂದಿನ ಹೊಣೆಯ ಅರಿವು ಅವಳಿಗಾಗಿತ್ತು. ಕೂಡಲೇ ಮುತ್ತಿಗೆಯನ್ನು ಹಿಂತೆಗೆದುಕೊಳ್ಳುವಂತೆ ಶಿವಾಜಿಗೆ ಕೇಳಿಕೊಂಡಳು. ಆ ಕ್ಷಣವೇ ಅವನು ಒಪ್ಪಿದ. ರಾಣಿ ಕೋಟೆಯತ್ತ ಸಾಗಿದಾಗ ಕಾಳಗ ನಿಂತಿರಲಿಲ್ಲ. ಕೂಡಲೇ ಅವಳನ್ನು ಮರಾಠಾ ಸೈನಿಕರು ಸುತ್ತುವರಿದಿದ್ದರಿಂದ ಮಲ್ಲಮ್ಮ ಖಡ್ಗವನ್ನು ಹಿರಿಯಬೇಕಾಯಿತು. ಅಷ್ಟರಲ್ಲಿ ಶಾಂತಿ ನಿಶಾನೆಗಳು ಕಂಡು, ಯುದ್ಧಶಾಂತಿಯ ಘೋಷಣೆ ಕೇಳಬಂದಿತು.

ಗುರು ಸಮ್ಮುಖದಲ್ಲಿ ಸಂಧಾನದ ಮಾತು ನಡೆಯುತ್ತಿದ್ದಾಗ ಮಲ್ಲಮ್ಮನ ಅಣ್ಣ, ಸ್ವಾದಿಯ ಸದಾಶಿವ ನಾಯಕನೂ ಬಂದು ತಲುಪಿದ. ರಾಣಿಯ ಶೌರ್ಯ, ಸ್ಥೈರ್ಯಗಳನ್ನು ಕಣ್ಣಾರೆ ಕಂಡ ಛತ್ರಪತಿ, ಸಂಸ್ಥಾನದ ಆಡಳಿತವನ್ನು ಪುನಃ ಅವಳಿಗೇ ಒಪ್ಪಿಸಿ ತನ್ನ ರಾಜ್ಯಕ್ಕೆ ಮರಳಿದ.

iv. ಕೆಳದಿಯ ಚೆನ್ನಮ್ಮಾಜಿ : (ಕ್ರಿ. ಶ. ೧೬೭೧-೧೬೯೬) ಇಕ್ಕೇರಿ, ಬಿದನೂರು, ಕೆಳದಿ ಎಂಬ ಮೂರು ಹೆಸರುಗಳಿಂದ ಪರಿಚಿತರಾಗಿರುವ ನಾಯಕರು ಕ್ರಿ.ಶ. ೧೬ನೇ ಶತಮಾನದ

ಆರಂಭದಿಂದ ೧೭೬೩ರ ವರೆಗೆ ರಾಜ್ಯವಾಳಿದ ಪ್ರಸಿದ್ಧರು. ಉಚ್ಛ್ರಾಯ ಕಾಲದಲ್ಲಿ ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನಗಳ ಕೆಲ ಪ್ರದೇಶ, ಪಶ್ಚಿಮ ಕರಾವಳಿಯ ಉತ್ತರದಲ್ಲಿ ಗೋವಾದಿಂದ ದಕ್ಷಿಣದ ಕೇರಳದ ಚಂದ್ರಗಿರಿಯ ವರೆಗಿನ ಪ್ರದೇಶವು ಇವರ ಆಡಳಿತಕ್ಕೆ ಸೇರಿತ್ತು. ಇವರ ಮನೆತನದ ಶಿವಪ್ಪ ನಾಯಕ ಪರಾಕ್ರಮ, ಆಡಳಿತ ಎರಡರಲ್ಲೂ ಹೆಸರು ಮಾಡಿದ್ದ. (೧೬೪೫-೧೬೬೦). ಇವನ ಮೊಮ್ಮಗ ಸೋಮಶೇಖರನಾಯಕನ ಹೆಂಡತಿಯೇ ಚೆನ್ನಮ್ಮ. ಸೋಮಶೇಖರ ವಿಲಾಸಿಯೂ, ಕ್ರೂರನೂ ಆಗಿದ್ದ. ಭ್ರಮಿಷ್ಠನೂ ಆದನಂತೆ. ೧೬೭೧ರಲ್ಲಿ ಆತನ ಕೊಲೆಯಾಯಿತು. ಮಕ್ಕಳು ಇಲ್ಲದ ಆತನ ರಾಣಿಯೇ ರಾಜ್ಯಸೂತ್ರಗಳನ್ನು ಕೈಗೆತ್ತಿಕೊಂಡಳು.

ಇದೇ ಸಮಯವೆಂದು ಪಟ್ಟವೇರಲು ಹವಣಿಸುತ್ತಿದ್ದವನನ್ನು ರಾಣಿ ಮೊದಲು ಹತ್ತಿಕ್ಕಿದಳು. ಸ್ವತಂತ್ರರಾಗಲು ಯತ್ನಿಸುತ್ತಿದ್ದ, ಬಂಡೆದ್ದ ಸೇನಾನಿಗಳನ್ನು ಸದೆಬಡಿದಳು. ದಂಡೆತ್ತಿ ಬಂದ ಸ್ವಾದಿಯ ಅರಸನನ್ನೂ, ಮೈಸೂರಿನ ದಂಡನಾಯಕನನ್ನು ಎದುರುಗೊಂಡು ಸೋಲಿಸಿದಳು. ದತ್ತುಪುತ್ರ ಬಸವಪ್ಪನಿಗೆ ಯೋಗ್ಯ ಶಿಕ್ಷಣ. ಸೈನಿಕ ತರಬೇತಿಗಳ ವ್ಯವಸ್ಥೆ ಮಾಡಿದಳು. ಆತನು ವಯಸ್ಸಿಗೆ ಬರುವತನಕ ತಾನೇ ಸಮರ್ಥರೀತಿಯಲ್ಲಿ ಆಳಿದಳು.

ಆದರೆ ಪ್ರಪಂಚದ ಬಲಾಢ್ಯ ಚಕ್ರವರ್ತಿಗಳಲ್ಲಿ ಒಬ್ಬನೆಂದು ಪ್ರಸಿದ್ಧನಾದ, ನಿರ್ದಯತೆಗೆ ಹೆಸರಾದ, ಇಡೀ ಭಾರತದ ಚಕ್ರಾಧಿಪತ್ಯ ಹೊಂದಲು ಹವಣಿಸುತ್ತಲೇ ಇದ್ದ ಮೊಗಲ್ ಸಮ್ರಾಟ್ ಔರಂಗಜೇಬನನ್ನು ಚೆನ್ನಮ್ಮಾಜಿ ಎದುರು ಹಾಕಿಕೊಳ್ಳುವ ಸಂದರ್ಭ ಒದಗಿತ್ತು. ಮರಾಠಾ ದೊರೆ ಸಂಭಾಜಿಯನ್ನು ಮೋಸ, ಕ್ರೌರ್ಯಗಳಿಂದ ಔರಂಗಜೇಬನು ಕೊಲ್ಲಿಸಿದ ಬಳಿಕ ರಾಜಾರಾಮನನ್ನೂ ಮುಗಿಸಿಬಿಡುವ ಯೋಚನೆಯಲ್ಲಿದ್ದ. ೧೬೮೯ರಲ್ಲಿ ಮೊಗಲರ ಸೈನ್ಯ. ಮರಾಠರ ರಾಜಧಾನಿ ರಾಯಗಡಕ್ಕೆ ಮುತ್ತಿಗೆ ಹಾಕಿತು. ಅರಸು ರಾಜಾರಾಮನನ್ನು ಉಳಿಸಿಕೊಳ್ಳುವದು ಮರಾಠಾ ಮುಖಂಡರಿಗೆ ಅತಿಮುಖ್ಯವಾಗಿತ್ತು. ಹೀಗಾಗಿ ದಕ್ಷಿಣದಲ್ಲಿ ಮರಾಠರ ಅಧಿಪತ್ಯವಿದ್ದ ಜಿಂಜಿಗೆ, ಸಣ್ಣ ರಕ್ಷಣಾ ಪಡೆಯೊಂದಿಗೆ ರಾಜಾರಾಮನು ಹೊರಟ. ಆತನ ಸೋದರ ತಂಜಾವೂರಿನ ಅರಸು ಶಹಾಜಿಯ ಬೆಂಬಲದ ಭರವಸೆಯೂ ಆತನಿಗಿತ್ತು. ಮೊಗಲ ಸೈನ್ಯ ಆತನ ಬೆನ್ನಟ್ಟಿತು.

ಅರಸನಾಗಿ ಆಶ್ರಯರಹಿತನಾಗಿದ್ದ ರಾಜಾರಾಮನು ತಪ್ಪಿಸಿಕೊಂಡು, ಹತ್ತು ಹಲವು ಊರು-ನದಿಗಳನ್ನು ದಾಟಿ, ಕೆಳದಿ ಚೆನ್ನಮ್ಮಾಜಿಯ ನಾಡಿಗೆ ಬಂದಿಳಿದ. ಹೊನ್ನಾಳಿಯಿಂದ ರಾಣಿಗೆ ಅಭಯದ ಹಾಗೂ ಆಶ್ರಯದ ಯಾಚನೆ ಕಳಿಸಿದ.

ರಾಣಿಗೆ ಧರ್ಮಸಂಕಟ. ಮರಾಠರೊಡನೆ ಒಳ್ಳೆಯ ಸಂಬಂಧವನ್ನು ಕೆಳದಿ ಹೊಂದಿತ್ತು. ಆದರೆ ಬಲಾಢ್ಯ ಚಕ್ರವರ್ತಿಯ ದಂಡು, ಮರಾಠ ಅರಸನನ್ನು ಬೆನ್ನಟ್ಟಿದೆ. ರಾಜಾರಾಮನಿಗೆ ಆಶ್ರಯವಿತ್ತ ತನ್ನನ್ನು, ತನ್ನ ರಾಜ್ಯವನ್ನು, ಮುಗಿಸಿ ಬಿಡಲು ಔರಂಗಜೇಬನಿಗೆ ಏನೂ ಕಷ್ಟವಲ್ಲವೆಂಬ ಕಠೋರ ಸತ್ಯದ ಅರಿವು ರಾಣಿಗಿತ್ತು. ಆದರೂ ತನ್ನ ಕೆಚ್ಚೆದೆಯನ್ನು ಮೆರೆದಳು.

ರಾಜಾರಾಮನಿಗೆ ರಾಜಾತಿಥ್ಯ ಕೊಡಮಾಡಿದಳು. ಯೋಗ್ಯ ಬೆಂಬಲಿಗರೊಂದಿಗೆ ಸುರಕ್ಷಿತವಾಗಿ ಆತನು ತನ್ನ ದಕ್ಷಿಣದ ನೆಲೆಯನ್ನು ಸೇರಿಕೊಳ್ಳುವಂತೆ ನೋಡಿಕೊಂಡಳು.

ನಿರೀಕ್ಷಿಸಿದಂತೆ ಮೊಗಲರ ದಂಡು ಕೆಳದಿ ರಾಜ್ಯವನ್ನು ಸುತ್ತುವರಿಯಿತು. ರಾಣಿಯು ಬಿದನೂರಿನಿಂದ ಕವಲೆದುರ್ಗಕ್ಕೆ ರಾಜಧಾನಿಯನ್ನು ಸ್ಥಳಾಂತರಿಸಿದಳು. ಕೆಳದಿ ಸೈನ್ಯ, ಮೊಗಲ ಸೈನಿಕರೊಡನೆ ಪರಾಕ್ರಮದಿಂದ ಕಾದಿತು. ಕೇವಲ ಬಯಲು ಸೀಮೆಯ ಕಾದಾಟಗಳನ್ನು ಕಾದಿ ಜಯಿಸಿದ್ದ ಮೊಗಲ ಸೈನ್ಯಕ್ಕೆ, ಕಾಡು, ಬೆಟ್ಟ, ಗಹನವಾದ ಅರಣ್ಯ ಪ್ರದೇಶದಲ್ಲಿ ಹೋರಾಟ ಅತ್ಯಂತ ಕಠಿಣವಾಯಿತು. ಕೆಳದಿ ಸೈನ್ಯ ಚಿಕ್ಕದಿದ್ದರೂ ಪರಾಕ್ರಮದಿಂದ ಹೋರಾಡಿತು. ಯಶಸ್ವಿ ಆಯಿತು. ಆದರೆ ಭಾರತದ ಚಕ್ರವರ್ತಿಯನ್ನು ಎದುರು ಹಾಕಿಕೊಂಡು ನೆರೆಹೊರೆಯ ಅರಸರಾರೂ ಸಹಾಯಕ್ಕೆ ಬಾರದಿದ್ದಾಗ ಯುದ್ಧದಲ್ಲಿ ಇತರರಿಂದ ಸಹಾಯವನ್ನು ನಿರೀಕ್ಷಿಸುವುದು ಅಸಾಧ್ಯವಾಗಿತ್ತು. ಅತಿಥಿ ಸತ್ಕಾರದ ಬೆಲೆಯನ್ನು ರಾಣಿ ತೆರಬೇಕಾಗಿ ಬಂದಿತು. ಇಂಥಲ್ಲಿಯೂ ರಾಣಿ ತನ್ನ ವಿವೇಕ -ವಿವೇಚನೆಗಳನ್ನು ತೋರ್ಪಡಿಸಿದಳು. ತನ್ನ ಮೂರು ಕೋಟೆಗಳನ್ನು ೧೮ ಲಕ್ಷ ವರಹಗಳ ಪೊಗದಿಯನ್ನು ಮೊಗಲರ ದಂಡನಾಯಕನಿಗೆ ಕೊಡುವ ಒಪ್ಪಂದ ಮಾಡಿಕೊಂಡಳು. ಮುಂದೆ ಆಗಬಹುದಾದ ಅಪಾರ ಪ್ರಾಣ ಹಾನಿಯನ್ನು ತಪ್ಪಿಸಿದಳು.

ಚೆನ್ನಮ್ಮಾಜಿ ಮೊಗಲರನ್ನು ಎದುರಿಸಿ ಸೋಲಿಸಿದಳೆಂದು ಹತ್ತಾರು ಜಾನಪದಗೀತಗಳು, ಕೆಳದಿ ನೃಪವಿಜಯವೆಂಬ ಕಾವ್ಯವುಸಾರುತ್ತವೆ. ಚಿಕ್ಕ ವಿಜಯವೊಂದರಿಂದ, ರಾಣಿ ನೆಮ್ಮದಿ ಹೊಂದಿರಲಿಲ್ಲ. ಔರಂಗಜೇಬನು, ತನ್ನ ಚಿಕ್ಕ ರಾಜ್ಯವನ್ನು ಧ್ವಂಸ ಮಾಡದೇ ಬಿಡುವುದಿಲ್ಲವೆಂಬುದನ್ನು ಅರಿತಿದ್ದಳು. ತನ್ನ ನಾಡು- ತನ್ನ ಜನರನ್ನು ಮುಂದಾಲೋಚನೆಯಿಂದ ರಕ್ಷಿಸಿಕೊಂಡಳು.*

ಚೆನ್ನಮ್ಮಾಜಿ ದಕ್ಷ ಆಡಳಿತಗಾತಿಯೂ ಆಗಿದ್ದಳು. ಸ್ವತಃ ವೀರಶೈವ ಮತಾವಲಂಬಿಯಾಗಿದ್ದರೂ ಅನೇಕ ಅಗ್ರಹಾರ - ದೇವಸ್ಥಾನಗಳಿಗೆ ದಾನ ನೀಡಿದ್ದಾಳೆ. ಚೆನ್ನಗಿರಿ ಕೋಟೆ, ಚೆನ್ನಮಾಂಬಪುರಗಳನ್ನು ನಿರ್ಮಿಸಿದಳು. ತನ್ನ ರಾಜ್ಯದಲ್ಲಿ ಚರ್ಚುಗಳನ್ನು ನಿರ್ಮಿಸಲು ಪೋರ್ಚುಗೀಸರಿಗೆ ಅನುಮತಿ ಇತ್ತಳು.

---

* ರಾಣಿ ಚೆನ್ನಮ್ಮಾಜಿಯು ತೋರಿದ ಕೆಚ್ಚೆದೆ ಸ್ಥೈರ್ಯಗಳು ಆಕೆಯ ಸ್ಥಳದಲ್ಲಿದ್ದಿರಬಹುದಾದ ಯಾವುದೇ ರಾಜನಿಗೆ ಸಾಧ್ಯವಾಗಬಹುದಿತ್ತೆ? ಅವನು ಓಡಿಬಂದ ಅರಸನಿಗೆ ಆಶ್ರಯವಿತ್ತು ಭಾರತದ ಬಲಾಢ್ಯ ಚಕ್ರವರ್ತಿಯನ್ನು ಎದುರು ಹಾಕಿಕೊಳ್ಳುತ್ತಿದ್ದನೇ? "ಇಲ್ಲ"ವೆಂದೇ ಹೇಳಬೇಕಾಗುತ್ತದೆ!


೩. ಜನಸೇವೆಯಲ್ಲಿ

ದಾನಿಗಳು : ಸಮಾಜದ ಎಲ್ಲ ಸ್ತರಗಳ ಸ್ತ್ರೀಯರು ಎಲ್ಲ ಮತಾವಲಂಬಿಗಳು, ಬಗೆಬಗೆಯ ದಾನಗಳಲ್ಲಿ ನಿರತರಾಗಿದ್ದರೆಂದು ಅಸಂಖ್ಯ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕದ ಮುಕ್ಕಾಲು ಮೂರು ವೀಸ ಪಾಲು ಚರಿತ್ರೆಯ ಶಾಸನಗಳೆಲ್ಲ ದಾನ ಶಾಸನಗಳೇ! ಆಹಾರ, ಆಶ್ರಯ, ಔಷಧ, ವಿದ್ಯೆಗಳನ್ನು ಕೊಡಮಾಡಲು ಅಂದಿನವರು ನೀಡಿದ ಭೂಮಿ, ಹೊಲ, ಉದ್ಯಾನ, ತೋಪು, ಅರವಟ್ಟಿಗೆ, ಬಾವಿ, ಹಣಗಳ ವಿವರಗಳು ಕಲ್ಲಿನಲ್ಲಿ ಕಾಯ್ದಿರಿಸಲ್ಪಟ್ಟಿವೆ. ಮಹಿಳೆಯರಲ್ಲಿ ಸ್ವತಃ ದಾನಿಗಳು ಕೆಲವರಾದರೆ ತಮ್ಮ ಪತಿ ಮತ್ತು ಇತರ ಸಂಬಂಧಿಕರನ್ನು ದಾನಕ್ಕೆ ಪ್ರೋತ್ಸಾಹಿಸುವವರು ಅನೇಕರು ಇರುತ್ತಿದ್ದರು. ಪುಣ್ಯ ಸಂಪಾದನೆ, ಈ ದಾನದ ಮುಖ್ಯ ಉದ್ದೇಶವಾದರೂ ಸಮಾಜದ ಋಣವನ್ನು ಒಂದಿಲ್ಲೊಂದು ವಿಧದಲ್ಲಿ ತೀರಿಸುವುದು ಜನಮನದಲ್ಲಿ ಬಲವಾಗಿ ಬೇರೂರಿದ ವಿಚಾರವಾಗಿತ್ತು. ತಮಗೆ ಸಂಪತ್ತು, ಐಸಿರಿಗಳು ಬರಲು ಪೂರ್ವಾರ್ಜಿತ ಪುಣ್ಯವೇ ಕಾರಣವೆಂದೂ, ಕೃತಜ್ಞತಾಪೂರ್ವಕ ಅದನ್ನು ನೆನೆಪಿಸಿಕೊಳ್ಳುವುದು ಈ ಜನ್ಮದ ಕರ್ತವ್ಯವೆಂದೂ ನಂಬಿದ ಜನ ಇತರರಿಗೆ ಕೈಲಾದ ಸಹಾಯ ಮಾಡುತ್ತಿದ್ದರು.

'ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು' ಎಂದು ಉದ್ಗರಿಸಿದ ಸರ್ವಜ್ಞ ಅಂದಿನ ನಾಡನಂಬಿಕೆಯನ್ನೇ ಪುನರುಚ್ಚರಿಸಿದ. ದಾನದ ವಿಷಯದಲ್ಲೂ ಉಳ್ಳವರು ಪೈಪೋಟಿ ನಡೆಸುತ್ತಿದ್ದರು. ಅಕ್ಕಾದೇವಿ, ವಿದ್ಯಾರ್ಥಿಗಳು ನೆಮ್ಮದಿಯಿಂದ ಓದಿಕೊಂಡಿರಲು ಐದುನೂರು ಮತ್ತರು ಭೂಮಿ, ಐವತ್ತು ಮನೆಗಳು ಮತ್ತು ಎರಡು ತೋಟಗಳನ್ನು ಪೆರೂರಿನ ಅಗ್ರಹಾರಕ್ಕೆ ಕೊಡಮಾಡಿದ್ದಳು. ಚಿಕಲಾದೇವಿ ತನ್ನ ಪತಿಯ ಮನ ಒಲಿಸಿ ಒಂದು ಕೆರೆ, ಒಂದು ಛತ್ರವನ್ನು ಕಟ್ಟಿಸಿ ಸ್ವತಃ ಹಲವಾರು ದಾನಗಳನ್ನು ಕೈಕೊಂಡಿದ್ದಳು. ಚಾಮುಂಡನೆಂಬ ಧನಿಕನ ಪತ್ನಿ. ದೇವಿಯಕ್ಕ, ನಿರ್ಗತಿಕರಿಗೆ, ಹೆದರಿಕೊಂಡವರಿಗೆ ಆಶ್ರಯವಿತ್ತು, ರೋಗಿಗಳಿಗೆ ಆಹಾರ, ಪಥ್ಯ, ಔಷಧಗಳ ವ್ಯವಸ್ಥೆ ಮಾಡಿದ್ದಲ್ಲದೇ ಓದಲು ಇಚ್ಛಿಸುವವರಿಗೆಲ್ಲ ಆಗಮಗಳ, (ಶಾಸ್ತ್ರಗಳ) ಹಸ್ತಪ್ರತಿಗಳು ದೊರೆಯುವ ಅನುಕೂಲ ಮಾಡಿಕೊಟ್ಟಿದ್ದಳು. ಹೊಯ್ಸಳ ಎರಡನೇ ನರಸಿಂಹನ ಸೋದರಿ, ಸೋವಲದೇವಿಯು ಸೋಮನಾಥಪುರವನ್ನು ಕಟ್ಟಿಸಿ ಅದನ್ನೊಂದು ವಿದ್ಯಾಕೇಂದ್ರವನ್ನಾಗಿಸಿ ಹಲವಾರು ಆಶ್ರಯ ಸ್ಥಾನಗಳನ್ನು ಕಲ್ಪಿಸಿಕೊಟ್ಟಳು. ಆ ಯುಗದ ಪ್ರಸಿದ್ಧ ವಿಶ್ವವಿದ್ಯಾಲಯವಾಗಿದ್ದ ವಲ್ಲಭಿಯನ್ನು ಈ ಕೇಂದ್ರ ಹೋಲಬೇಕು! ಎಂಬುದು ಅವಳ ಕನಸಾಗಿತ್ತು.

ಆದಿ ಗಾವುಂಡನೆಂಬ ಮಹಾದಾನಿಯ ಪತ್ನಿ, ಆದರ್ಶ ಪತ್ನಿಯಾಗಿರುವುದರ ಜೊತೆಗೆ ಮಕ್ಕಳಿಗೆ ಹಾಲು ಮತ್ತು ಹಸಿದವರಿಗೆ ಅನ್ನದ ವ್ಯವಸ್ಥೆ ಮಾಡಿದ್ದಳು. ಎಷ್ಟೋ ಬಾರಿ ಊಟಮಾಡಿದವರ ಸಂಖ್ಯೆ ಸಾವಿರವನ್ನು ಮೀರುತ್ತಿತ್ತಂತೆ ! ಕ್ಷಾಮ ಕಾಲವಲ್ಲಿ ಪತಿಯ ಸಹಾಯದಿಂದ ನೀರಿನ ಅನುಕೂಲ ಮಾಡಿಸಿ, ಕೆರೆಗಳನ್ನು ಕಟ್ಟಿಸಿ, ತೋಪುಗಳನ್ನು ನೆಡಿಸಿದಳು.

ದೇವರಿಗೆ ತೋಟಗಳನ್ನು ಅಥವಾ ಮರಗಳನ್ನು ಬಿಡುವುದು 'ಬನದ ಸೇವೆ' ಅನಿಸಿಕೊಳ್ಳುತ್ತಿತ್ತು. ಹೀಗೆ ದೇವಾಲಯಕ್ಕೆ ಒಂದು ಮರದಿಂದ ಒಂದು ತೋಟದವರೆಗೆ ಕೊಟ್ಟವರಿದ್ದರು. ಪರಿಸರ ಪ್ರೇಮವನ್ನು ಮೈಗೂಡಿಸಿಕೊಂಡ ಅಂದಿನವರಿಗೆ ವೃಕ್ಷರಾಜಿಯೂ ದೇವಾಂಶ ಸಂಭೂತವೇ !(ಚಿತ್ರ ನಂ.3) ಗಿಡಮರಗಳನ್ನು ನೆಡುವದನ್ನೇ ವ್ರತವಾಗಿ (ಕ್ಷಿತಿರುಹನೋಂಪಿ) ಸ್ವೀಕರಿಸಿ ಅಸಂಖ್ಯರಿಗೆ ಒಳಿತು ಮಾಡಿದ ಮಹಿಳೆಯೊಬ್ಬಳ ಬಗ್ಗೆ ೧೨ನೇ ಶತಕದ ಶಾಸನವೊಂದು ಹೇಳುತ್ತದೆ. ಯಾದವ ಭಿಲ್ಲಮನ ಅಧಿಕಾರಿ ಬೊಪ್ಪಣನಾಯಕನ ಹೆಂಡತಿ ಸಿರಿಯವ್ವೆ, ಕ್ರಿ. ಶ. ೧೧೯೦ರಲ್ಲಿ ಹಿರೇಬೇವಿನೂರಿನಲ್ಲಿ ಕ್ಷಿತಿರುಹ ನೋಂಪಿಯನ್ನು ಕೈಕೊಂಡಳು. ಕ್ಷಿತಿರುಹವೆಂದರೆ ಮರ. ನೋಂಪಿ ಅಥವಾ ವ್ರತದಂತೆ ಆಕೆ ಮಾವು, ನೇರಳೆ, ಹಲಸು, ಹುಣಿಸೆ, ಕಿತ್ತಳೆ, ಖರ್ಜೂರ, ತೆಂಗು ಮೊದಲಾದ ಗಿಡಮರಗಳನ್ನು ನೆಡುತ್ತ ಬಂದು ನಂದನವನ್ನು ಹೋಲುವ ತೋಟವೊಂದನ್ನು ಮಾಡಿಸಿದಳು. ಅದು ಚೆನ್ನಾಗಿ ರೂಪಿತವಾದಾಗ, ಅದನ್ನು ಧರ್ಮಸಂತೆಯ ತಾಣವನ್ನಾಗಿಸಿ ದಾನವಿತ್ತಳು. ಮಾರಾಟಕರ, ಸುಂಕಗಳ ಬಾಧೆ, ಧರ್ಮಸಂತೆಗೆ ಇರಲಿಲ್ಲ. ಕಾಳಿನಿಂದ ಮುತ್ತಿನವರೆಗೆ, ಹಣ್ಣಿನಿಂದ ಆನೆಯವರೆಗೆ, ಎಲ್ಲ ವಸ್ತು-ಪ್ರಾಣಿಗಳ ಮಾರಾಟ ಅಲ್ಲಿ ನಡೆಯುತ್ತಿತ್ತು. ಗಿಡಮರಗಳ ಸಂರಕ್ಷಣೆ, ತೋಟದ ಅಂದವನ್ನು ಕಾಪಾಡುವದು ಸಂತೆಗೆ ಬಂದವರ ಹೊಣೆಯಾದಂತೆ, ಗಿಡಮರಗಳ ಆದಾಯ ಮತ್ತು ಆರೈಕೆ ದೇವಾಲಯದ ಆಡಳಿತಗಾರರ ಜವಾಬ್ದಾರಿಯಾಗಿತ್ತು. ದಾನ ನಿರ್ವಹಣೆಯಲ್ಲಿ ಸಾರ್ವಜನಿಕರ ಹೊಣೆಯನ್ನು ಶಾಸನ ಒತ್ತಿ ಹೇಳಿದಾಗ ಇತರರು ಮಾಡಿದ ದಾನವನ್ನು ತಾವೇ ಸೂರೆಗೊಳ್ಳುವ ಇಂದಿನವರ ಹೊಣೆಗೇಡಿತನ ಹಾಗೂ ಸ್ವಾರ್ಥ ಪ್ರವೃತ್ತಿಗಳನ್ನು ನೆನೆದು ನಿಟ್ಟುಸುರು ಬಿಡುವಂತಾಗುತ್ತದೆ!



ಚಿತ್ರ - 3. ವೃಕ್ಷದಲ್ಲಿ ದೇವಾಂಶ ಕಂಡವರು

ಕಡುಬಿಸಿಲಿನ ಬೇಗೆಯಿಂದ ಬೆಂದವರಿಗೆ ಇಂಥ ತೋಟ ಬಾವಿಗಳ ತಂಪಾದ ನೀರು, ನೆಳಲು, ಹಣ್ಣುಗಳನ್ನು, ಪೂಜೆಗೆ ಹೂಗಳನ್ನು ಕೊಡಮಾಡುತ್ತಿದ್ದುದರಿಂದ ತೋಟವನ್ನು ಕಾಯ್ದುಕೊಂಡು ಹೋಗುವುದು ತಮ್ಮ ಜವಾಬ್ದಾರಿಯೆಂದು ಹೆಚ್ಚಿನವರು ನಂಬುತ್ತಿದ್ದರು. ಕಾಡುಗಳನ್ನು ದೋಚುವದು, ನಿಷ್ಕರುಣೆಯಿಂದ ಇತರರು ನಟ್ಟು ಬೆಳೆಸಿದ ಹೂ ಹಣ್ಣುಗಳನ್ನು ಅವರ ಕಾಂಪೌಂಡಿನಿಂದಲೇ ಕದಿಯುವುದು, ರಸ್ತೆಯ ಅಕ್ಕಪಕ್ಕದ ಗಿಡಮರಗಳನ್ನು ಕೆಲ ಸಂಸ್ಥೆಯವರು ನೆಟ್ಟವುಗಳನ್ನು, ತುಂಡರಿಸಿ ಹಗಲು ಹಾಡೇ ಒಯ್ಯುವದು ಇಂದು ದಿನ ನಿತ್ಯದ ನೋಟಗಳಾಗಿವೆ. ವೃಕ್ಷಭಂಜಕರಾದ ಈ ನವಜನಾಂಗ, ಸಿರಿಯವ್ವೆ ಬಾಳಿ ಬದುಕಿದ ನಾಡಿಗೆ ಸೇರಿದ್ದೇ! ಎಂದು ನೆನೆಸಿಕೊಂಡಾಗ ಕಳವಳವಾಗುತ್ತದೆ.

ಅತ್ತಿಮಬ್ಬೆಯ ಕೊಡುಗೆ :

ದಾನ ಚಿಂತಾಮಣಿ ಅತ್ತಿಮಬ್ಬೆಯನ್ನು ನೆನೆಸಿಕೊಳ್ಳದೇ ಮಧ್ಯಯುಗದ ಮಹಿಳೆಯರ ಕುರಿತಾದ ಯಾವ ಕೃತಿಯೂ ಪೂರ್ಣವಾಗದು. ಆಕೆಯ ಸಹಸ್ರವರ್ಧಂತಿಯನ್ನು ಆಚರಿಸಿ, ಅವಳ ಹೆಸರಿಗೆ ಪ್ರಶಸ್ತಿಯನ್ನೂ ನಿರ್ಮಿಸಿ ನಾಡು ಕೃತಜ್ಞತೆಯನ್ನು ತೋರ್ಪಡಿಸಿದ್ದು ಉಚಿತವೇ ಆಗಿದೆ. ಅತ್ತಿಮಬ್ಬೆಯ ಕುರಿತಾಗಿ ಸಾಕಷ್ಟು ಲೇಖನ, ಪುಸ್ತಕಗಳು ಬಂದಿರುವಂತೆ ಆಕೆಯ ಹಿರಿಮೆಯ ಕುರಿತು ಗೋಷ್ಠಿ ಪರಿಚರ್ಚೆಗಳು ಏರ್ಪಟ್ಟಿವೆ. ಈಗ ಚಿರಪರಿಚಿತೆಯಾಗಿರುವ ಈ ಮಹಾದಾನಿಯನ್ನು ಸಂದರ್ಭೋಚಿತವಾಗಿ ನೆನಪಿಸಿಕೊಳ್ಳಲೇಬೇಕಾಗಿದೆ!

ಅತ್ತಿಮಬ್ಬೆ-ಗುಂಡಮಬ್ಬೆ ಸೋದರಿಯರು ಒಬ್ಬನನ್ನೇ ಮದುವೆಯಾಗಿದ್ದರು. ಪತಿ ನಾಗದೇವನು ಎಳೆತನದಲ್ಲೇ ಕಾಲವಶನಾದಾಗ ಚಿಕ್ಕಮಗುವಿನಿಂದಾಗಿ ಅತ್ತಿಮಬ್ಬೆ ಸತಿಹೋಗಲಿಲ್ಲ. ಬದಲಾಗಿ ಗುಂಡಮಬ್ಬೆ ಸಹಗಮನ ಮಾಡಿದಳು. ಮುಂದೆ ಅತ್ತಿಮಬ್ಬೆ ತನ್ನ ಇಡೀ ಬಾಳನ್ನು ದಾನ ಮತ್ತು ಧರ್ಮಪ್ರಸಾರಕ್ಕೆ ಮೀಸಲಿಟ್ಟಳು. ಅವಳಿಂದಾಗಿಯೇ ಆಗ ಉದಯೋನ್ಮುಖ ಕವಿಯಾಗಿದ್ದ ರನ್ನನ ಸೃಜನಶೀಲತೆಗೆ ಪ್ರೋತ್ಸಾಹ ದೊರೆತು ಅವನು 'ಅಜಿತ ತೀರ್ಥಂಕರ' ಪುರಾಣ ಬರೆಯುವಂತಾಯಿತು. ಪೊನ್ನನ 'ಶಾಂತಿ ಪುರಾಣ'ದ ಸಹಸ್ರ ಹಸ್ತ ಪ್ರತಿಗಳನ್ನು ಮಾಡಿಸಿ, ಹಂಚಿ, ಸಾಹಿತ್ಯ ಪ್ರಚಾರಕ್ಕೆ ಕಾರಣಳಾದಳು.

ಹಲವಾರು ಪವಾಡಗಳು ಅತ್ತಿಮಬ್ಬೆಯ ಹೆಸರಿನಲ್ಲಿ ಕಂಡುಬರುತ್ತವೆ. ಕಳೆದು ಹೋದ ಜೈನವಿಗ್ರಹಗಳು ದೊರೆತದ್ದು, ಉಕ್ಕಿ ಹರಿಯುತ್ತಿದ್ದ ಗೋದಾವರಿ ನದಿಯ ಪ್ರವಾಹವನ್ನು ನಿಲ್ಲಿಸಿದ್ದು, ಮದ್ದಾನೆಯನ್ನು ಶಾಂತಗೊಳಿಸಿದ್ದು, ಕಾಳ್ಗಿಚ್ಚನ್ನು ಜಿನೋದಕ ಸಿಂಪಡಿಸಿ ಆರಿಸಿದ್ದು ಇತ್ಯಾದಿ. ಬಹುಶಃ ಎಲ್ಲರ ಗೌರವಾದರಗಳಿಗೆ ಪಾತ್ರಳಾದಾಕೆ, ಸಾತ್ವಿಕ ಜೀವನ ತಪಸ್ಸುಗಳಿಂದಾಗಿ ದೈವೀಶಕ್ತಿ ಪಡೆದು ಸಂಕಟ ಸಮಯದಲ್ಲಿ ಹೆಚ್ಚಿನ ಸ್ಥೈರ್ಯ ತಾಳಿ, ಜನಸಾಮಾನ್ಯರನ್ನು ನಿಯಂತ್ರಿಸಿಯೋ, ಸಂಘಟಿಸಿಯೋ ದಾರಿ ತೋರಿರಬೇಕು. ಸಹಸ್ರಾರು ಬಸದಿಗಳನ್ನು ಜೀರ್ಣೋದ್ಧಾರ ಮಾಡಿದ, ಹೊಸದಾಗಿ ನಿರ್ಮಿಸಿದ ಶ್ರೇಯಸ್ಸು ಅವಳಿಗೆ ಸಲ್ಲುತ್ತದೆ.

ಹುಟ್ಟಾ ಸಿರಿವಂತಳಾಗಿ ಬಡ ತಪಸ್ವಿನಿಯ ಕಠಿಣವ್ರತ ಅಂಗೀಕರಿಸಿದಳು. ರಾಣಿಯಂತಿರಬೇಕಾದಾಕೆ ಶ್ರಾವಕಿಯಾದಳು. ವೀರರಯುಗದಲ್ಲಿ ಕವಿ-ಸಾಹಿತಿಗಳನ್ನು ಪ್ರೋತ್ಸಾಹಿಸಿದಳು. ಎಂಥ ಆದರ್ಶಪ್ರಾಯವಾದ ಬದುಕು ಅವಳದಾಗಿತ್ತೆಂದರೆ ಒಂದು ದಂತಕತೆಯಾಗಿ ಹೋದಳು. ನೂರು ವರ್ಷಗಳ ನಂತರದ ಬ್ರಹ್ಮ ಶಿವನ 'ಸಮಯ ಪರೀಕ್ಷೆ' ಮುಂತಾದ ಸಾಹಿತ್ಯ ಕೃತಿಗಳಲ್ಲಿ, ಶಾಸನಗಳಲ್ಲಿ, ಪುರಾಣಗಳ ರತಿ, ಸೀತೆ, ರೇವತಿ, ಅರುಂಧತಿಯರ ಜೊತೆ ಅತ್ತಿಮಬ್ಬೆಯ ಹೆಸರು ಸೇರ್ಪಡೆಯಾಗಿದೆ. ಜೈನ ಗೃಹಿಣಿಯರಿಗೆಲ್ಲ ಆಕೆಯ ಆದರ್ಶ, ನಿತ್ಯ ನೂತನವಾಗಿ ಪರಿಣಮಿಸಿತು. ದಂಡನಾಯಕಿತಿ ಏಚಿಕಬ್ಬೆ ಅತ್ತಿಮಬ್ಬೆಯಂತೆ ಮಹಾದಾನಿ ಎಂದು ಕರೆಸಿಕೊಂಡಳು. ಬಾಚವ್ವೆ, ಗಂಗೆ, ಸೀತೆ ಅತ್ತಿಮಬ್ಬೆಯರ ಸಾಲಿಗೆ ಸೇರಿದಾಕೆ ಎನಿಸಿಕೊಂಡಳು. ಲೋಕಪಾಲದೇವಿ, ಜೈನಧರ್ಮಪಾಲನೆಯಲ್ಲಿ ಅತ್ತಿಮಬ್ಬೆಗೆ ಸರಿ ಸಾಟಿಯೆನಿಸಿಕೊಂಡು ಹೆಮ್ಮೆ ಪಟ್ಟಳು. ಅತ್ತಿಮಬ್ಬೆಯ ಸಂಪ್ರದಾಯ ಶತಶತಕಗಳವರೆಗೂ ನಡೆದು ಬಂದಿತು.

ಜನಹಿತಕಾರಿ ಮೋಚಬ್ಬೆ : ಜನಹಿತವನ್ನು ಗುರಿಯಾಗಿರಿಸಿಕೊಂಡ ಅರಸಿಯರೂ ಇದ್ದರು. ಜಯಸಿಂಹನೆಂಬ ದೊರೆ ತನ್ನ ಮಡದಿ ಮೋಚಬ್ಬರಸಿಗೆ 'ಕನ್ಯಾದಾನ'ವಾಗಿ ಭೂಮಿಯನ್ನು ಕೊಡಲು ಇಚ್ಛಿಸಿ ಅವಳಿಗೆ ತಿಳಿಸಿದಾಗ ಸಂತೋಷಪಟ್ಟು ಅವಳು ಯಾರೂ ಮನ್ನಿಸದ ಊರು, ಯಾರಿಗೂ ಬೇಡವಾದ ಎಡೆಯನ್ನು ಬೇಡಿ ಪಡೆಯುತ್ತಾಳೆ. ಆತನು ಒಪ್ಪಿ ಊರ ಕೊನೆಯಲ್ಲಿ ಹೊಲೆಯರಕೇರಿ ಇದ್ದ ಬರೇ ಕಲ್ಲಿನ ಕಾಡಾಗಿದ್ದ ಬೆಟ್ಟವನ್ನು ಕೊಡುತ್ತಾನೆ. ಅರಸಿ ಅದನ್ನು ಸಮತಟಗೊಳಿಸಿ ಹಂಚಿನಮನೆಗಳು, ತೋಟ, ಕೆರೆಗಳನ್ನು ಆ ಪ್ರದೇಶದಲ್ಲಿ ಮಾಡಿಸಿ, ಪ್ರವಾಹವನ್ನು ಸೆರೆಯಿಟ್ಟು 'ಒವರಿ'ನೆಲವನ್ನು ಹಿರಿದುಮಾಡಿ ಸುಕ್ಷೇತ್ರವಾಗಿಸುತ್ತಾಳೆ. ಅದೊಂದು ಹೊಸ ಗ್ರಾಮವಾಗಿ ಪರಿವರ್ತಿಸಲು 'ಹಿರಿದಾದ ಆಯಾಸ'ವಾಯ್ತು. ಎಂಥ ತಪ್ಪು ಮಾಡಿ ಇಲ್ಲಿ ಬಂದವರಿಗೂ ಮೂರು ದಿನದ 'ಸರ್ವಪರಿಹಾರಂ ಕಾದುಕಳಿಸುವುದು' ಈ ಊರ ವಿಶೇಷವಾಗಿತ್ತು ಎಂದು ತೋರುತ್ತದೆ.೧೧ನೆಯ ಶತಮಾನದಲ್ಲಿ ಪಾತಕಿಗಳಿಗೂ ಒಂದು ತಾತ್ಕಾಲಿಕ ಅಭಯಾಶ್ರಮ ಮಾಡಿದ ಶ್ರೇಯ ಮೋಚಬ್ಬೆಗೆ ಸಲ್ಲುತ್ತದೆ.

"ದಾನದೊಳ್ ಅನ್ನದಾನಂ ಹಿರಿದು" ಎಂದು ನಂಬಿ ನಿತ್ಯ ಅನ್ನದಾನ ಕೈಕೊಂಡು ಛತ್ರಗಳಿಗೆ ಧಾರಾಳ ಕೊಡುಗೆ ಇತ್ತ ಮಹಿಳೆಯರು ಅನೇಕರು ಆಗಿಹೋಗಿದ್ದಾರೆ. ಲಚ್ಚಿಯಬ್ಬೆ, ದೇವಿಯಕ್ಕ ಬಾಚಲದೇವಿಯರಂತೆ ತೆಲ್ಲಿಗ ಜಕ್ಕಿಯಬ್ಬೆಯನ್ನೂ ಶಾಸನಗಳು ಹೆಸರಿಸುತ್ತವೆ. ಮಲ್ಲಿಸೆಟ್ಟಿಯ ಮಡದಿಯಾದ ಬೀಚಿಯಕ್ಕನ ಅನ್ನ ಛತ್ರವನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ನಟ, ಭಟ, ನಗ್ನ, ಕಾನ್ಧಕ, ಗಾಯಕ, ದೀನ, ಹೀನ, ಕರ್ಪಟಕ, ಜಟಾಧರ, ದ್ವಿಜ, ದಿಗಂಬರ, ತಾರ್ಕಿಕ ಎಂಬ ಜಾತಿ ಮತ -ವೃತ್ತಿ ಭೇದವಿಲ್ಲದ ಯಾವತ್ತೂ ಜನರು ಹಸಿದು ಬಂದಾಗ ಅವರಿಗೆ ಉಣಬಡಿಸಿ 'ಚಿಂತಾಮಣಿ' ಬೀಚಿಯಕ್ಕ ತನ್ನ ಮಾನವೀಯತೆಯನ್ನು ಮೆರೆದಳು. 'ದಾನವಿನೋದ'ವೆಂಬುದು ಮಲ್ಲಿಸೆಟ್ಟಿ-ಬೀಚಿಯಕ್ಕರ ಅಡ್ಡಹೆಸರಾಗಿತ್ತು.

ದಾನಸಾಗರಿ ಶಾಂತವ್ವೆ : ಕರ್ನಾಟಕದಲ್ಲೇ ಅತ್ಯಂತ ಹಿರಿದಾದ ಕೆರೆ ಎನಿಸಿಕೊಂಡ ಸೂಳೆಕೆರೆ: (ಶಿವಮೊಗ್ಗೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಲಕ್ಷಾವಧಿ ಎಕರೆಗೆ ನೀರುಣಿಸುವ ಅತ್ಯಂತ ವಿಶಾಲ ಕೆರೆ. ಕಟ್ಟಿಸಿದಾಕೆ ಶಾಂತವ್ವೆ. ಆಕೆ ಸಿರಿವಂತ ವೇಶ್ಯೆಯಿರಬೇಕು. ಸಮಾಜಕ್ಕೆ ಮಹದುಪಕಾರ ಮಾಡಿದ ನಾರೀಮಣಿಯ ದಾನವನ್ನು ಸೂಳೆಕೆರೆಯೆಂದು ಕರೆದು, ಬೇರಾವ ಉಲ್ಲೇಖ ಮಾಡದೇ ನಮ್ಮವರು ಪುಣ್ಯಕಟ್ಟಿಕೊಂಡಿದ್ದಾರೆ! ಈಗ ಅದನ್ನು ಶಾಂತಿಸಾಗರವೆಂದು ಕರೆಯಲಾಗುತ್ತಿದೆ. ೧೦ ಮೈಲಿಗಳಿಗೂ ಮಿಕ್ಕಿ ಉದ್ದಗಲದ ಈ ಕೆರೆಯನ್ನು ೧೧ ಅಥವಾ ೧೨ ಶತಕದಲ್ಲಿ ಶಾಂತವ್ವೆಯೆಂಬಾಕೆ ಕಟ್ಟಿಸಿದಳು. ಈ ಹತ್ತು ಶತಮಾನಗಳ ಕಾಲ ಅದು ಸ್ಥಳೀಯರಿಗೆ ಪಶು - ಪ್ರಾಣಿ - ಗಿಡಮರಗಳಿಗೆ ವರದಾನವಾಗಿ ಪರಿಣಮಿಸಿದ್ದು ವಿಶೇಷ.

ಮಧುಗಿರಿ ತಾಲ್ಲೂಕಿನ ಗುಂಡ್ಲಹಳ್ಳಿಯ ತಾಮ್ರ ಶಾಸನದಲ್ಲಿ, ದಾನದ ಹಿಂದೆ ಇರುವ ಸಾಮಾನ್ಯ ಮಹಿಳೆಯೊಬ್ಬಳ ಆಕಾಂಕ್ಷೆಯನ್ನು ಗುರುತಿಸಬಹುದು. ಜಿರ್ಲೆ ಮಲ್ಲಮ್ಮ ಎಂಬಾಕೆ ಕೋಟೆ ನಿರ್ಮಿಸುವಲ್ಲಿ, ದೇವಾಲಯದ ಜೀರ್ಣೋದ್ಧಾರ ಮಾಡಿಸುವಲ್ಲಿ, ಧನ ಸಹಾಯ ಮಾಡಿರುತ್ತಾಳೆ. ಬಾವಿಗಳನ್ನೂ ತೋಡಿಸಿರುತ್ತಾಳೆ. "ನಾಲ್ಕು ದಾರಿಗಳು ಒಂದಾಗುತ್ತಿರುವ ಮುಖ್ಯ ತಾಣವೊಂದರಲ್ಲಿ ದೊಡ್ಡ ಬಾವಿಯನ್ನು ನಿರ್ಮಿಸಿ ಬಾವಿಯ ಸೋಪಾನದ ಮೇಲೆ ನನ್ನ ವಿಗ್ರಹ ಕಡೆಸಬೇಕು. ದಾರಿಯಲ್ಲಿ ಬರುವ ಪುಣ್ಯಾತ್ಮರು ಬಾವಿಯ ನೀರು ಕುಡಿದು ತಮ್ಮ ದಣಿವು ಆರಿಸಿಕೊಳ್ಳಲಿ. ಹಾಗೇ ಎರಡು ಬೊಗಸೆ ನೀರನ್ನು ತನ್ನ ವಿಗ್ರಹದ ಮೇಲೆ ಸುರಿಯಲಿ" ಎಂದು ಶಾಸನದಲ್ಲಿ ಹೇಳಲಾಗಿದೆ. ಇಂದಿಗೂ ಮಲ್ಲಮ್ಮನ ಬಾವಿಯಿದ್ದು ಅಲ್ಲಿಯ ನೀರು ಕುಡಿದ ಜನ ಬಾವಿಯ ಸೋಪಾನದ ಕಂಬದಲ್ಲಿ ಕೆತ್ತಿದ ಮಲ್ಲಮ್ಮನ ವಿಗ್ರಹದ ಮೇಲೆ ಎರಡು ಬೊಗಸೆ ನೀರು ಹಾಕುತ್ತಾರಂತೆ.

ಹಲವು ಮಹಿಳೆಯರು ಲೋಕೋಪಕಾರದ ಆದರ್ಶ ಹೊಂದಿದ್ದು, ಜನೋಪಯೋಗಿ ಕಾರ್ಯಗಳನ್ನು ಕೈಕೊಂಡಿದ್ದರೂ, ಎಲ್ಲರೂ ದಾನ ಧರ್ಮ ಕೈಕೊಳ್ಳುತ್ತಿದ್ದರು, ಎನ್ನಲಾಗದು. ಲೋಭಿತನ ಮಾನವ ಸಹಜವಾದದ್ದು. ಭಿಕ್ಷೆಗೆ (ಉಪಾದಾನಕ್ಕೆ) ಬಂದವರನ್ನು ತಾರತಮ್ಯಮಾಡದೇ ಓಡಿಸುವ ಹೆಂಗಳೆಯರು ಹಿಂದೆಯೂ ಇದ್ದರು. ಎಂದೇ ಪುರಂದರದಾಸರ ಪದವೊಂದರಲ್ಲಿ ಮನೆವಾಳ್ತೆಯೊಳು ತೊಡಗಿದ, ಮಕ್ಕಳು ಅಳುತ್ತಿದ್ದ, ಹೊಟ್ಟೆ ನೋಯುತ್ತಿದ್ದ ಎಂದೆಲ್ಲ ನೆಪ ಒಡ್ಡಿ ಏನೂ ನೀಡದೇ ಕಳಿಸುತ್ತಿದ್ದ ನಾರಿಯರ ವಿಡಂಬನೆಯಿದೆ. 'ಕದವ ಮುಚ್ಚಿದಳೆದಕೋ ಗಯ್ಯಾಳಿ " ಎಂಬ ಇನ್ನೊಂದು ಪದ್ಯದಲ್ಲಿ ದಾಸರು ಬರುತ್ತಿದ್ದುದನ್ನು ನೋಡುತ್ತಿದ್ದಂತೆಯೇ ಬಾಗಿಲು ಮುಚ್ಚಿಬಿಡುವ ಹೆಣ್ಣಿನ ಪರಿಹಾಸವಿದೆ. ಭಾರತ ರಾಮಾಯಣಾದಿ ಗ್ರಂಥಗಳಲ್ಲಿರುವ ಪಾರಮಾರ್ಥಿಕ ತತ್ವದ ಕಡೆಗೆ ಸಾಮಾನ್ಯರ ಮನಸ್ಸು ಹರಿಯುವುದಿಲ್ಲ' ಎಂಬ ಭಾವವೂ ಅದರಲ್ಲಿದೆ. ಆದರೂ ನಾಡಿನಾದ್ಯಂತ ಹರಡಿಕೊಂಡಿದ್ದ, ಈಗಲೂ ಕೆಲವು ಅವಶೇಷಗಳ ರೂಪದಲ್ಲಿ ಉಳಿದುಕೊಂಡ ಗುಡಿ, ಬಸದಿ, ಕೆರೆ, ತಟಾಕ, ಬಾವಿ ಇತ್ಯಾದಿಗಳಿಂದ ಶಾಸನರೂಪದಲ್ಲಿ ಮಾತ್ರ ಉಳಿದುಕೊಂಡ ದತ್ತಿಯ ವಿವರಗಳಿಂದ, ಅವುಗಳ ಹೇರಳ ಸಂಖ್ಯೆಯಿಂದಾಗಿ, ವೈವಿಧ್ಯತೆಯಿಂದಾಗಿ ಅಂದಿನವರ ದಾನಮಾನಸವನ್ನು

ಅರಿಯಬಹುದಾಗಿದೆ. ಸಮಾಜದ ಋಣವನ್ನು ಒಂದಿಲ್ಲೊಂದು ರೀತಿಯಲ್ಲಿ, ತಮ್ಮಿಂದ ಸಾಧ್ಯವಿದ್ದ ಬಗೆಯಲ್ಲಿ ಕೊಡಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಗುರುತಿಸಬಹುದಾಗಿದೆ.

ತೀರ ಇತ್ತೀಚಿನವರೆಗೆ ವಾರಾನ್ನ ಮಾಡಿಕೊಂಡು ಸ್ಕೂಲು, ಕಾಲೇಜು, ಕಲಿತ ಬಡ ಹುಡುಗರಿದ್ದರು. ಒಂದೊಂದು ದಿನ ಒಬ್ಬೊಬ್ಬರ ಮನೆಗೆ ಹೋಗುತ್ತಿದ್ದ ಇವರಿಗೆ ಮನೆಯ ಮಕ್ಕಳ ಜೊತೆಗೆ ಹೊಟ್ಟೆ ತುಂಬ ಊಟ ಹಾಕಿ ಕಳಿಸುವ ಸಾಧ್ವಿಯರು ಇದ್ದರು. ಎಷ್ಟೋ ಜನರು ವಿದ್ಯೆ ಕಲಿತಾಗುವತನಕ ಬಡನೆಂಟರ ಮಕ್ಕಳನ್ನು ಮನೆಯಲ್ಲಿಟ್ಟುಕೊಂಡು ಓದಿಸುತ್ತಿದ್ದರು. ತಮ್ಮಿಂದಾದಷ್ಟು ಇನ್ನೊಬ್ಬರಿಗೆ ಪ್ರತಿಫಲದ ಆಸೆಯಿಲ್ಲದೆ ಸಹಾಯಮಾಡುವುದು, ಭಾರತೀಯ ಪರಂಪರೆಯ ದ್ಯೋತಕವಾಗಿತ್ತು. ಈ ಪರಂಪರೆಯಲ್ಲಿ ಸ್ತ್ರೀ ಪುರುಷ ಭೇದವಿರಲಿಲ್ಲ.

ಸಾಲು ಮರದ ತಿಮ್ಮಕ್ಕ, ಲೋಕೋಪಕಾರದ ಭವ್ಯ ಪರಂಪರೆಯನ್ನು ಮೂರ್ತಿಮತ್ತಾಗಿಸಿದ ಏಕೈಕ ಪ್ರತಿನಿಧಿಯಾಗಿ ನಮ್ಮೊಡನಿದ್ದಾಳೆ.

●

೪. ಲಲಿತಕಲೆಗಳ ಕ್ಷೇತ್ರದಲ್ಲಿ

ಸಂಗೀತ, ನೃತ್ಯಗಳು : ಹೆಣ್ಣುಮಕ್ಕಳಿಗೆ ಹಾಡುಗಾರಿಕೆಯೆಂದರೆ ಬಿಡದ ನಂಟು. ಹಕ್ಕಿಗೆ ಇಂಚರ ಸ್ವಾಭಾವಿಕವಾಗಿದ್ದಂತೆ, ಹೆಣ್ಣಿಗೆ ಗುಣಗುಣಿಸುವದು ಸ್ವಾಭಾವಿಕವಾಗಿ ಸಾಧಿಸಿರಬೇಕು. ಯುಗಗಳ ಹಿಂದೆ, ಮಗುವನ್ನು ಮಲಗಿಸುವಾಗ, ಮೆಲುದನಿಯ ಲಾಲಿ, ಜೋಗುಳದ ಹಾಡುಗಳು ಮೂಡಿದುವು. ಮನೆಗೆಲಸಗಳ ಏಕತಾನತೆ ಮರೆಯುವಲ್ಲಿ ಸ್ವರ ಎಳೆದ 'ಓವಿ' ಅಥವಾ ಮೊದಲ ಸುವ್ವಿ ಹಾಡುಗಳು, ಸಂಭ್ರಮದ ಪ್ರಸಂಗಗಳಲ್ಲಿ ಹತ್ತು ಜನ ಒಟ್ಟಾದಾಗ ಮೊದಲ ಸಾಮೂಹಿಕ ಹಾಡುಗಳು, ಮಹಿಳೆಯರ ಧ್ವನಿಯಲ್ಲಿ ರೂಪಗೊಂಡಿರಬೇಕು. ಕ್ರಮೇಣ ಹಾಡು, ಕುಣಿತಗಳು ಜೊತೆಗೂಡಿದವು. ನಾಗರಿಕತೆ ಬೆಳೆದಂತೆ, ಇವೂ ಅನೇಕಾನೇಕ ರೂಪಗಳಲ್ಲಿ ಕಲಾತ್ಮಕ ಮೆರುಗನ್ನು ಪಡೆಯುತ್ತ ನಡೆದವು.


ಭಾರತೀಯ ಸಂಗೀತಪದ್ಧತಿಗೆ ವೈದಿಕ ಮಂತ್ರಪಠನ ಅಥವಾ ಸಾಮಗಾನ ಮತ್ತು ಜಾನಪದ ಸಂಪ್ರದಾಯಗಳ ಸಮ್ಮಿಲನಗಳು ಮೂಲವೆನ್ನುತ್ತಾರೆ. ಸ್ವರದಿಂದ ರಾಗಗಳು, ಲಯದಿಂದ ತಾಳಗಳು, ವರ್ಣದಿಂದ ಕೃತಿಗಳು, ಹುಟ್ಟಿಕೊಂಡವೆಂದು ಸಾಮಾನ್ಯ ನಂಬಿಕೆ. ಮಂತ್ರಘೋಷಗಳು ಸಾಮೂಹಿಕವಾಗಿ ಮೂಲ ಸಂಗೀತದ ರೂಪವಾಗಿದ್ದರೆ, ವೇದಕಾಲದಲ್ಲಿ ವೇಣು, ವೀಣಾ, ಮೃದಂಗಗಳು ಪರಿಚಿತ ವಾದ್ಯಗಳಾಗಿದ್ದವು. ಕೆಲವೊಂದು ಯಜ್ಞಪ್ರಸಂಗಗಳಲ್ಲಿ ಇವುಗಳ ಹಿಮ್ಮೇಳದಲ್ಲಿ ಸ್ತ್ರೀಯರು ನೃತ್ಯಮಾಡುತ್ತಿದ್ದರು. ನಮ್ಮ ಪರಂಪರೆಯ ಪ್ರಕಾರ, ಪರಮೇಶ್ವರನಿಂದ ಕಲಿತ ನಾಟ್ಯಶಾಸ್ತ್ರವನ್ನು ಬ್ರಹ್ಮನು ಭರತಮುನಿಗೆ ಉಪದೇಶಿಸಿದನು. ಆತನು ತನ್ನ ಮಕ್ಕಳಿಗೂ ಗಂಧರ್ವ, ಅಪ್ಸರೆಯರಿಗೂ ಹೇಳಿಕೊಟ್ಟ. ನಟರಾಜನಾದ ಶಿವನೆದುರಿಗೆ ಅವರೆಲ್ಲ ನೃತ್ಯಪ್ರದರ್ಶನ ಕೈಕೊಂಡಾಗ ಸಂಪ್ರೀತನಾದ ಶಿವನು ತನ್ನ ಗಣದವರಿಗೆಲ್ಲಾ ನೃತ್ಯಕಲೆಯನ್ನು ಕಲಿಸಲು ಭರತನಿಗೆ ಹೇಳಿದ. ಪಾರ್ವತಿಯು ಭರತನಿಗೆ ಲಾಸ್ಯನೃತ್ಯವನ್ನು ಹೇಳಿಕೊಟ್ಟಳಂತೆ. ಏನಿದ್ದರೂ, ಪಂಡಿತ ಪಾಮರರಿಗೆ ಪ್ರಿಯವಾದ ಗೀತ, ನೃತ್ಯ, ನಾಟ್ಯ, ವಾದ್ಯಗಳನ್ನು ಮೇಳೈಸಿಕೊಂಡ ಸಂಗೀತವು ಶಾಸ್ತ್ರವಾಗಿ, ಕಲೆಯಾಗಿ, ಶತಮಾನಗಳ ಕಾಲ ಭರತಭೂಮಿಯಲ್ಲಿ ಬೆಳೆದು ಬಂದಿತು. ಅದನ್ನು ಕ್ರಮವಾಗಿ ಅಭ್ಯಸಿಸಿ, ಪ್ರಯೋಗಗಳನ್ನು ಕೈಕೊಂಡು, ಸಭೆಗಳಲ್ಲಿ ಪ್ರದರ್ಶಿಸಿ, ಪಂಡಿತರಿಂದ, ರಾಜರಿಂದ ಪ್ರಶಂಸೆ ಪಡೆದ ಕೀರ್ತಿ, ಕರ್ನಾಟಕದ ಮಹಿಳೆಯರದಾಗಿದೆ. ಸಹಸ್ರಮಾನಕ್ಕೂ ಮೀರಿದ ಕನ್ನಡಿತಿಯರ

ಸೇವೆ, ದೀರ್ಘವಾಗಿದ್ದಂತೆ, ಬಹುಮುಖವಾದದ್ದು. ಆದ್ದರಿಂದ ಆ ಕೈಂಕರ್ಯವನ್ನು ಕೊಂಚ ವಿವರವಾಗಿ ಕಾಣಿಸುವ ಪ್ರಯತ್ನ ಇಲ್ಲಿದೆ.

ಮಹಾಕವಿ ಪಂಪನ ಕಾಲಕ್ಕಾಗಲೇ, ಅಂದರೆ ಹತ್ತನೆಯ ಶತಮಾನದಲ್ಲಿ ಸಂಗೀತ ಗೋಷ್ಠಿಗಳು ಅತ್ಯಂತ ಜನಪ್ರಿಯವಾಗಿದ್ದವು. ಸದಭಿರುಚಿಯ, ರಸಿಕ ವೃಂದದೆದುರು ನೃತ್ಯಾಭಿನಯದ ಕಾರ್ಯಕ್ರಮಗಳು ನಡೆಯುತ್ತಿದ್ದವು, ಎಂಬುದನ್ನು ಪಂಪನ ಆದಿಪುರಾಣದ ಪ್ರಸಿದ್ಧ ಕಾವ್ಯ ಪ್ರಸಂಗವಾದ 'ನೀಲಾಂಜನೆಯ ನೃತ್ಯ'ದಿಂದ ತಿಳಿದುಕೊಳ್ಳಬಹುದಾಗಿದೆ. ಪಂಪನಿಗೆ ನಾಟ್ಯಶಾಸ್ತ್ರದ ಉತ್ತಮ ಪರಿಚಯವಿತ್ತು ಎನ್ನುವುದರ ಜೊತೆಗೆ ಕನ್ನಡನಾಡಿನ ನರ್ತಕಿಯರು ಈ ಕಲೆಯಲ್ಲಿ ಪಡೆಯುತ್ತಿದ್ದಿರಬಹುದಾದ ಪರಿಣತಿಯ ಸುಂದರ ಚಿತ್ರಣವನ್ನು ನಾವು ಕಾಣಬಹುದು. ನಾಟ್ಯಶಾಸ್ತ್ರೋಕ್ತ ರಸಭಾವ, ಕರಣಗಳಿಗೆ ಸರಿಯಾಗಿ ಇಂಬುಕೊಟ್ಟು, ವಾಚಿಕ, ಆಂಗಿಕ, ಆಹಾರ್ಯ ಅಂಶಗಳಲ್ಲೆಲ್ಲ ನೀಲಾಂಜನೆಯು ಮಿಗಿಲಾಗಿದ್ದಳು. ಮೂವತ್ತೆರಡು ಅಂಗಹಾರಗಳು, ಒಂದನೂರ ಎಂಟು ಕರಣಗಳು, ನೀಲಾಂಜನೆಯ ಪರಿಚಾರಿಕೆಗೂ ಗೊತ್ತು! ಅಂದಮೇಲೆ ಅವುಗಳಲ್ಲಾಕೆ ಮೀರಿದ ಶ್ರೇಯಸ್ಸು ಪಡೆದಿದ್ದರೆ ಏನಿದು ಆಶ್ಚರ್ಯ? ಎಂಬ ಪಂಪನ ಉದ್ಗಾರದಲ್ಲಿ, ನೃತ್ಯ ಕಲೆಯನ್ನು ಕೈಕೊಂಡು ಜನಪ್ರಿಯಗೊಳಿಸಿದ ಮಹಿಳೆಯರು ಆ ಯುಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇದ್ದಿರಬೇಕು ಎಂಬ ಊಹೆಗೆ ಅವಕಾಶ ನೀಡುತ್ತದೆ. ಕರಣ, ಚಾರಣ, ಚಲನ, ವರ್ತನಗಳ ವೈವಿಧ್ಯದಿಂದ ಮೆರೆದು ಆಕೆಯ ನೃತ್ಯದ ರಭಸ, ಗತಿಗಳನ್ನು ಪಾಲಿಸಲಿಕ್ಕಾಗದೇ ವಾದಕರ ತಾಳ, ಜತಿಗಳು ಕೈತಪ್ಪುವಂತಾದಾಗ, ಆ ನರ್ತಕಿಯೇ ಸಭೆಗೆ ವಾದಕಿಯಾದಳಂತೆ ! ಹೇಗಿದ್ದರೂ ನಾಟ್ಯ ರಸಾನುಭವದಲ್ಲಿ ಮುಳುಗಿದ ಸಭಿಕರು ತಲೆ, ಕೈ, ಕಾಲು, ಕಣ್ಣುಗಳಿಂದ ಅವಳಿಗೆ ಎಡೆಬಿಡದೇ ನೃತ್ಯದಲ್ಲಿ ಜೊತೆ ಕೊಡುತ್ತಲೇ ಇದ್ದರಲ್ಲ ! ದೇಹದ ನಶ್ವರತೆಯನ್ನು ಮನಗಾಣಿಸಲೆಂದು ವೃಷಭನಾಥನೆದುರು ದೇವಗಣಿಕೆ ನೀಲಾಂಜನೆಯ ನೃತ್ಯ ಏರ್ಪಟ್ಟ ವಿಚಾರ ಬರುವುದಾದರೂ, ಪಂಪನು ತನ್ನ ಸಮಕಾಲೀನ ನೃತ್ಯ ಪ್ರದರ್ಶವೊಂದನ್ನು ನಿದರ್ಶನವಾಗಿ ಬಳಸಿದ್ದಾನೆಂಬುದು ಸ್ಪಷ್ಟ.

ಪಂಪನ ಬಳಿಕ ಸುಮಾರು ಎರಡುನೂರು ವರ್ಷಗಳ ನಂತರದ ಶಾಸ್ತ್ರಗ್ರಂಥವಾದ 'ಮಾನಸೋಲ್ಲಾಸ' ದಿಂದ ಸಂಗೀತ, ನೃತ್ಯಗಳು ಕಲಾಶಿಖರಕ್ಕೇರಿದ ವಿಚಾರ ತಿಳಿದು ಬರುತ್ತದೆ. ಚಾಲುಕ್ಯ ವಿಕ್ರಮಾದಿತ್ಯನ ಮಗನಾಗಿದ್ದ ಭೂಲೋಕಮಲ್ಲನು ರಚಿಸಿದ ವಿವಿಧ ಶಾಸ್ತ್ರಗಳನ್ನೊಳಗೊಂಡ ಈ ಕೋಶದಲ್ಲಿ ಸಂಗೀತಶಾಸ್ತ್ರಕ್ಕೇ ಮೀಸಲಾದ ದೊಡ್ಡ ಅಧ್ಯಾಯವಿದೆ. ಆತ ಸ್ವತಃ ಸಂಗೀತ ಪ್ರೇಮಿಯಾಗಿದ್ದ. ಇಂದಿನವರ ಶಾಸ್ತ್ರೀಯ, ಸುಗಮ, ಗಮಕ, ಜಾನಪದ ಸಂಗೀತಗಳೆಂಬ ಕೃತ್ರಿಮ ಭೇದಭಾವ ತೋರದೇ ತನ್ನ ಕಾಲದಲ್ಲಿ ಪ್ರಚಲಿತವಿದ್ದ ಯಾವತ್ತೂ ಸಂಗೀತ ಪ್ರಕಾರಗಳನ್ನು ಉಲ್ಲೇಖಿಸಿದ್ದಾನೆ. ಸಂಗೀತ ಶಾಸ್ತ್ರದ ವಿವರವಾದ ವಿಶ್ಲೇಷಣೆಯ ಜೊತೆಗೆ ಸಮಕಾಲೀನ ವಾದ್ಯಪ್ರಕಾರಗಳು, ಅವನ್ನು ತಯಾರಿಸುವ ಪದ್ಧತಿ, ನುಡಿಸುವ ರೀತಿಗಳ ಜೊತೆಗೆ ನೃತ್ಯ-ನಾಟ್ಯದ ಪ್ರಕಾರಗಳನ್ನು ವಿಶದವಾಗಿ ಚರ್ಚಿಸಿದ್ದಾನೆ.

ಹನ್ನೆರಡನೆಯ ಶತಮಾನದಲ್ಲಿ ಸಂಗೀತ ನೃತ್ಯ-ನಾಟಕಗಳು ಲಲಿತಕಲೆಗಳ ರೂಪದಲ್ಲಿ ಸೊಂಪಾಗಿ ಬೆಳೆದು ನಿಂತು ಕರ್ನಾಟಕದ ಸ್ಪಷ್ಟ ಪ್ರಾದೇಶಿಕ ಲಕ್ಷಣಗಳನ್ನು ತಳೆದಿದ್ದವು ಎಂದು ಗೊತ್ತಾಗುತ್ತದೆ. ಮುಂದೆ ಹದಿನೇಳನೆಯ ಶತಮಾನದಲ್ಲಿ ಕೆಳದಿಯ ಅರಸು, ಬಸವರಾಜ ವಿರಚಿತ ಕೋಶವಾದ "ಶಿವತತ್ವರತ್ನಾಕರ"ದಲ್ಲೂ 'ಸಂಗೀತಕ'ದ ವಿಶ್ಲೇಷಣೆಯಿದ್ದು, ಸಾಮ್ರಾಜ್ಯಗಳು ತಲೆಯೆತ್ತಿ, ಮೇಲೇರಿ, ಉರುಳಿ ಹೋದರೂ ಈ ಜನಪ್ರಿಯ ಕಲೆಗಳು ಚಿಕ್ಕ ರಾಜ್ಯಗಳಲ್ಲಿ, ಪಾಳೆಯ ಪಟ್ಟುಗಳಲ್ಲಿ, ದೇವಸ್ಥಾನಗಳಲ್ಲಿ, ಜನಸಾಮಾನ್ಯರ ಆಸಕ್ತಿಯಿಂದಾಗಿ ಉಳಿದುಕೊಂಡು ಬಂದುದನ್ನು ನೋಡುತ್ತೇವೆ. ಮನೆಗೇ ಬಂದು ಕಲಿಸುವ ಸಂಗೀತ ನೃತ್ಯಗುರುಗಳಿದ್ದರು (ಚಿತ್ರ 4-5).



ಚಿತ್ರ - 4. ಸಂಗೀತದಲ್ಲಿ ಮನೆಪಾಠ



ಚಿತ್ರ - 5. ಸಂಗೀತದಲ್ಲಿ ಮನೆಪಾಠ (ವೀಣಾ, ಮೃದಂಗ)

ವಿಜಯೋತ್ಸವಗಳು, ಸಮಾರಾಧನೆಗಳು, ವಿವಾದ ಸಭೆಗಳು, ಪರೀಕ್ಷೆ, ಪುತ್ರಜನ್ಮ, ಭೂತಪೂಜೆ, ಮಾತೃಪೂಜೆ, ವಸಂತೋತ್ಸವ ಮುಂತಾದ ಸಂದರ್ಭಗಳಲ್ಲಿ ನೃತ್ಯಕೂಟಗಳು ಏರ್ಪಡುತ್ತಿದ್ದವು. ಯಾವ ಹಬ್ಬ, ಹುಣ್ಣಿಮೆ ಬಂದರೂ ಆಯಾ ಹಬ್ಬದ ಅಧಿದೇವತೆಯ ದೇವಾಲಯದ ನಾಟ್ಯಶಾಲೆಯಲ್ಲಿ ಅಥವಾ ಮಂಡಪದಲ್ಲಿ ನೃತ್ಯ-ಗೀತೋತ್ಸವಗಳು ನಡೆದೇ ಇರುತ್ತಿದ್ದವು. ಮನಸ್ಸಿಗೆ ಮುದ ನೀಡುವ ಸಂದರ್ಭಗಳಿಗೆ ರಾಜ-ಪ್ರಜರೆಂಬ ಭೇದವಿಲ್ಲವಲ್ಲ? ಹೀಗಾಗಿ ಊರೂರುಗಳಲ್ಲಿ ನಡೆಯುವ ಧಾರ್ಮಿಕ ಉತ್ಸವಗಳೆಲ್ಲ, ಸಂಗೀತೋತ್ಸವಗಳಿಗೂ ಹೆಚ್ಚಿನ ಅವಕಾಶ ನಾಡಿದವು. ಈಗಾಗಲೇ ಹೇಳಿದಂತೆ ಪ್ರಾಚೀನ ಕಾಲದ 'ಸಂಗೀತಕ'ವೆಂದರೆ ಗೀತ, ವಾದ್ಯ, ನೃತ್ಯಗಳನ್ನು ಜೊತೆಗೂಡಿಸಿಕೊಂಡ ಪ್ರದರ್ಶನವಾಗಿತ್ತು. ಮೂರನ್ನೂ ಮೈಗೂಡಿಸಿಕೊಂಡಾಕೆ ನಿಜವಾದ ಅಥವಾ ಪರಿಪೂರ್ಣ ಕಲಾವಿದೆ ಅನಿಸಿಕೊಳ್ಳುತ್ತಿದ್ದಳು.

ಹದಿನಾಲ್ಕನೆಯ ಶತಮಾನದವರೆಗೂ ಕರ್ನಾಟಕದ ರಾಣಿಯರು ಸಂಗೀತ-ನೃತ್ಯಗಳನ್ನು ಕಷ್ಟಪಟ್ಟು ಕಲಿತು ಬಹಿರಂಗ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದ ನಿದರ್ಶನಗಳಿವೆ. ಅರಸರೇ ಸ್ವತಃ ಈ ಕಲೆಗಳಲ್ಲಿ ಆಸಕ್ತರೂ ಪರಿಣತರೂ ಇರುತ್ತಿದ್ದರಾದ್ದರಿಂದ ತಾವೂ ಪರಿಶ್ರಮ ಪೂರ್ವಕ ಈ ಕಲೆಗಳನ್ನು ರೂಢಿಸಿಕೊಳ್ಳಲು ರಾಜಪರಿವಾರದ ಮಹಿಳೆಯರಲ್ಲಿ ಪೈಪೋಟಿಯೇ ಇರುತ್ತಿತ್ತು. ಕನ್ನಡಿಗರಿಗೆ ಚಿರಪರಿಚಿತಳಾದ ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲೆ, ಭರತನಾಟ್ಯಶಾಸ್ತ್ರವನ್ನು ಕ್ರಮವಾಗಿ ಅಭ್ಯಸಿಸಿ ಅದರ ತಿರುಳನ್ನು ಮೈಗೂಡಿಸಿಕೊಂಡಿದ್ದಳು. ಅವಳ ಸಂಗೀತ-ನಾಟ್ಯ ಪರಿಣತಿಯನ್ನು ಅನೇಕ ಶಿಲಾಶಾಸನಗಳು, ಹೊಗಳುತ್ತವೆ. 'ವಿಚಿತ್ರನರ್ತನ, ಪ್ರವರ್ತನ, ಪಾತ್ರಶಿಖಾಮಣಿ' ಎಂಬುದು ಅವಳ ಹಲವು ಬಿರುದುಗಳಲ್ಲಿ ಒಂದು. ಅರ್ಥಾತ್ ನೃತ್ಯಪ್ರಕಾರದಲ್ಲಿ ಆಕೆ ಆಗಾಗ ಹೊಸ ಬಗೆಯ ಪ್ರಯೋಗಗಳನ್ನು ಕೈಕೊಂಡು, ವಿವಿಧ ಪಾತ್ರಗಳನ್ನು ರೂಪಿಸುವದರಲ್ಲಿ ಮಿಗಿಲಾಗಿದ್ದಳು. ಇನ್ನೊಬ್ಬ ಹೊಯ್ಸಳ ರಾಣಿ, ಲಚ್ಚಲದೇವಿಯೆಂಬಾಕೆ, 'ಸಂಗೀತಕ ಪ್ರಸಂಗ ವಿವೇಕ ಚೂಡಾಮಣಿ' ಎನಿಸಿಕೊಂಡಿದ್ದಳು. ಪುರಾಣ, ಕಾವ್ಯ, ಇತಿಹಾಸಗಳ ಪ್ರಸಂಗಗಳನ್ನು ನೃತ್ಯ-ನಾಟಕಕ್ಕೆ ಅಳವಡಿಸಿ ಪ್ರದರ್ಶಿಸುವುದು ಅಂದಿನ ಜನಪ್ರಿಯ ಕಲಾಪ್ರಕಾರವಾಗಿತ್ತು. ಲಚ್ಚಲದೇವಿಯು ಬಹುಶಃ ಇವುಗಳ ಔಚಿತ್ಯಪೂರ್ಣಪ್ರದರ್ಶಗಳನ್ನು ಹೊಂದಿಸಬಲ್ಲವಳಾಗಿದ್ದಳು, ಅಥವಾ ಅವುಗಳ ಗುಣಾವಗುಣಗಳನ್ನು ಅಳೆಯಬಲ್ಲವಳಾಗಿದ್ದಳು, ಎಂದು ಅರ್ಥೈಸಬಹುದು. ಇದಲ್ಲದೇ ಹೊಚ್ಚಹೊಸ ದೇಸಿಮಾರ್ಗದಲ್ಲಿ ಬಗೆಬಗೆಯ ರಸಗಳನ್ನು ವ್ಯಕ್ತಮಾಡಬಲ್ಲ ವಿವಿಧ ಪಾತ್ರಗಳನ್ನು ಆಕೆ ಅಭಿನಯಿಸಬಲ್ಲವಳಾಗಿದ್ದಳು. ಹೊಯ್ಸಳ ದೊರೆ ಮೊದಲನೆಯ ಬಲ್ಲಾಳನ ಮೂವರು ರಾಣಿಯರು ಪದುಮಲೆ, ಚಾಮಲೆ, ಬೊಪ್ಪಾದೇವಿಯರು ಸಂಗೀತ-ನೃತ್ಯಶಾಸ್ತ್ರಗಳಲ್ಲಿ ಪ್ರೌಢೆಯರಾಗಿದ್ದು 'ರಾಯಕಟಕ ಪಾತ್ರ ಜಗದಳೆ'ಯೆಂಬ ಬಿರುದು ಪಡೆದರು. ಬಹುಶಃ ರಾಜಧಾನಿ (ಕಟಕ)ಯ ವಿಶೇಷ ಪ್ರಸಂಗದಲ್ಲಿ ಜೊತೆಯಾಗಿ ಅಭಿನಯಿಸಿ ಈ ಬಿರುದು ಪಡೆದರೇನೋ!

ಬಾಚಲದೇವಿಯ ಪ್ರತಿಭೆ ಇನ್ನೊಂದು ಬಗೆಯದು. ತನ್ನ ಪತಿಯ ಯುದ್ಧ ಕೌಶಲ್ಯವನ್ನು, ಆತನು ವೈರಿಗಳನ್ನು ಸೋಲಿಸಿದ ಬಗೆಯನ್ನೂ, ಅವರಿಂದ ಮಾಡಿಸಿಕೊಂಡ ಪಾದಪೂಜೆಯ ಪ್ರಸಂಗಗಳನ್ನೂ ನಾಟ್ಯರೂಪದಲ್ಲಿ ಅಭಿನಯಿಸಿ ತೋರಿಸುವುದರಲ್ಲಿ ಮಿಗಿಲಾಗಿದ್ದಳು, ಎಂದು ಶಾಸನವೊಂದು ಬಣ್ಣಿಸುತ್ತದೆ. ಆಳರಸರ ಶೌರ್ಯಗಾಥೆಗಳನ್ನು ಪ್ರಜೆಗಳಲ್ಲಿ ಪ್ರಚಾರ ಮಾಡುವದು ಮುಖ್ಯವಾಗಿತ್ತು. ಹೀಗಾಗಿ ಇಂಥ ಅಭಿನಯ ಕಾರ್ಯಕ್ರಮಗಳು ಬಹಿರಂಗ ಸಭೆಗಳಲ್ಲಿ ಏರ್ಪಡುವದು ಸ್ವಾಭಾವಿಕವೂ ಅವಶ್ಯವೂ ಆಗಿತ್ತು. ಈ ಕೆಲಸವನ್ನು ಕಲಾಕುಶಲತೆ ಹೊಂದಿದ ರಾಣಿಯರು ಕೈಗೊಳ್ಳುತ್ತಿದ್ದರು. ಬಾಚಲದೇವಿಯ ಪತಿ ಮಹಾಮಂಡಳೇಶ್ವರ ಗಂಗಪೆರ್ಮಾಡಿಯು 'ರಾಯಜಗದಳ' ಎಂಬ ಬಿರುದು ಪಡೆದಿದ್ದ. ಈಗ ಆತನು ಆಕೆಗೆ 'ಪಾತ್ರಜಗದಳೆ', ಎಂಬ ಬಿರುದನ್ನು ಕೊಡಮಾಡಿದ !

ಇವೆಲ್ಲ ಶಾಸನಗಳನ್ನು ಸ್ವತಃ ಆಳರಸರು, ಅವರ ದಂಡನಾಯಕರು, ಮಾಂಡಲಿಕರು, ಅನುಯಾಯಿಗಳು ಸಡಿಲಿಸಿದವುಗಳಾದ್ದರಿಂದ ಈ ಎಲ್ಲಾ ರಾಣಿಯರೂ, ನಮೂದಿಸಿದ ಎಲ್ಲ ಕಲೆಗಳಲ್ಲೂ ಏಕಮೇವಾದ್ವಿತೀಯರಾಗಿದ್ದರು, ಎಂದು ನಂಬಬೇಕಾಗಿಲ್ಲ. ಆದರೆ ಮಧ್ಯಯುಗದಲ್ಲಿ ಸ್ತ್ರೀಯರ ಸ್ಥಾನಮಾನಗಳು ತೀರ ಕನಿಷ್ಟವಾಗಿದ್ದವೆಂದೂ, ರಾಣಿಯರ ಜೀವನ, ಹೊನ್ನಿನ ಪಂಜರದ ಅರಗಿಳಿಯಂತಿರುತ್ತಿತ್ತೆಂದೂ ನಂಬಿಕೆಯಿದೆ. ಈ ವರ್ಗದ ಕೆಲವರಾದರೂ ವಿವಿಧ ಕಲೆಗಳನ್ನು ಅಭ್ಯಸಿಸಿ ಬಹಿರಂಗ ಸಭೆಗಳಲ್ಲಿ ಅವುಗಳ ಪ್ರದರ್ಶನ ನೀಡಿ, ಬಿರುದು ಪಡೆಯುವುದು ಸಾಮಾನ್ಯವಾಗಿತ್ತೆಂದು ಊಹಿಸಬಹುದು.

ಇತರ ಕಲೆಗಳು : ಹೆಂಗಸರಿಗೇ ಮೀಸಲಾದ ಇತರ ಕಲೆಗಳೂ ಇದ್ದವು. ಈಗಿನ ಮಸಾಜ್ ಅಥವಾ ಅಂಗಮರ್ದನ ಕಲೆ, ಕೇಶ-ಸಂವಾಹನ ಅಥವಾ ಬಗೆಬಗೆಯ ಕೇಶಾಲಂಕಾರಗಳನ್ನು ಮಾಡುವದು, ವಿವಿಧ ಗಂಧಾನುಲೇಪಗಳನ್ನು, ಋತುಮಾನಕ್ಕೆ, ವ್ಯಕ್ತಿಯ ಅಭಿರುಚಿಗೆ ಅಥವಾ ಉಡುಗೆಗೆ ಅನುರೂಪ (ಮ್ಯಾಚಿಂಗ್) ವಾಗುವಂತೆ ತಯಾರಿಸುವುದು, ಹೂವಿನ ಮಾಲೆಗಳು ಮತ್ತು ದಂಡೆಗಳ ಅಲಂಕಾರಗಳನ್ನು ಕಟ್ಟುವುದು, ತಾಂಬೂಲ ತಯಾರಿಸುವ ಕಲೆ ಮುಂತಾದವುಗಳಲ್ಲಿ ಪರಿಣತೆಯರು ರಾಜಸೇವೆಯಲ್ಲಿ ಇರುತ್ತಿದ್ದರು.

ಸಂಗೀತ ಶಾಸ್ತ್ರ ಅಭ್ಯಸಿಸಿದವರು, ವಾದ್ಯ ನಿಪುಣೆಯರು, ಕಾವ್ಯಶಾಸ್ತ್ರಗಳನ್ನು ಓದಿದವರು, ವಾಕ್ಯಚತುರೆಯರು, ಪರಿಹಾಸ -ವಿನೋದಗಳಲ್ಲಿ ಎತ್ತಿದ ಕೈಯಾಗಿದ್ದವರು, ಸಾಹಿತ್ಯ ರಸಭಾವಗಳನ್ನು ಗುರುತಿಸಬಲ್ಲವರು, ಅಂದವಾಗಿ ಕಥೆಗಳನ್ನು ಹೇಳಬಲ್ಲ ನಾರಿಯರು ಇರುತ್ತಿದ್ದರು. ರಸಿಕರಾದ ಅರಸರು ಬಿಡುವಿನ ವೇಳೆಯನ್ನು (ರಾತ್ರಿಯ ಮೊದಲಭಾಗವನ್ನು) ಇಂಥವರ ಸಹವಾಸದಲ್ಲಿ ಕಳೆಯುತ್ತಿದ್ದರು, ಅಥವಾ ಕಳೆಯಬೇಕು ಎಂಬ ಮಾನಸೋಲ್ಲಾಸದ ನಿರ್ದೇಶನ ವಾಸ್ತವಿಕ ಸಂಗತಿಯಾಗಿತ್ತು. ವಿಜಯನಗರ ಸಾಮ್ರಾಜ್ಯ ಶಿಖರಕ್ಕೇರಿದ ದಿನಗಳಲ್ಲಿ, ರಾಜಧಾನಿಯನ್ನು ಸಂದರ್ಶಿಸಿದ ಪೋರ್ಚುಗೀಸ್ ಪ್ರವಾಸಿಗಳಾದ ಡೊಮಿಂಗೋ ಪ್ಯಾಸ್ ಮತ್ತು ಫರ್ನಾವೋ ನುನಿಝುರ ವೃತ್ತಾಂತಗಳ ಪ್ರಕಾರ ಅರಮನೆಯ ಆವರಣದಲ್ಲಿ ಸಾವಿರಾರು ನೃತ್ತನಿರತ ಸ್ತ್ರೀಯರಿದ್ದು ಅವರಲ್ಲಿ ಸಂಗೀತ, ವಾದ್ಯ, ನೃತ್ಯಗಳಲ್ಲಿ ಪರಿಣತೆಯರು ಇದ್ದರು.

ತರಬೇತಿಗಾಗಿ ಏರ್ಪಟ್ಟ ಶಾಲೆಯನ್ನು ಪ್ಯಾಸ್ ನೋಡಿದ್ದೇ ಅಲ್ಲದೇ ಅಲ್ಲಿಯ ಪ್ರತಿ ಕಂಬದ ಮೇಲೆ ನಾಟ್ಯದ ಭಂಗಿಯನ್ನು ನಿರೂಪಿಸುವ ಸ್ತ್ರೀವಿಗ್ರಹಗಳಿದ್ದು, ಅವನ್ನು ನೋಡಿ ಕಲಿಯುವ ವ್ಯವಸ್ಥೆಯಿದ್ದುದನ್ನು ಗಮನಿಸಿದ್ದ. ತರಬೇತಿಯಲ್ಲಾದ ಶ್ರಮ ನಿವಾರಣೆಗೆ ವಿರಮಿಸುವ ಚಿಕ್ಕ ಉದ್ದವಾದ ಹಜಾರದಲ್ಲಿ ಕೈಕಾಲುಗಳನ್ನು ಇಳಿಬಿಟ್ಟು, ಮೈ ಹಗುರಗೊಳಿಸಲು ಬಾರ್‌ಗಳನ್ನು ಹೊಂದಿಸಲಾಗಿತ್ತು. ರಾಣೀವಾಸದವರಿಗೆ ತರಬೇತಿಯ ವ್ಯವಸ್ಥೆ ಹಾಗೂ ಕುಶಲಕಲಾವಿದೆಯರ ಪರಂಪರೆ, ನಂತರದ ಶತಮಾನಗಳಲ್ಲಿಯೂ ಮುಂದುವರೆಯಿತು. ಮೈಸೂರಿನ ಅರಸು, ಕಂಠೀರವ ನರಸರಾಜನ (ಕ್ರಿ. ಶ.೧೬೩೮- ೫೯) ಅರಮನೆಯ ಆವಾರದಲ್ಲಿ, ಜ್ಯೋತಿಷ್ಯ, ಕಾವ್ಯ-ನಾಟಕ, ಸಂಗೀತ, ನೃತ್ಯ ಕುಶಲೆಯರ, ಭವನಗಳು ಇದ್ದವು. ಇವರೆಲ್ಲ ತಮ್ಮ ಕಲೆಗಳಲ್ಲಿ ಹೆಸರಾಂತರು. ವೃತ್ತಿಯಲ್ಲಿ ನಿರತರಾಗಿರುವುದ ಜೊತೆಗೆ ಕಿರಿಯರಿಗೆ ತರಬೇತಿ ಒದಗಿಸುತ್ತಿದ್ದರು. ನಾಟಕ-ಶಾಲೆಯ ಹುಡುಗಿಯರ ವಾಸದ ಮಣಿಭವನವೂ ಅದೇ ಆವಾರದಲ್ಲಿತ್ತು. ಕೆಲವು ರಾಣಿಯರು ಬರೆದ ಕಾವ್ಯ ನಾಟಕಗಳನ್ನು ಸಂಗೀತಕ್ಕೆ, ನಾಟ್ಯಕ್ಕೆ ಅಳವಡಿಸುವ ಕೋವಿದೆಯರು ಇದ್ದರು.

ಭಾಗವತ, ರಾಮಾಯಣ, ಮಹಾಭಾರತಗಳನ್ನು ಸುಶ್ರಾವ್ಯವಾಗಿ ಹಾಡುವ ವಿದುಷಿಯರು ಕಂಠೀರವನ ಅರಮನೆಯಲ್ಲಿದ್ದು ಸಾಯಂಕಾಲದ ಸಮಯವನ್ನು, ಈ ಕಾವ್ಯ ವಾಚನ, ಗಾಯನ, ಶ್ರವಣಕ್ಕೆ ಮೀಸಲಿಡಲಾಗಿತ್ತು. ಈಗಿನ ಗಮಕಕಲೆಯ ಪ್ರಾಚೀನತೆಯನ್ನು ಗಮನಿಸಿದರೆ, ಕಾವ್ಯವಾಚನ, ತುಂಬ ಶತಮಾನಗಳ ಹಿಂದಿನಿಂದಲೂ ಮಹಿಳೆಯರಿಂದ ಬೆಳೆದು ಬಂದಿದೆಯೆನ್ನಬಹುದು. ನಾಡಿನಲ್ಲೆಲ್ಲ ಪ್ರಚಲಿತವಿದ್ದ ಕಾವ್ಯಗಾಯನದ ಸುಂದರ ಚಿತ್ರವನ್ನು ರತ್ನಾಕರವರ್ಣಿ ಕೊಡಮಾಡಿದ್ದಾನೆ.

ಪಡಲಿಗೆಗಿಟ್ಟು ಹೊತ್ತಗೆಯ ದಾರವನೊತ್ತಿ
ಸಡಲಿಸಿ ಕಿರಿದೋಲೆಗಳನು
ಎಡಗೈಯೊಳಾಂತು ಓದಿದಳು ಬಲಗೈಯಿಂದ
ಮಿಡಿವುತ ಭಾರಿದಂಡಿಗೆಯ.

ತಾಳೆಗ್ರಂಥವನ್ನು ಪಡಲಿಗೆಯಲ್ಲಿಟ್ಟು, ದಾರವನ್ನು ಸಡಲಿಸಿ, ಸಂಬಂಧಿತ ಓಲೆಗಳನ್ನು ಎಡಗೈಯಲ್ಲಿ ಎತ್ತಿಹಿಡಿದು ಓದುತ್ತ ಬಲಗೈಯಿಂದ ತೊಡೆಯ ಮೇಲಿದ್ದ ತಂಬೂರಿಯನ್ನು ಮೀಟುತ್ತ ಹಾಡುವ ಕಾವ್ಯಗಾಯಕಿಯ ಈ ಚಿತ್ರ ನಿತ್ಯನೂತನವಾಗಿದೆ. ಇದು ಕೇವಲ ಕವಿ ಕಲ್ಪನೆಯಲ್ಲ, ಎಂದು ಸಾರಲು ಶಿಲ್ಪಸ್ತ್ರೀಯರು, ಓಲೆ ಹಿಡಿದು ವಾಚಿಸುವ ಭಂಗಿಯಲ್ಲಿ ಇಂದಿಗೂ ನಮಗೆ ಲಭ್ಯರಿದ್ದಾರೆ(ಚಿತ್ರ 6).

ತರಬೇತಿಯ ವಿಧಾನಗಳು : ಉತ್ತಮ ಸಂಗೀತ, ನೃತ್ಯಕಲಾವಿದೆಯಾಗಿ ರೂಪಗೊಳ್ಳಲು ಹಲವು ವರ್ಷಗಳ ತರಬೇತಿ, ಹಲವು ಭಾಷೆ, ಶಾಸ್ತ್ರಗಳನ್ನು ಕಲಿಯುವ ಅವಶ್ಯಕತೆಗಳು



ಚಿತ್ರ - 6. ಓಲೆ, ಹಿಡಿದು, ತಂಬೂರಿ. ಮೀಟಿ, ಕಾವ್ಯಗಾಯನ ಮಾಡುತ್ತಿರುವ ಶಿಲ್ಪ - ಕನ್ಯೆಯರು

ತೀವ್ರವಾಗಿದ್ದವು. ನೃತ್ಯಕ್ಕೆ ತುಂಬ ಎತ್ತರವೂ ಅಲ್ಲದ, ಗಿಡ್ಡವೂ ಅಲ್ಲದ, ಒಳ್ಳೆಯ ಮೈಕಟ್ಟಿನ ರೂಪವತಿಯಾದ ಹನ್ನೆರಡು ವರ್ಷದ ಬಾಲಕಿಯರನ್ನು ಆರಿಸಲಾಗುತ್ತಿತ್ತು. ಇಪ್ಪತ್ತು ವರ್ಷದವಳಾಗುವ ಹೊತ್ತಿಗೆ ಆಕೆ ಉತ್ತಮ ನರ್ತಕಿಯಾಗಿ ರೂಪಗೊಳ್ಳುತ್ತಿದ್ದಳು. ಸಂಗೀತ ನೃತ್ಯಾಭಿನಯಗಳ ತರಬೇತಿ ಕಠಿಣವಿದ್ದು, ಗಂಟೆಗಟ್ಲೆ ಆಯಾಸವಿಲ್ಲದೇ ಕುಣಿಯುವುದನ್ನು ಆಕೆ ರೂಢಿಸಿಕೊಳ್ಳಬೇಕಿತ್ತು. (ಜಿತಶ್ರಮಾ) ಜೊತೆಗೆ ಹಲವಾರು ವಿಷಯಗಳನ್ನು ಅರಿತುಕೊಂಡು (ಬಹುಪ್ರಾಜ್ಞಾ), ಆರೋಗ್ಯವನ್ನು ಕಾಪಾಡಿಕೊಂಡು (ಅರೋಗಾ), ರಾಗಗಳ ಪೂರ್ಣ ಮಾಹಿತಿ ಪಡೆಯುತ್ತ (ರಾಗಸಂಪನ್ನಾ) ಪ್ರಿಯವಾದಿನಿಯಾಗಿ, ಪ್ರಶ್ನೋತ್ತರಗಳಲ್ಲಿ ಚತುರತೆ ಹೊಂದಿ ಹೆಸರು ಪಡೆಯಲು ಸತತವಾಗಿ ಶ್ರಮಿಸಬೇಕಾಗುತ್ತಿತ್ತು. ಗುರು, ದೇವ-ದ್ವಿಜರಲ್ಲಿ ಭಕ್ತಿ ಮತ್ತು ಸುಂದರ ವೇಷ-ಭೂಷಣಗಳಲ್ಲಿ ಸದಾ ಆಸ್ಥೆವಹಿಸುವವಳಾಗಿರುವುದು, ಅಪೇಕ್ಷಿತ ಗುಣಗಳಾಗಿದ್ದವು. ಮೂವತ್ತು ವರ್ಷ ಮೀರಿದ ನರ್ತಕಿಗೆ ಬೇಡಿಕೆ ಕಡಿಮೆಯಾಗುತ್ತಿತ್ತು.

ಲಾಟ, ಗುರ್ಜರ, ಸೌರಾಷ್ಟ್ರ, ಮಹಾರಾಷ್ಟ್ರಗಳ ನರ್ತಕಿಯರು ಶ್ರೇಷ್ಠರೆಂದೂ, ಮಧ್ಯದೇಶದವರು. ಮಧ್ಯಮರೆಂದೂ ಕರ್ನಾಟಕ, ಆಂಧ್ರ, ತಮಿಳುನಾಡಿನವರು, ಅಧಮರೆಂದೂ ಶಿವತತ್ವರತ್ನಾಕರ ಹೇಳುತ್ತದೆ! ತನ್ನ ಅಥವಾ ಸುಲಭಸಾಧ್ಯ ನೆರೆನಾಡಿನ ಕಲೆಗೆ ಬೆಲೆಯಿಲ್ಲ! ಅತಿ ಪರಿಚಯ, ಅವಜ್ಞೆಗೆ ಅವಕಾಶವೀಯುತ್ತದೆ ತಾನೆ ? ಹೊರನಾಡಿನ ಕಲೆ-ವಸ್ತುಗಳಿಗೆ, ಇಂದಿನ ವಿದೇಶಿ ವಸ್ತುಗಳ ವ್ಯಾಮೋಹದಂತೆ, ಅಂದಿಗೂ ಆ ಪರಿಸ್ಥಿತಿ ಇದ್ದಂತೆ ತೋರುತ್ತದೆ! ಹೊರನಾಡಿನ ನರ್ತಕಿಯರಿಗೆ ಹೆಚ್ಚಿನ ಬೇಡಿಕೆಯಿತ್ತು.

ಅಭಿನಯದಲ್ಲಿ, ಗಗನದಲ್ಲಿ ಹಾರುವದು, ನೀರಿನಲ್ಲಿ ತೇಲುವದು ಬಗ್ಗಿಯೇ ಇರುವುದು ನೆಲದಲ್ಲಿ ಹರಿದಾಡುವದು (ಪ್ಲವನ, ಲೋಟನ, ಪ್ರಣತಕ, ಸರಣ)ಮುಂತಾದವು ಇದ್ದವು. ಆಕಾಶ, ಜಲ, ಭೂಮಿಗಳಲ್ಲಿ ಚಲಿಸುವ ಪಕ್ಷಿ, ಮತ್ಸ್ಯ, ಪ್ರಾಣಿ, ನಾಗಗಳ ಕುರಿತಾದ

ಪುರಾಣ ಪ್ರಸಂಗಗಳು, ಕಥೆಗಳು ನಾಟ್ಯಾಭಿನಯಕ್ಕೆ ಉತ್ತಮವಸ್ತುವಾಗಿದ್ದು ಜನಪ್ರಿಯವಾಗಿದ್ದವು. ಕರಣಾದಿಗಳಿಂದ ಅವನ್ನು ಅಭಿನಯಿಸಿ ತೋರಿಸುವ ವಿಧಾನಗಳನ್ನು ಮಾನಸೋಲ್ಲಾಸವು ವಿವರಿಸುತ್ತದೆ. 'ಜಲಾಶಯೀ' ನೃತ್ಯದಲ್ಲಿ-ನೀರಮೇಲೆ ಮಲಗಿದ ಭಾಸವನ್ನುಂಟುಮಾಡುವ ದೇಹದ ಚಲನೆ (ನಿಶ್ಚಲನ?) ಹಾಗೂ ನಿಯಂತ್ರಿತ ಅಭಿನಯದ ಕುರಿತು ನಿರ್ದೇಶನವಿದೆ. ಭರತೇಶ ವೈಭವವು 'ಜಲಕನ್ನಿಕಾ' ಎಂಬ ನಾಟ್ಯವನ್ನು ಹೆಸರಿಸುತ್ತದೆ. ಅಂಚೆಗಳು ಕೊಳದಲ್ಲಿ ತೇಲಿದಂತೆ, ಮೇಲಕ್ಕೆ ನೆಗೆದು ಹಾರಿದಂತೆ, ನಿಧಾನವಾಗಿ ನೆಲಕ್ಕೆ ಇಳಿದಂತೆ ಮಾಡಿದ ಕವಿಯ ಲಾವಣ್ಯವತಿಯ ವರ್ಣನೆ ನೋಡಿದರೆ, ಇಂದಿನ ಬ್ಯಾಲೆ (ballet) ನರ್ತನದ ಲಘುತರ ಗತಿಯನ್ನು ಅಂದಿನ ನಾಟ್ಯಯುವತಿಯರು ರೂಢಿಸಿಕೊಂಡಿರಬಹುದೇ? ಎಂಬ ಕುತೂಹಲ ಕಾಡುತ್ತದೆ, ಸಹಜವಾಗಿಯೇ ತುಂಬ ಚಪಲವಾದ, ಹಗುರವಾದ ಮೈಕಟ್ಟು ನರ್ತಕಿಗೆ ಅತ್ಯವಶ್ಯವಿತ್ತು.

ಮಹಾನವಮಿಯ ಉತ್ಸವ : ರಾಜ್ಯದ ಎಲ್ಲಾ ನರ್ತಕಿಯರಿಗೆ ನಾಡಹಬ್ಬದ ಉತ್ಸವದಲ್ಲಿ ಪಾಲುಗೊಳ್ಳಲು ರಾಜಧಾನಿಗೆ ಬರುವಂತೆ ಆಮಂತ್ರಣ ಹೋಗುತ್ತಿತ್ತು, ಎಂದು ಪೋರ್ಚುಗೀಸ್ ಪ್ರವಾಸಿ ಪ್ಯಾಸ್ ಗಮನಿಸಿದ್ದ. ನವರಾತ್ರಿಯ ಒಂಭತ್ತು ದಿನಗಳೂ ಬಿಡದೇ ನೃತ್ಯ ಕಾರ್ಯಕ್ರಮಗಳು ನಡೆಯುತ್ತಿದ್ದು, ಅವಕ್ಕೆ ವಿಶೇಷವಾದ ರಂಗಭೂಮಿಯನ್ನು ಸಜ್ಜು ಮಾಡಿದ್ದನ್ನೂ ಆತ ನೋಡಿದ್ದ. ಮುಂದೆಯೂ ಈ ಪದ್ಧತಿ ನಡೆದುಬಂದು "ಕಂಠೀರವ ನರಸರಾಜ ವಿಜಯ"ವು ಆ ಕಾಲದ ಪ್ರಸಿದ್ಧ ನರ್ತಕಿಯರು ಮತ್ತು ಊರುಗಳನ್ನು ಹೆಸರಿಸುತ್ತದೆ. ದಸರಾ ಹಬ್ಬಕ್ಕೆ ಆಮಂತ್ರಣ ಪಡೆಯುತ್ತಿದ್ದವರಲ್ಲಿ ಮೈಸೂರು ದೇಶದವರಷ್ಟೇ ಅಲ್ಲದೇ ತೆಲುಗುನಾಡಿನ, ತುರುಕಪ್ರದೇಶದ, ಮಲೆಯಾಳ, ಕೊಡಗು, ತುಳುವ, ಕೊಂಕಣ ನಾಡಿನವರೂ ಇದ್ದರು. ತಮ್ಮ ತಮ್ಮ ಪ್ರದೇಶದ ನಾಟ್ಯ ಪ್ರಕಾರಗಳಲ್ಲೆಲ್ಲ ಅವರು ನಿಷ್ಣಾತೆಯರಾಗಿರುವುದು ಸಹಜವೇ ಇತ್ತು.

ನಾಡಹಬ್ಬದಲ್ಲಿ, ಸಂಜೆಯಾಗುವವರೆಗೆ ಹಲವಾರು ವಿನೋದ ಪ್ರದರ್ಶನಗಳು ನಡೆದು, ಸೊಗಸಾದ ಒಡವೆ ವಸ್ತ್ರಗಳನ್ನು ಧರಿಸಿದ ಹೆಂಗಳೆಯರು, ತಾಳಮದ್ದಳೆ, ಇತರ ವಾದ್ಯಗಳ ಹಿನ್ನೆಲೆಯಲ್ಲಿ ಹಾಡು ಹೇಳುತ್ತ, ಕೆಲವರು ಕೋಲಾಟವಾಡಿದರೆ, ಕೆಲವರು ನಾಟ್ಯವಾಡಿದರು. 'ತದ್ದಿತ್ತೈ ತದಿಗಿಣೆ ತದ್ದಳಾಂಗುಳೆಂಬ ಗಾಯಕರ ಗತಿಗೆ ಗೆಜ್ಜೆಮೆಟ್ಟಿನ ಗತಿಗಳಿಂದ, ಆ ಮುದ್ದು ವೆಣ್ಣುಗಳು" ಕುಣಿದಾಡಿ ಬಗೆಬಗೆಯ ಅಭಿನಯದಿಂದ ಸಭಿಕರ ತಲೆದೂಗಿಸಿದರಂತೆ.

ಅಂದಿನ ಪ್ರಸಿದ್ಧ ನಾಟ್ಯಾಭಿನಯಗಳಲ್ಲಿ ಗಿಳಿಯಕಟ್ಟಳೆ, ಸೋಗೆ, ನವಿಲಾಟ, ಹಂಸೆಯಗತಿ, ಎರಳೆಗಳ ಗತಿ, ಗಂಡುವೇಷ ಮುಂತಾದವುಗಳು ಜನಪ್ರಿಯವಾಗಿದ್ದಂತೆ ತೋರುತ್ತದೆ. ಭರತನಾಟ್ಯಾಚಾರ್ಯರು (ಕೆಲವು ಸಲ ಇವರನ್ನು ನಯಕಾರರೆಂದೂ, ನಟ್ಟುವರೆಂದೂ ಕರೆದಿದೆ) ವಿಶೇಷ ಗಮನ ಕೊಟ್ಟು ತರಬೇತುಗೊಳಿಸಿ ಅರಸನ ಎದುರಿಗೆ ನಡೆಯುವ ನೃತ್ಯಗಳನ್ನು ಸಿದ್ಧಪಡಿಸುತ್ತಿದ್ದರು. ಉತ್ಕೃಷ್ಟಕಾರ್ಯಕ್ರಮಗಳನ್ನು ನೀಡಿದವರಿಗೆ

ರಾಜರ ಕೈಯಿಂದ, ಬಹುಮಾನ ಪುರಸ್ಕಾರಗಳು ಸಲ್ಲುತ್ತಿದ್ದವು ಎಂದು ಕಂಠೀರವ ನರಸರಾಜ ವಿಜಯ ಹೇಳುತ್ತದೆ.

ಪೈಸ್‌ನು ಗಮನಿಸಿದಂತೆ, ಅನೇಕ ಬಗೆಯ ತುತ್ತೂರಿ, ಮದ್ದಲೆ, ಕೊಳಲು, ಪಿಟೀಲು, ಮತ್ತಿತರ ವಾದ್ಯಗಳನ್ನು ನುಡಿಸುವ ಮಹಿಳೆಯರಿದ್ದರು. ಆವುಜ, ವೀಣೆ, ಮದ್ದಳೆ, ರಾವಣ ಹಸ್ತೆ, ಕಿನ್ನರಿ, ಜಂತ್ರ, ಹುಡುಕ್ಕುಗಳಲ್ಲದೇ, ದುಸ್ತರವಾದ ಸ್ವರ ಮಂಡಲಗಳನ್ನು ನುಡಿಸಬಲ್ಲ ಹೆಂಗಳೆಯರಿದ್ದುದನ್ನು ದಾಖಲಿಸುತ್ತವೆ. ಈಗ ಕಣ್ಮರೆಯಾಗಿರುವ ಕೂರ್ಮವೀಣೆ, ಧನುರ್ವೀಣೆ, ಚಂದ್ರಮಂಡಲ, ಕಾಷ್ಠವಾದ್ಯಗಳನ್ನು ನುಡಿಸುವವರೂ ಇದ್ದರು. ಹಲವಾರು ಶಿಲ್ಪಗಳು ವಿವಿಧ ವಾದ್ಯಗಳನ್ನು ನುಡಿಸುವ ಸ್ತ್ರೀಯರನ್ನು ಚಿತ್ರಿಸುತ್ತವೆ. ಸಂಗೀತ ನೃತ್ಯ ಪಾಠ ಹೇಳಿಕೊಡುವ ಗಂಡಸರು ಇದ್ದಂತೆ (ಚಿತ್ರ 7), ನೃತ್ಯ ತರಬೇತಿ ನೀಡುವ ಹೆಂಗಳೆಯರೂ ಇದ್ದರು. ಹೆಜ್ಜೆ ತಪ್ಪಿದಾಕ್ಷಣ ತಿದ್ದುತ್ತಿದ್ದರು. (ಚಿತ್ರ 8)





7. ವೀಣಾವಾದನದ ತರಬೇತಿ 8. ನೃತ್ಯ ತರಬೇತಿ

ಜನಸಾಮಾನ್ಯರ ರಂಜನೆಗಳು : ವಿವಿಧ ಕಲಾರಂಜನೆಗಳು ರಾಜವರ್ಗಕ್ಕೆ, ಶ್ರೀಮಂತರಿಗ್ೆ ಮಾತ್ರ ಸೀಮಿತವಾಗಿರಲಿಲ್ಲ. ಸಾಮಾನ್ಯ ಜನರೂ ಸಂಗೀತ, ನಾಟಕ, ನೃತ್ಯಾದಿಗಳನ್ನು ಇಷ್ಟಪಡುತ್ತಿದ್ದರು. ಅವನ್ನು ರೂಢಿಸಿಕೊಂಡು, ಆಡಿ ಪಾಡಿ, ಕೇಳಿ ಆನಂದಿಸುತ್ತಿದ್ದರು. ದು ಆರ್ತೆಬಾರ್ಬೋಸಾ ಎಂಬ ಪ್ರವಾಸಿ ಕ್ರಿ. ಶ. ೧೫೨೧-೨೨ರಲ್ಲಿ ಕರ್ನಾಟಕಕ್ಕೆ ಬಂದವ, ಇಲ್ಲಿಯ ಸ್ತ್ರೀಯರು ನೃತ್ಯದಲ್ಲಿ ಎತ್ತಿದ ಕೈ, ನಾನಾತರದ ವಾದ್ಯಗಳನ್ನು ನುಡಿಸುತ್ತ ಹಾಡುತ್ತಾರೆ. ಅಲ್ಲದೇ ವಿಧವಿಧ ಆಟ-ಪಾಟಗಳನ್ನು ಆಡಬಲ್ಲವರೆಂಬುದನ್ನು ಗಮನಿಸಿದ್ದ. ದೈನಂದಿನ ಜೀವನದಲ್ಲಿ ಬಾರ್ಬೋಸಾ ಊರಲ್ಲಿ ಓಡಾಡುವಾಗ ನೋಡಿದ ನೋಟಗಳಾಗಿದ್ದವು ಇವು. ಆತನ ಬಳಿಕ ಸರಿಯಾಗಿ ನೂರುವರ್ಷಗಳ ತರುವಾಯ ಕರ್ನಾಟಕದ ಕರಾವಳಿ ಮತ್ತು ಕೆಳದಿ ಸಂಸ್ಥಾನದ ಭಾಗವನ್ನೆಲ್ಲ ಸಂಚರಿಸಿದ ಪೀಟ್ರೊಡೆಲ್ಲಾವಾಲೆಯೂ (ಕ್ರಿ.ಶ. ೧೬೨೩) ತನ್ನ ಪ್ರವಾಸಾನುಭವಗಳಲ್ಲಿ ಜನರ ಆಟ-ಪಾಟಗಳ ಕುರಿತು ಬರೆದಿದ್ದಾನೆ. ಗೌರಿ ಹಬ್ಬದ ಸಂದರ್ಭದಲ್ಲಿ, ಇಕ್ಕೇರಿ ಬಳಿ ಹುಡುಗಿಯರೆಲ್ಲ ರೇಶ್ಮೆ ಬಟ್ಟೆ ಉಟ್ಟು ತಲೆತುಂಬ ಹೂಮುಡಿದು, ಡೋಲು ಮತ್ತು ಇತರ ವಾದ್ಯಗಳ ಜೊತೆ ಕೋಲುಹಾಕುತ್ತ, ಹಾಡುತ್ತ, ಬೀದಿಗಳಲ್ಲಿ ಹೊರಟಿದ್ದರು. ಒಬ್ಬಳು ಹಾಡಿದರೆ, ಇತರರು ಕೋಲೆ, ಕೋಲೆ, ಕೋಲೆ, ಎಂದು ಧ್ವನಿಗೂಡಿಸುತ್ತ ಕಾಲಿನ ಹೆಜ್ಜೆಗೆ ಸರಿಯಾಗಿ ಕೋಲು ಹಾಕುತ್ತ ಸಾಗುತ್ತಿದ್ದರು. ಅದೇ ಸಂಜೆ, ಸಾರ್ವಜನಿಕರಿಗೆ ಪ್ರವೇಶವಿದ್ದ ರಾಜೋದ್ಯಾನದಲ್ಲಿ ಕೋಲಾಟದ ತಂಡಗಳನ್ನು ಆತ ನೋಡಿದ. ಜೊತೆಗೆ ಹಾಡುವ, ನರ್ತಿಸುವ ದೇವದಾಸಿಯರೂ ಅಲ್ಲಿದ್ದು ತುಂಬ ಸೊಗಸಾಗಿ ನರ್ತಿಸಿದ್ದನ್ನು ಹೇಳಿದ್ದಾನೆ. ಆತ ಗಮನಿಸಿದಂತೆ ಬೇರೆ ಬೇರೆ ಊರುಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಅಂದರೆ, ಹಬ್ಬ, ರಥೋತ್ಸವಗಳಲ್ಲಿ ಅಲ್ಲದೇ, ರಾಯಭಾರಿಗಳನ್ನು ಸ್ವಾಗತಿಸುವಾಗ ಆ ಸ್ಥಾನಕ್ಕೆ ಬರಮಾಡಿಕೊಳ್ಳುವಾಗ, ಅಥವಾ ವಿದೇಶೀಯರಿಗೆ ಮನರಂಜನೆ ಒದಗಿಸುವಾಗಲೆಲ್ಲ ಸಂಗೀತ-ನೃತ್ಯಗಳ ಏರ್ಪಾಡು ಇರುತ್ತಿತ್ತು.

ಹಂಪಿಯ ಮಹಾನವಮಿಯ ದಿಬ್ಬದ ಶಿಲಾಮಂಟಪದ ಸುತ್ತಲೂ ಕೋಲು ಹಾಕುತ್ತ ಬಗೆ ಬಗೆಯಲ್ಲಿ ಮೈಮಣಿಸಿ ಕಸರತ್ತು ಮಾಡುತ್ತಿದ್ದ ಸ್ತ್ರೀ ವಿಗ್ರಹಗಳನ್ನು ಕಂಡರಿಸಲಾಗಿದೆ(9). ನೃತ್ಯ -ನಾಟ್ಯಗಳಿಗೆ ಕಡಿಮೆಯಿಲ್ಲದ ವೈವಿಧ್ಯದಿಂದ ಅಂದಿನ ಕೋಲಾಟ ಮೆರೆಯುತ್ತಿತ್ತು. ಈ ಅಂಗವಿನ್ಯಾಸ, ನಾಟ್ಯಗತಿಯ ಕೋಲಾಟವು, ಸಂಗೀತ, ವಾದ್ಯ ತಾಳಗಳ ಹಿನ್ನೆಲೆ ಹೊಂದಿ ಕಿಂಕಿಣಿ, ಗೆಜ್ಜೆಗಳ ನಾದವನ್ನೂ ಹೊಂದಿರುತ್ತಿತ್ತಾದ್ದರಿಂದ ಅದ್ಭುತ ಆಟವಾಗಿ ಪರಿಣಮಿಸಿತ್ತು.

ಸಾಂಸಾರಿಕ ಚಿತ್ರಗಳನ್ನು ಹಾಡುಗಳಲ್ಲಿ ಪಡಿಮೂಡಿಸುವಲ್ಲಿ ಪುರಂದರ ದಾಸರು ಎತ್ತಿದ ಕೈ. ಅವರ ವರ್ಣನೆಯಾದರೂ ಕೇವಲ ಕಲ್ಪನೆಯಿರಲಾರದು. ಅಂದಿನ ಹೆಚ್ಚಿನ ಮಹಿಳೆಯರು ಇಂದಿನಂಥ ಅಕ್ಷರಾಭ್ಯಾಸ-ಶಾಲಾಶಿಕ್ಷಣಗಳಿಂದ ವಂಚಿತರಾದರೂ, ಸಂಗೀತ, ಸಾಮೂಹಿಕ ಗೀತ, ವಾದ್ಯಗಳನ್ನು ನುಡಿಸುವುದು ಭಕ್ತಿರಚನೆಗಳನ್ನು ಹಾಡುವುದು, ಕಾವ್ಯಪಠನ/ ಪುರಾಣವಾಚನಗಳಲ್ಲಿ, ಭಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಸಾರ್ವಜನಿಕ ಅಥವಾ ಬಹಿರಂಗ ಸಭೆಗಳಲ್ಲಿ ಗೃಹಿಣಿಯರ ಕಲಾಭಿವ್ಯಕ್ತಿಗೆ ನಿರ್ಬಂಧವಿದ್ದರೂ, ವಿವಾಹಾದಿ ಸಂದರ್ಭಗಳು, ಪೂಜಾರತಿ, ರಥೋತ್ಸವ, ಜಾತ್ರೆ, ಹಬ್ಬ, ಹುಣ್ಣಿಮೆಗಳು ಸ್ತ್ರೀವೃಂದಕ್ಕೆ

ಶತಮಾನಗಳಿಂದ ಹಾಡುಗಾರಿಕೆ, ವಾದ್ಯವಾದನ, ನೃತ್ಯ-ನಾಟಕಗಳೆಲ್ಲ ವಾರಾಂಗನೆಯರಿಗೆ ಮೀಸಲಾಗಿದ್ದು ನಂತರವೂ ಈ ಸಂಪ್ರದಾಯ ಮುಂದುವರೆಯಿತು. ಇವುಗಳ ಹೊಸಪ್ರಯೋಗಗಳು ಸಂಗೀತಗೋಷ್ಠಿ, ವಾದ್ಯ ಗೋಷ್ಠಿ, ನಾಟ್ಯಗೋಷ್ಠಿಗಳ ರೂಪದಲ್ಲಿ ಅವರ ಮನೆಗಳಲ್ಲೇ ಏರ್ಪಡುತ್ತಿದ್ದವು. ಬಗೆಬಗೆಯ ವಾದ್ಯಗಳನ್ನು ಅವರು ನುಡಿಸಬಲ್ಲವರಾಗಿದ್ದು, ಹಲವು ಭಾಷೆಗಳನ್ನು, ಮುಖ್ಯವಾಗಿ ಸಂಸ್ಕೃತ, ತೆಲುಗು, ತಮಿಳು, ಭಾಷೆಗಳನ್ನು ಕನ್ನಡದ ಜೊತೆಗೆ ಅಭ್ಯಸಿಸುತ್ತಿದ್ದರು. ಸಂಗೀತ ಶಾಸ್ತ್ರಗ್ರಂಥಗಳನ್ನು, ಜಯದೇವನ ಗೀತಗೋವಿಂದ ಮೊದಲಾದ ಸಂಗೀತ ನೃತ್ಯಪ್ರಧಾನ ಕಾವ್ಯಗಳನ್ನು ಪಂಡಿತರಿಂದ ಕಲಿತುಕೊಳ್ಳುತ್ತಿದ್ದರು. ಪೋಷಕವರ್ಗವು, ಉನ್ನತ ಮಟ್ಟದ ಹೊಸಕಲಾಪ್ರಯೋಗಗಳನ್ನು ಬಯಸುತ್ತಿತ್ತಾದ್ದರಿಂದ, ಅವರು ನಿರಂತರ ಶ್ರಮಿಸಬೇಕಾಗುತ್ತಿತ್ತು.


ತಿರುಮಲಾರ್ಯ ವಿರಚಿತ, 'ಚಿಕ್ಕದೇವರಾಯ ವಿಜಯ'ದಲ್ಲಿ ಬರುವ ವೇಶ್ಯಾವಾಟಿಕೆ ವರ್ಣನೆ, ವಾಸ್ತವಿಕವಾದದ್ದು ಎಂಬ ಅಭಿಪ್ರಾಯವಿದೆ. ಸ್ವತಃ ಅರಸು ಚಿಕ್ಕದೇವರಾಯ ಮತ್ತು ಸ್ನೇಹಿತ ಕವಿ ತಿರುಮಲಾರ್ಯನು ಕಂದರ್ಪ-ಕಲಾಧರ, ಎಂಬ ಹೆಸರು ಹೊಂದಿ, ಇತರ ಪರಿವಾರದ ಜೊತೆಗೆ ಛದ್ಮವೇಷದಿಂದ ವೇಶ್ಯಾವಾಟಿಕೆಗೆ ಹೋದಾಗಿನ ಪ್ರಸಂಗ. ಹಿಂದಿನ ಲಲಿತಕಲೆಗಳ ಅಧ್ಯಯನ ಅರಿಯುವಲ್ಲಿ ನಮಗೆ ಪ್ರಸ್ತುತವೆನಿಸುತ್ತದೆ. ಅವರು ಅಲ್ಲಿ ತಲುಪಿದಾಗ 'ಒಳಗರುಡಿ'ಯಲ್ಲಿ (ಬಹುಶಃ ಹಿಂದಿನ 'ನಾಗವಾಸ') ಚಿಕ್ಕವಯಸ್ಸಿನ ವೇಶ್ಯೆಯರು 'ಪದಮೇಳ'ದ ಅಭ್ಯಾಸ ನಡೆಸಿದ್ದರು. ಮುಂದಾಗಿ ತಲುಪಿದ, ಒಡೆಯರು ಬರಲಿದ್ದಾರೆ ! ಎಂಬ ಸೂಚನೆಯನ್ನು ಬಳಸು ಮಾತಿನಿಂದ ವಸಂತಕನೆಂಬ ವಿದೂಷಕನು ಕೊಡಮಾಡಿದಾಗ ಇಂಗಿತಾರ್ಥ ಅರಿಯದ ಅವರೆಲ್ಲ, ನಾವು ಮೊದಲು ಮೇಳ ಗೊಂಡು ಹಾಡುತ್ತೇವೆ ಎಂದು ತಮ್ಮ ತಮ್ಮ ವಾದ್ಯಗಳನ್ನು ತರಲು ಓಡುತ್ತಾರೆ. ಕೊಳಲು, ತಾಳ, ಮದ್ದಳೆಗಳನ್ನು ತಂದು ಬಾರಿಸಲಾರಂಭಿಸುತ್ತಾರೆ. ಆಮೇಲೆ 'ಸಿಂಗರವಾಡು'ಗಳನ್ನು ಪ್ರಾರಂಭಿಸುತ್ತಾರೆ. ಅಲ್ಲಿಯ ಇನ್ನೊಂದು ಮನೆಯಲ್ಲಿ 'ಕಾಮಂಗೆ ಜಯಮಕ್ಕೆ' ಎಂಬ ಸಾಂಗತ್ಯದ ಬಣ್ಣವಾಡು, ವೃಂದಗಾನದಲ್ಲಿ ಕೇಳಿಬರುತ್ತದೆ. ಸಾಂಗತ್ಯವನ್ನು ಏಣೆವೀಣೆ, ವೇಣುಗಳನ್ನು ಬಾರಿಸಿ ಹಾಡುತ್ತಿದ್ದರು. ಸಾಂಗತ್ಯ ಪ್ರಕಾರದಲ್ಲಿ ಹದಿನೇಳನೆಯ ಶತಮಾನದಲ್ಲಿ ಹಲವಾರು ಕಾವ್ಯಗಳು ರಚನೆಯಾಗಲಿಕ್ಕೆ ಮತ್ತು ವೇಶ್ಯೆಯರೆಲ್ಲ ಅಂಥ ಕೃತಿಗಳನ್ನು ವೀಣೆ-ಕೊಳಲುಗಳ ಹಿಮ್ಮೇಳದಲ್ಲಿ, ವೃಂದಗಾನದಲ್ಲಿ ಹಾಡಿ ಜನಪ್ರಿಯಗೊಳಿಸಲಿಕ್ಕೆ ರಾಜಾಶ್ರಯವೇ ಕಾರಣವೆಂದು ತೋರುತ್ತದೆ.

ಚಿಕ್ಕದೇವರಾಜನು ಸಂಗೀತಪ್ರಿಯನಿದ್ದು, ವೀಣೆಯಲ್ಲಿ ಆತನಿಗೆ ವಿಶೇಷ ಶ್ರಮವಿತ್ತು. ಕಲಾವತಿಯೆಂಬ ವೇಶ್ಯೆಯಲ್ಲಿ ಆತ ಅನುರಕ್ತನಾಗಿದ್ದ. ತನ್ನ ವೀಣೆಗೆ ಕಲಾವತಿಯೆಂದು ಹೆಸರಿಟ್ಟಿದ್ದ.

ಮೋಹನ ತರಂಗಿಣಿ, ಪದ್ಮರಾಜಪುರಾಣ, ಸೋಮನಾಥಚಾರಿತ್ರಗಳು ಕಲಾಜೀವನದ ಬಗ್ಗೆ ಕೊಂಚ ಮಾಹಿತಿ ಕೊಡುತ್ತವೆ. ಅಂದಿನವರು ನುಡಿಸುತ್ತಿದ್ದ ವಾದ್ಯಗಳು,

ರೂಢಿಸಿಕೊಳ್ಳುತ್ತಿದ್ದ ವಿಚಾರಗಳು, ಬೆಳೆಸಿಕೊಂಡಿರುತ್ತಿದ್ದ ಜೀವನ ದೃಷ್ಟಿಕೋನಗಳನ್ನು ಪರಿಚಯಿಸುತ್ತವೆ. ಬಸವಪುರಾಣದಲ್ಲಿ ಮಹಿಳಾವಾದ್ಯವೃಂದದ ಸಿದ್ಧತೆಯ ಚಿತ್ರವೊಂದಿದೆ. ಅದರ ಮುಖ್ಯಸ್ಥೆ, "ಮದ್ದಳೆಯವರೇ! ವಾದ್ಯಗಳನ್ನು ಶ್ರುತಿಗೊಳಿಸಿ, ಜೊತೆ ವಾದ್ಯಗಾರರೇ, ಅನುವಾಗಿರಿ. ಮೇಳದವರೇ ಸಜ್ಜಾಗಿರಿ, ಮಹದೇವಿ, ಕಹಳೆಯನ್ನು ಹಿಡಿ, ದ್ರುಪದವನ್ನು ವೊಯ್ ಎಂದು ನುಡಿಸಿ, ಲಿಂಗಾದೇವಿ ಕೊಳಲು ನುಡಿಸು. ಚಂಗಳೆ, ತಾಳ ಹಿಡಿ" ಎಂದೆಲ್ಲ ನಿರ್ದೇಶಿಸುತ್ತಿದ್ದಳು. 'ದ್ರುಪದ'ವು ಒಂದು ತಂತಿವಾದ್ಯವಿದ್ದಿರಬಹುದಾಗಿದೆ.

ಹಿಂದೆ ಕರ್ನಾಟಕದ ಭಾಗವೇ ಆಗಿದ್ದ ಔರಂಗಾಬಾದದ ಸಮೀಪದ ಪೀತಲ್ ಕೋರಾ ಗುಹಾಲಯದಲ್ಲಿ ಮಹಿಳಾ ವಾದ್ಯವೃಂದದ ಶಿಲ್ಪ ಚಿತ್ರವಿದೆ(ಚಿತ್ರ :10).



ಚಿತ್ರ - 10. 1. ಸ್ತ್ರೀವಾದ್ಯವೃಂದ 2. ನೃತ್ಯಗಾತಿಯೊಂದಿಗೆ ಮೃದಂಗ, ಕೊಳಲು ತಾಳ. ನಟುವಾಂಗ 3. ವಾದ್ಯಕಾರರೊಂದಿಗೆ ನರ್ತಕಿ.

ಅರಮನೆಯಿರಲಿ, ಸೂಳೆಗೇರಿಯಿರಲಿ, ದೇವಸ್ಥಾನವಿರಲಿ, ಓಲಗವಿರಲಿ, ಲಲಿತಕಲೆಗಳನ್ನು ಕ್ರಮವಾಗಿ ಅಭ್ಯಸಿಸಿ, ರೂಢಿಸಿಕೊಂಡು ಸಮಾಜದ ಅವಶ್ಯಕತೆಗಳಿಗನುಸಾರವಾಗಿ ಜನಕೋಟಿಗೆ ತಲುಪಿಸಬೇಕಾದ ಮುಖ್ಯ ಸಂದೇಶವನ್ನೂ ಈ ವರ್ಗದ ಕೆಲವರಾದರೂ ಮರೆತಿರಲಿಲ್ಲ. ಅದೆಂದರೆ ಧರ್ಮಶ್ರದ್ಧೆ, ದೈವಭಕ್ತಿ ಮತ್ತು ಯಾವುದೇ ಜನ್ಮವು ವಿಧಿಲಿಖಿತ, ಸನ್ಮಾರ್ಗವು ಮೋಕ್ಷಕ್ಕೆ ದಾರಿ ಎಂಬ ಅಚಲವಾದ ನಂಬಿಕೆ. ಸಾಧ್ಯವಿದ್ದ ದಾನಧರ್ಮಾದಿಗಳನ್ನು ಕೈಕೊಂಡು ಪುಣ್ಯ ಪಡೆಯಲು ಯತ್ನಿಸುವ ವೇಶ್ಯೆಯರೂ ಇರುತ್ತಿದ್ದರು.

ಸಮಾಜದ ಋಣವನ್ನು ತೀರಿಸಲು ಇನ್ನಿಲ್ಲದಂತೆ ಯತ್ನಿಸಿದ ಅನೇಕ ವಾರಾಂಗನೆಯರು ಈ ನಾಡಿನ ಚರಿತ್ರೆಯಲ್ಲಿ ಕಂಡುಬರುತ್ತಾರೆ.

ದೇವದಾಸಿಯರ ಕೊಡುಗೆ : ದೇವಾಲಯಗಳಿಗೆ ದೇವದಾಸಿಯರನ್ನು ಕೊಡಮಾಡುವುದರಿಂದ ಸ್ವರ್ಗಲೋಕ, ಸೂರ್ಯಲೋಕಗಳಿಗೆ ಪ್ರವೇಶವು ಖಾತ್ರಿಯೆಂದು ಪುರಾಣಗಳು ಬೇರೆ ಸಾರಿದ್ದರಿಂದ ಭರತಖಂಡದ ಉದ್ದಗಲಕ್ಕೂ ಈ ಪದ್ಧತಿ ದೊಡ್ಡ ಪ್ರಮಾಣದಲ್ಲಿ ಆಚರಣೆಗೆ ಬಂದಿತು. ಮುಸ್ಲಿಂ ಆಕ್ರಮಣದ ಪ್ರಾರಂಭಕಾಲದಲ್ಲಿ ಗುಜರಾಥದ ಸೋಮನಾಥ ದೇವಾಲಯದಲ್ಲಿ ಐದು ನೂರು ನರ್ತಕಿಯರಿದ್ದರೆ, ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ, ಚೋಳರ ವೈಭವ ಕಾಲದಲ್ಲಿ ನಾಲ್ಕುನೂರು ನರ್ತಕಿಯರಿದ್ದರು. ಸಂಗೀತ, ನರ್ತನಾದಿಗಳಿಂದಲೇ ದೇವರ ಸೇವೆ ಮಾಡುವ ಇವರಿಗೆ ದೊಡ್ಡ ಪ್ರಮಾಣದಲ್ಲಿ ಉಂಬಳಿ ಲಭಿಸುತ್ತಿತ್ತು.

ಕರ್ನಾಟಕದಲ್ಲಿಯೂ "ವಾರವಿಲಾಸಿನೀ ವಿರಚಿತ ನೃತ್ಯ ಗೀತ ವಾದ್ಯಸೇವೆ", ಒಂಭತ್ತನೇ ಶತಮಾನದಲ್ಲಿ ಸಾಮಾನ್ಯವಾಗಿತ್ತು. ದೇವಾಲಯ, ಬಸದಿಗಳಲ್ಲಿ ಈ ಪ್ರಕಾರದ ಸೇವೆ, 'ಅಂಗ ಭೋಗ' ಹಾಗೂ 'ರಂಗಭೋಗ'ವೆಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. ಇವುಗಳಲ್ಲಿಯ ಸ್ಪಷ್ಟಭೇದವನ್ನು ಗುರುತಿಸುವುದು ಕಷ್ಟದ್ದಾದರೂ ಪೂಜೆ ಮಂಗಳಾರತಿಗಳ ಸಮಯದ ಕ್ಲುಪ್ತಕಾಲದಲ್ಲಿ ಹಾಡುವ ನರ್ತಿಸುವ, ದೇವತಾಸ್ತುತಿಯನ್ನು ಬಾಜಿಸುವ ಸೇವೆ ಇತ್ತು. ಛತ್ರ ಹಿಡಿಯುವ, ಚಾಮರ ಬೀಸುವ, ಬೆಳ್ಳಿದಂಡ, ಕಲಶಗನ್ನಡಿ ಹಿಡಿಯುವ ಸೇವೆಯಿತ್ತು. ದೇವಾಲಯದ ಪೌಳಿಯಲ್ಲಿ ವರ್ತುಲಗಳಾಗಲಿ ರಂಗಮಂಟಪವಾಗಲಿ ನೃತ್ಯಕ್ಕೆ ಮೀಸಲಾಗಿರುತ್ತಿದ್ದ ಸ್ಥಳಗಳಾಗಲಿ ಇರುತ್ತಿದ್ದವು.

ದೇವಾಲಯದ ಸೂಳೆಯರಲ್ಲಿ ಅಂಗಭೋಗದವರಿಗೆ ಸಲ್ಲುತ್ತಿದ್ದ ದಾನದ ಪ್ರಮಾಣ ಹೆಚ್ಚಿರುತ್ತಿತ್ತು. ಆದ್ದರಿಂದ ಸಂಗೀತ, ನೃತ್ಯದವರು ಕೊಂಚ ಉನ್ನತಮಟ್ಟದವರು ಎಂದು ಊಹಿಸಬಹುದು. ಕೆಲವು ಚಿಕ್ಕದೇವಸ್ಥಾನಗಳಲ್ಲಿ ಎರಡೂ ಪ್ರಕಾರದ ಸೇವೆಗೆ ಒಬ್ಬಳೇ ಇರುತ್ತಿದ್ದಳು. ಇಂಥ ದೇವಸೂಳೆಯರು ಅಥವಾ ದೇವದಾಸಿಯರು ಅರಸರು, ದಂಡನಾಯಕರು ನಿರ್ಮಿಸಿದ ದೇವಾಲಯಗಳಲ್ಲಿ, ಅಂತಸ್ತಿಗೆ ತಕ್ಕ ದತ್ತಿಯನ್ನು ಪಡೆದು ಇತರ ಸಿಬ್ಬಂದಿಯೊಂದಿಗೆ, ಅದೇ ಆವಾರದಲ್ಲಿ ವಾಸಿಸುತ್ತಿದ್ದರು. ದೇವಾಲಯದ ಭವ್ಯತೆಗೆ

ಹೊಂದುವ ಸೂಳೆಗೇರಿಗಳಿದ್ದು, ಅಲ್ಲಿ ಹಾಡುವವರು, ನಟುವರು, ಮದ್ದಳೆಕಾರರು, ವಂಶಿಗಳು (ಕೊಳಲಿನವರು), ಪಾತ್ರದವರು ಸೂಳೆವಳ (ಸೂಳೆಗಳ ಬಳಗದ ಮುಖ್ಯಸ್ಥ?) ರೂ ಅಕ್ಕಪಕ್ಕದಲ್ಲಿರುತ್ತಿದ್ದರು. ಈ ಕೇರಿಗೆ ಹೊಂದಿ 'ನಾಗವಾಸ'ವಿದ್ದು ಅದು ದೇವದಾಸಿಯರ ಕಲಾ ತರಬೇತಿಯ ಕೇಂದ್ರವಾಗಿರುತ್ತಿತ್ತು. 'ಪ್ರಭುಲಿಂಗಲೀಲೆ'ಯ ಅಲ್ಲಮನು ಬನವಾಸಿಯ ಮಧುಕೇಶ್ವರ ದೇವಾಲಯದ ನಾಗವಾಸದ ಮದ್ದಳೆಕಾರನಾಗಿದ್ದ, ಎಂಬುದನ್ನು ಸ್ಮರಿಸಿಕೊಳ್ಳಬಹುದು. ಹಾಡುವ, ಕುಣಿಯುವ, ಪಾತ್ರದ ಹೆಂಗಳೆಯರಿಗೆ ದತ್ತಿಗಳಿದ್ದಂತೆ, ನಾಗವಾಸಕ್ಕೂ ದತ್ತಿಯಿರುತ್ತಿತ್ತು. ನಾಗವಾಸದ ಮೊಖರಿತಿಗೆ ಕೊಡಮಾಡಿದ ದಾನವಿದೆ. ಈಕೆ, ಬಹುಶಃ 'ಮುಖರಿ' ಅಥವಾ ಮುಹರಿಯೆಂಬ ಊದುವಾದ್ಯವನ್ನು ನುಡಿಸುವಾಕೆ ಇರಬಹುದು.

ದೇವಾಲಯದ ಆಡಳಿತದ ರಕ್ಷೆಯಲ್ಲಿ ಇವರು ಇರುತ್ತಿದ್ದರು. ತಪೋಧನರು, ಬ್ರಹ್ಮಚಾರಿಗಳು, ವಿದ್ಯಾರ್ಥಿಗಳು, ಭಕ್ತಾದಿಗಳು ಇರುವ ಪರಿಸರದಲ್ಲಿ ಇವರುಗಳು ನಿಯತವಾದ ಸೇವೆ ಸಲ್ಲಿಸುತ್ತಿದ್ದು ಹಬ್ಬ. ಹರಿದಿನ ರಥೋತ್ಸವಾದಿ ಪ್ರಸಂಗಗಳಲ್ಲಿ, ಆಯಾ ದೇವತಾಪುರಾಣದ ಸನ್ನಿವೇಶಗಳನ್ನು ಸಂಗೀತ, ನೃತ್ಯಕ್ಕೆ ಅಳವಡಿಸಿ ಅಭಿನಯಿಸುತ್ತಿದ್ದಿರಬಹುದು. ದೇವಾಲಯದ ಪವಿತ್ರ ವಾತಾವರಣಕ್ಕೆ ಅಪಚಾರವೆಸಗದಂತಹ ನಡತೆಯನ್ನು ದೇವದಾಸಿಯರು ಹೊಂದಿದ್ದು, ಶಿಸ್ತಿನ ನಿಯಂತ್ರಣಕ್ಕೆ ಒಳಪಟ್ಟಿದ್ದರು, ಎಂಬ ಸುಳಿವು ಹಲವು ಶಾಸನಗಳಲ್ಲಿ ದೊರೆಯುತ್ತದೆ.

ದೇವಾಲಯ, ಬಸದಿಗಳು ಹಿಂದೊಮ್ಮೆ ಊರಿನ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಅವಕ್ಕೆ ಹೊಂದಿ ಪಾಠಶಾಲೆಗಳು ಇದ್ದಂತೆ, ಪುರಾಣವಾಚನ, ಪುಣ್ಯಕಥಾಶ್ರವಣ, ಕೇಳಿಕೆ, ಕಥಾಕಾಲಕ್ಷೇಪಗಳು, ದೇವಾಲಯದ ಆವರಣದಲ್ಲೇ ನಡೆಯುತ್ತಿದ್ದವು. ಇವುಗಳೊಂದಿಗೆ ಸಂಗೀತ , ನೃತ್ಯಗಳ ಮೂಲಕ ರಂಜನೆ-ಬೋಧನೆಗಳನ್ನು ಒದಗಿಸುವುದರಲ್ಲಿ ದೇವದಾಸಿಯರ ಪಾತ್ರ ಹಿರಿದಾಗಿದೆ. ಈ ವೃತ್ತಿ, ಅನುವಂಶಿಕವಾಗಿ ಬಂದು, ಕಿರಿಯರೂ ಹಿರಿಯರ ಮಾರ್ಗದರ್ಶನದಲ್ಲಿ ನಾಗವಾಸದ ತರಬೇತಿಯಿಂದಾಗಿ, ಒಳ್ಳೆ ಕಲಾವಿದೆಯಾಗಿ ರೂಪಗೊಳ್ಳುತ್ತಿದ್ದರು. ನಂತರದ ಶತಮಾನಗಳ ವೃತ್ತಿಕಲಂಕ, ಇವರನ್ನು ತಟ್ಟಿರಲಿಲ್ಲ.

ಹದಿನೆಂಟು, ಹತ್ತೊಂಬತ್ತನೆ ಶತಮಾನಗಳಿಂದೀಚೆಗೆ ಕಲಾಜೀವಿಗಳಾಗಿದ್ದ ಗಣಿಕೆಯರ, ವಾರಾಂಗನೆಯರ, ದೇವದಾಸಿಯರ ಅಳಿಗಾಲ ಪ್ರಾರಂಭವಾಯಿತು. ಮೊಗಲರ ಅಳಿಗಾಲದೊಂದಿಗೆ ತುಂಡರಸರ ಅಂತಃಕಲಹಗಳಿಂದ, ಆಶ್ರಯವರ್ಗಗಳ ಕೊರತೆಯೂ ತಲೆದೋರಿ, ಆರ್ಥಿಕ-ಸಾಮಾಜಿಕ ಜೀವನದಲ್ಲಿ ಏರು ಪೇರುಗಳುಂಟಾದವು. ಸುರಕ್ಷತೆ-ಪೋಷಣೆಗಳ ಅಭಾವದಲ್ಲಿ ಕಲೆಗಳು ಬೆಳೆಯಲಾರವು. ! ಸಾಲದ್ದಕ್ಕೆ ಬ್ರಿಟಿಷರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಳ್ಳುತ್ತಿದ್ದಂತೆ ಕಂಡುಬಂದ ಬದಲಾವಣೆ, ಲಲಿತಕಲೆಗಳ ಅಸ್ತಿತ್ವಕ್ಕೆ ಕೊಡಲಿಯೇಟು ಹಾಕಿತು.

ಇಂಗ್ಲೀಷ್ ಪದ್ಧತಿಯ ಶಿಕ್ಷಣ ಉದ್ದೇಶ, ಭಾರತೀಯರನ್ನು ಆಧುನಿಕ ಯುಗದತ್ತ ಕರೆದೊಯ್ಯುವುದು ಮುಖ್ಯವಾಗಿದ್ದರೂ, ಸರಕಾರವು ಈ ವಿಚಾರದಲ್ಲಿ ಪಡೆದ ನೆರವು ಪಾಶ್ಚಾತ್ಯ ಮಿಶನರಿಗಳಿಂದ. ಇವರಲ್ಲಿ ಹೆಚ್ಚಿನವರು ಇಂಗ್ಲಂಡಿನಲ್ಲಿ ಆಗ ಪ್ರಚಲಿತವಿದ್ದ ಬಿಗುವಾದ ಮಡಿವಂತಿಕೆಯವರಾಗಿದ್ದರು. ಸಹಸ್ರಾರು ವರ್ಷಗಳಿಂದ ಬಂದ ಈ ನೆಲದ ಸಾಂಸ್ಕೃತಿಕ ಬೇರುಗಳ ಪರಿಚಯವೇ ಅವರಿಗಿರಲಿಲ್ಲ. ಶಿಕ್ಷಣ ಜೊತೆಗೆ ಸಾಮಾಜಿಕ ಸುಧಾರಣೆಗಳು ಮುಖ್ಯವೆಂದವರು, ಗಣಿಕಾವರ್ಗ, ದೇವದಾಸಿಯರು, ಸಾಮಾನ್ಯ ವೇಶ್ಯೆಯರು, ಬಿಡುಸೂಳೆಯರು, ಅಗ್ಗದ 'ನಾಚ್' ಹೆಂಗಳೆಯರಲ್ಲಿ ವ್ಯತ್ಯಾಸವನ್ನೇ ಕಾಣಲಿಲ್ಲ. ಸಂಗೀತ - ನೃತ್ಯ-ನಾಟಕಗಳೆಲ್ಲ ಅವರಿಗೆ ಕೀಳುದರ್ಜೆಯ ಮನರಂಜನೆಗಳಾಗಿ ಕಂಡವು. ಇಂಗ್ಲೀಷ್ ಮಾದರಿಯ ಶಿಕ್ಷಣ ಪಡೆದ ವರ್ಗದವರಲ್ಲಿ ಆ ಕುರಿತಾದ ತಿರಸ್ಕಾರ ಹುಟ್ಟುವಂತೆ ಪ್ರಚಾರ ಮಾಡಿದರು. ಹಾಗೂ ಹೀಗೂ ಉಳಿದು ಬಂದ, ಸಂಗೀತ -ನರ್ತನಾದಿಗಳಿಂದ ಜೀವಿಸುತ್ತಿದ್ದ ವರ್ಗವು, ದೇಹ ವಿಕ್ರಯವೊಂದನ್ನೇ ಅವಲಂಬಿಸಬೇಕಾಗಿ ಬಂದಿತು.* ಇಷ್ಟಾದರೂ ದೇವದಾಸಿ ವರ್ಗಕ್ಕೆ ಸೇರಿದ ಕೆಲವು ಪ್ರತಿಭಾವಂತೆಯರು ಇದ್ದೇ ಇದ್ದರು. ೧೯ನೇ ಶತಮಾನದಲ್ಲೂ ಕಲೋಪಾಸಕರಾಗಿ, ಕಲಾಪೋಷಕರಾಗಿ ನಾಡನ್ನು ಬೆಳಗಿ ಅಜ್ಞಾತರಾಗಿಯೇ ಅಳಿದ ಈ ವರ್ಗದ ವಿದುಷಿಯರು ಅನೇಕರು ಆಗಿ ಹೋಗಿದ್ದಾರೆ.ಅವರು ಕಲಾಪರಿಣತಿಗೆ ತಪಸ್ಸಿನಂತೆ ಪರಿಶ್ರಮ ಮಾಡಬೇಕಾಗುತ್ತಿತ್ತು. ಇಂಥ ಕಲಾಸಿದ್ಧಿ ಪಡೆದ ಅಪರೂಪದ ಮಹಿಳೆಯನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಉಚಿತವಾಗಿದೆ.

ಬೆಂಗಳೂರು ನಾಗರತ್ನಮ್ಮನವರು (೧೮೭೮-೧೯೫೨) ಇಂಥ ಕಲೋಪಾಸಕಿ. ದೇವದಾಸಿ ಕುಟುಂಬದಲ್ಲಿ ಜನ್ಮವೆತ್ತಿದ ಅವರು ಚಿಕ್ಕಂದಿನಲ್ಲೇ ಕನ್ನಡ. ಸಂಸ್ಕೃತ, ತೆಲುಗುಗಳಲ್ಲಿ ಪರಿಣತಿ ಪಡೆದರು. ಸಂಗೀತ, ನೃತ್ಯಗಳು ತಾಯಿಯಿಂದ ಪಡೆದ ಬಳುವಳಿ. ನಂತರ ಬಿಡಾರಂ ಕೃಷ್ಣಪ್ಪ ಮತ್ತಿತರ ಗುರುಗಳಿಂದ ಸಂಗೀತದಲ್ಲಿ ಉನ್ನತ ಸಾಧನೆ ಮಾಡಿದರು. ತಮಿಳುನಾಡು, ಆಂಧ್ರಗಳಲ್ಲಿ ಅವರ ಸಂಗೀತಕ್ಕೆ ಇನ್ನಿಲ್ಲದ ಮನ್ನಣೆ ಪ್ರಶಸ್ತಿಗಳು ದೊರೆತವು.

ಸಂತ ತ್ಯಾಗರಾಜರನ್ನು ದೇವರಂತೆ ಆರಾಧಿಸುತ್ತಿದ್ದ ನಾಗರತ್ನಮ್ಮ ಅವರ ಕೃತಿಗಳನ್ನು ಹಾಡುವುದರಲ್ಲಿ ಮಿಗಿಲಾಗಿದ್ದರು. ಒಮ್ಮೆ ತ್ಯಾಗರಾಜರ ಸಮಾಧಿ, ಅಳಿವಿನ ಅಂಚಿನಲ್ಲಿದ್ದಂತೆ ಕನಸು ಕಂಡರು. ಮರುದಿನವೇ ಸಂತ ತ್ಯಾಗರಾಜರು ಜೀವಮಾನವಿಡೀ ಕಳೆದ ತಿರುವಾಯೂರಿಗೆ ಧಾವಿಸಿದರು. ಕಷ್ಟಪಟ್ಟು ಸಮಾಧಿ ಸ್ಥಳ ಹುಡುಕಿದರು. ಸಂಬಂಧಪಟ್ಟ ಅಧಿಕಾರಿಗಳನ್ನು

---

* ಕರ್ನಾಟಕದ ಶ್ರೇಷ್ಠ ಚಿಂತಕ ಲೇಖಕರಲ್ಲಿ ಒಬ್ಬರಾದ ಡಿ.ವಿ.ಜಿ. ಅವರು ತಾವು ಕಂಡ, ಕೇಳಿದ ದೇವದಾಸಿ ವರ್ಗದ ಮಹಿಳೆಯರ ಬಗ್ಗೆ ನೆನಪಿನ ಚಿತ್ರಗಳನ್ನು ಬರೆದಿದ್ದಾರೆ. ೧೯ನೇ ಶತಮಾನದ ಕೊನೆಯಲ್ಲಿ ಮುಳಬಾಗಿಲಿನಂಥ ಊರುಗಳಲ್ಲೂ ಸಂಗೀತ ನೃತ್ಯ ಸೇವೆಗೆ ತಮ್ಮನ್ನು ಮುಡುಪಿಟ್ಟ ಉತ್ತಮ ಕಲಾವಿದೆಯರಿದ್ದರು.

ಡಿ.ವಿ.ಜಿ. ಕೃತಿ ಶ್ರೇಣಿ : ಸಂಪುಟ ಆರು. ಪು ೧೭೧ -೧೮೫

ಕಂಡು ಆ ಸ್ಥಳ ಖರೀದಿಸಿ ಸಮಾಧಿಯ ಪುನರ್ ನಿರ್ಮಾಣ ಮಾಡಿದರು. ಶ್ರೀರಾಮನ ದೇವಸ್ಥಾನವನ್ನೂ ಕಟ್ಟಿಸಿದರು.

ಇದಕ್ಕಾಗಿ ಅವರು ತಮ್ಮ ಯಾವತ್ತೂ ಒಡವೆಗಳನ್ನು, ಮದ್ರಾಸಿನಲ್ಲಿ ಕಟ್ಟಿಸಿದ ಹೊಸಮನೆಯನ್ನು ಮಾರಿದರು. ಆ ಸ್ಥಳ, ಕರ್ನಾಟಕ ಸಂಗೀತದ ವಿದ್ವಾಂಸರನ್ನು ಆಕರ್ಷಿಸಲಾರಂಭಿಸಿತು. ಇಂದು ತಿರುವಾಯೂರಿನಲ್ಲಿ ಜನೆವರಿ ತಿಂಗಳಲ್ಲಿ ನಡೆಯುವ ತ್ಯಾಗರಾಜ ಆರಾಧನೆ ರಾಷ್ಟ್ರಮಟ್ಟದ ಉತ್ಸವವಾಗಿದೆ. ದೇಶದಾದ್ಯಂತ ಸಂಗೀತಪ್ರೇಮಿಗಳನ್ನು ಆಕರ್ಷಿಸುವಂತೆ, ಮಹಾವಿದ್ವಾಂಸರೂ ಬಂದು ಸಂಗೀತಸೇವೆಯನ್ನು ಕೊಡಮಾಡುವ ತಾಣವಾಗಿದೆ.

ನಾಗರತ್ನಮ್ಮನವರ ಇನ್ನೊಂದು ಮಹತ್ವದ ಕೊಡುಗೆಯೆಂದರೆ 'ರಾಧಿಕಾಸಾಂತ್ವನಂ' ಎಂಬ ತೆಲುಗು ಕಾವ್ಯವನ್ನು ಅಳಿವಿನಂಚಿನಿಂದ ರಕ್ಷಿಸಿದ್ದು. ಈ ಕಾವ್ಯವನ್ನು ಬರೆದ ಮುದ್ದು ಪಳನಿ (ಕ್ರಿ.ಶ. ಸು. ೧೭೩೦-೧೭೬೦) ತಂಜಾವೂರದ ಭೋಸಲೆಗಳ ಆಸ್ಥಾನವಿದುಷಿಯಾಗಿದ್ದಳು. ತನ್ನ ತಾಯಿ, ಅಜ್ಜಿಯರಂತೆ ವಿಸ್ತೃತ ಸಂಸ್ಕೃತ ತೆಲುಗು ವ್ಯಾಸಂಗ ಕೈಕೊಂಡದ್ದನ್ನು ಗ್ರಂಥದ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾಳೆ.ಜಯದೇವನ ಅಷ್ಟಪದಿ 'ಗೀತಗೋವಿಂದ'ದ ಮಾದರಿಯಲ್ಲಿ ರಚಿತವಾದ 'ರಾಧಿಕಾ ಸಾಂತ್ವನಂ' ಶೃಂಗಾರ ವಿರಹಗಳ ಉತ್ತಮ ಮಾದರಿಯಾಗಿ ಜನಪ್ರಿಯವಾಗಿತ್ತು.

ಆದರೆ ರಾಧಾಕೃಷ್ಣರ ದೈವೀ ಶೃಂಗಾರರಸವೇ ಕಾವ್ಯದ ವಸ್ತುವಾಗಿದ್ದರಿಂದ ಅದು ಬ್ರಿಟಿಶ ಸರಕಾರದ ಅವಕೃಪೆಗೆ ಒಳಗಾಯ್ತು. ಅದು 'ಅಶ್ಲೀಲ'ಸಾಹಿತ್ಯವೆಂದು ನಿಷೇಧಿಸಲ್ಪಟ್ಟಿತು.' ಮಿಶನರಿಗಳ ಸಲಹೆಯಂತೆ ನೈತಿಕ ಆರೋಗ್ಯದ ಹೊಣೆ ಹೊತ್ತ ಸರಕಾರ ಮತ್ತು ಸಾಮಾಜಿಕ ಧುರೀಣರಿಂದಾಗಿ ಪ್ರತಿಗಳೆಲ್ಲ ನಾಮಶೇಷವಾದವು.

ಆಕಸ್ಮಾತ್ 'ರಾಧಿಕಾಸಾಂತ್ವನಂ', ನಾಗರತ್ನಮ್ಮನವರ ಕಣ್ಣಿಗೆ ಬಿತ್ತು. ಸಂಗೀತ-ನೃತ್ಯ-ನಾಟಕಕ್ಕೆಂದೇ ರಚಿತವಾಗಿದ್ದ ಪದಲಾಲಿತ್ಯದ ಮತ್ತು ನಾದ ಸೌಂದರ್ಯದ ಆ ಕೃತಿಗೆ ಮಾರುಹೋದರು. ಒಂದೇ ಒಂದು ಮುದ್ರಿತ ಪ್ರತಿ ದೊರೆಯದೇ ಕಷ್ಟದಿಂದ ೨-೩ ತಾಳೆಗರಿ ಗ್ರಂಥಗಳನ್ನು ದೊರಕಿಸಿ, ಸಂಸ್ಕೃತ, ತೆಲುಗು ಪಂಡಿತರಿಂದ ಪರಾಮರ್ಶೆಗೆ ಒಳಪಡಿಸಿ ಸ್ವಂತ ಖರ್ಚಿನಿಂದ ೧೯೧೧ನೇ ಇಸ್ವಿಯಲ್ಲಿ ಮುದ್ರಿಸಿದರು. ೧೯೩೦ರಲ್ಲಿ ದೇವದಾಸಿ ಪದ್ಧತಿ ನಿರ್ಮೂಲನ ಕಾಯದೆಯಡಿ ಮತ್ತೆ, ಆ ಕೃತಿ ಮೈಸೂರು ಸಂಸ್ಥಾನದಲ್ಲಿ ಮುಟ್ಟುಗೋಲಿಗೆ ಒಳಪಟ್ಟಿತು. ಅದರ ನಿಷೇಧ ಹೋದದ್ದು 1947ರಲ್ಲಿ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ.

ಸಂಗೀತ ಸಾಹಿತ್ಯ ಪೋಷಕರಾಗಿ ಬೆಂಗಳೂರು ನಾಗರತ್ನಮ್ಮನವರ ಕೊಡುಗೆ ಮಿಗಿಲಾದದ್ದು. ತಿರುವಾಯೂರಿನ ವಾರ್ಷಿಕ ಆರಾಧನೆ ಅಥವಾ ಸಂಗೀತ ಸಮಾರಾಧನೆಗೆ ಸಹಸ್ರ ಸಂಖ್ಯೆಯಲ್ಲಿ ಸಂಗೀತೋಪಾಸಕರು ಸೇರುತ್ತಾರಾದರೂ, ಅದಕ್ಕಾಗಿ ವೇದಿಕೆ ನಿರ್ಮಿಸಿದವಳನ್ನು ನೆನಪಿಸಿಕೊಳ್ಳುವವರು ವಿರಳ. ತ್ಯಾಗರಾಜರ ಸಮಾಧಿಯೆದುರಿಗೆ ಇನ್ನೊಂದು

ಚಿಕ್ಕ ಸಮಾಧಿಯಿದ್ದು ಅಲ್ಲಿ ಚಿರ ನಿದ್ರೆಯಲ್ಲಿರುವ ನಾಗರತ್ನಮ್ಮಳತ್ತ ಗಮನ ಹರಿಸುವವರು ಇನ್ನೂ ವಿರಳ !

ಮತ್ತೆ ಈ ಕಲೆಗಳು ಪುನಶ್ಚೇತನ ಕಾಣಬೇಕಾದರೆ ಮುಕ್ಕಾಲು ಶತಮಾನವೇ ದಾಟಬೇಕಾಯಿತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕೊನೆಗೊಮ್ಮೆ ಜಾತಿ ಭೇದವಿಲ್ಲದೇ ವಿದ್ಯಾವಂತರಲ್ಲಿ ಸಂಗೀತದ ವಿವಿಧ ನೃತ್ಯ ಪ್ರಕಾರಗಳ ಪ್ರಾಚೀನತೆಯ ಕುರಿತು ಆಸಕ್ತಿ ಹುಟ್ಟಿ, ಪ್ರತಿಭಾವಂತ ಕಲಾಕಾರರನೇಕರು ಕಾಣಿಸಿಕೊಳ್ಳುವಂತಾದಾಗ, ಇತ್ತೀಚೆಗೆ ಇನ್ನೊಂದು ಅಪಾಯಕಾರಿ ಬೆಳವಣಿಗೆ ಕಾಣಿಸಿಕೊಂಡಿದೆ. ಪಾಶ್ಚಾತ್ಯ ಪದ್ಧತಿಯನ್ನು ಸರ್ವವಿಧದಲ್ಲಿ ಅನುಕರಿಸುತ್ತಿರುವ ಯುವಜನಾಂಗ, ಬೇರಿಲ್ಲದ, ನಿರ್ದಿಷ್ಟ ರೂಪ-ಉದ್ದೇಶಗಳಿಲ್ಲದ ಸರ್ವಜನಾಂಗೀಯ ಗ್ಲೋಬಲ್ ಸಂಸ್ಕೃತಿಯ ಪ್ರತೀಕವೆಂದು ಕರೆಯಲ್ಪಡುವ ಚಿತ್ರವಿಚಿತ್ರ-ಸಂಗೀತ ವಾದ್ಯ, ನೃತ್ಯಗಳಿಗೆ ಮಾರುಹೋಗಿದೆ. ಕೆಲವೇ ಎಳೆಯರು ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯಪ್ರಕಾರಗಳನ್ನು ಅಭ್ಯಸಿಸುತ್ತಿದ್ದರೂ ಪತ್ರಿಕೆಗಳ, ವಿದ್ಯುನ್ಮಾನ ಮಾಧ್ಯಮಗಳ, ಕ್ಷಣಿಕ ಪ್ರಸಿದ್ಧಿ-ಪ್ರಚಾರಗಳಿಗೆ ಮಾರುಹೋಗಿದ್ದಾರೆ. ದಿಢೀರ್ ಯಶಸ್ಸಿಗೆ ಹಪಹಪಿಸುತ್ತಿದ್ದಾರೆ. ಹೀಚುಗಾಯಿಯಾಗಿ ಉದುರಿದ, ಉದುರುತ್ತಿರುವ ಅನೇಕ ಮುಖಗಳು ಹಿಂದಿನಷ್ಟು ಆಶಾದಾಯಕವಾಗಿಲ್ಲವೇನೋ ಅನಿಸುತ್ತಿದೆ!

● ● ●

೫. ಆಧ್ಯಾತ್ಮ ಲೋಕದಲ್ಲಿ ಮಹಿಳೆಯರು

ಸನ್ಯಾಸಿನಿಯರು : ಮಹಿಳೆಯರು ಪುರುಷರೊಂದಿಗೆ ತಕ್ಕಮಟ್ಟಿಗೆ ಸಮಾನತೆ ಸಾಧಿಸಿದ್ದು ಅಥವಾ ಲಿಂಗಭೇದವಿಲ್ಲದೇ ಗೌರವಕ್ಕೆ ಪಾತ್ರವಾದದ್ದು ಧಾರ್ಮಿಕಕ್ಷೇತ್ರದಲ್ಲಿ. ಜೈನ, ಶೈವ, ಶಾಕ್ತ ಮತ್ತು ಬೌದ್ಧ ಯೋಗಿನಿಯರು ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಜೈನ ಧರ್ಮದಲ್ಲಿ ಸ್ತ್ರೀಯಾದವಳು ಮೋಕ್ಷಕ್ಕೆ ಅರ್ಹಳಲ್ಲ! ಎಂಬ ನಂಬಿಕೆ ಇದ್ದರೂ ಸನ್ಯಾಸಿನಿಯರಿಗೆ ಗಂಡಸರಿಗೆ ದೀಕ್ಷೆ ನೀಡುವ ವಿಶೇಷ ಅಧಿಕಾರವಿತ್ತು. ಇದರಿಂದಾಗಿ ಅಜ್ಜಿಯರಿಗೆ ಅಥವಾ ಕಂತಿಯರಿಗೆ ಸಾಕಷ್ಟು ಸಂಖ್ಯೆಯಲ್ಲಿ 'ಗುಡ್ಡ' (ಶಿಷ್ಯ)ರು ಇರುತ್ತಿದ್ದರು. ಸಂಸಾರದಿಂದ ವಿಮುಖರಾಗಿ ಕಠಿಣವ್ರತಾದಿಗಳನ್ನು ಆಚರಿಸಿ, ಹೆಸರಾಂತ ತಪಸ್ವಿಗಳಿಂದ ಬೋಧನೆ, ಮಾರ್ಗದರ್ಶನ ಪಡೆದು ಸ್ವತಃ ತಪೋಧನೆಯರಾದ ಕಂತಿಯರ ಹೆಸರುಗಳು ಶ್ರವಣಬೆಳ್ಗೊಳದಲ್ಲಿ ಹೇರಳವಾಗಿ ಕಂಡುಬರುತ್ತವೆ. ಅವರ ಸ್ತ್ರೀ, ಪುರುಷ ಶಿಷ್ಯಂದಿರು ನಿಲ್ಲಿಸಿದ ನಿಸಿದಿ (ನಿಷದಿ) ಗಲ್ಲುಗಳ ಸ್ಮಾರಕಗಳಿವೆ. ಗೃಹಿಣಿ, ಸೋದರಿ, ತಾಯಿ, ಮಗಳು ಮೊದಲಾದವರಲ್ಲಿ ಗೃಹಜೀವನದಲ್ಲಿ ವಿರಕ್ತಿ ತಾಳಿದ ಹಲವರು ಶ್ರಾವಕಿಯರಾಗಿ, ಜನ್ಮ ಸಾರ್ಥಕ ಮಾಡಿಕೊಂಡರೆ ಕೆಲವರು ಅತ್ಯಂತ ಕಠಿಣವಾದ ಸನ್ಯಾಸನ ವ್ರತದಿಂದ ಜೀವನ್ಮುಕ್ತಿಗೆ ಯತ್ನಿಸಿ ಆರ್ಯಿಕೆ, ಅಜ್ಜಿ ಅಥವಾ ಕಂತಿಯರಾಗುತ್ತಿದ್ದರು. ಈ ಎರಡು ಪ್ರಕಾರದ ಸನ್ಯಾಸಿನಿಯರಲ್ಲಿ ಭೇದವನ್ನು ಗುರುತಿಸುವುದು ಕಷ್ಟದ್ದಾದರೂ ಕಂತಿಯರಿಗೆ ದೀಕ್ಷಾದಿ ವ್ರತಗಳನ್ನು ಆಯಾ ಸಂಘ, ಗಣದ ಪರವಾಗಿ ಬೋಧಿಸುವ ವಿಶೇಷ ಅಧಿಕಾರವಿದ್ದಿರಬೇಕು. ಅಜ್ಜಿಯರು ಸನ್ಯಾಸಿನಿಯರಾಗಿ ಏಕಾಂತದ ಧ್ಯಾನ ಜೀವನ ನಡೆಸುತ್ತಿದ್ದಿರಬೇಕು ಎಂಬುದು ಊಹೆ.

ಕಾವ್ಯಗಳಲ್ಲೂ ಕಂತಿಯರ ಉಲ್ಲೇಖಬರುತ್ತದೆ. ನಯಸೇನನ ಧರ್ಮಾಮೃತದಲ್ಲಿ ಅನಂತಮತಿ ಎಂಬಾಕೆ ತಾಳ್ಮೆ, ಸಹನೆ-ತ್ಯಾಗಗಳಲ್ಲಿ ಅಪೂರ್ವ ಸಾಧನೆ ಗಳಿಸಿದ ಕತೆ ಬರುತ್ತದೆ. ತಂದೆತಾಯಿಗಳ ಮುದ್ದಿನ ಕಣ್ಣೆಯಾಗಿ ಬೆಳೆದ ಈ ಚೆಲುವೆಯನ್ನು ಉದ್ಯಾನದಲ್ಲಿ ಉಯ್ಯಾಲೆಯಾಡುತ್ತಿದ್ದಾಗ ವಿದ್ಯಾಧರನೊಬ್ಬನು ಅಪಹರಿಸುತ್ತಾನೆ. ನಂತರ ಹಲವು ಕಷ್ಟಪರಂಪರೆಗೆ ಒಳಗಾದರೂ ಚಿಕ್ಕಂದಿನಲ್ಲೇ ಸ್ವೀಕರಿಸಿದ ಬ್ರಹ್ಮಚರ್ಯ, ಜಿನವ್ರತಗಳ ಬಲದಿಂದ ಆಕೆ ಅವನ್ನೆಲ್ಲ ಎದುರಿಸುತ್ತಾಳೆ. ಕೊನೆಗೊಮ್ಮೆ ತಂದೆಯನ್ನು ಸಂಧಿಸಿದಾಗ ಆತ ಆಕೆಯನ್ನು ಸಂಸಾರಿಯಾಗಲು ಎಷ್ಟು ಯತ್ನಿಸಿದರೂ ಆಕೆ ಸ್ವಸಂತೋಷದಿಂದಲೇ ತಾನು

ಸನ್ಯಾಸಿನಿಯಾಗುವುದಾಗಿ ತಿಳಿಸಿ ಚಿಕ್ಕಂದಿನಲ್ಲಿ ವರದತ್ತ ಭಟ್ಟಾರಕರು ತಮಾಷೆಗೆಂದು ತನಗೆ ಕೊಟ್ಟ ವ್ರತವನ್ನು ಮನಸಾ ಸ್ವೀಕರಿಸಿರುವುದಾಗಿ ತಂದೆಗೆ ನೆನಪಿಸುತ್ತಾಳೆ. ನಂತರ ಕಮಲ ಶ್ರೀಕಂತಿ ಎಂಬುವಳಿಂದ ಜಿನದೀಕ್ಷೆ ಸ್ವೀಕರಿಸಿ ಉಪವಾಸ, ಕಠಿಣ ವ್ರತ, ತಪಸ್ಸುಗಳನ್ನು ಕೈಕೊಂಡು ಸಮಾಧಿ - ವಿಧಿಯಿಂದ ದೇಹವನ್ನು ತ್ಯಜಿಸುತ್ತಾಳೆ. ಇದು ಜೈನ ಪುರಾಣದ ಕತೆಯಾದರೂ, ಸ್ವಸಂತೋಷದಿಂದ ಸನ್ಯಾಸ ಸ್ವೀಕರಿಸುವುದು, ದೃಢಚಿತ್ತದ ಮಹಿಳೆಯರು ಅದರತ್ತ ವಾಲುವದು ಮತ್ತು ಶ್ರೇಷ್ಠ ಸನ್ಯಾಸಿನಿಯರಿಂದ ದೀಕ್ಷೆ ಪಡೆಯುವುದು, ಸಾಮಾನ್ಯವಾಗಿತ್ತೆಂದು ಶ್ರವಣಬೆಳ್ಗೊಳದ ಅನೇಕ ಶಾಸನಗಳ ಆಧಾರ ದೃಢಪಡಿಸುತ್ತದೆ. ರಾಜ್ಯಾಡಳಿತದಲ್ಲಿ ಪಾಲುಗೊಂಡ ರಾಣಿಯರು ಉನ್ನತ ಅಧಿಕಾರದಲ್ಲಿದ್ದ ಮಹಿಳೆಯರು ಆಡಳಿತದ ಜೊತೆಗೆ ಧರ್ಮರಕ್ಷಣೆ, ಪ್ರಸಾರ, ಶಿಕ್ಷಣಗಳಿಗೂ ಅವಕಾಶ ಕಲ್ಪಿಸಿಕೊಡುತ್ತಿದ್ದರು. ಸನ್ಯಾಸಿನಿಯರ ವಾಸಕ್ಕೆ ಅನುಷ್ಠಾನಕ್ಕೆ ಬಸದಿ, ಜಿನಾಲಯಗಳನ್ನು ನಿರ್ಮಿಸಿ, ಅಥವಾ ಅವು ಇದ್ದಲ್ಲಿ ಆಹಾರ, ಬಟ್ಟೆಗಳ ದಾನಕ್ಕೆ ಸೌಕರ್ಯವನ್ನು ಕಲ್ಪಿಸಿಕೊಡುತ್ತಿದ್ದರು. ಅಜ್ಜಿಯರು ಋಷಿಗಳು, ವಿದ್ಯಾರ್ಥಿಗಳು, ಬಸದಿ ಅಥವಾ ಜಿನಾಲಯಕ್ಕೆ ಹೊಂದಿದ್ದ ವಾಸಗೃಹಗಳಲ್ಲಿ ಇರುತ್ತಿದ್ದರು.

ಕೆಲವೆಡೆ ಸ್ತ್ರೀಯರೇ ಆ ಕ್ಷೇತ್ರದ ಮುಖ್ಯಸ್ಥೆಯರಾಗಿರುತ್ತಿದ್ದರು. ಸಮಾಜದಲ್ಲಿ ಉನ್ನತ ಗೌರವಕ್ಕೆ ಪಾತ್ರರಾಗಿರುತ್ತಿದ್ದರು. ಕೆಲವರು ಸಂಚಾರವನ್ನು ಕೈಕೊಂಡು ಧರ್ಮಬೋಧೆ ಮಾಡಿ ಶಿಷ್ಯಂದಿರನ್ನು ಧರ್ಮಕಾರ್ಯದಲ್ಲಿ ತೊಡಗಿಸುತ್ತಿದ್ದರು. (ಚಿತ್ರ 11) ಅವರಿಗೆ ಎಲ್ಲೆಡೆ ಶಿಷ್ಯ, ಶಿಷ್ಯಂತಿ, ಗುಡ್ಡ, ಗುಡ್ಡಿಯರು ಇರುತ್ತಿದ್ದರು. ನಂತರ ಬೆಳ್ಗೊಳ, ಕೊಪ್ಪಳ, ಹುಂಚ, ಕಾರ್ಕಳ ಮುಂತಾದ ಕ್ಷೇತ್ರಗಳಲ್ಲಿ ಸಮಾಧಿ ಮರಣ ಹೊಂದಿರುತ್ತಿದ್ದರು. ಅವರ ನೆನಪಿಗೆ ನಿಲ್ಲಿಸಿದ ನಿಸಿದಿಗಲ್ಲುಗಳು ಅವರೆಲ್ಲ ಆಧ್ಯಾತ್ಮಿಕ ಜೀವನದಲ್ಲಿ ಏರಿದ ಎತ್ತರವನ್ನು ಸೂಚಿಸುತ್ತವೆ.

ಬೌದ್ಧ ಯೋಗಿನಿಯರು : ಅದಾಗಲೇ ಭಾರತದಲ್ಲಿ ಇಳಿಗಾಲದಲ್ಲಿದ್ದ ಬೌದ್ಧಮತದ ಕುರುಹುಗಳು ಅಲ್ಲೊಂದು ಇಲ್ಲೊಂದು ಕರ್ನಾಟಕದಲ್ಲಿ ಕಂಡುಬರುತ್ತಿದ್ದವು. ಬಳ್ಳಿಗಾವಿಯ ಬೌದ್ಧ ವಿಹಾರದಲ್ಲಿ ಭಿಕ್ಕುಣಿಯರು ಇದ್ದು ರೂಪಭಟ್ಟಯ್ಯನೆಂಬಾತ ಅವರ ಅನ್ನಾಹಾರದ ವ್ಯವಸ್ಥೆಗೆ ಭೂಮಿಯನ್ನು ಕೊಡಮಾಡಿದ್ದ.

ಇತರ ಪಂಥಗಳ ಸನ್ಯಾಸಿನಿಯರು, ಯೋಗಿನಿಯರು : ಶೈವ, ವೀರಶೈವ, ಶಾಕ್ತ, ಮಹಾನುಭಾವ ಯೋಗಿನಿಯರು ಶಾಸನ ಮತ್ತು ಸಾಹಿತ್ಯಗಳಿಂದ ಆಗಾಗ ಇಣುಕು ಹಾಕುತ್ತಿರುತ್ತಾರೆ. ಚಾಲುಕ್ಯ ಅಕ್ಕಾದೇವಿ, ಶೈವ ಸನ್ಯಾಸಿನಿ, ಗಂಗಿಕಬ್ಬೆಗೆ ಹೊಟ್ಟೂರಿನ ಮಠದಲ್ಲಿ ಶಿಕ್ಷಣ ಕೊಡುವ ಏರ್ಪಾಡು ಮಾಡಲು ದತ್ತಿಯೊಂದನ್ನು ಏರ್ಪಡಿಸಿದ್ದಳು. ಇತರ ಸನ್ಯಾಸಿಗಳಂತೆ ಯಮನಿಯಮ ಸ್ವಾಧ್ಯಾಯ ಇತ್ಯಾದಿಗಳಲ್ಲೆಲ್ಲ ಮಿಗಿಲಾದ ಗಂಗಿಕವ್ವೆ ಆ ಮಠದ ಮುಖ್ಯಸ್ಥೆಯಿದ್ದಿರಬೇಕು. ಯಾದವ ಸಿಂಘಣನ ಕಾಲದಲ್ಲಿ ದೇಕಲಬ್ಬೆ ಗೊರತಿ, ವ್ಯಾಸೇಶ್ವರ ದೇವರಿಗೆ ಕೊಡಮಾಡಿದ ದತ್ತಿಯ ಹೊಣೆ ಹೊತ್ತಿದ್ದಳು. ದೇವಸ್ಥಾನದ ಪೂಜೆಗೆ, ಆಡಳಿತಕ್ಕೆ



ಚಿತ್ರ - 11. ಜೈನ ಸನ್ಯಾಸಿನಿಯರಿಗೆ ಬೋಧನ (ಶ್ರವಣ ಬೆಳ್ಗೊಳದ ಭಿತ್ತಿ ಚಿತ್ರದಿಂದ)

ಗೊರವರಂತೆ ಗೊರವಿಯರೂ ಅಂದಿನ ದಿನಗಳಲ್ಲಿ ಹೊಣೆಗಾರರಾಗಿದ್ದರು. ಬಿಲ್ಲವ್ವೆಯು ಕ್ಷೇತ್ರ ಸನ್ಯಾಸಿಯಾಗಿದ್ದು ಮಹಾನುಭಾವೆ, ಮೂಲಸ್ಥಾನ ದೇವರ ಪಾದಾರಾಧಕಿ ಎಂದು ಕರೆಯಲ್ಪಟ್ಟಿದ್ದರಿಂದ ಚಕ್ರಧರನಿಂದ ಸ್ಥಾಪಿಸಲ್ಪಟ್ಟ ಮಹಾನುಭಾವ ಪಂಥದ ಯೋಗಿನಿಯಿರಬೇಕು.

ಹೊಯ್ಸಳ ಕಾಲದ ಚಂದವ್ವೆಯೆಂಬಾಕೆ ಗಣಕುಮಾರಿಯ ಪೀಠವನ್ನು ಅಲಂಕರಿಸಿದ್ದು ಶಾಸನವೊಂದರಿಂದ ತಿಳಿದುಬರುತ್ತದೆ. ಆಕೆಯ ತಂದೆ ಕಂಡ ನಂಬಿ ಸೆಟ್ಟಿಯು ಹೊಸವೂರಿನಲ್ಲಿ

ಕುಂಜೇಶ್ವರ ದೇವಾಲಯ ನಿರ್ಮಿಸಿದಾಗ ನೂರಿಪ್ಪತ್ತು ದೇವಸ್ಥಾನಗಳ ಪ್ರತಿನಿಧಿಗಳು, ಗಣಗಳು ಮತ್ತು ಕೃಷಿಕರ ಪ್ರತಿನಿಧಿಗಳೆಲ್ಲ ಸಭೆ ಸೇರಿ ಅವಳನ್ನು ಒಡೆಯಳು ಎಂದು ಒಪ್ಪಿಕೊಂಡರು. 'ಗಣಕುಮಾರಿ' ಎಂಬ ಬಿರುದನ್ನು ಕೊಡಮಾಡಿದರು. ದೇವಸ್ಥಾನದ ಉತ್ಪನ್ನ, ಖರ್ಚು, ವಿಲೇವಾರಿಗಳೆಲ್ಲ ಚಂದವ್ವೆಯ ಮೇಲ್ವಿಚಾರಣೆಗೆ ಒಳಪಟ್ಟಿದ್ದವು. ಮಹನೀಯರು, ಗಣಕುಮಾರಿಯರು, ಗೊರವಿಯರು ಗಣಕುಮಾರರು ಮಠ, ದೇವಾಲಯ ಅಥವಾ ಕ್ಷೇತ್ರವೊಂದರ ಧರ್ಮಾಧಿಕಾರಿಗಳಾಗಿರುತ್ತಿದ್ದು, ಸಂಸ್ಕಾರಾದಿಗಳಿಗೆ ಸಹಾಯ ಕೋರಿ ಬರುತ್ತಿದ್ದ ಶಿಷ್ಯ ಕೋಟಿಗೆ ಮಾರ್ಗದರ್ಶನ ನೀಡುವುದು, ದಾನದ ವಿಲೇವಾರಿ ಮಾಡುವುದು ಮುಂತಾದವುಗಳ ಹೊಣೆ ಹೊತ್ತಿರುತ್ತಿದ್ದರು.

ಶಾಕ್ತ ಯೋಗಿನಿಯರು : ಮಹಾಲಕ್ಷ್ಮಿ, ಮಹಾಮಾಯಾ, ದುರ್ಗೆ, ಕಾಳಿ ಮೊದಲಾದ ದೇವತೆಗಳ ರೂಪದಲ್ಲಿ ಶಕ್ತಿ ಪೂಜೆ, ಕರ್ನಾಟದಲ್ಲಿ ಮೊದಲಿನಿಂದಲೂ ರೂಢಿಯಲ್ಲಿದೆ. ಬರಬರುತ್ತ ಗ್ರಾಮದೇವತೆಗಳೂ ಪಾರ್ವತಿ-ದುರ್ಗೆ-ಕಾಳಿಯರ ರೂಪ ಪಡೆದು ಪೂಜಿಸಲ್ಪಡಲಾರಂಭಿಸಿದವು. ಕೋಲಾರಮ್ಮನ (ಪಿಡಾರಿಯಾರ) ದೇವಸ್ಥಾನದಲ್ಲಿ ನಾಲ್ವರು ಶಾಕ್ತ ಯೋಗಿನಿಯರಿದ್ದರು. ತಮ್ಮ ಉಪಾಸನೆಯೊಂದಿಗೆ ಶಕ್ತಿಯ ಅರ್ಚನೆ ಅವರು ಕೈಕೊಂಡಿರಬಹುದಾದರೂ ವಿವರಗಳು ಲಭ್ಯವಿಲ್ಲ.

ಗಣಪತಿಯ ಪ್ರತಿಮೆಯನ್ನು ಹೊತ್ತು ತಿರುಗುತ್ತಿದ್ದ ಗೊರವಿಯ ಕುರಿತು 'ತಾಂತಿರಿವ ಗೊರವಿ ಬೆನಕನುಮಂ ತಿರಿಯಿಪಳ್' ಎಂಬ ಉಲ್ಲೇಖ ಶಾಂತಿಪುರಾಣ ಕಾವ್ಯದಲ್ಲಿ ಬರುತ್ತಿದ್ದು ಈ ಗೊರವಿ ಗಾಣಪತ್ಯ ಸನ್ಯಾಸಿನಿಯಾಗಿರಬಹುದೆಂದು ಡಾ. ಚಿದಾನಂದ ಮೂರ್ತಿಗಳ ಅಭಿಪ್ರಾಯ.

ಕರ್ನಾಟಕದಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ಪಂಥಗಳ ಉಪಾಸನೆಯಲ್ಲಿ ಮಹಿಳೆಯರು ಪುರುಷರ ಸರಿಸಮಾನರಾಗಿ ತೊಡಗಿರುತ್ತಿದ್ದು ತಪಸ್ಸು-ಸಾಧನೆಗಳಲ್ಲಿ ಮಿಗಿಲಾದವರನ್ನು ಸಮಾಜವು ಲಿಂಗಭೇದವಿಲ್ಲದೇ ಗೌರವಿಸುತ್ತಿತ್ತು, ಎಂದು ಸಾಮಾನ್ಯವಾಗಿ ಹೇಳಬಹುದು. ಸನ್ಯಾಸವೆಂಬುದು ಕಠಿಣತಮ ವ್ರತವಾಗಿದ್ದು ಸಂಯಮಕ್ಕೆ ಪ್ರಾಧಾನ್ಯವಿತ್ತು. ಮಾನವ ಸಹಜ ದೌರ್ಬಲ್ಯಗಳು ಈ ವರ್ಗವನ್ನು ಕಾಡಲು ಸಾಧ್ಯವಿತ್ತು ಎಂಬುದನ್ನು ಈ ನಾಡಿನ ಶ್ರೇಷ್ಠ ಯೋಗಿನಿ ಅನುಭಾವಿಯ ಉದ್ಗಾರದಲ್ಲಿ ಕಾಣಬಹುದು.

'ಬಿಟ್ಟೆನೆಂದರೆ ಬಿಡದೀ ಮಾಯೆ ... ಯೋಗಿಗೆ ಯೋಗಿಣಿಯಾಯಿತ್ತು ಮಾಯೆ
ಸವಣಂಗೆ ಸವಣಿಯಾಯಿತ್ತು ಮಾಯೆ
ಯತಿಗೆ ಪರಾಕಿಯಾಯಿತ್ತು ಮಾಯೆ,

ನಿನ್ನ ಮಾಯೆಗೆ ನಾನಂಜುವಳಲ್ಲ !' ಎಂದವಳು ಅಕ್ಕಮಹಾದೇವಿ.

ಅಚಲ ಮನಸ್ಸು ಹೊಂದಿದ ಪರಮ ಸನ್ಯಾಸಿನಿಯರು ಅನೇಕರು ಆಗಿಹೋಗಿರಲು ಸಾಕು. ಅವರಲ್ಲಿ ಅಕ್ಕನ ಅಪ್ರತಿಮ ಕಾವ್ಯಾಭಿವ್ಯಕ್ತಿಯಿದ್ದಿರಲಿಲ್ಲ. ಆ ಮಾತು ಬೇರೆ!

• • •


೬. ದುಡಿಮೆಯಲ್ಲಿ

ದುಡಿಯುವ ಮಹಿಳೆ : ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಅನಾದಿ ಕಾಲದಿಂದ ಹೊಲ, ತೋಟಗಳಲ್ಲಿ, ಹೈನುಗಾರಿಕೆಯಲ್ಲಿ ದುಡಿಯುವ ಮಹಿಳೆಯರಿದ್ದಂತೆ, ನೇಕಾರಿಕೆ, ಬಣ್ಣ ಹಾಕುವದು, ಅಗಸತನ, ಗಾಣಿಗತನ ಇನ್ನಿತರ ಕೈಗಾರಿಕೆಗಳಲ್ಲಿ, ಕಸುಬುಗಳಲ್ಲಿ ಗಂಡಸರ ಸಮನಾಗಿ ದುಡಿಯುವ ಹೆಂಗಳೆಯರು ಕಂಡುಬರುತ್ತಿದ್ದರು. ಈಗಿನ ಸರಕಾರೀ ನೌಕರಿಗಳಂತೆ ಅಂದಿನ ಅರಮನೆಗಳು ಬಹಳಷ್ಟು ಹೆಂಗಳೆಯರಿಗೆ ಉದ್ಯೋಗಗಳನ್ನು ಕೊಡಮಾಡುತ್ತಿದ್ದವು. ಮೌರ್ಯರ ಕಾಲದಿಂದ ಅರಮನೆಯ ಅಂತಃಪುರಗಳಲ್ಲಿ ಆಯುಧಗಳನ್ನು ಪ್ರಯೋಗಿಸಬಲ್ಲ ತರಬೇತಿ ಹೊಂದಿದ ಹೆಂಗಳೆಯರಿದ್ದರು. ಮಹಿಳಾ ಅಂಗರಕ್ಷಕರಿರುತ್ತಿದ್ದರು. ಛತ್ರ, ಚಾಮರ, ಹಿಡಿಯಲು, ಮೇಣೆಗಳನ್ನು ಹೊರಲು ಮಹಿಳೆಯರು ಇದ್ದಂತೆ, ದಾದಿಯರು, ಪರಿಚ್ಛಾರಿಕೆಯರು, ಭಂಡಾರಿಗರು ಅರಮನೆಯ ಸೇವೆಯಲ್ಲಿರುತ್ತಿದ್ದರು.

ಚಾಲುಕ್ಯರ ಕಾಲದಲ್ಲಿಯೂ ಈ ಪದ್ಧತಿ ಮುಂದುವರಿಯಿತು. ಅಡಿಗೆ, ಸ್ನಾನ, ಕಾಲಿಗೆ, ಮೈಗೆ ಎಣ್ಣೆತಿಕ್ಕುವದು, ಕೇಶಾಲಂಕಾರ ಬೇರೆಬೇರೆ ಸುಗಂಧಾದಿ ಲೇಪಗಳ ತಯಾರಿಕೆ, ಗೀತವಾದ್ಯ, ನೃತ್ಯ, ಜಲಕ್ರೀಡೆ ಮುಂತಾದವುಗಳಲ್ಲಿ ಉತ್ತಮ ಕುಲದ ಹೆಂಗಳೆಯರನ್ನು (ಸುಯೋಷಿತಃ) ನೇಮಿಸಬೇಕು ! ಎಂದು ಮಾನಸೋಲ್ಲಾಸ ಹೇಳುತ್ತದೆ.

ವಿಜಯನಗರ ಕಾಲದಲ್ಲಿ ಇದೇ ಪರಂಪರೆ ಮುಂದುವರೆದು ಯುರೋಪಿನ ಪ್ರವಾಸಿಗಳಾದ ನಿಕೋಲೊ ಕೊಂತಿ, ಪೈಸ್ ಮತ್ತು ನುನಿಝರು, ಸಹಸ್ರಗಟ್ಟಲೆ ಊಳಿಗದ ಹೆಂಗಳೆಯರು ವಿಜಯನಗರದ ಅರಮನೆಗಳಲ್ಲಿ ಇದ್ದುದನ್ನು ಹೇಳಿದ್ದಾರೆ. ಕತ್ತಿ, ಗುರಾಣಿ ಹಿಡಿಯುವ, ಮಲ್ಲಯುದ್ಧ ಮಾಡುವ (ಚಿತ್ರ 11a), ತುತ್ತೂರಿ, ಕಹಳೆ, ಕೊಂಬು ಊದುವ, (ಚಿತ್ರ 18), ವಿವಿಧ ವಾದ್ಯ ಬಾಜಿಸುವ, ಬೋಯಿ ಕೆಲಸದ, ಅಡಿಗೆಯ ಹೆಂಗಳೆಯರಿದ್ದರು. ಜ್ಯೋತಿಷ ಹೇಳುವ, ಮಂತ್ರ- ತಂತ್ರ ಮಾಡುವ, ಅರಮನೆಯಲ್ಲಿ ಆಗುವ ಖರ್ಚಿನ ಲೆಕ್ಕ-ಪತ್ರ ಇಡುವ, ರಾಜ್ಯದ ಯಾವತ್ತೂ ವ್ಯಾಪಾರಗಳನ್ನು ಬರೆದಿಡುವ ಮಹಿಳೆಯರು ಇದ್ದರು. ನಂತರ ಅರಮನೆಯ ಹೊರಗಿನ ಅಧಿಕಾರಿಗಳು ಬರೆದಿಟ್ಟವುಗಳೊಡನೆ ಅವನ್ನು ಹೋಲಿಸಿ ನೋಡುತ್ತಿದ್ದರು. ಅರಮನೆಯಲ್ಲಿ ನ್ಯಾಯಾಧೀಶರು, ಕಾವಲಿನವರು ಮಹಿಳೆಯರೇ ಇರುತ್ತಿದ್ದರು. ಉತ್ತಮ ತರಬೇತಿ ಇಲ್ಲದೇ ಅರಮನೆಗಳಲ್ಲಿ ನೌಕರಿ ಸಿಗುತ್ತಿತ್ತು ಎಂದು

ನಂಬುವದು ಕಷ್ಟ! ಆದರೆ ಅವರೆಲ್ಲರ ತರಬೇತಿಯ ವಿಧಾನಗಳ ಕುರಿತು ಸಾಮಗ್ರಿ ದೊರೆಯುತ್ತಿಲ್ಲ.



ಚಿತ್ರ - **11a.** ಮಲಯುದ್ಧ ಮಾಡುವ ಸ್ತ್ರೀಯರು

ಘಟ್ಟಿವಳ್ತಿಯರು, (ಸುಗಂಧ ದ್ರವ್ಯಗಳನ್ನು ಅಭಿರುಚಿಗನುಸಾರ ತೇಯ್ದುಕೊಡುವವರು) ಹಾಸಿಗೆ ಸಿದ್ಧಪಡಿಸುವ, ಬಗೆ ಬಗೆಯ ರೀತಿಯಲ್ಲಿ ಬಟ್ಟೆ ತೊಡಿಸುವ, ಹೂಮಾಲೆಗಳನ್ನು ಕಟ್ಟುವ, ತೊಡೆದಟ್ಟುವ (ತೊಡೆಹಿಸುಕುವ) ಕನ್ನಡಿ, ಡವಕೆ, ಕಳಶ, ಹಡಪ, ಹಾವುಗೆ, ಪಡಿಗ ಹಿಡಿಯುವ ಹೆಣ್ಣು ಊಳಿಗದವರ ಕುರಿತು ಕಾವ್ಯಗಳು ಹೇಳಿದರೆ ಪಡಿಯರತಿ (ಪ್ರತಿಹಾರಿ) ಎಣ್ಣೆಕೊಂಡು ಮಾರುವ ಕುಂಚಟಗಿತ್ತಿ, ಬೋನಗಿತ್ತಿ, ದವಸಗಿತ್ತಿಯರ ಹೆಸರುಗಳನ್ನು ಶಾಸನಗಳು ಉಸುರುತ್ತವೆ.

ಸಂಚಿಯ ಹೊನ್ನಮ್ಮ ಹೆಸರೇ ಸೂಚಿಸುವಂತೆ ಚಿಕ್ಕದೇವರಾಯನ ಅರಮನೆಯಲ್ಲಿ ರಾಣಿಯರಿಗೆ ಬಗೆಬಗೆಯ ಪ್ರಕಾರದ ತಾಂಬೂಲ ತಯಾರಿಸಿಕೊಡುವ ಸೇವೆಯಲ್ಲಿದ್ದಳು. ತನ್ನ ಅಸಾಮಾನ್ಯ ಚುರುಕು ಬುದ್ಧಿಯಿಂದಾಗಿ ಅರಸಿ-ಅರಸರ ಗಮನ ಸೆಳೆದು. ಅವರ ಪ್ರೋತ್ಸಾಹ ಪಡೆದು 'ಹದಿಬದೆಯಧರ್ಮ' ಎಂಬ ಕಾವ್ಯ ಬರೆದಳು. ಓದು ಬರಹ ಗೊತ್ತಿಲ್ಲದ ಹೆಂಗಳೆಯರು ತನ್ನ ಕೃತಿಯನ್ನು ಓದಿಸಿ ಕೇಳಲಿ! ಇದರಿಂದ ತಾನು ವಹಿಸಿದ ಶ್ರಮ ಅವರಿಗೆ ಅರ್ಥವಾದೀತು! ಎಂಬ ಆಶಯ ವ್ಯಕ್ತಪಡಿಸಿದ್ದಾಳೆ. ವೀರದೇವಮ್ಮ, ಸಿದ್ಧದೇವಮ್ಮ ಮತ್ತು ಶಿವಮಾಯಿದೇವಿಯರು ಭಾವಪೂರ್ಣವಾಗಿ ವಚನಗಳನ್ನು ಹಾಡುತ್ತ ಅದನ್ನೇ ಕಾಯಕವಾಗಿಸಿದ್ದರು. ಸಿದ್ಧದೇವಮ್ಮ, ಜಾನಪದ ನಾಟ್ಯ ಪ್ರವೀಣೆಯಾಗಿದ್ದರೆ ಶಿವಮಾಯಿದೇವಿ, ಪುರಾಣ ಮತ್ತು ಕತೆ ಹೇಳುವುದರಲ್ಲಿ ಮಿಗಿಲಾಗಿದ್ದಳು. ಮಹದೇವಿಯೆಂಬಾಕೆ ಸಂಗೀತ ವಾದ್ಯಗಳ ಜೊತೆ ನೃತ್ಯ ಮಾಡುತ್ತ ಕಾವ್ಯವನ್ನು ಪಠಿಸುವ ಕೇಳಿಕೆಯ ಪ್ರಕಾರದಲ್ಲಿ ನಿಷ್ಣಾತೆಯಾಗಿದ್ದಳು.

ರೆಮ್ಮವ್ವೆ ರಾಟೆಯಿಂದ ನೂಲು ತೆಗೆಯುತ್ತ 'ನಾ ತಿರುಹುವ ರಾಟೆಯ ಕುಲಜಾತಿ ಕೇಳಿರಣ್ಣಾ, ಅಡಿಯಣ ಹಲಗೆ ಬ್ರಹ್ಮ, ತೋರಣವಿಷ್ಣು, ನಿಂದ ಬೊಂಬೆ, ಮಹಾರುದ್ರ' ಎಂದು ಧರ್ಮಸಮನ್ವಯ ಸಾಧಿಸುತ್ತ, 'ಕದಿರೆ ರೆಮ್ಮವ್ವೆ' ಎಂದೇ ಪ್ರಸಿದ್ಧಳಾದಳು.

ತುಂಬ ಕಾಲದವರೆಗೆ ವಿವಾಹದತ್ತ ಮನಸ್ಸು ಹಾಕದ ದೇವರ ದಾಸಿಮಯ್ಯನು ಕೊನೆಗೆ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ಮನಗಂಡು, ದುಗ್ಗಳೆಯಲ್ಲಿ ಆದರ್ಶ ಪತ್ನಿಯನ್ನು ಕಂಡ. ದುಗ್ಗಳೆ, ನೂತ ನೂಲಿನಿಂದ ದಾಸಿಮಯ್ಯ ವಸ್ತ್ರಗಳನ್ನು ನೇಯುತ್ತಿದ್ದ. ಅಮ್ಮವ್ವೆಯೆಂಬ ಶರಣೆ ತಂದೆ, ತಾಯಿ ಪತಿ ಇವರನ್ನೆಲ್ಲ ಕಳೆದುಕೊಂಡು, ರಾಟೆಯ ಕಾಯಕವನ್ನು ಕೈಕೊಂಡಿದ್ದಳು. ಪಿಟ್ಟವ್ವೆಯ ಹೆಸರು ಶರಣರ ಚರಿತ್ರೆಯಲ್ಲಿ ಬರುತ್ತದೆ. ದೋಸೆ ಮಾಡುವದನ್ನು ಕಾಯಕವಾಗಿಸಿದ ಅನಾಥೆ ಅವಳಾಗಿದ್ದಳು.

ಅಣ್ಣಲದೇವಿಯೆಂಬಾಕೆ ಸೆಗಣಿ ಒಟ್ಟುಮಾಡಿ, ಬೆರಣಿಗಳನ್ನು ಮಾಡಿ ಮಾರಿ ಜೀವಿಸುತ್ತಿದ್ದಳು. ಶರಣರ ಯುಗದಲ್ಲಿ ಮೊಟ್ಟಮೊದಲ ಬಾರಿಗೆ, ಕಾರ್ಮಿಕ ಮಹಿಳೆಯರಿಗೆ ಅವರ ಆಧ್ಯಾತ್ಮ ಬಲದಿಂದಲೇ ಸಮಾಜದಲ್ಲಿ ಸ್ಥಾನ ಸಿಗುವಂತೆ ಆಯಿತು.

ಜಾನಪದ ಕಲೆಗಳಲ್ಲಿ ಕುಟುಂಬದ ಸದಸ್ಯರೆಲ್ಲ ಭಾಗವಹಿಸುತ್ತ ಊರೂರು ಸುತ್ತಿ ಹೊಟ್ಟೆ ಹೊರೆಯುವ ಪದ್ಧತಿ ಇತ್ತು. ಬಹುರೂಪಿಗಳು, ಕಿಳ್ಳೇ ಕ್ಯಾತರು, ಗೊಂದಲಿಗರು,

ಚೌಡಿಕೆಯವರು, ಡೊಂಬರಾಟದವರು ಮುಂತಾದವರಲ್ಲಿ ಹೆಣ್ಣುಮಕ್ಕಳ ಪಾತ್ರ ದೊಡ್ಡದಾಗಿತ್ತು. ಗೃಹೋದ್ಯೋಗಗಳಲ್ಲಿ ಹೊಲಿಯುವ, ಬಟ್ಟೆ ಒಗೆಯುವ, ನೂಲುವ, ನೇಯುವ ವೃತ್ತಿಗಳು ಇದ್ದವು. ೧೯ನೇ ಶತಮಾನದ ಪ್ರಾರಂಭದವರೆಗೂ ಮನೆಮನೆಯಲ್ಲಿ ರಾಟೆಗಳು ಇದ್ದು ಜಾತಿಭೇದವಿಲ್ಲದೇ ಹೆಂಗಸರೆಲ್ಲ ಬಿಡುವಿನ ಸಮಯದಲ್ಲಿ ನೂಲುತ್ತಿದ್ದರು. ಊರಲ್ಲಿಯ, ನೇಕಾರರಿಂದ ನೇಯಿಸುತ್ತಿದ್ದರು. ಅವರಲ್ಲೂ ಹೆಂಗಳೆಯರು ಸಾಕಷ್ಟು ಪ್ರಮಾಣದಲ್ಲಿ ಇರುತ್ತಿದ್ದರು.

ಗೋಪಾಲ, ಕಲಾಲ, ನಟ, ರಜಕ, ವ್ಯಾಧ ಮೊದಲಾದವರ ಹೆಂಡಂದಿರು ಮಾಡಿದ ಸಾಲವನ್ನು ಅವರವರ ಗಂಡಂದಿರು ಚುಕ್ತಾ ಮಾಡಬೇಕು! ಏಕೆಂದರೆ ಇಂಥ ಪುರುಷರ ಉಪಜೀವನ ಅವರ ಹೆಂಡಂದಿರ ಮೇಲೆ ಅವಲಂಬಿಸಿರುತ್ತದೆ ಎಂದು ಮಿತಾಕ್ಷರಾ ನಿರ್ದೇಶಿಸುತ್ತದೆ. ಹೈನಿನ ವ್ಯಾಪಾರ, ಸೆರೆಭಟ್ಟಿ ಇಳಿಸುವುದು ನಟರೊಂದಿಗೆ ವೇಷ ಹಾಕುವುದು, ಅಗಸ (ರಜಕ)ನಿಗೆ ಬಟ್ಟೆ ತೊಳೆಯಲು ಸಹಾಯಮಾಡುವುದು, ಬೇಟೆಯಲ್ಲಿ ಗಂಡಸರೊಂದಿಗೆ ಜೊತೆಯಾಗಿ ಕಾಡಿಗೆ ಹೋಗುವದು ಬೇಡ ಸ್ತ್ರೀಯರಿಗೆ ಸಾಮಾನ್ಯವಾಗಿತ್ತು.

ಛತ್ರಪತಿ ಶಿವಾಜಿಯು ಬೆಳವಡಿ ಸಂಸ್ಥಾನಕ್ಕೆ ದಂಡೆತ್ತಿ ಬಂದಾಗ ಮಲ್ಲಮ್ಮ ಹೆಂಗಳೆಯರ ಒಂದು ಪಡೆಯನ್ನೆ ಮುನ್ನಡಿಸಿ ಕಾದಾಡಿದ ವಿಚಾರ ಬರುತ್ತದೆ. ಬೆಳವಡಿ, ಸಣ್ಣ ಸಂಸ್ಥಾನವಾಗಿತ್ತು. ಶಿವಾಜಿಯಂಥ ಪರಾಕ್ರಮಿಯ ವಿಶಾಲಸೈನ್ಯ ಎದುರಿಸುವ ಸೇನೆ ಬೆಳವಡಿಯ ಬಳಿ ಇರಲಿಲ್ಲ. ಆದರೆ ಚಿಕ್ಕ ಹೆಣ್ಣು ಪಡೆ ಇತ್ತು. ಅದರಲ್ಲಿ ಎರಡುನೂರು ಮಹಿಳೆಯರು ಇದ್ದರು. ಬಹುಶಃ ಈ ಹೆಂಗಳೆಯರೆಲ್ಲ ಸಾಮಾನ್ಯ ಗೃಹಿಣಿಯರಾಗಿದ್ದು ಕೃಷಿ, ಮನೆವಾಳ್ತೆ, ಪಶುಸಂಗೋಪನೆ ಇತರ ವೃತ್ತಿಗಳಲ್ಲಿ ತೊಡಗಿದ್ದರು. ಮಲ್ಲಮ್ಮ ಸಂಕಟಪ್ರಸಂಗಕ್ಕಾಗಿಯೇ ಇಂಥವರ ಸ್ವಯಂ ಸೇವಕ ಪಡೆಯನ್ನು ತರಬೇತು ಮಾಡಿರಲು ಸಾಕು. ಏನಿದ್ದರೂ ಕನ್ನಡ ನಾಡಿನ ಚರಿತ್ರೆಯಲ್ಲಿ ಬೆಳವಡಿ ಮಲ್ಲಮ್ಮನ ಮುಂದಾಳ್ತನದಲ್ಲಿ ಸಂಪೂರ್ಣವಾಗಿ ಕಾರ್ಮಿಕ ಮಹಿಳಾಪಡೆಯೊಂದು ಮಹಾಸೇನೆಯನ್ನು ಎದುರಿಸಿದ್ದು ಅಪೂರ್ವದಾಖಲೆಯಾಗಿದೆ!


ಶಿಲ್ಪಗಳಲ್ಲಿ ಹಾಲು ಕರೆಯುವ (ಚಿತ್ರ:12), ನೀರು ಎರೆಯುವ (ಚಿತ್ರ:12a),ಅಡಿಗೆ ಮಾಡುವ (ಚಿತ್ರ:12b), ಮೊಸರು ಕಡೆಯುವ (ಚಿತ್ರ:13), ಹೆಂಗಸರು ಸಿಗುತ್ತಾರೆ. ಆದರೆ ಅವರೆಲ್ಲ ಊಳಿಗದವರು ಎನ್ನುವಂತಿಲ್ಲ. ದುಡಿಮೆಯಲ್ಲಿ ನಿರತ ಮಹಿಳೆಯರು.

ಭಟಕಳದ ೧೫ನೇ ಶತಮಾನದ ಶಿಲ್ಪವೊಂದರಲ್ಲಿ ತರುಣಿಯ ನಾಡಿ ನೋಡುತ್ತಿರುವ ಗ್ರಾಮ ವೈದ್ಯೆಯ ಚಿತ್ರಣವಿದೆ(ಚಿತ್ರ:13a). ಅದರಂತೆ ತರುಣನೋರ್ವನನ್ನು ಹಕ್ಕಿಯ ಅಂಕಕ್ಕೆ ಆಮಂತ್ರಿಸುವ ಶಿಲ್ಪವಿದೆ. ತಾನೇ ಸಾಕಿ ಸಲಹಿದ ಹಕ್ಕಿಗಳ ಮಾರಾಟವನ್ನು ಅದು ಪ್ರತಿನಿಧಿಸುತ್ತಿರಲೂ ಸಾಕು (ಚಿತ್ರ:13b)ಅಂಗಡಿ ಮಳಿಗೆ ನಡೆಸುವ ಮಹಿಳೆಯರು ಹಿಂದೆಯೂ ಇದ್ದರು.(ಚಿತ್ರ:13c).



ಚಿತ್ರ 12. ಹಾಲು ಕರೆಯುವ ಮಹಿಳೆ







ಚಿತ್ರ 12a. ನೀರು ಎರೆಯುವದು



ಚಿತ್ರ 12b. ಅಡಿಗೆ ಮಾಡುವ ಮಹಿಳೆ.



13. ಮೊಸರು ಕಡೆಯುವ ಮಹಿಳೆ



ಚಿತ್ರ 13a. ನಾಡಿ ನೊಡುವ ಗ್ರಾಮ ವೈದ್ಯೆ



ಚಿತ್ರ 13b. ಹಕ್ಕಿಯೊಡನೆ ಮಹಿಳೆ



ಚಿತ್ರ 13c. ಅಂಗಡಿ ನಡೆಸುವ ಮಹಿಳೆ

೭. ಶಿಕ್ಷಣ ಕ್ಷೇತ್ರದಲ್ಲಿ

ಸ್ತ್ರೀಯರಿಗೆ ಸಮಪಾಲು, ಸಮಬಾಳು, ಸ್ವಾತಂತ್ರ್ಯ, ಸಮಾನತೆಗಳು ಬೇಕೆಂಬ ಕೂಗು ಇಪ್ಪತ್ತೊಂದನೆಯ ಶತಮಾನದಲ್ಲೂ ಕೇಳಿ ಬರುತ್ತಿರುವುದರಿಂದ, ಶತಕಗಳಿಂದ ಅವರು ಪುರುಷರ ದಾಸ್ಯದಲ್ಲಿ ಕೊಳೆಯುತ್ತಿದ್ದರೆಂಬ ಭಾವನೆ ಬರುವುದು ಸಹಜ. ಆದರೆ ಕರ್ನಾಟಕದ ಸ್ತ್ರೀ ಶಿಕ್ಷಣದ ಇತಿಹಾಸ ತಿರುವಿ ಹಾಕಿದಾಗ ಕಣ್ಣಿಗೆ ಬೀಳುವ ವಿಚಾರ ಅಷ್ಟೊಂದು ನಿರಾಶಾಜನಕವಾಗಿಲ್ಲ. "ನ ಸ್ತ್ರೀ ವಿದ್ಯಾಮರ್ಹತಿ" ನಿಯಮವನ್ನು ಜಾರಿಗೆ ತಂದ ಯತ್ನ ತಿಳಿದುಬಂದಿಲ್ಲ. ತನ್ನ ಸಬಲತೆಯನ್ನು ಸ್ಥಾಪಿಸುವದಕ್ಕೋಸ್ಕರವೇ ಪುರುಷರೊಂದಿಗೆ ಎಲ್ಲ ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಚಪಲವನ್ನು ಮಹಿಳೆ, ಆ ಯುಗದಲ್ಲಿ ತೋರಿಸಿರಲಿಕ್ಕಿಲ್ಲ! ಬಹುಶಃ ಹೆಮ್ಮರವಾಗಿ ಬೆಳೆಯುವ ಸುಪ್ತ ಶಕ್ತಿ ಇದ್ದ ಬೀಜದಂತೆ ಬಾಳಿ ಬದುಕಿದಳು. ನೆಲ ನೀರಿನ ಅವಕಾಶ ದೊರೆತಾಗ ಈ ಬೀಜ ಅಂಕುರ ಒಡೆದು, ಗಿಡಮರವಾಗಿ, ತನ್ನ ಪರಿಸರದವರಿಗೆಲ್ಲ ನೆರಳು, ಆಶ್ರಯ ಕೊಡಲು ಎಂದೂ ಹಿಂಜರಿಯಲಿಲ್ಲ. ಇಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ದಂಡಮಾನದಿಂದ ಪ್ರಾಚೀನ ಕನ್ನಡಿತಿಯ ಜೀವನ ಅಳೆಯುವುದು ಹಾಸ್ಯಾಸ್ಪದವಾದೀತು.

ವೇದ ಕಾಲದಲ್ಲಿ ಅಂದರೆ ಕ್ರಿ. ಶ. ಪೂ. ೨೦೦೦ ವರ್ಷಗಳ ಹಿಂದೆ ಸ್ತ್ರೀಯರಿಗೆ ಪುರುಷರಂತೆಯೇ ವಿದ್ಯಾರಂಭ ಮಾಡಲಾಗುತ್ತಿತ್ತು. "ಪುರಾತನ ಕಾಲದಲ್ಲಿ ಕುಮಾರಿಯರಿಗೆ ಮುಂಜೀ ಬಂಧನ ಮಾಡಿ ವೇದಗಳನ್ನು ಕಲಿಸುವುದರ ಜೊತೆಗೆ ಸಾವಿತ್ರಿ (ಗಾಯತ್ರಿ) ಮಂತ್ರ ಹೇಳಿ ಕೊಡುತ್ತಿದ್ದರು"[೧] ಎಂದು ಒಪ್ಪಿಕೊಂಡ ಯಮ ಸ್ಮೃತಿ, ಇಬ್ಬಗೆಯ ಹುಡುಗಿಯರನ್ನು ಗುರುತಿಸುತ್ತದೆ. ಕುಶಾಗ್ರಮತಿಗಳಿದ್ದು ಚಿಕಿತ್ಸಕ ಬುದ್ಧಿಯ 'ಬ್ರಹ್ಮವಾದಿನಿ'ಯರು-ಇವರಿಗೆ ಉಪನಯನದ ನಂತರ ಸ್ವಗೃಹದಲ್ಲಿ ವಿದ್ಯಾಭ್ಯಾಸ ಒದಗಿಸಲಾಗುತ್ತಿತ್ತು. ಗಾರ್ಗಿ, ಮೈತ್ರೇಯಿಯವರಲ್ಲದೇ ಇನ್ನೂ ೨೫ ಜನ ಬ್ರಹ್ಮವಾದಿನಿಯರ ಹೆಸರು ಸಿಗುತ್ತವೆ. ಎರಡನೇ ಗುಂಪಿಗೆ ಸೇರಿದವರು 'ಸದ್ಯೋವಧು'ಗಳು. ಉತ್ತಮ ಗೃಹಿಣಿಯರಾಗಿ ಗೃಹಜೀವನದ ಮತ್ತು ಯಾವತ್ತೂ ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿದ್ದರು. ಇವರಿಗೆ ಆತ್ಮೋನ್ನತಿಗಿಂತ ಇಡೀ ಸಂಸಾರದ ಸುಖವೇ ಸರ್ವಸ್ವವಾಗಿದ್ದಿತು. ಸೂತ್ರಕಾಲದ ಹೊತ್ತಿಗೆ (ಕ್ರಿ. ಶ. ಪೂ. ೮ನೆಯ ಶತಮಾನ) ಸ್ತ್ರೀಯರಿಗೆ ಉಪನಯನ ಪದ್ಧತಿ ಬಿಟ್ಟು ಹೋದರೂ ಶಿಕ್ಷಣಕ್ಕೆ ತಿಲಾಂಜಲಿ ಕೊಟ್ಟ ಆಧಾರಗಳಿಲ್ಲ. ವೇದಾಧ್ಯಯನದ ಬದಲಾಗಿ ವಿವಿಧ ಕಲೆಗಳ,

ಸಾಹಿತ್ಯ, ಲೋಕ ವ್ಯವಹಾರಗಳ ಮೇಲೆ ಒತ್ತು ಬಿದ್ದಂತಿದೆ. ವಾತ್ಸ್ಯಾಯನನು, ಸ್ತ್ರೀಯರು ಕೈಕೊಳ್ಳಬಹುದಾಗಿದ್ದ ಹತ್ತಾರು ವಿಷಯಗಳನ್ನು, ಹಲವಾರು ಕಲೆಗಳನ್ನು ಹೆಸರಿಸಿದ್ದಾನೆ.

ನಂತರದ ಯುಗದಲ್ಲಿ ಸಂಸ್ಕೃತಿಯ ಸುವರ್ಣಯುಗವೆನಿಸಿಕೊಳ್ಳುವ ದಿನಗಳಲ್ಲಿ (ಕ್ರಿ.ಶ. ೩೦೦ ರಿಂದ ೯೦೦) ಸ್ತ್ರೀಯರ ಬಗ್ಗೆ ಉದಾರ ಭಾವನೆಯಿತ್ತು. "ಸಂಸ್ಕಾರವೆಂಬುದು ಆತ್ಮಕ್ಕೆ ಸಂಬಂಧಿಸಿದ್ದೇ ಹೊರತು ಸ್ತ್ರೀ ಪುರುಷರೆಂಬ ಬಾಹ್ಯ ಭೇದಕ್ಕೆ ಸಂಬಂಧಿಸಿಲ್ಲ" ಎಂದು ಘಂಟಾಘೋಷವಾಗಿ ಸಾರಿದ ಕವಿ ರಾಜಶೇಖರ, "ಪುರುಷರಂತೆ ಸ್ತ್ರೀಯರೂ ಕವಿಗಳಾಗಬಲ್ಲರು" ಎಂಬ ಸತ್ಯವನ್ನು ಎತ್ತಿ ಹಿಡಿದು, ಅದನ್ನು ಸಾಧಿಸಲು ಹಲವಾರು ಕವಯಿತ್ರಿಯರನ್ನು ತನ್ನ ಕಾವ್ಯಮೀಮಾಂಸೆಯ ಗ್ರಂಥದಲ್ಲಿ ಉದ್ಧರಿಸಿದ್ದಾನೆ. ಆತನ ಔದಾರ್ಯ, ಪ್ರೋತ್ಸಾಹಗಳಿಂದಲೋ ಏನೋ, ಅವನ ಪತ್ನಿ, ಅವಂತಿ ಸುಂದರಿ, ಕವಿತ್ವದೊಂದಿಗೆ ಅಲಂಕಾರ ಶಾಸ್ತ್ರಪ್ರವೀಣೆಯಾದಳು. ರಾಜಶೇಖರ-ಅವಂತಿ ಸುಂದರಿಯಂಥ ದಂಪತಿಗಳು ಹಿಂದಿನ ಯುಗದಲ್ಲಿದ್ದರು ಎಂಬುದಕ್ಕೆ ಸಾಕ್ಷಿಯಾಗಿ ದಂಪತಿಗಳು ಶಿಲ್ಪದಲ್ಲಿ ಚಿತ್ರಿತರಾಗಿದ್ದಾರೆ. ಒಂದರಲ್ಲಿ ಪತ್ನಿ ವಾಚನ ಸಾಮಗ್ರಿಯನ್ನು ಪತಿಗೆ ಕೊಡಮಾಡಿದರೆ, ಇನ್ನೊಂದರಲ್ಲಿ ಪತಿ ಕಲಿಸಿದ ಶಾಸ್ತ್ರದ ಇಂಗಿತಾರ್ಥ ಅರಿತುಕೊಳ್ಳಲಾರದೇ ಕಣ್ಣು ಕಣ್ಣು ಬಿಡುತ್ತಿದ್ದಾಳೆ! ರಾಜಶೇಖರನು ಕರ್ನಾಟಕದ ಕವಯಿತ್ರಿ ವಿಜ್ಜಿಕಾ ಅಥವಾ ವಿಜಯಾಂಕಾಳನ್ನು ಸ್ಮರಿಸಿದ್ದಾನೆ.ಇವಳು ವಿಜಯ ಭಟ್ಟಾರಿಕಾ ಎಂದೂ ಗುರುತಿಸಲ್ಪಡುತ್ತಾಳೆ. ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಕೇಶಿಯ ಸೊಸೆಯಾಗಿದ್ದಳು.

ಸಕಲ ವಿದ್ಯಾಪ್ರವೀಣೆ, ಸಾಮಿನಿರ್ಮಡಿಯ ಅಪೂರ್ವವಾದ ಸ್ಮಾರಕಶಿಲೆಯು, ಕಾರಬೆಲೆ (ಕೋಲಾರ ಜಿಲ್ಲೆಯ ಬೌರಿಂಗ್ ಪೇಟೆ ತಾಲೂಕು) ಗ್ರಾಮದಲ್ಲಿದೆ, ಎಂದು ರೈಸರು ಸಂಪಾದಿಸಿದ 'ಎಪಿಗ್ರಾಫಿಯ ಕರ್ನಾಟಕ'ದ ಹತ್ತನೆಯ ಸಂಪುಟದಲ್ಲಿ ಉಲ್ಲೇಖವಿದೆಯಾದರೂ ದಶಕಗಳಿಂದ ಯಾರಿಗೂ ಅದರ ದರ್ಶನವಾದ ವರದಿ ಸಿಕ್ಕಿರಲಿಲ್ಲ. ಅದಾಗಲೇ ಕಾರಬೆಲೆ (ಕಾರಹಳ್ಳಿ) ನಾಮಶೇಷವಾಗಿದ್ದರಿಂದ, ಸಾಮಿನಿರ್ಮಡಿಗಾಗಿ ಎಲ್ಲಿ ಹುಡುಕುವದೆಂದು ಗೊಂದಲವಾಯಿತು. ಕ್ರಿ.ಶ. ೧೯೭೭ರಲ್ಲಿ ಕೋಲಾರ ಜಿಲ್ಲೆಯ ಯುವ ಸಂಶೋಧಕರಾದ ಡಾ। ಆರ್. ಶೇಷಶಾಸ್ತ್ರಿಗಳೊಂದಿಗೆ, ಈ ಪ್ರಾಚೀನ ಸುಶಿಕ್ಷಿತೆಗಾಗಿ ಹುಡುಕಾಟ ಪ್ರಾರಂಭವಾಯಿತು. ಕೋಲಾರ-ಬಂಗಾರಪೇಟೆ ರಸ್ತೆಯಲ್ಲಿರುವ ಯರಗಲ್ ಹಳ್ಳಿಯ ಕುರುಬರ ದೇವಾಲಯದಲ್ಲಿ ಹರಡಿದ ಹತ್ತಾರು ವೀರಗಲ್ಲುಗಳಲ್ಲಿ ಈ ಸ್ಮಾರಕ ಸೇರ್ಪಡೆಯಾಗಿರಬೇಕು ಎಂಬ ಸುದ್ದಿಯನ್ನು ಡಾ। ಶೇಷಶಾಸ್ತ್ರಿ ತಂದರು. ವಿಶಾಲವಾದ ಹುಣಿಸೇಮರದ ನೆರಳಲ್ಲಿ ಚಿರ ವಿಶ್ರಾಂತಿ ಪಡೆದಿದ್ದ, ಕಿರಿಶಾಸನ ಹೊಂದಿದ್ದ ಮಹಿಳೆಯ ನೆನಪಿನ ಕಲ್ಲನ್ನು ನೆಲ ಅಗೆದು ಹೊರತೆಗೆದಾಗ, ಅಪರೂಪದ ಸಾಧನೆಯೆನಿಸಿತು.

ನಾಲ್ಕು ಅಡಿ ಎತ್ತರ, ಎರಡೂವರೆ ಅಡಿ ಅಗಲವಿರುವ ಶಿಲೆಯ ಮೇಲ್ಭಾಗದಲ್ಲಿ "ಸ್ವಸ್ತಿ ಶ್ರೀ ನಾಗಾರ್ಜುನಯ್ಯ ನಂದಿಗಬೆಯ ಮಗಳ್ ಸಾಮಿನಿರ್ಮಡಿ ಸರ್ವಶಾಸ್ತ್ರ ಪ್ರಸಿದ್ಧಿಶ್ರೀ" ಎಂಬ ಎರಡು ಸಾಲಿನ ಶಾಸನ ಬರೆಯಲಾಗಿದೆ. ಬೋಧನ ಭಂಗಿಯಲ್ಲಿ


ಆಸೀನಳಾದ ತರುಣಿಯ ಎಡಭಾಗದಲ್ಲಿ ವ್ಯಾಸಪೀಠವಿದೆ. ಆಕೆ, ಸಕಲಶಾಸ್ತ್ರ ಪ್ರವೀಣೆಯಿದ್ದಳು ಎಂದು ದೃಢೀಕರಿಸಲು ಎಡಗೈಯಲ್ಲಿ ಓಲೆಗರಿ ಗ್ರಂಥ ಹಿಡಿದಿದ್ದಾಳೆ. ಐದು ಅಕ್ಷರಗಳ ಗ್ರಂಥದ ಹೆಸರಿನ ನಡುವಿನ ಅಕ್ಷರದ ಮೇಲೆ ಬೆರಳಿದ್ದುದರಿಂದ "ಶ್ರೀ ಹ.... ಸಿದ್ಧಿ" ಎಂದಿಷ್ಟೇ ಓದಬಹುದಾಗಿದೆ. ಸ್ಪಷ್ಟವಾಗದ ಅಕ್ಷರ 'ಶ್ರೀ ಹರಸಿದ್ಧಿ' ಅಥವಾ "ಶ್ರೀ ಹರಿಸಿದ್ಧಿ" ಇದ್ದಿರಬಹುದೆಂದು ಊಹಿಸಲು ಸಾಧ್ಯವಿದೆ. ಕೇವಲ ತಂದೆ ತಾಯಿಗಳ ಹೆಸರು ನಮೂದಿಸಿದ್ದರಿಂದ ಆಕೆ ಅವಿವಾಹಿತೆಯಿರಬೇಕು. ಕೂದಲು ಜಟೆಯನ್ನು ಹೋಲುತ್ತಿರುವುದರಿಂದ ಸನ್ಯಾಸಿನಿಯಿರಲು ಸಾಕು. ಯಾವುದೋ ಅರಿಯದ ಕಾರಣಕ್ಕೆ ಅಕಾಲ ಮೃತ್ಯುವಿಗೆ ಆಹುತಿಯಾಗಿ, ಅವಳ ಶಾಸ್ತ್ರಸಿದ್ಧಿಯಿಂದ ಪ್ರಭಾವಿತರಾದ ಊರವರು ಈ ನೆನಪಿನ ಕಲ್ಲನ್ನು ನಿಲ್ಲಿಸಿರಬೇಕು.(ಚಿತ್ರ 14) ಸ್ತ್ರೀಯರಿಗೆ ಶಿಕ್ಷಣ ಸೌಕರ್ಯಗಳಿಲ್ಲದಿದ್ದರೆ, ಹತ್ತನೆಯ ಶತಕದಲ್ಲಿ ಸಾಮಿನಿರ್ಮಡಿ "ಸಕಲಶಾಸ್ತ್ರ ಪ್ರವೀಣೆ"ಯಾಗುತ್ತಿರಲಿಲ್ಲ ಮತ್ತು ಜನ ಅವಳನ್ನು ಗುರುತಿಸುತ್ತಿರಲಿಲ್ಲವೆಂಬುದನ್ನು ಗಮನಿಸತಕ್ಕದ್ದು.



(ಹತ್ತನೆಯ ಶತಮಾನದಲ್ಲಿ ಜೀವಿಸಿರಬಹುದಾದ ನಾಗಾರ್ಜುನಯ್ಯ "ನಂದಿಗಜೆಯ ಮಗಳ್ ಸರ್ವಶಾಸ್ತ್ರ ಪ್ರಸಿದ್ಧಿ" ಯ ಈ ಸಾವಿನಿರ್ವಡಿಯ ಶಿಲಾಚಿತ್ರವನ್ನು ಕೃಷ್ಣಾನಂದ ಜ್ಯೋತ್ಸ್ನಾ ಕಾಮತ ದಂಪತಿಗಳು ಡಾ. ಶೇಷಶಾಸ್ತ್ರಿಗಳ ಸಹಾಯದಿಂದ, ಯರಗಲ್ ಹಳ್ಳಿಯ (ಕೋಲ್ಹಾರ-ಬಂಗಾರ ಪೇಟೆ ರಸ್ತೆಯಲ್ಲಿದೆ) ಕುರುಬರ ದೇವಾಲಯದ ಪ್ರಾಂಗಣದಲ್ಲಿ ಅಗೆದು ಹೊರಗೆ ತೆಗೆದರು. ಈಗ ಈ ಶಿಲಾಸ್ಮಾರಕ ಬೆಂಗಳೂರು ಮ್ಯುಝಿಯಂದಲ್ಲಿದೆ. ಡಾ. ಆರ್. ಶೇಷಶಾಸ್ತ್ರೀಗಳು ಕುಪ್ಪಂ ವಿಶ್ವವಿದ್ಯಾಲಯದಲ್ಲಿ ಕನ್ನಡ-ತೆಲುಗು ಪ್ರಾಧ್ಯಾಪಕರಾಗಿದ್ದಾರೆ.)

ಚಿತ್ರ 14.

ಮೂಲತಃ ಕಾಶ್ಮೀರದವನಾದ ಬಿಲ್ಹಣನು ಕೆಲಕಾಲ ಗುಜರಾತದಲ್ಲಿದ್ದು ನಂತರ ಕರ್ನಾಟಕಕ್ಕೆ ಬಂದು ಚಾಲುಕ್ಯ ವಿಕ್ರಮಾದಿತ್ಯನ (ಕ್ರಿ. ಶ. ೧೦೭೬-೧೧೨೭) ಆಸ್ಥಾನ ಕವಿಯಾಗಿದ್ದ. ಆತನು ಬರೆದ ಚಿಕ್ಕ ೫೦ ಶ್ಲೋಕಗಳ ಸಂಸ್ಕೃತ ಕಾವ್ಯ "ಚೋರ ಪಂಚಶಿಖಾ" ಬಿಲ್ಹಣನ ಆತ್ಮಕಥೆ ಅಥವಾ ಸ್ವಾನುಭವವೆಂದು ವಿದ್ವಾಂಸರ ಅಂಬೋಣ. ಸುಂದರಿಯಾದ ರಾಜಕುಮಾರಿ ಚಂಪಾವತಿಗೆ ಪ್ರತಿಭಾವಂತ ಬಿಲ್ಹಣನಿಂದ ಪಾಠ ಹೇಳಿಸಬೇಕು, ಎಂದು ಅರಸನ ಆಸೆ. ಆದರೆ ಯೌವನಸ್ಥರಾದ ಶಿಕ್ಷಕ-ಶಿಷ್ಯೆಯರನ್ನು ಒಟ್ಟಿಗೆ ಹೇಗೆ ಬಿಡುವುದು? ಎಂಬುದು ಸಮಸ್ಯೆ. ಆದ್ದರಿಂದ ವಿದ್ಯಾರ್ಥಿನಿಗೆ, ಗುರು ಕುಷ್ಠ ರೋಗದಿಂದ ಬಳಲುತ್ತಿದ್ದರಿಂದ ದೂರ ಕುಳಿತುಕೊಳ್ಳಬೇಕು, ಬಿಟ್ಟ ಕಣ್ಣಿನಿಂದ ನೋಡಬಾರದು, ಎಂದು ಕಟ್ಟಾಜ್ಞೆಯಾಯಿತು. ಕವಿಗೆ, ರಾಜಕುಮಾರಿಯು ಹುಟ್ಟು ಕುರುಡಿ ಎಂದು ನಂಬಿಸಲಾಯಿತು! ಆದರೆ ಬೆಂಕಿಯ ಸಮೀಪದ ಬೆಣ್ಣೆಯ ಸ್ಥಿತಿಯಾಯಿತು. ಚಂಪಾವತಿ, ಕಣ್ಣಂಚಿನಿಂದ ಕವಿಯನ್ನು ಕದ್ದು ನೋಡಿದ್ದೇ ಮುಳುವಾಯಿತು. ಆತನ ರೂಪಕ್ಕೆ, ಮಾತಿನ ಚಾತುರ್ಯಕ್ಕೆ ಮರುಳಾದಳು. ಗುರು, ಶೃಂಗಾರ ರಸಭರಿತ ಕವಿತೆಗಳನ್ನೇ ಕಲಿಸಲಾರಂಭಿಸಿದನು.! ಪ್ರೇಮಾಂಕುರ, ಗಿಡವಾದಾಗ ಅರಸನಿಗೆ ಸುದ್ದಿ ಮುಟ್ಟಿ, ಕೋಪದಿಂದ ಕಿಡಿಕಿಡಿಯಾದ. ಕವಿಗೆ ಮರಣದಂಡನೆ ವಿಧಿಸಿದ. ವಧಸ್ಥಾನಕ್ಕೆ ಒಯ್ಯುವಾಗ ಒಂದಿಷ್ಟೂ ವಿಚಲಿತನಾಗದ ಕವಿ ತನ್ನ-ಚಂಪಾವತಿಯ ಕುರಿತಾದ ಪ್ರಣಯ ಕಾವ್ಯವನ್ನು ಸ್ವಯಂ ಸ್ಫೂರ್ತಿಯಿಂದ ಹಾಡಲಾರಂಭಿಸಿದ. "ನಾ ನಿನ್ನ ಮರೆಯಲಾರೆ, ಚಂಪಾವತಿ" ಎಂದು ಪ್ರಾರಂಭವಾಗುವ ಐವತ್ತು ನುಡಿಗಳು ಕವಿವಾಣಿಯಲ್ಲಿ ಹೊಮ್ಮಿದಾಗ, ಇಂಥ ಪ್ರತಿಭಾವಂತನನ್ನು ಕಳೆದುಕೊಳ್ಳುತ್ತಿದ್ದೇವಲ್ಲ! ಎಂದು ನೆರೆದವರ ಕಣ್ಣು ಒದ್ದೆಯಾದವು. ಇದರಿಂದ ವಿಚಲಿತನಾದ ಅರಸನು ಗಲ್ಲಿಗೇರಿಸುವ ನಿರ್ಣಯ ಬದಲಿಸಿ, ಚಂಪಾವತಿಯ ವಿವಾಹವನ್ನು ಬಿಲ್ಹಣನೊಂದಿಗೆ ನೆರವೇರಿಸುತ್ತಾನೆ. ಮೇಘದೂತ, ಗೀತಗೋವಿಂದಗಳಂತೆ, ಚೋರಪಂಚಶಿಖಾ ಚಿತ್ರ ಕಲಾವಿದರಿಗೆ ಒಳ್ಳೆಯ ವಸ್ತು. ಒಂದರಲ್ಲಿ ಕುರುಡಿ ಎಂದು ನಟಿಸುವ ಚಂಪಾವತಿ, ಸಲ್ಲಾಪದಲ್ಲಿ ತೊಡಗಿದರೆ ಇನ್ನೊಂದರಲ್ಲಿ ಅವನ ರೂಪ ಲಾವಣ್ಯಗಳಿಗೆ ದಿಗ್ಭ್ರಮೆಗೊಂಡು ಕಲಿಯುವಿಕೆಯನ್ನು ಸಂಪೂರ್ಣವಾಗಿ ಮರೆತುಬಿಟ್ಟಂತೆ ಚಿತ್ರಿತವಾಗಿದೆ (ಚಿತ್ರ15).



ಚಿತ್ರ 15. ಕವಿಬಿಲ್ಹಣನೊಡನೆ ಚಂಪಾವತಿ ವಿದ್ಯಾಭ್ಯಾಸ

ಹತ್ತನೆಯ ಶತಮಾನದಲ್ಲಿ ಪ್ರಚಲಿತವಿದ್ದ ಸ್ತ್ರೀ ಶಿಕ್ಷಣದ ಇಣುಕು ನೋಟವನ್ನು ಪಂಪನಿಂದ ಅರಿಯಬಹುದಾಗಿದೆ. ಒಂದು ದಿನ ಆದಿನಾಥನು ತನ್ನ ಇಬ್ಬರು ಹೆಣ್ಣು ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರು ಶಿಕ್ಷಣ ಪಡೆಯುವಷ್ಟು ದೊಡ್ಡವರಾಗಿದ್ದಾರೆಂದು ತಿಳಿದುಕೊಂಡು ಹೇಳಿಕಳಿಸುತ್ತಾನೆ. ಅವರಿಬ್ಬರೂ ಬಂದು ನಮಸ್ಕರಿಸಿ ನಿಂತಾಗ, ಈ ವಯಸ್ಸು, ಗುಣ ಶೀಲಗಳಿಗೆ ವಿದ್ಯೆಯೂ ಸೇರಿಕೊಂಡರೆ ಜಗತ್ಪಾವನೆಯರಾಗುತ್ತೀರಿ! ಎಂದು ಉದ್ಗರಿಸಿ ಸ್ವತಃ ವಿದ್ಯೆ ಕಲಿಸಲು ಪ್ರಾರಂಭಿಸುತ್ತಾನೆ. ಸರಸ್ವತಿಯ ಪೂಜೆ ಮಾಡಿ, ಮಕ್ಕಳಿಬ್ಬರನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, 'ಸಿದ್ಧಂನಮಃ' ಎಂದು ಬ್ರಾಹ್ಮಿಯಿಂದ ಹೇಳಿಸಿ, ಅದನ್ನೇ ಬರೆದು, ಬಾಯಿಂದ ಹೇಳಿಸುತ್ತ ಅವಳಿಂದ ಬರೆಸುತ್ತಾನೆ. ಸುಂದರಿಗೆ ಒಂದು, ಎರಡು ಅಂಕಿಗಳನ್ನು ಕಂಠಪಾಠ ಮಾಡಿಸಿ ಬರೆಯುವ ರೂಢಿಮಾಡಿಸುತ್ತಾನೆ. ಮಕ್ಕಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳುವದೆಂದರೆ ಇಬ್ಬರಿಗೂ ಐದು ವರ್ಷಗಳಿಗಿಂತ ಹೆಚ್ಚಿರಲಾರದು! ನಂತರದ ದಿನಗಳಲ್ಲಿ ಅವನು ವ್ಯಾಕರಣ, ಛಂದಸ್ಸು, ಅಲಂಕಾರ, ವಾಙ್ಮಯ, ಸಮಸ್ತಕಲಾ ಸಮೂಹವನ್ನು ಇಬ್ಬರಿಗೂ ಕರಗತವಾಗುವಂತೆ ಕಲಿಸಿ ವಿದ್ಯಾಪರಿಪೂರ್ಣೆಯರನ್ನಾಗಿಯೂ 'ಅಪ್ಪಂತ'ರನ್ನಾಗಿಯೂ ಮಾಡಿದ. ಅಂದಿನ ಎಲ್ಲ ಹುಡುಗಿಯರೂ ಬ್ರಾಹ್ಮಿ ಮತ್ತು ಸುಂದರಿಯರಷ್ಟು ಅದೃಷ್ಟಶಾಲಿಗಳಾಗಿರಲಿಲ್ಲ. ಆದರೆ ಅವರು ಶಿಕ್ಷಕರಿಂದ ಓದುವದನ್ನು, ಬರೆಯುವದನ್ನು ಜೊತೆಯಾಗಿ ರೂಢಿಸಿಕೊಳ್ಳುತ್ತಿದ್ದರು (ಚಿತ್ರ16).



ಚಿತ್ರ 16. ತಾಳೆಗರಿಗ್ರಂಥ ಪಾಠ

ಚಾಮರಸನು 'ಪ್ರಭುಲಿಂಗಲೀಲೆ'ಯಲ್ಲಿ ರಾಜಕುಮಾರಿಯೊಬ್ಬಳ ಅಭ್ಯಾಸದ ವಿವರಗಳನ್ನು ಮಾಯಾದೇವಿಯ ವರ್ಣನೆಯ ಮೂಲಕ ಕೊಡಮಾಡಿದ್ದಾನೆ. ಸ್ತ್ರೀ ಶಿಕ್ಷಣಕ್ಕಾಗಿ ಅರಮನೆಯ ಮಹಡಿಯಲ್ಲಿದ್ದ "ಕನ್ನೆ ಮಾಡವನ್ನು" ಬಳಸಲಾಗುತ್ತಿತ್ತು. ಪಂಪನೂ ಕನ್ನೆ ಮಾಡವನ್ನು ಉಲ್ಲೇಖಿಸಿರುವನು. ಕುಮಾರಿಯರ ವಿದ್ಯಾಭ್ಯಾಸಕ್ಕಾಗಿಯೇ 'ನಾಗವಾಸ' (ಅಂತಃಪುರ)ದ ಕನ್ನೆ ಮಾಡ' ಮೀಸಲಿರುತ್ತಿತ್ತು. ಅಲ್ಲಿ ರಾಜಕುಮಾರಿಯರಿಗೂ ಪರಿವಾರದ ಇತರ ಹುಡುಗಿಯರಿಗೂ "ಕುಶಲಶಾಸ್ತ್ರ ವಿದ್ಯಾನೀಕ"ವನ್ನು ಪರಿಚರಿಸಿ (ಕುಶಲಕಲೆ ಮತ್ತು ಇತರ ವಿದ್ಯೆಗಳನ್ನು ಕಲಿಸಿ) ಪರಿಣತೆಯರಾಗುವ ಅವಕಾಶಗಳನ್ನು ಒದಗಿಸಲಾಗುತ್ತಿತ್ತು. ಮದ್ದಳೆ ಬಾರಿಸುವ ಅಲ್ಲಮನಿಗೆ ಮನಸೋತ ಮಾಯಾದೇವಿ ತಂದೆಯ ಅಪ್ಪಣೆ ಪಡೆದು, ಆತನನ್ನು ಅರಮನೆಯ ವಾದ್ಯವೃಂದದ (ನೆರವಿ ಬಿಂದದ)ಮುಖ್ಯಸ್ಥ (ಬೋವಗಾರಿಕೆಯ)ನನ್ನಾಗಿ ನೇಮಿಸಿ ಕನ್ನೆ ಮಾಡಕ್ಕೆ ಆತ ಬರುವಂತೆ ನೋಡಿಕೊಳ್ಳುತ್ತಾಳೆ. ಹಿಮ್ಮೇಳಕ್ಕೆ ಅತಿ ಮುಖ್ಯವಾದ ಮೃದಂಗ (ಅಲ್ಲಿ ಮದ್ದಳೆ) ವನ್ನು ಅಲ್ಲಮನು ನುಡಿಸುತ್ತಿದ್ದನಾದ್ದರಿಂದ, ಮೂರೂ ಹೊತ್ತು ನಾಗವಾಸದಲ್ಲಿರಬಹುದು! ಎಂಬುದು ಅವಳ ಹಂಚಿಕೆಯಾಗಿತ್ತು. ಶಿಕ್ಷಕರು ಸ್ತ್ರೀಯರೇ ಇರಬೇಕೆಂಬ ಕಡ್ಡಾಯವಿರಲಿಲ್ಲ(ಚಿತ್ರ17).



ಸ್ವಾಧ್ಯಾಯ



ವೀಣೆಯ ಅಭ್ಯಾಸ.



ಹುಡುಗಿಯರಿಗೆ ಉಪಾಧ್ಯಾಯರ ಪಾಠ

ಚಿತ್ರ 17.

ಕ್ರಿ. ಶ. ೧೫೨೦-೨೨ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸಂಚರಿಸಿದ ಪೋರ್ಚುಗೀಸ ಪ್ರವಾಸಿ, ಡೋಮಿಂಗೋ ಪ್ಯಾಸ್ ಮತ್ತು ಫರ್ನಾವೊ ನುನಿಝ್‌ರು ರಾಜಧಾನಿಯ ವೈಭವದ ಚಿತ್ರವನ್ನು ಭಾವೀಪೀಳಿಗೆಗಾಗಿ ಬರೆದಿಡುವ ಕೃಪೆ ಮಾಡಿದ್ದಾರೆ. ರಾಜಧಾನಿಯಲ್ಲಿ ಸುಖ, ಶಾಂತಿ, ಸಮೃದ್ಧಿಗಳಿದ್ದುದರಿಂದ ಹೆಂಗಳೆಯರ ಓಡಾಟ, ಚಟುವಟಿಕೆ, ಶಿಕ್ಷಣಗಳಿಗೆ ಅವಕಾಶ ದೊರಕಿತ್ತು. ನಾಲ್ಕು ಸಾವಿರಕ್ಕೂ ಮಿಕ್ಕಿದ ಹೆಂಗಳೆಯರು ರಾಜರ ಸೇವೆಯಲ್ಲಿದ್ದರು. ಹೆಚ್ಚಿನವರ ಶಿಕ್ಷಣ ವ್ಯವಸ್ಥೆ, ಅರಮನೆಯಲ್ಲಿ ಅಥವಾ ಆವಾರದಲ್ಲಿ ಮಾಡಲಾಗಿತ್ತು. ಮಹಾನವಮಿಯ ನೃತ್ಯ ಸ್ಪರ್ಧೆಯಲ್ಲಿ ಪಾಲುಗೊಳ್ಳುವವರ ಸಲುವಾಗಿ ವಿಶೇಷವಾಗಿ ನಿರ್ಮಿಸಿದ ನೃತ್ಯ ಮಂದಿರಗಳಿದ್ದವಲ್ಲದೇ ನೃತ್ಯ ತರಬೇತಿಗಾಗಿ ವಿಶಾಲವಾದ ನಾಟ್ಯಶಾಲೆಗಳು ಅರಮನೆಯಲ್ಲಿದ್ದವು. ನಾಟಕ, ಸಂಗೀತಗಳ ತರಬೇತಿಗೂ ವಿಶೇಷ ಪ್ರಾಧಾನ್ಯ ಕೊಡಲಾಗಿತ್ತು. ವೀಣೆ, ಕೊಳಲು, ಕಂಜಿರಾ, ತಾಳ ಮದ್ದಳೆಗಳಂತಹ ಅನೇಕಾನೇಕ ವಾದ್ಯಗಳನ್ನು ನುಡಿಸುವುದರಲ್ಲಿ ಸ್ತ್ರೀಯರು ಪ್ರಾವೀಣ್ಯ ಗಳಿಸುತ್ತಿದ್ದರು. ಪ್ರೇಕ್ಷಕರ ಎದುರಿಗೆ, ವಾದ್ಯಗಳನ್ನು ಒಂಟಿಯಾಗಿಯೂ, ಒಟ್ಟಾಗಿಯೂ ನುಡಿಸಿ ಅರಸರಿಂದ ಬಹುಮಾನವನ್ನು ಗಿಟ್ಟಿಸುತ್ತಿದ್ದರು. ನೃತ್ಯಕ್ಕೆ ಹಿನ್ನೆಲೆಯಾಗಿಯೂ ವಾದ್ಯಮೇಳವನ್ನು ಬಳಸುತ್ತಿದ್ದರು.

ಎಳೆ ವಯಸ್ಸಿನಲ್ಲಿ ನಾಟ್ಯಾಭ್ಯಾಸ ಪ್ರಾರಂಭಿಸಬಹುದಾಗಿತ್ತಾದರೂ ಶಾರೀರದ, ಹಾಡುಗಾರಿಕೆಯ ಶಿಕ್ಷಣ ಮೊದಲಿಗೆ ಕೊಡಲಾಗುತ್ತಿತ್ತು. ಹನ್ನೆರಡು ವರ್ಷದ ಕಿಶೋರಿ, ಅಂಗಾಂಗ ತುಂಬಿಕೊಂಡು ಹೆಣ್ಣಾಗುವ ಹೊಸ್ತಿಲಲ್ಲಿ ಇದ್ದಾಗ ನೃತ್ಯಾಭ್ಯಾಸಕ್ಕೆ ಯೋಗ್ಯಳೆಂದು ಪರಿಗಣಿಸಲಾಗುತ್ತಿತ್ತು. ಮೂವತ್ತು ವರ್ಷ ತುಂಬುವದರೊಳಗಾಗಿ, ನಿವೃತ್ತರಾಗಿ ಬಿಡುತ್ತಿದ್ದರು. ತರಬೇತಿಯ ಸಮಯದಲ್ಲಿ ಅಂಗಾಂಗಗಳು ಬಿಲ್ಲಿನಂತೆ ಮಣಿಯಬೇಕೆಂದು ಹತ್ತಾರು ಬಗೆಯ ವ್ಯಾಯಾಮ, ಶಾರೀರಿಕ ಚಟುವಟಿಕೆಗಳನ್ನು ಕಲಿಸುತ್ತಿದ್ದರು. ನಾಟ್ಯ ಶಾಲೆಗೆ ಹೊಂದಿ ಇಂಥ ಅಂಗಾಂಗಗಳ ತರಬೇತಿಗೆ ವಿಶ್ರಾಂತಿಧಾಮ ಇರುತ್ತಿತ್ತು. ಚಾಚೂ ತಪ್ಪದೇ ನೃತ್ಯ ಭಂಗಿಗಳನ್ನು ರೂಢಿಸಿಕೊಳ್ಳುವುದಕ್ಕಾಗಿ, ಅಂಥ ಭಂಗಿಯ ಪ್ರತಿಮೆಗಳನ್ನು ಸ್ಥಾಪಿಸಲಾಗುತ್ತಿತ್ತು. ಅವನ್ನು ನೋಡಿ ವಿದ್ಯಾರ್ಥಿನಿಯರು ತಿದ್ದಿಕೊಳ್ಳುತ್ತಿದ್ದರು. ಇಷ್ಟಾಗಿಯೂ ನರ್ತಕಿಯರು ತಪ್ಪು ಹೆಜ್ಜೆ ಹಾಕಿದರೆ , ಶಿಕ್ಷಕರು ಅವರನ್ನು ತರಾಟೆಗೆ ತೆಗೆದುಕೊಳ್ಳದೇ ಬಿಡುತ್ತಿರಲಿಲ್ಲ. ಸಾಮಾನ್ಯವಾಗಿ ಅರಮನೆಯಲ್ಲಿ ಗಂಡಸರನ್ನು ಒಳಗೆ ಸೇರಿಸುತ್ತಿರಲಿಲ್ಲ. ವಯಸ್ಕ ಅಧಿಕಾರಿಗಳು ಮಾತ್ರ ಅರಸನ ಅಪ್ಪಣೆ ಪಡೆದು ಹೆಂಗಳೆಯರ ನಿವಾಸಕ್ಕೆ ಹೋಗಬಹುದಾಗಿತ್ತು. ಅರಮನೆಯ ಒಳಗಿನ ಸಿಬ್ಬಂದಿಯವರೆಲ್ಲ ಹೆಂಗಸರೇ ಇದ್ದುದರಿಂದ ರಾಜ್ಯದಲ್ಲೆಲ್ಲ ಹುಡುಕಾಡಿ ಬೇಕಾದ್ದರಲ್ಲಿ ಪರಿಣತೆಯರನ್ನು ಹುಡುಕಿ ತಂದು, ಅರಮನೆಯ ಕೆಲಸಕ್ಕೆ ನೇಮಿಸಲಾಗುತ್ತಿತ್ತು. ಇದರಿಂದ ಅರಮನೆಯ ಹೊರಗೂ ಸ್ತ್ರೀ ಶಿಕ್ಷಣದ ಸೌಕರ್ಯಗಳು ಇದ್ದವು ಎಂಬುದು ಸ್ಪುಟವಾಗಿದೆ.

ಅರಮನೆಯ ಆಡಳಿತದಲ್ಲಿ ಹೆಚ್ಚೆಚ್ಚು ಹೆಂಗಳೆಯರನ್ನು ನೇಮಿಸಲಾರಂಭಿಸಿದ್ದರಿಂದ ಸ್ತ್ರೀ ಶಿಕ್ಷಣಕ್ಕೆ ಹೊಸ ಆಯಾಮಗಳು ಒದಗಿದವು. ಗಣಿತ, ಲೆಕ್ಕ-ಪತ್ರದಲ್ಲಿ ನುರಿತವರು,

ಯಾವತ್ತೂ ದಾಖಲೆಗಳನ್ನು ಅಚ್ಚುಕಟ್ಟಾಗಿ ಇಟ್ಟು ಒಂದೂ ವರಹ ಹುಸಿಹೋಗಗೊಡುತ್ತಿರಲಿಲ್ಲ. ಮಾಂಡಲಿಕರು, ಸೇನಾಧಿಕಾರಿಗಳು, ವಿಭಾಗಾಧಿಕಾರಿಗಳಿಂದ ಬಂದ ಪತ್ರ ವ್ಯವಹಾರಗಳನ್ನೆಲ್ಲ ಪರಿಶೀಲಿಸಿ ಅರಸನಿಗೆ ಪ್ರಸ್ತುತ ಪಡಿಸಿ ಯೋಗ್ಯ ಸಲಹೆ-ಸೂಚನೆ ಪಡೆಯುತ್ತಿದ್ದರು. ಚರಿತ್ರೆಯಲ್ಲಿ ಪರಿಶ್ರಮವಿದ್ದವರು, ಅರಮನೆಯ ಘಟನೆಗಳನ್ನೆಲ್ಲ ಚಾಚೂ ತಪ್ಪದೇ ಬರೆದಿಡುತ್ತಿದ್ದರಲ್ಲದೇ ಬರೆದದ್ದನ್ನು ಅರಮನೆಯ ಹೊರಗಿನ ಅಧಿಕಾರಿಗಳ ದಾಖಲೆಗಳೊಂದಿಗೆ ಹೋಲಿಸಿ ನೋಡುತ್ತಿದ್ದರು. ಮಹಿಳಾ ಬೇಲಿಫರು, ನ್ಯಾಯಾಧೀಶರು ಇರುತ್ತಿದ್ದುದರಿಂದ ಅರಮನೆಗೆ ಸಂಬಂಧಿತ ಭೂಮಿಯ ದಸ್ತಾವೇಜುಗಳನ್ನು ಮಾಡಿಸುವಾಗ, ತಮ್ಮ ಬೇಳೆ ಬೇಯಿಸಿಕೊಳ್ಳುವದಕ್ಕಾಗಿ 'ಪಣಂ' ಕೊಡುವ ಪದ್ಧತಿ ಬೆಳೆದಿರಲಿಕ್ಕಿಲ್ಲ! ಸ್ತ್ರೀ ಸಾಹಸಿಗಳಿಗೂ ಕಡಿಮೆಯಿರಲಿಲ್ಲ. ಗರಡೀಮನೆಗಳಲ್ಲಿ ಕಸರತ್ತು ಮಾಡಿ, ಭುಜಬಲ ಬೆಳೆಸಿಕೊಂಡು ಸಾರ್ವಜನಿಕ ಪ್ರದರ್ಶನ ಕೊಡುತ್ತಿದ್ದರು. ವಿಜಯನಗರ ಕಾಲದ ದೇವಾಲಯಗಳ ಗೋಡೆ, ಕಂಬಗಳ ಮೇಲೆ ಕುಸ್ತಿಯಲ್ಲಿ ತೊಡಗಿದ ಮಹಿಳಾ ಜಟ್ಟಿ ಜೋಡಿಗಳನ್ನು ಪ್ರಾತಿನಿಧಿಕವಾಗಿ ಮೂಡಿಸಿದ್ದನ್ನು ನೋಡಬಹುದು.(ಚಿತ್ರ 11a) ಗಟ್ಟಿಮುಟ್ಟಾದವರನ್ನು ಅರಮನೆಯ ಕಾವಲುಗಾತಿಯರನ್ನಾಗಿ ನೇಮಿಸುತ್ತಿದ್ದರು. ಅರಮನೆಯ ಆವರಣದಲ್ಲಿ ಕಟ್ಟಡಗಳು ದೂರ ದೂರ ಇದ್ದುದರಿಂದ, ಅರಸ-ಅರಸಿಯರನ್ನು ಮೇಣೆಗಳಲ್ಲಿ ಹೊತ್ತೊಯ್ಯಲು ಬಲಿಷ್ಠರಾದ ಹೆಂಗಳೆಯರಿರುತ್ತಿದ್ದರು. ಪಾಕ ಪ್ರವೀಣೆಯರು ರುಚಿಕಟ್ಟಾದ ಪದಾರ್ಥಗಳನ್ನು ಮಾಡಿ ಬಡಿಸುತ್ತಿದ್ದರಲ್ಲದೇ, ಅಡಿಗೆ ಪರಿಶುದ್ಧವೂ ವಿಷರಹಿತವೂ ಆಗಿದೆ ಎಂದು ಖಚಿತಪಡಿಸಿಕೊಳ್ಳಬೇಕಾಗುತ್ತಿತ್ತು. ಇದಲ್ಲದೇ ನಾನಾ ವೃತ್ತಿಗಳಲ್ಲಿ ಪಳಗಿದವರು, ದಾದಿಯರು, ಪಡಿಯರತಿಯರು, ಕುಂಚಟಗಿತ್ತಿಯರು, ಹೂಕಟ್ಟುವವರು, ಘಟ್ಟಿವಳ್ತಿಯರು, ಅಭ್ಯಂಜನ ಮಾಡಿಸುವವರು, ಚಿತ್ರಕಲೆ, ಹೊಲಿಗೆ, ಹೆಣಿಕೆ ಮಾಡುವವರು, ಆಯಾ ವೃತ್ತಿಯಲ್ಲಿ ತರಬೇತಿ ಕೊಡುವವರೂ ಇದ್ದರು.

ಅರಸನಿಗೆ ಹತ್ತಾರು ಪತ್ನಿಯರೂ, ಅಸಂಖ್ಯಾತ ಸಖಿಯರೂ ಇರುತ್ತಿದ್ದರು. ಸೇವಾಸಿಬ್ಬಂದಿಯ ವನಿತೆಯರೇ ವಿದ್ಯಾವಂತೆಯರು ಇರುತ್ತಿದ್ದಾಗ ಅರಸಿಯರು ಅವಿದ್ಯಾವಂತರು ಇರುವುದು ಹೇಗೆ ಸಾಧ್ಯ? ಅರಸನು ತನ್ನ ವಿರಾಮ, ಮನೋಧರ್ಮ, ಆಸಕ್ತಿಗಳಿಗೆ ಅನುಸಾರವಾಗಿ ಬೇರೆ ಬೇರೆ ಹೆಂಗಳೆಯರ ಸಹವಾಸದಲ್ಲಿ ವಿರಾಮದ ವೇಳೆಯನ್ನು ಕಳೆಯುತ್ತಿದ್ದನು. ರಾತ್ರಿಯ ಮೊದಲ ಭಾಗವನ್ನು ವಿದುಷಿಯರು (ವಿದಗ್ಧೆಯರು), ವಾಕ್ಯ ಚತುರೆಯರು, ಪರಿಹಾಸವಿನೋದಿಗಳು, ಸಾಹಿತ್ಯ ರಸಭಾವಜ್ಞೆಯರು, ಕಥನ ಕೋವಿದೆಯರ ಸಂಗತಿಯಲ್ಲಿ ಕಳೆಯುತ್ತಿದ್ದ. ರಾತ್ರಿಯನ್ನು ಇಷ್ಟಪಟ್ಟ ಮಹಿಷಿಯೊಂದಿಗೆ ಕಳೆದರೆ, ಹಬ್ಬಹರಿದಿನ, ವಿಶೇಷ ಧಾರ್ಮಿಕ ಪ್ರಸಂಗಗಳಲ್ಲಿ ಪಟ್ಟದರಸಿಯೊಂದಿಗೆ ಇರುತ್ತಿದ್ದ. ಗಣಿಕಾವರ್ಗಕ್ಕೆ ಅರಮನೆಯಲ್ಲಿ ಓಡಾಡುವ ಸ್ವಾತಂತ್ರ್ಯ ಇತ್ತಲ್ಲದೇ ದೊರೆಯ ಎದುರಿಗೇ ವೀಳ್ಯ ಹಾಕಿಕೊಳ್ಳುವ ಸೌಲಭ್ಯವಿತ್ತು. ಅಂದಿನ ಈ ವರ್ಗ, ಎಳೆವಯಸ್ಸಿನಲ್ಲಿಯೇ ಸಂಗೀತ, ಕಲೆ, ಸರಸವಾದ ಮಾತುಗಾರಿಕೆ, ರಸಿಕತೆ, ಸಾಹಿತ್ಯಾಸಕ್ತಿ, ಅಭಿರುಚಿ, ಸೌಂದರ್ಯದೃಷ್ಟಿಗಳನ್ನು ತಮ್ಮ ತಾಯಂದಿರಿಂದ ಅಥವಾ

ನುರಿತ ವಿದಗ್ಧೆಯರಿಂದ ಕಲಿತುಕೊಳ್ಳುತ್ತಿದ್ದರು. ಇಂಥ ಕಲಾವಂತೆಯರ ಸಹವಾಸ ಸುಖ ಪಡೆಯುವದಕ್ಕಾಗಿ ಊರ ಪ್ರತಿಷ್ಠಿತರು ಯಾವ ಮುಚ್ಚುಮರೆ ಇಲ್ಲದೇ ಅವರಲ್ಲಿ ಹೋಗಿ ಬರುತ್ತಿದ್ದರು. ವಿವಿಧ ವಿದ್ಯೆಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಲು ಗಣಿಕೆಯರು ಎಷ್ಟು ಶ್ರಮಪಡುತ್ತಿದ್ದರು ಎಂಬುದನ್ನು ಅಭಿವನ ಗುಪ್ತ (ಕ್ರಿ. ಶ. ೮೯ನೇ ಶತಮಾನ) ಮತ್ತು ರಾಘವಾಂಕ ಕವಿ (೧೩ನೇ ಶತಮಾನ) ಗಳ ಕೃತಿಗಳಿಂದ ಅರಿಯಬಹುದಾಗಿದೆ. ಅರಸನ ಪ್ರತಿಷ್ಠೆಯ ಒಡ್ಡೋಲಗದಲ್ಲಿ ಅವರಿಗೆ ಸ್ಥಾನವಿತ್ತು. ವಿಶೇಷ ಆಮಂತ್ರಿತ ಸಭೆಯಲ್ಲಿ ಅರಸಿಯರು, ಕುಲಾಂಗನೆಯರೊಂದಿಗೆ ಅವರಿಗೆ ಆಸನ ಕೊಡಲಾಗುತ್ತಿತ್ತು. ಕಾವ್ಯಗೋಷ್ಠಿಗಳಲ್ಲೂ ಅವರು ಇರುತ್ತಿದ್ದರು. ಈ ಸ್ಥಾನಮಾನಗಳಿಗೆ ಬಾಧ್ಯಸ್ಥರಾಗುವವರು ಎಳೆಯ ವಯಸ್ಸಿನಿಂದಲೇ ನೃತ್ಯ, ನಾಟಕ, ವಾದ್ಯ ನುಡಿಸುವಿಕೆ, ಹಾಡುಗಾರಿಕೆ, ಚಿತ್ರಕಲೆ, ಆಟಿಗೆಗಳನ್ನು ತಯಾರಿಸುವುದು, ಹೂಗಳ ಹಾರ ದಂಡೆಗಳನ್ನು ಕಟ್ಟುವುದು ಹೂವಿನ ವಿವಿಧ ಅಲಂಕಾರಗಳನ್ನು ತಯಾರಿಸುವುದು, ಸುಗಂಧಗಳ ತಯಾರಿಕೆ, ತರ್ಕ, ತತ್ವಜ್ಞಾನ, ವಾಕ್‌ಚಾತುರ್ಯಗಳನ್ನು ತಮ್ಮವನ್ನಾಗಿ ಮಾಡಿಕೊಳ್ಳಬೇಕಾಗಿತ್ತು. ಇದಲ್ಲದೆ ಅಕ್ಷರಾಭ್ಯಾಸದಲ್ಲಿ ವಿಶೇಷ ಶ್ರಮವಿರಬೇಕಾಗಿತ್ತು. ಅದಕ್ಕಾಗಿ ಶಿಕ್ಷಕರಿಂದ ಪಾಠ ಹೇಳಿಸಿಕೊಂಡು ನಂತರ ಅವನ್ನು ಅಭ್ಯಸಿಸಿ ಮರುದಿನ ಒಪ್ಪಿಸಬೇಕಾಗುತ್ತಿತ್ತು. ಓದಿನ ನಡುವೆ ವೀಣೆ ನುಡಿಸುವುದು ಹಾಡುವುದು ಇವೇ ಬದಲಾವಣೆಯ ವಿಷಯಗಳಾಗಿದ್ದವು. ಇನ್ನಿತರ ಗ್ರಂಥಗಳೊಂದಿಗೆ ಕಾಮಶಾಸ್ತ್ರವನ್ನು ಕೂಲಂಕಷವಾಗಿ ಅಧ್ಯಯನ ಮಾಡುತ್ತಿದ್ದರು. ಇದಲ್ಲದೇ ಜನಸಾಮಾನ್ಯರ ವಿದ್ಯೆಗಳಾದ ಹೊಲಿಗೆ, ಹೆಣಿಕೆ, ಅಡಿಗೆ, ತೋಟಗಾರಿಕೆ, ಧಾತುವಿನ ಕೆಲಸ, ಮುಂತಾದವುಗಳಲ್ಲಿಯೂ ಮನಸ್ಸು ಹಾಕಬೇಕಿತ್ತು. ಇವೆಲ್ಲಾ ವಿದ್ಯೆಗಳಲ್ಲಿ ಎಲ್ಲ ಗಣಿಕೆಯರು ಪರಿಣಿತರಾಗುವದು ಅಸಾಧ್ಯವಾದರೂ, ಕೆಲವುಗಳಲ್ಲಿ ಆದರೂ ಆಗಿರುತ್ತಿದ್ದರೆಂಬುದು ನಿರ್ವಿವಾದ. ಸಂಜೆಗಳಲ್ಲಿ ರಸಿಕರು ಅವರ ಮನೆಗೆ ಆಗಮಿಸಿ, ಚದುರಂಗ, ಪಗಡೆ ಆಡುವುದು, ನೃತ್ಯ-ಸಂಗೀತಗಳಲ್ಲಿ ಭಾಗವಹಿಸುವದು, ಇಲ್ಲವೇ ಕಥೆಗಳನ್ನು ಕೇಳುವದು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದರು.

ರಾಜ ಪರಿವಾರದ ಹೆಣ್ಣುಮಕ್ಕಳು ಸದಾಕಾಲ ಅರಮನೆಯಲ್ಲೇ ಇದ್ದರೂ ಕೂಪ ಮಂಡೂಕಗಳಾಗದಂತೆ ಎಚ್ಚರಿಕೆ ವಹಿಸುತ್ತಿದ್ದರು. ಜಗತ್ತಿನ ಇನ್ನಿತರ ಜನ ಹೇಗೆ ವಾಸಿಸುತ್ತಾರೆಂದು ಅವರಿಗೆ ಜ್ಞಾನವಿರಬೇಕೆಂದು ಅರಮನೆಯ ಗೋಡೆಗಳಲ್ಲಿ ಜನಜೀವನದ ಆಕರ್ಷಕ ಚಿತ್ರಗಳಿರುತ್ತಿದ್ದುವು. ಅವರಲ್ಲಿ ಪೋರ್ಚುಗೀಜರಾದಿ ವಿದೇಶೀಯರು ಜೀವಿಸುವ ರೀತಿಗಳನ್ನು ಚಿತ್ರಿಸುತ್ತಿದ್ದರು. ಅರಮನೆಗಳಲ್ಲಿ ಚಿತ್ರಶಾಲೆಗಳಿರುವುದು ಸಾಮಾನ್ಯವಾಗಿತ್ತು. ಕಂಠೀರವ ನರಸರಾಜನ ಅರಮನೆಯಲ್ಲಿ ಚಂದ್ರಶಾಲೆ, ಚಿತ್ರಶಾಲೆಗಳಿದ್ದವು. ಜೊತೆಗೆ ಚೆಲುವಾದ ಪುತ್ಥಳಿಗಳು ಇದ್ದವು. ಭಾರತ, ರಾಮಾಯಣ, ಭಾಗವತ ಕಥಾಪ್ರಸಂಗಗಳನ್ನು ನಿರೂಪಿಸುತ್ತಿದ್ದವು. ಅಲ್ಲದೆ ವಿವಿಧ ಪ್ರಕಾರದ ಪಕ್ಷಿಗಳ ಪ್ರತಿಕೃತಿಗಳ ಜೊತೆಗೆ ಆನೆ, ವರಾಹ, ಕಾಡುಕೋಣ, ಹೆಬ್ಬುಲಿ, ಸಿಂಹ, ಹರಿಣಗಳ ಪ್ರತಿಮೆಗಳನ್ನು ಇಟ್ಟಿದ್ದರು. ಇವಕ್ಕೆ ಶೈಕ್ಷಣಿಕ ಉದ್ದೇಶವಿತ್ತೆಂದು ಸಹಜವಾದ ಕಲ್ಪನೆ ಬರುವಂತಿದೆ.

ಓದಲು ಬಾರದವರಿಗೆ ಕೇಳಿ ತಿಳಿದುಕೊಳ್ಳಲು ವಿವಿಧ ಗ್ರಂಥಗಳನ್ನು ಓದಿ ಹೇಳುವುದಕ್ಕಾಗಿಯೇ ಅರಮನೆಯಲ್ಲಿ ಹಲವರು ಇರುತ್ತಿದ್ದರು. ಪ್ರೌಢದೇವರಾಯನ ಅರಮನೆಯಲ್ಲಿ ಓದುವ ಹೊನ್ನಮ್ಮವ್ವ ಇದ್ದಂತೆ, ತಿರುಮಲಾಂಬಿಕೆ ಅಥವಾ ತಿರುಮಲಮ್ಮ ಅಚ್ಯುತದೇವರಾಯನ ಕಾಲಕ್ಕೆ ಸಂಸ್ಕೃತದ ರಾಮಾಯಣ, ಮಹಾಭಾರತ ಪುರಾಣಗಳನ್ನು ಓದಿ ಹೇಳುವುದರಲ್ಲಿ ಮಿಗಿಲೆನಿಸಿಕೊಂಡಿದ್ದಳಲ್ಲದೇ 'ವರದಾಂಬಿಕಾ ಪರಿಣಯಂ'ಎಂಬ ಕೃತಿಯನ್ನು ಸಂಸ್ಕೃತದಲ್ಲಿ ರಚಿಸಿದಳು. ತನ್ನ ವಿದ್ವತ್ತೆಯಿಂದ ಅಚ್ಯುತದೇವರಾಯನನ್ನು ಆಕರ್ಷಿಸಿ ಆತನ ರಾಣಿಯಾದಳು.ಇದಕ್ಕೂ ಇನ್ನೂರು ವರ್ಷ ಮೊದಲೇ ಬುಕ್ಕರಾಯನ ಸೊಸೆ ಗಂಗಾದೇವಿ, ವೀರಕಂಪರಾಯನ ಚರಿತೆ ಅಥವಾ "ಮಧುರಾವಿಜಯಂ" ಸಂಸ್ಕೃತದಲ್ಲಿ ರಚಿಸಿದ್ದಳು.

ಬೆಳವಡಿ ಮಲ್ಲಮ್ಮನ ಶಿಕ್ಷಣ :

ಇತ್ತೀಚೆಗೆ ಬೆಳಕಿಗೆ ಬಂದು, ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಪ್ರಕಟಿತವಾದ 'ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ' ಎಂಬ ಚರಿತ್ರೆಯ ಕೃತಿ ಕ್ರಿ. ಶ. ಸುಮಾರು ೧೭೦೪-೦೫ರಲ್ಲಿ ಶೇಷೋ ಶ್ರೀನಿವಾಸ (ಮುತಾಲಿಕ)ನಿಂದ ಮರಾಠಿಯಲ್ಲಿ ರಚಿತವಾಗಿದೆ. ಶಿವಾಜಿಯೊಡನೆ ಹೋರಾಡಿ ಆತನ ಗೌರವ-ವಿಶ್ವಾಸಗಳನ್ನು ಗಳಿಸಿದ ಬೆಳವಡಿ ಮಲ್ಲಮ್ಮನ ಅಪೂರ್ವ ಸಾಧನಗೆಳ ವಿವರಗಳನ್ನು ಈಗಾಗಲೇ ನೋಡಿದ್ದಾಗಿದೆ (ಅಧ್ಯಾಯ ೨).ಸ್ವಾದಿ ಅಥವಾ ಸೋದೆ ಸಂಸ್ಥಾನದ ಅರಸು ಮಧುಲಿಂಗನಾಯಕನು ತನ್ನ ಮಕ್ಕಳಾದ ಸದಾಶಿವನಾಯಕ ಮತ್ತು ಮಲ್ಲಮ್ಮನಿಗೆ ಏರ್ಪಡಿಸಿದ ವಿದ್ಯಾಭ್ಯಾಸದ ಕುರಿತಾದ ಕುತೂಹಲಕಾರಿ ವಿವರಗಳನ್ನು "ಶಿವಾಜಿ - ಮಲ್ಲಮ್ಮಾಜಿ ಸಮರೋತ್ಸವ" ಒದಗಿಸುತ್ತದೆ. ಸಂಬಂಧಿತ ಮರಾಠಿ ಭಾಷೆಯ ಅವತರಣಿಕೆಗಳ ಕನ್ನಡ ಅನುವಾದ ಕೆಳಗಿನಂತಿದೆ:

"ಐದು ವರ್ಷ ತುಂಬಿದಾಗ, ಮಲ್ಲಮ್ಮನಿಗೆ ಅಣ್ಣ ಸದಾಶಿವ ನಾಯಕನೊಂದಿಗೆ ವಿದ್ಯಾಭ್ಯಾಸ ಪ್ರಾರಂಭವಾಯಿತು. ಇಬ್ಬರೂ ಕನ್ನಡ, ಮರಾಠಿ, ಉರ್ದು, ಸಂಸ್ಕೃತ ಲಿಪಿಗಳನ್ನು ಕಲಿತು ಆಯಾ ಭಾಷೆಗಳಲ್ಲಿ ಓದು-ಬರೆಹಗಳನ್ನು ರೂಢಿಸಿಕೊಂಡರು. ಹತ್ತು ವರ್ಷಗಳಲ್ಲಿ ಎಲ್ಲ ಭಾಷೆಗಳಲ್ಲಿ ನಿಷ್ಣಾತರಾದರು. ಅಣ್ಣ-ತಂಗಿಯರಿಬ್ಬರೂ ಅನ್ಯೋನ್ಯವಾಗಿದ್ದರು. ಇವರೊಂದಿಗೆ ವಿದ್ಯಾಭ್ಯಾಸ ಮಾಡಲು ೨೦೦ ಗಂಡು ಹುಡುಗರು ಮತ್ತು ೨೦೦ ಹೆಣ್ಣುಮಕ್ಕಳ ದೊಡ್ಡ ಪಾಠಶಾಲೆಯನ್ನು ನಿರ್ಮಿಸಲಾಗಿತ್ತು. ೧೦ ಜನ ಹಿರಿಯ ಶಾಸ್ತ್ರಿಗಳು ಮತ್ತು ಪಂತೋಜಿ[1]ಯವರನ್ನು ನೇಮಿಸಲಾಗಿತ್ತು. ಇವರಲ್ಲಿ ಶಂಕರಭಟ್ಟರು ದೊಡ್ಡ ವಿದ್ವಾಂಸರಾಗಿದ್ದರು. ಇವರು ಸಂಸ್ಕೃತದಲ್ಲಿ ನಿಷ್ಣಾತರಾಗಿರುವುದರ ಜೊತೆಗೆ ಸಾಹಿತ್ಯ, ವ್ಯಾಕರಣ, ನ್ಯಾಯಶಾಸ್ತ್ರಗಳಲ್ಲಿ ಅದ್ವಿತೀಯ ಪಂಡಿತರಾಗಿದ್ದರು. ಪಾಠಶಾಲೆಯ ವಿದ್ಯಾರ್ಥಿಗಳಲ್ಲಿ ನೂರು ಜನ ಹವೀಕರು, ನೂರು ಜನ ಗೌಡ ಸಾರಸ್ವತರು, ನೂರು ಜನ

---

೧. ಪಂತ=ಪಂತೋಜಿ=ಪಂಡಿತ.

ನಾಡವರು, ನೂರು ಜನ ಒಕ್ಕಲಿಗರು, ಐವತ್ತು ಜನ ಲಿಂಗಾಯರು, ಇಪ್ಪತ್ತು ಜನ ದೇಶಸ್ಥರು ಮತ್ತು ಇಪ್ಪತ್ತು ಜನ ಮಾಧ್ವರು ಇದ್ದರು.[೨] ಮಲ್ಲಮ್ಮಾಜಿ ಎಲ್ಲ ವಿದ್ಯಾರ್ಥಿಗಳಲ್ಲಿ ಅದ್ವಿತೀಯ ಮೇಧಾವಿನಿಯಾಗಿದ್ದಳು. ಅವಳ ಬುದ್ಧಿಮತ್ತೆಯನ್ನು ಎಲ್ಲರೂ ಗುಣಗಾನ ಮಾಡುವವರೇ ಆಗಿದ್ದರು. ಹನ್ನೆರಡನೆಯ ವಯಸ್ಸಿಗೆ ಮಲ್ಲಮ್ಮಾಜಿಗೆ ಕನ್ನಡ ಮತ್ತು ಸಂಸ್ಕೃತದಲ್ಲಿ ಕವಿತಾಶಕ್ತಿ ಕಾಣಿಸಿಕೊಂಡಿತು. ಎಲ್ಲರಿಗೂ ಇದರಿಂದ ಸೋಜಿಗವುಂಟಾಯಿತು. ಸದಾಶಿವನಾಯಕನೂ ಕನ್ನಡದಲ್ಲಿ ಪ್ರಾವೀಣ್ಯವನ್ನು ಪಡೆದಿದ್ದ. ಆತನ ಕವಿತೆ, ಮಧುರ ಶೈಲಿಯನ್ನು ಹೊಂದಿದ್ದು ರಂಜಕವಾಗಿರುತ್ತಿತ್ತು. ಮಧುಲಿಂಗನಾಯಕನು ಎಲ್ಲ ಹುಡುಗರಿಗೂ ಯುದ್ಧ ವಿದ್ಯೆಗೆ ಏರ್ಪಾಡು ಮಾಡಿ, ರಣವೀರಸಿಂಗ್ ಎಂಬ ಪ್ರಸಿದ್ಧ ವೀರ ಸೈನಿಕನನ್ನು ಈ ಕೆಲಸಕ್ಕೆ ನೇಮಿಸಿದ. ಮೊದಲಿಗೆ ಸದಾಶಿವನಾಯಕನು ಖಡ್ಗದ ಪ್ರಯೋಗ ಕಲಿಯಲಾರಂಭಿಸಿದಾಗ ಮಲ್ಲಾಂಬೆಯೂ (ಮಲ್ಲಮ್ಮನೂ) ಅದರಲ್ಲಿ ಕೈಚಳಕ ತೋರಿದಳು. ಧನುರ್ವಿದ್ಯೆಯಲ್ಲಿಯೂ ಮಿಗಿಲೆನಿಸಿಕೊಂಡಳು. ಕುದುರೆ ಸವಾರಿ ಮತ್ತು ಬಾಣಪ್ರಯೋಗದಲ್ಲಿ ಪುರುಷರಂತಿದ್ದಳು. ತೀಕ್ಷ್ಣ ಗುರಿಯಿಂದ ಭಲ್ಲೆಯನ್ನು ಎಸೆಯಬಲ್ಲವಳಾಗಿದ್ದಳು. ಈಶ್ವರೇಚ್ಛೆಯಿಂದ ಅವಳಲ್ಲಿ ಶೌರ್ಯ ಹುಟ್ಟಾ ಕಾಣಿಸಿಕೊಂಡಿತ್ತಲ್ಲದೇ ಚಿಕ್ಕಂದಿನಿಂದ ಯುದ್ಧವಿದ್ಯೆಯಲ್ಲಿ ಹೆಚ್ಚಿನ ಪರಾಕ್ರಮ ತೋರಿಸುತ್ತಿದ್ದಳು. ಹೆದರಿಕೆಯೆಂಬುದನ್ನೇ ಅರಿಯಳು. ಹೀಗಾಗಿ ಗಂಡು-ಹೆಣ್ಣುಮಕ್ಕಳ ನಡುವೆ ಪರಾಕ್ರಮಶಾಲಿಯಾಗಿ, ಶೂರಳಾಗಿ ಬೆಳೆದಳು. ಗುರು, ದೇವತೆ, ತಂದೆ ತಾಯಿಗಳ ವಿಷಯದಲ್ಲಿ ಅವಳಿಗೆ ಅನನ್ಯ ಭಕ್ತಿಯಿತ್ತು. ದಿನಾಲು ಬೆಳಿಗ್ಗೆ ಎದ್ದು ಪ್ರಾತರ್ವಿಧಿ ಮುಗಿಸಿ, ಸ್ನಾನಮಾಡಿ, ಅಣ್ಣನೊಡನೆ ಶಿವಪೂಜೆ ಮಾಡುವಳು. ನಂತರ ಪಾಠಶಾಲೆಗೆ ಹೋಗುವಳು."

ಆಳರಸರ ವರ್ಗದಲ್ಲಿ ಮಹಿಳೆಯರಿಗೂ ಗಂಡಸರಂತೆಯೇ ವಿದ್ಯೆ ಲಭಿಸುತ್ತಿತ್ತು ಎಂಬುದು ಮೇಲಿನ ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ೧೭ನೇ ಶತಕದಲ್ಲಿ ಗಂಡು ಹೆಣ್ಣುಮಕ್ಕಳಿಗೆ ಕೂಡಿಯೇ ಪಾಠಶಾಲೆ ನಡೆಸಿದ್ದು ಸ್ವಾದಿ ಅರಸರ ವಿದ್ಯಾಪ್ರೇಮ ಮತ್ತು ವಿಶಾಲ ಮನೋಭಾವವನ್ನು ಎತ್ತಿ ತೋರಿಸುತ್ತದೆ.

ಈ ಕಾಲದಲ್ಲಿ ಜನಸಾಮಾನ್ಯರೂ ಕಲೆ, ವಿನೋದಾವಳಿಗಳ ತರಬೇತಿಯಿಂದ ವಂಚಿತರಾಗಿರಲಿಲ್ಲ. ನರ್ತಕರು, ವಾದ್ಯಮೇಳದವರು, ಸಂಗೀತಗಾರರು ಊರಿಂದೂರಿಗೆ ಹೋಗಿ ತಮ್ಮ ಕಲಾಕೌಶಲ್ಯವನ್ನು ಪ್ರದರ್ಶಿಸಿ, ಪ್ರಶಂಸೆ, ಪಾರಿತೋಷಕ, ಧನಸಹಾಯಗಳನ್ನು ಪಡೆಯುತ್ತಿದ್ದರು. ಚಿಕ್ಕಊರುಗಳಲ್ಲಿಯೂ ನೃತ್ಯ ಶಿಕ್ಷಣ ನೀಡುವವರಿದ್ದರು ನಟ್ಟುವರು ಕೋಲು ಹಿಡಿದು ನೃತ್ಯಗಾತಿಯರ ಹೆಜ್ಜೆಗಳನ್ನು ನಿರ್ದೇಶಿಸುತ್ತಿದ್ದರು. ಕಾವ್ಯ ವರ್ಣನೆಗೆ ಹೋಲುವ ಕರ್ನಾಟಕದಲ್ಲಿ ಪ್ರಚಲಿತವಿದ್ದ, ಹಲವಾರು ವಾದ್ಯಗಳನ್ನು ಪ್ರತಿನಿಧಿಸುವ ಸ್ತ್ರೀಶಿಲ್ಪಗಳನ್ನು

---

೨. ಇಲ್ಲಿ ಒಟ್ಟು ಸಂಖ್ಯೆ ತಪ್ಪಿದೆ. ಪಾಠಶಾಲೆಯಲ್ಲಿ ಒಟ್ಟಿಗೆ ನಮೂದಿಸಿದ ೪೦೦ ವಿದ್ಯಾರ್ಥಿಗಳ ಸಂಖ್ಯೆ ಜಾತಿಯ ಪ್ರಕಾರ ವಿಭಜಿಸಿದಾಗ ೪೯೦ ಆಗುತ್ತದೆ!

ಕಾಣಬಹುದು. (ಚಿತ್ರ 18).



ಚಿತ್ರ 18. ಹುಡುಕ್ಕ, ಕೊಂಬು, ಖಂಜೇರ ಕಾಷ್ಠವಾದ್ಯ, ಕಿನ್ನರಿ ಹಾಗೂ ಡೋಲು ನುಡಿಸುವ ಲಲನೆಯರು

ಮುಸ್ಲಿಂ ಮಹಿಳೆಯರ ಶಿಕ್ಷಣ :

ಮಖ್ತಾಬ್ ಮತ್ತು ಮದರಸಾಗಳಲ್ಲಿ ಹುಡುಗರಿಗಷ್ಟೇ ಪ್ರವೇಶವಿದ್ದುದರಿಂದ ಮಹಮ್ಮದೀಯರಲ್ಲಿ ಸ್ತ್ರೀ ಶಿಕ್ಷಣವಿರಲಿಲ್ಲವೆಂದು ತೀರ್ಮಾನಕ್ಕೆ ಬರುವುದು ಸರಿಯಲ್ಲ. ಸ್ತ್ರೀಯರನ್ನು ಪರಪುರುಷರಿಂದ ದೂರ ಇಡುವ ಅವರ ಧೋರಣೆಯಿಂದಾಗಿ ಕುಮಾರಿಯರನ್ನು ಶಾಲೆಗೆ ಕಳಿಸುವ ಪರಿಪಾಠ ಬೆಳೆದುಬರಲೇ ಇಲ್ಲ. ಬದಲಿಗೆ ಮನೆಯಲ್ಲೇ ಹೆಣ್ಣುಮಕ್ಕಳಿಗೆ ನಿತ್ಯಜೀವನಕ್ಕೆ ಬೇಕಾದ ಶಿಕ್ಷಣವನ್ನು ತಂದೆತಾಯಿಗಳು ಕೊಡುತ್ತಿದ್ದರು ಅಥವಾ ವಯಸ್ಸಾದ ದಾದಿಯರಿಂದ ಗೃಹಶಿಕ್ಷಣ ಕೊಡಿಸುತ್ತಿದ್ದರು. ಹತ್ತಾರು ಧನಿಕರು ಸೇರಿ ಒಬ್ಬ ಶಿಕ್ಷಕಿಯನ್ನು ನೇಮಿಸಿ ಹುಡುಗಿಯರಿಗೆ ಬೇಕಾದ ಕಲೆಗಳನ್ನು ಕಲಿಸುತ್ತಿದ್ದರು.

ಅರಸರು ಅಥವಾ ಸುಬೇದಾರರು ಮೌಲ್ವಿಗಳನ್ನು ಮಹಲಿಗೆ ಬರಮಾಡಿಕೊಂಡು ರಾಜಕುಮಾರಿಯರಿಗೆ ಶಿಕ್ಷಣ ಕೊಡಿಸುತ್ತಿದ್ದರು. ಗುರುವಾಗಿ ಮನೆಗೆ ಬರುವವನು ಹಣ್ಣು ಮುದುಕನಾಗಿರುವುದು ಅತಿ ಮುಖ್ಯವಾಗಿತ್ತು. ಅರಮನೆಯ ಸೇವೆಯಲ್ಲಿದ್ದ ಮಹಿಳೆಯರಿಗೂ ಶಿಕ್ಷಣ ದೊರಕುವಂತೆ ನೋಡಿಕೊಳ್ಳುತ್ತಿದ್ದರು. ಅವರೆಲ್ಲ ಫಾರಸಿ ಭಾಷೆ, ಗಣಿತ, ಸಂಗೀತ, ಚಿತ್ರಕಲೆ, ಯುನಾನಿ-ಚಿಕಿತ್ಸಾ ಪದ್ಧತಿಗಳನ್ನು ಕಲಿಯುತ್ತಿದ್ದರು. ವೀರರಮಣಿ ಚಾಂದಬೀಬಿ, ಗಂಡು ಹುಡುಗರಂತೆಯೇ ಸೈನ್ಯ ಶಿಕ್ಷಣ ಪಡೆದದ್ದರಿಂದ ಮೊಗಲ ಸೇನೆಯೊಂದಿಗೆ ಹೋರಾಡುವ ಪರಾಕ್ರಮ ತೋರಿದಳು. ಇದಲ್ಲದೇ ಅವಳು ಅರಬಿ, ಫಾರಸಿ, ತುರ್ಕಿ ಭಾಷೆಗಳಲ್ಲಿ ಪ್ರವೀಣೆ. ಹಾಡುತ್ತಿದ್ದಳು. ಸಿತಾರ್ ನುಡಿಸುತ್ತಿದ್ದಳು, ಹೂಗಳನ್ನು ಚಿತ್ರಿಸುವುದು ಅವಳ ಇಷ್ಟದ ರಂಜನೆಯಾಗಿತ್ತು. ಜೊತೆಗೆ ಹಿಂದಿ, ಮರಾಠಿ, ಕನ್ನಡಗಳನ್ನೂ ಕಲಿತಿದ್ದಳು, ಎಂದು ಅರಿತಾಗ ಅಚ್ಚರಿಯಾಗದಿರದು!

೧೪ನೇ ಶತಕದಲ್ಲಿ ಉತ್ತರಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಇಪ್ಪತ್ತೇಳು ಹುಡುಗರ ಶಾಲೆಗಳನ್ನು, ಹದಿಮೂರು ಹುಡುಗಿಯರ ಶಾಲೆಗಳನ್ನು ಕಂಡ ಅರಬ್ ಪ್ರವಾಸಿ ಇಬ್ನ್ ಬತೂತನು ಇಂಥ ಶಾಲೆಗಳನ್ನು ತಾನೆಲ್ಲೂ ಕಂಡಿರಲಿಲ್ಲವೆಂದು ಉದ್ಗರಿಸಿದ್ದಾನೆ. ಹುಡುಗಿಯರು ಮೂಗಿನಲ್ಲಿ ಬುಲಾಕು ಧರಿಸುತ್ತಾರೆ, ಸುಂದರಿಯರಿದ್ದಾರೆ. ಅವರೆಲ್ಲ ಖುರಾನ್‌ವನ್ನು ಕಂಠಪಾಠ ಹೇಳುತ್ತಾರೆ, ಎಂಬುದನ್ನು ಗಮನಿಸಿದ್ದ. ಈ ವರ್ಣನೆಯಿಂದ ಆ ಶಾಲೆಗಳು ಪ್ರಾರ್ಥನೆ ಮತ್ತು ಖುರಾನ್‌ಗಳನ್ನು ಕಲಿಸುವ ಮಖ್ತಾಬ್‌ಗಳಿದ್ದು ಆ ಮಹಿಳೆಯರೆಲ್ಲ ಹೊಸದಾಗಿ ಇಸ್ಲಾಂ ಸ್ವೀಕರಿಸಿ ಇನ್ನೂ ಬುರ್ಕಾ ಪದ್ಧತಿ ರೂಢಿಸಿಕೊಂಡಿರಲಿಲ್ಲವೆಂದು ತೋರುತ್ತದೆ. ಅಲ್ಲದೇ ಆ ಪ್ರದೇಶದಲ್ಲಿ 'ಮೂರ್" ವಂಶಸ್ಥರಾದ ನವಾಯತ್ ಮುಸಲ್ಮಾನರು ಬೀಡು ಬಿಟ್ಟಿದ್ದರು. ಅವರು ಸಲ್ಲದ ಮಡಿವಂತಿಕೆಯಲ್ಲಿ ವಿಶ್ವಾಸ ಇಟ್ಟವರಲ್ಲ. ಆದ್ದರಿಂದ ಸಾರ್ವಜನಿಕ ಶಾಲೆಗೆ (ಮಖ್ತಾಬ್‌ಗಳಿಗೆ) ಹುಡುಗಿಯರು ಹೋಗುವ ಪದ್ಧತಿ ಪ್ರಚಲಿತವಿದ್ದಿರಲು ಸಾಕು.

ಹೈದರ್‌ಅಲಿ, ತನ್ನ ಝನಾನಾದಲ್ಲಿ ಲಾಹೋರ್, ಅಬ್ಬಾಲಾ, ಕಾಬೂಲ್, ಕಂದಹಾರ್, ಕಾಶ್ಮೀರ್, ಗುಜರಾತ್, ಅರಬಸ್ತಾನಗಳಿಂದ ತರಿಸಿದ ಸುಂದರಿಯರಲ್ಲಿ ಜಾಣೆಯರನ್ನು ಗುರುತಿಸಿ ಭರತಶಾಸ್ತ್ರ ಪ್ರವೀಣ, ನಾಟಕ ಶಾಲೆಯ ಮುಖ್ಯಸ್ಥರಾದ

ಕುಪ್ಪಯ್ಯನವರ ತಂದೆಯ ಮೇಲ್ವಿಚಾರಣೆಯಲ್ಲಿ ಅವರಿಗೆ ನೃತ್ಯ, ಹಾಡುಗಾರಿಕೆ, ವಾದ್ಯ ನುಡಿಸುವಿಕೆ ಮತ್ತು ಅಭಿನಯಗಳ ಶಿಕ್ಷಣದ ಏರ್ಪಾಡು ಮಾಡಿದ್ದ. ಇದಲ್ಲದೇ ಅನೇಕ ಕಡೆಗಳಲ್ಲಿ ಮಹಮ್ಮದೀಯ ಸ್ತ್ರೀಯರಿಗೆ ಶಿಕ್ಷಣ ಕೊಡಿಸುವ ಏರ್ಪಾಡು ಇದ್ದಿರಬೇಕು. ಆದರೆ ಅವುಗಳ ವಿವರಗಳು ಸಿಗುತ್ತಿಲ್ಲ.

ಸಾಮಾನ್ಯರ ಶಿಕ್ಷಣ : 'ಹದಿಬದೆಯ ಧರ್ಮ' ಬರೆದ ಸಂಚಿಯ ಹೊನ್ನಮ್ಮ (ಕ್ರಿ. ಶ. ಸು 1660-1700) ಗೆ ದೊರೆತ ವಿದ್ಯಾಭ್ಯಾಸದ ಸೌಕರ್ಯಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವದು ಉಚಿತವೆನಿಸುತ್ತದೆ. ರಾಣಿಯ ಬಳಿ ವೀಳ್ಯದ ವಿವಿಧ ಪ್ರಕಾರಗಳನ್ನು ತಯಾರಿಸುವ ಊಳಿಗದಲ್ಲಿ ಇದ್ದ ಹೊನ್ನಮ್ಮ, ಮೊದಲಿಗೆ ಹೆಚ್ಚು ಓದಿದವಳಿರಲಿಲ್ಲ. ಆದರೆ ಅವಳಲ್ಲಿ ಸುಪ್ತವಾಗಿದ್ದ ಕಾವ್ಯ ಪ್ರತಿಭೆಯನ್ನು ಮೈಸೂರಿನ ದೊರೆ ಚಿಕ್ಕದೇವರಾಯನ ರಾಣಿ ದೇವಮ್ಮಾಜಿ ಗುರುತಿಸಿದಳು. ಅದನ್ನು ಅರಸನ ಗಮನಕ್ಕೂ ತಂದಳು. ಅರಸನು ತನ್ನ ಗುರುವೂ, ಆಸ್ಥಾನ, ವಿದ್ವಾಂಸನೂ ಆಗಿದ್ದ ಅಳಹಿಯ ಸಿಂಗರಾರ್ಯನ ಮಾರ್ಗದರ್ಶನದಲ್ಲಿ ಅವಳ ಹೆಚ್ಚಿನ ವಿದ್ಯಾಭ್ಯಾಸದ ಏರ್ಪಾಡು ಮಾಡಿದ. ರಾಮಾಯಣ, ಮನು - ಧರ್ಮಶಾಸ್ತ್ರ, ಮಹಾಭಾರತ, ಭಗವದ್ಗೀತೆ, ಭಾಗವತ, ಪುರಾಣಾದಿಗಳನ್ನೆಲ್ಲ ಹೊನ್ನಮ್ಮ ಕ್ರಮವಾಗಿ ಅಭ್ಯಸಿಸಿದಳು. ಇವೆಲ್ಲ ಗ್ರಂಥಗಳು ಸಂಸ್ಕೃತದಲ್ಲಿದ್ದವು ಎಂಬುದನ್ನು ಮರೆಯುವಂತಿರಲಿಲ್ಲ. ಇಷ್ಟಾದರೂ ವಿದ್ಯೆ ಕಲಿತವಳೆಂಬ ಹೆಮ್ಮೆ ತನಗಿಲ್ಲ (....'ಭಾವಿಸೆ ಬಿಜ್ಜೆಗಲಿತ ಪೆರ್ಮೆಯೆನಗಿಲ್ಲ'.) ಎಂದು ನಮ್ರತೆಯಿಂದಲೇ ಹೇಳಿಕೊಂಡಿದ್ದಾಳೆ. 'ನಾವೇಕೆ ನಮಗೆ ಶೋಭಿಸದ ಓಲೆ ಹಿಡಿದು ಈಕೆ ಬರೆದ ಕಾವ್ಯವನ್ನು ಓದಬೇಕು? ಎಂದು ತಾತ್ಸಾರ ತೋರದಿರಿ! ಈಕೆ ಬಾಲೆ, ಓದಿದ್ದನ್ನೆಲ್ಲ ಅರಗಿಸಿಕೊಂಡು (ತಿಳಿಯುವಂತೆ) ಬಣ್ಣಿಸಿ ಬಳಲಿದ್ದಾಳೆ ಎಂಬ ಮರುಕದಿಂದಲಾದರೂ ಇತರರಿಂದ ಓದಿಸಿಕೇಳಿ!" ಎಂದು 'ಹದಿಬದೆಯ ಧರ್ಮ'ದಲ್ಲಿ ತನ್ನ ಕಾಲದ ಹೆಣ್ಣು ಮಕ್ಕಳಿಗೆ ಕಳಕಳಿಯಿಂದ ಕೇಳಿಕೊಂಡಿದ್ದಾಳೆ. ಸಾಮಾನ್ಯ ಪ್ರಜೆಗಳಾದ ಒಕ್ಕಲಿಗರು, ಹೆಣ್ಣುಮಕ್ಕಳು ಸಂಸ್ಕೃತ ಭಾಷೆಯಲ್ಲಿರುವ ತತ್ವಾರ್ಥಗಳನ್ನು ಅರಿಯಲಾರರು ಎಂದು ಮನಗಂಡಿದ್ದ ಅರಸನ ಸೂಚನೆಯಂತೆ, ನಾಡಭಾಷೆಯಾದ ಕನ್ನಡದಲ್ಲೇ ಬರೆದಳು. "ಕನ್ನಡ ವಾಕಿನೊಳಂ ಮೆಲ್ನುಡಿಗಳಿಂದೆ, ಅಖಿಲ ತತ್ವಾರ್ಥಗಳಂ ಸಂಗತಿಗೊಳಿಸಿದುದಾಗಿ" ಹೇಳಿಕೊಂಡಿದ್ದಾಳೆ. ಅರಮನೆಯ ಹೆಣ್ಣು ಮಕ್ಕಳಿಗೆ ಸಿಗುವ ಶಿಕ್ಷಣದ ಸೌಲಭ್ಯಗಳನ್ನು ಹೊನ್ನಮ್ಮ ಬಳಸಿಕೊಂಡಳು ಮತ್ತು ಅದರ ಮೂಲಕ ಸಾಮಾನ್ಯ ಮಹಿಳೆಯರನ್ನು ತಲುಪಲು ಯತ್ನಿಸಿದಳು.

ಎಲ್ಲರೂ ಹೊನ್ನಮ್ಮನಂತೆ ವಿದ್ಯೆಯ ಅವಕಾಶ ಪಡೆಯುವ ಸುದೈವಿಗಳಾಗಿರಲಿಲ್ಲ. ಆದರೆ ಕೆಲವು ಮನೆಗಳಲ್ಲಾದರೂ ಹೆಂಗಳೆಯರಿಗೆ ಓದು, ಬರೆಹ, ಲೆಕ್ಕಗಳನ್ನು ಹೇಳಿಕೊಡುವ ಪರಿಪಾಠವಿತ್ತು. ಕೆಲವರು ಹೆಣ್ಣುಮಕ್ಕಳಿಗೆ ಓದಿಸಲೆಂದು ಕಾವ್ಯಾದಿಗಳನ್ನು ಪ್ರತಿ ಮಾಡಿಸುತ್ತಿದ್ದರು. ಹೊನ್ನಮ್ಮನ "ಓಲೆ ಪಿಡಿದು ಓದಲೇಕೆ?" ಎಂಬ ವಾಕ್ಯವೇ ಅಂದಿನ

ಹೆಣ್ಣುಗಳು ಅಕ್ಷರಾಭ್ಯಾಸವಿದ್ದರೂ, ಓದಲು ಆಸಕ್ತಿ ತಳೆದವರು ಇರಲಿಲ್ಲವೆಂದು ಸೂಚಿಸುತ್ತದೆ. ಕೆಲವು ಹೆಂಗಳೆಯರು ಕಾವ್ಯಗಳನ್ನು ತಾವೇ ಪ್ರತಿ ಮಾಡಿ ಇತರರಿಗೆ ಒದಗಿಸುತ್ತಿದ್ದರು. ಸುಕುಮಾರ ಚರಿತ್ರೆ, ಕುಮಾರರಾಮನ ಸಾಂಗತ್ಯ, ಲಿಂಗಲೀಲಾವಿಲಾಸ ಮುಂತಾದ ಗ್ರಂಥಗಳನ್ನು ತಾಳೆ ಓಲೆಗಳಲ್ಲಿ ಪ್ರತಿಮಾಡಿಕೊಟ್ಟ ಹೆಂಗಳೆಯರ ಹೆಸರುಗಳು ದೊರೆಯುತ್ತವೆ.

ಸಂಸ್ಕೃತಿಯ ಕೇಂದ್ರವಾಗಿದ್ದ ಊರ ದೇವಾಲಯಗಳಲ್ಲಿ ತಾತ್ವಿಕ ಚಿಂತನೆ-ಬೋಧೆ, ಕಥಾ ಕಾಲಕ್ಷೇಪ, ಪುರಾಣ-ಭಾರತಾದಿಗಳ ವಾಚನ, ಗಮಕ, ಕೇಳಿಕೆಗಳ ಕಾರ್ಯಕ್ರಮಗಳು ಎಡಬಿಡದೆ ನಡೆಯುತ್ತಿದ್ದು, ಬಿಡುವಿನ ವೇಳೆಯಲ್ಲಿ ಸ್ತ್ರೀಯರೆಲ್ಲ ನೀತಿ-ಕತೆಗಳನ್ನು ಕೇಳಲು ಬರುತ್ತಿದ್ದರು. ಕೈಗಳು ಹೂಬತ್ತಿ ಹೊಸೆಯುತ್ತಲೋ, ಎಲೆ ಹಚ್ಚುತ್ತಲೋ ಇದ್ದರೆ, ಕಿವಿಗಳು ಪುಣ್ಯಾಹವಾಚನದತ್ತ ಚಾಚಿಯೇ ಇರುತ್ತಿದ್ದವು. ಶ್ರವಣದಿಂದ ಲಭಿಸಿದ ವಿದ್ಯೆಯನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಿದ್ದಷ್ಟು ಯತ್ನಿಸುತ್ತಿದ್ದರು. "ಲೋಕಶಾಸ್ತ್ರ" ಅಥವಾ ಸಾಮಾನ್ಯರಿಗೆ ಉಪಯುಕ್ತವಿರುವ ವಿಚಾರಗಳನ್ನು ತಿಳಿಯುಪಡಿಸಿದ ಹೆಚ್ಚಳ ಹೊನ್ನಮ್ಮನದಾಗಿತ್ತು. ಆ ಯುಗದ ನಂಬಿಕೆಯೇ ಅದಾಗಿದ್ದು ಎಷ್ಟೋ ಮಹಿಳೆಯರು, ತಮ್ಮ ಸೋದರಿಯರ ಅರಿವಿನ ಮಟ್ಟವನ್ನು ಎತ್ತರಿಸಲು ಯತ್ನಿಸಿದ್ದಿದೆ. ಆದರೆ ಅವರು ಪ್ರಸಿದ್ಧಿ ಪಡೆಯಲು ಯತ್ನಿಸಲಿಲ್ಲ.

ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಮೊದಲಾದವರು, ಭಕ್ತಿಪ್ರಧಾನ ರಚನೆಗಳನ್ನು, ಜೋಗುಳದ ಹಾಡು, ಆರತಿ ಹಾಡು, ಮದುವೆ ಮತ್ತಿತರ ಮಂಗಲ ಪ್ರಸಂಗದಲ್ಲಿ ಹಾಡುವ, ದೈನಂದಿನ ಕಾರ್ಯಕಲಾಪಗಳನ್ನು ನಿರ್ವಹಿಸುತ್ತಲೇ ಹಾಡಬಹುದಾದ ಕೃತಿಗಳನ್ನು ರಚಿಸಿದರು. ಇವೆಲ್ಲ ಸಂಪ್ರದಾಯದ ಗೀತೆಗಳೆಂದು ಗುರುತಿಸಲ್ಪಡುತ್ತವೆ. ಹಬ್ಬ-ಹರಿದಿನಗಳಲ್ಲಿ ಕೌಟುಂಬಿಕ, ಸಾಮಾಜಿಕ ಕಾರ್ಯಕ್ರಮಗಳಲ್ಲಿ, ಸಾಮೂಹಿಕ ಉತ್ಸವಗಳಲ್ಲಿ ಹಾಡಬಹುದಾದ ಎಷ್ಟೋ ರಚನೆಗಳನ್ನು ಸ್ತ್ರೀಯರು ಮಾಡಿದ್ದಾರೆ. ನೂರಾರು ರಚನೆಗಳನ್ನು ಸುಶ್ರಾವ್ಯವಾಗಿ ಹಾಡುವವರು ಇದ್ದಂತೆ ಸೋಬಾನೆ ಹಾಡುಗಳ ಚಿಕ್ಕಮ್ಮನಂಥವರು ನಿರಕ್ಷರಿ ಆಗಿದ್ದರೂ ಜನಮನದ ಮೇಲೆ ಕಾಯಂ ತಮ್ಮ ಹಾಡುಗಳ ಮುದ್ರೆಯೊತ್ತಿ ಅಮರರಾಗಿದ್ದಾರೆ.

ಸಾಕಷ್ಟು ಅಕ್ಷರಾಭ್ಯಾಸವಿದ್ದ ಹುಡುಗಿಯರೆಲ್ಲ ತಾಯಂದಿರಿಂದ, ಮನೆಯ ಇತರರಿಂದ ಜೀವನೋಪಯೋಗಿ ಇತರ ವಿಷಯಗಳಂತೆ ಈ ಹಾಡುಗಳನ್ನೂ ಕಲಿತು, ಇತರರೊಂದಿಗೆ ಹಾಡುತ್ತ, ಕಲಿಸುತ್ತ ಬರೆದುಕೊಳ್ಳುತ್ತಿದ್ದರು. ಮದುವೆಯಾಗಿ ಪತಿಗೃಹಕ್ಕೆ ಹೋಗುವ ಹುಡುಗಿಯರ ಅವಶ್ಯಕ ಸಾಮಗ್ರಿಗಳಲ್ಲಿ ಎಲ್ಲಾ ಸಂದರ್ಭದಲ್ಲಿ ಹೊಂದುವಂಥ ಪ್ರಾರ್ಥನೆ, ಆರತಿ ಹಾಡುಗಳನ್ನು ಬರೆದುಕೊಂಡ 'ವಹಿ' (ನೋಟ್‌ಬುಕ್) ಇರುತ್ತಿತ್ತಂತೆ. ಚೆನ್ನಾಗಿ ಹಾಡುವಾಕೆಗೆ. ಕೌಟುಂಬಿಕ. ಸಾಮಾಜಿಕ, ಧಾರ್ಮಿಕ ಸಮಾರಂಭಗಳಲ್ಲಿ ಇರುತ್ತಿದ್ದ ಬೇಡಿಕೆ, ವಿದ್ಯುನ್ಮಾನ ಮಾಧ್ಯಮಗಳಿಲ್ಲದ ದಿನಗಳಲ್ಲಿ ಹೇಳಿ ಮುಗಿಯುವಂತಿಲ್ಲ. ಉರುಟಣೆ ಹಾಡು, ಒಗಟು, ಕಥೆ ಕಲೆಗಳನ್ನು ರೂಢಿಸಿಕೊಂಡವರು ಹಲವರಿರುತ್ತಿದ್ದರು. ಗೃಹ ವೈದ್ಯಕೀಯ ಬಲ್ಲವರೂ ಇರುತ್ತಿದ್ದರು.

ಹಿಂದಿನವರ ಶಿಕ್ಷಣ ಕ್ರಮವನ್ನು ಇಪ್ಪತ್ತೊಂದನೆಯ ಶತಮಾನದ ಸ್ತ್ರೀ ಪುರುಷ ಭೇದವಿಲ್ಲದೇ ಶಾಲೆಗಳಲ್ಲಿ ಕೊಡುತ್ತಿರುವ ಶಿಕ್ಷಣ ಕ್ರಮಕ್ಕೆ ಹೋಲಿಸುವಂತೆ ಇಲ್ಲ. ತಾಂತ್ರಿಕ ಪ್ರಗತಿ ಕಾಣದಿದ್ದರೂ, ಸ್ವಯಂಪೂರ್ಣವಾಗಿದ್ದ ಹಿಂದಿನ ಗ್ರಾಮ ಜೀವನದಲ್ಲಿ 'ನೌಕರಿಗಾಗಿ ಶಿಕ್ಷಣ' ಎಂಬ ಕಲ್ಪನೆಯೇ ಇರಲಿಲ್ಲ. ವೃತ್ತಿ ಶಿಕ್ಷಣ ಎಂದು ಬೇರೆಯಾಗಿಯೇ ವಿಭಾಗಿಸಲು ಹೊರಟರೆ, ಎಲ್ಲ ಕಸಬಿನವರಿಗೂ ಮನೆಯಲ್ಲಿಯೇ ಹಿರಿಯರು ಅಥವಾ ಜಾತಿ ಮುಖ್ಯಸ್ಥರು ಅಂಥ ಶಿಕ್ಷಣ ಒದಗಿಸುತ್ತಿದ್ದರು. ಗಂಡಸರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿಯುವ ಹೆಂಗಳೆಯರಿಗೂ ಅಂದು ತಂತಾನೆ ಒದಗುತ್ತಿತ್ತು. ನೂಲು, ನೇಕಾರಿಕೆ, ಬಣ್ಣ ಹಾಕುವುದು, ಹೊಲಿಗೆ, ಎಣ್ಣೆ ತೆಗೆಯುವುದು ಈ ಗ್ರಾಮೋಪಯೋಗಿ ನೂರೆಂಟು ವೃತ್ತಿಗಳನ್ನು ಮಾಡುವ ಹೆಂಗಳೆಯರು ತಂತಮ್ಮ ವೃತ್ತಿಗಳನ್ನು ರೂಢಿಸಿಕೊಂಡವರೇ ಇದ್ದರು. ಇಂದು ಅಕ್ಷರಾಭ್ಯಾಸ ಹೊಂದಿದ ಸ್ತ್ರೀಯರು, ಹೆಚ್ಚಿನ ಸಂಖ್ಯೆಯಲ್ಲಿರ ಬಹುದು. ಆದರೆ ಎಲ್ಲರನ್ನೂ ಒಂದೇ ಅಚ್ಚಿನಲ್ಲಿ ಹಾಕಿ ತಯಾರಿಸುವ ಯಾಂತ್ರಿಕವಾದ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಿಕ್ಷಣ ಕ್ರಮವು ಹೆಚ್ಚಿನ ಹುಡುಗಿಯರಿಗೆ ವ್ಯಾವಹಾರಿಕವಾಗಿ ಏನೂ ಸಹಾಯ ಮಾಡುತ್ತಿಲ್ಲ ಎಂಬ ಮಾತನ್ನು ಮರೆಯುವಂತಿಲ್ಲ. ನಿರುದ್ಯೋಗ ವೇಗವಾಗಿ ಬೆಳೆಯುತ್ತಿರುವ ದಿನಗಳಲ್ಲಿ ಯಾವ ಬಗೆಯ ಮೀಸಲಾತಿಯೂ, ಗ್ರಾಮೀಣ ಮಹಿಳೆಯರಿಗೆ ಸಹಾಯಕಾರಿಯಾಗಿಲ್ಲ.

ಈ ಶತಮಾನದ ಕನ್ನಡ ಮಹಿಳೆ, ಎಲ್ಲ ಕ್ಷೇತ್ರಗಳಲ್ಲಿ ಗಂಡಸರಿಗೆ ಸರಿಸಮಾನ ಶಿಕ್ಷಣ ಪಡೆದು ವಿವಿಧ ರಂಗಗಳಲ್ಲಿ ಮುಂದುವರಿಯುತ್ತಿರುವುದು ನಿಜವಾದರೂ ಅಖಂಡ ದೇಶದ ಪ್ರಗತಿಯನ್ನು ಗಮನಿಸಿದರೆ ಈ ಪ್ರಗತಿಪರ ಮಹಿಳೆಯರ ಸಂಖ್ಯೆ ಅತ್ಯಲ್ಪವೆಂದೇ ಹೇಳಬೇಕು. ಇತ್ತೀಚಿನ ಸಮೀಕ್ಷೆಯಲ್ಲಿ ಪತಿಯ ಆಕಸ್ಮಿಕ ಮರಣದಿಂದಾಗಿ ನಿರ್ಗತಿಕರಾಗುವ ಭಾರತದ ಹೆಣ್ಣುಮಕ್ಕಳ ಸಂಖ್ಯೆ ವರ್ಷ, ವರ್ಷ ಹತ್ತು ಲಕ್ಷದಷ್ಟು ಇದೆ! ಇದರಲ್ಲಿ ಕನ್ನಡಿತಿಯರ ಪಾಲು ಸಾಕಷ್ಟು ದೊಡ್ಡದಿದೆ. ಆಪತ್ಕಾಲಕ್ಕೆ ಉದರಂಭರಣೆ ಮಾಡಿಕೊಳ್ಳುವಂಥ ಯಾವ ಶಿಕ್ಷಣವೂ ಹುಡುಗಿಯರಿಗೆ ದೊರೆಯುತ್ತಿಲ್ಲ. ಸರಕಾರವಾದರೂ ಎಲ್ಲರೂ, ಎಲ್ಲ ಕಾಲಕ್ಕೂ ಬಯಸುವ ನೌಕರಿಗಳನ್ನು ಕೊಡಮಾಡುವ ಸ್ಥಿತಿಯಲ್ಲಿ ಇಲ್ಲ. ಶಿಕ್ಷಣದೊಂದಿಗೆ ಶ್ರಮ ಗೌರವದ ಕಲ್ಪನೆ ಸೇರ್ಪಡೆಯಾಗದೇ ದೈಹಿಕ ಶ್ರಮದಿಂದ ಜೀವಿಸುವ ವರ್ಗದ ಪುರುಷರಂತೆ, ಸ್ತ್ರೀಯರೂ ಅಕ್ಷರಾಭ್ಯಾಸ ದೊರೆತೊಡನೆ, ಕೌಟುಂಬಿಕ ವೃತ್ತಿಗಳನ್ನು ಕೈಗೊಳ್ಳುವುದನ್ನು ಕೀಳಾಗಿ ಭಾವಿಸುತ್ತಾರೆ. ಸರಕಾರಿ ನೌಕರಿಯೊಂದೇ ಸಮಾಜದಲ್ಲಿ ಮನ್ನಣೆ ತರುತ್ತದೆ! ಎಂದು ನಂಬುವವರೇ ಅಸಂಖ್ಯಾತರು. ಸಾಲದ್ದಕ್ಕೆ ನಗರ ಮತ್ತು ಗ್ರಾಮಗಳ ಜನಜೀವನದಲ್ಲಿ ಮಹದಂತರವಿದ್ದು, ಈಗಲೂ ಐ.ಟಿ. ಕ್ರಾಂತಿಯ ಬಳಿಕ ಆ ಅಂತರ ಹೆಚ್ಚುತ್ತಲೇ ಇದೆ! ನಗರದ ಹೆಂಗಳೆಯರ ವೃತ್ತಿ, ಉಪವೃತ್ತಿಗಳ ಅವಕಾಶವೊಂದೂ ಗ್ರಾಮಸ್ಥ ಮಹಿಳೆಯರಿಗೆ ಇಲ್ಲ. ಮಹಿಳೆಯರ ಮುನ್ನಡೆ ಎಂಬುದು ಪಟ್ಟಣಗಳ ಮಹಿಳೆಯರ ಮುನ್ನಡೆ ಮಾತ್ರವೇ ಆಗಿದ್ದು ಲಕ್ಷಗಟ್ಟಲೇ ಗ್ರಾಮೀಣ ಹೆಂಗಳೆಯರ ಸ್ಥಾನಮಾನ ಮತ್ತು ಶೈಕ್ಷಣಿಕ ಪ್ರಗತಿಗಳು ಅತ್ಯಂತ ನಿರಾಶಾದಾಯಕವಾಗಿಯೇ ಉಳಿದಿವೆ. ವಾತ್ಸ್ಯಾಯನನು ಉದಾಹರಿಸಿದ ಆಪತ್ಕಾಲಕ್ಕೆ

ಹೆಣ್ಣು ಕೈಗೊಂಡು ತನ್ನ ಕಾಲಮೇಲೆ ನಿಲ್ಲಬಹುದಾಗಿದ್ದ ಹಿಂದಿನಕಾಲದ ಹಲವಾರು ವೃತ್ತಿಗಳು ಇಂದು ಮಣ್ಣುಮುಕ್ಕಿವೆ. ನೂಲುವುದು, ನೇಯುವುದು, ಬಣ್ಣಹಾಕುವುದು, ಕುಟ್ಟುವುದು, ಬೀಸುವುದು, ನಾಟೀ ಔಷಧ ತಯಾರಿಕೆ, ಹೊಲಿಗೆ, ಸಾಕು ಪ್ರಾಣಿಗಳ ಲಾಲನೆ, ಗಿಡಮೂಲಿಕೆಗಳನ್ನು ನೆಟ್ಟು ಬೆಳೆಸುವುದು, ಹೆರಿಗೆ ಮಾಡಿಸುವ ಸೂಲಗಿತ್ತಿಯ ವೃತ್ತಿ, ಮನೆಗೇ ಬಂದು ನೃತ್ಯ, ನಾಟಕ ಕಲಿಸುವುದು ಮುಂತಾದವನ್ನು ವೈಧವ್ಯ ಮತ್ತಿತರ ಸಂಕಟ ಕಾಲದಲ್ಲಿ ಕೈಕೊಂಡು, ಈ ವಿದ್ಯೆಗಳಿಂದ ಮಹಿಳೆಯು ತನ್ನ ಉಪಜೀವನವನ್ನು ನಡೆಸಬಹುದೆಂದು ವಾತ್ಸ್ಯಾಯನನು (ಕ್ರಿ.ಶ. ೧ನೇ ಶತಮಾನ) ಸ್ಪಷ್ಟವಾಗಿ ಹೇಳಿದ್ದಾನೆ.

ಈಗಲೂ ಬ್ಯೂಟಿಪಾರ್ಲರ್, ಫ್ಯಾಶನ್ ಡಿಝೈನಿಂಗ್, ಕಾಸ್ಮೆಟಿಕ್ ಜ್ಯುಯೆಲರಿ ಮುಂತಾದ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳಿಗೆ ತರಬೇತಿ ಉಂಟು ! ಆದರೆ ಮೊದಲನೆಯದು ಗ್ರಾಮಗ್ರಾಮಗಳಲ್ಲಿ ಕಂಡುಬಂದರೂ ಗಿಟ್ಟುವ ಲಾಭ ಅಲ್ಪ. ಇನ್ನೆರಡು ಉಳಿದವಕ್ಕೆ ನಗರಸ್ಥಿತ ಶ್ರೀಮಂತ ಮಹಿಳೆಯರೇ ಗಿರಾಕಿಗಳು. ಇನ್ನು ಆಯಾ ದಾದಿಯರ ಬಲುದೊಡ್ಡ ಕೊರತೆಯ ಈ ದಿನಗಳಲ್ಲೂ ಸರಕಾರದ ಗೊಂದಲಮಯ ಧೋರಣೆಯಿಂದಾಗಿ, ಕೋರ್ಸುಗಳಿಗೆ ಪ್ರವೇಶವೇ ಕಠಿಣವಾಗಿದೆ! ಹೊಸವುಗಳು ಸೃಷ್ಟಿಯಾಗಲಿಲ್ಲ, ಹಿಂದಿನವು ಉಳಿಯಲಿಲ್ಲ. ಶಾಲಾ ಶಿಕ್ಷಣಕ್ಕೂ-ನೌಕರಿಗೂ ಅರ್ಥಾತ್ ಸಂಬಂಧವಿಲ್ಲದ ಪರಿಸರದಲ್ಲಿ ಗ್ರಾಮಗಳ ನಾರೀ ಸಮೂಹ ತತ್ತರಿಸಿ ಹೋಗಿರುವ ಸ್ಥಿತಿಯಲ್ಲಿ, ಶಿಕ್ಷಣ ಕ್ರಮದ ಆಮೂಲಾಗ್ರ ಬದಲಾವಣೆಯಾಗದೇ ಸ್ತ್ರೀಯರ ನಿಜವಾದ ಪ್ರಗತಿ ಸಾಧ್ಯವಿಲ್ಲ.

• • •

ಭಾಗ II
ಅಂದಿನ ಸ್ತ್ರೀ ಸಮಾಜ
೮. ವಿವಾಹ ವ್ಯವಸ್ಥೆ

ಮನೆಯೇ ಆಜನ್ಮ ಕರ್ಮಭೂಮಿಯಾಗಿರುತ್ತಿದ್ದ ಗೃಹಿಣಿಗೆ, ವಿವಾಹವೇ ಅತ್ಯಂತ ಮಹತ್ವದ ಘಟ್ಟವಾಗಿತ್ತು. ಅಷ್ಟೇಕೆ? ಮನುಷ್ಯ ಜೀವನದಲ್ಲೇ ಅತಿ ಮುಖ್ಯ ಘಟ್ಟವಾಗಿತ್ತು. ಇಂಥ ವಿವಾಹ ವ್ಯವಸ್ಥೆಯ ಬಗ್ಗೆ ನಮ್ಮ ಪೂರ್ವಜರು ವಿಶೇಷ ಲಕ್ಷ್ಯ ಪೂರೈಸಿದ್ದರು. ಆರೋಗ್ಯವಂತ ಸಂತತಿಯೇ ಇಡೀ ಮಾನವ ಕುಲಕ್ಕೆ ಮಹತ್ವದ್ದಾದ್ದರಿಂದ ರಕ್ತ ಸಂಬಂಧಿಗಳಲ್ಲಿ ಮದುವೆ ನಿಷಿದ್ಧವೆಂದು ಸ್ಮೃತಿಗಳು ಸಾರಿ ಯುಗಗಳೇ ಕಳೆದಿದ್ದವು. ವಿದ್ಯಾಭ್ಯಾಸ ಮುಗಿಸಿ ಸ್ನಾತಕನಾದ ಯುವಕನು ಅಸಪಿಂಡಾ, ಅರೋಗಿಣಿ, ಸೋದರರು ಇದ್ದಾಕೆ, ವಯಸ್ಸಿನಲ್ಲಿ ಕಿರಿಯಳು ಮತ್ತು ಅನ್ಯ ಋಷಿ ಗೋತ್ರದ ಕನ್ಯೆಯನ್ನು ವರಿಸಬೇಕು! ಎಂದು ನಿರ್ದೇಶಿಸಲಾಗಿತ್ತು.

ಸಪಿಂಡರು ಯಾರು ? ಮೂಲ ಒಬ್ಬ ಋಷಿಯಿಂದ /ಪುರುಷನಿಂದ ಉದ್ಭವಿಸಿದ ತಂದೆ -ಮಗ, ಮಗ - ಮೊಮ್ಮಗ, ಮರಿಮಗ ಎಲ್ಲರೂ ಸಪಿಂಡರೆನಿಸಿಕೊಳ್ಳುತ್ತಾರೆ. ಅದರಲ್ಲಿ ಸ್ತ್ರೀ ಸಂತಾನವೂ ಸೇರ್ಪಡೆಯಾಗುತ್ತದೆ. ವಧು - ವರರಿಗೆ ಮನುವಿನ ಕಾಲದಿಂದಲೂ (ಕ್ರಿ.ಶ. ಪೂ. ೨ನೇ ಶತಕ) ತಾಯಿಯ ಕಡೆಯಿಂದ ೫ ತಲೆಮಾರು ತಂದೆಯ ಕಡೆಯಿಂದ ೭ ತಲೆಮಾರಿನ ಸಪಿಂಡತ್ವದ ಅಂತರವಿರಬೇಕು ಎಂಬುದು ನಡೆದುಬಂದ ಪದ್ಧತಿ. ಈ ಒಂದು ವಿಷಯದಲ್ಲಿ ಅಂದರೆ ಸಪಿಂಡ ವಿವಾಹ ನಿಷೇಧ ಪ್ರಸಂಗದಲ್ಲಿ -ಮನುವು ಲಿಂಗಸಮಾನತೆ ಸಾರಿದ! ಅದನ್ನು ಕಟ್ಟುನಿಟ್ಟಾಗಿ ಇತರ ಸ್ಮೃತಿಕಾರರೂ ಟೀಕಾಕಾರರೂ ಕ್ರಿ.ಶ. ೧೪ನೇ ಶತಮಾನದವರೆಗೂ ನಡೆಸಿಕೊಂಡು ಬಂದಂತೆ ತೋರುತ್ತದೆ. ೧೧ನೇ ಶತಮಾನದಲ್ಲಿ ಐದು ತಲೆಮಾರಿನ ಸಪಿಂಡ ವಿವಾಹ ನಿಷೇಧವನ್ನು ಹಿಂದುಗಳು ಪಾಲಿಸುವುದನ್ನು ಅರಬ್ ವಿದ್ವಾಂಸ ಆಲ್ಬೆರೂನಿ ಗಮನಿಸಿದ್ದ.

ಸೋದರಮಾವನ ಮಗಳನ್ನು (ಮಾತುಲಸುತೆ) ವಧುವಾಗಿ ತಂದುಕೊಳ್ಳುವ ದಾಕ್ಷಿಣಾತ್ಯ ಪದ್ಧತಿಯನ್ನು ಬೌಧಾಯನನು ಪ್ರಾಚೀನ ಯುಗದಲ್ಲಿ ಉಲ್ಲೇಖಿಸಿದ್ದ. ಇದನ್ನು ಟೀಕಾಕಾರ ವಿಜ್ಞಾನೇಶ್ವರನು ಗಮನಿಸಿದರೂ ಪ್ರೋತ್ಸಾಹಿಸಿಲ್ಲ. ಸೋದರಮಾವನಿಗೇ ಹೆಣ್ಣುಕೊಡುವ ಪದ್ಧತಿ ಸ್ಮೃತಿ ವಿರುದ್ಧವಾಗಿದ್ದು (ಸಪಿಂಡತ್ವ ಒಂದೇ ತಲೆಮಾರಿಗೆ ಮುಗಿದು ಹೋಗುವ

ವ್ಯವಸ್ಥೆ!) ೧೧ನೇ ಶತಕದವರೆಗೂ ರೂಢಿಯಲ್ಲಿದ್ದಂತೆ ತೋರುವುದಿಲ್ಲ. ೧೪ನೇ ಶತಕದ ಪರಾಶರ ಮಾಧವೀಯ, ೧೭ನೇ ಶತಕದ ಅನಂತದೇವನ ಸಂಸ್ಕಾರ ಕೌಸ್ತುಭ ಮತ್ತು ೧೮ನೇ ಶತಕದ ಕಾಶೀನಾಥನ ಧರ್ಮಸಿಂಧು, ಸ್ಮೃತಿ ಟೀಕಾಗ್ರಂಥಗಳು, ಮಾತುಲಸುತೆ ಮತ್ತು ಮಾತುಲ ವಿವಾಹಗಳಿಗೆ ಅಥವಾ ಸೋದರ ಸಂಬಂಧಿ ವಿವಾಹಕ್ಕೆ ಸಮ್ಮತಿ ನೀಡಿವೆ. ಕಲಿಯುಗದಲ್ಲಿ ಇಂಥ ಮದುವೆಗಳು ನಡೆಯುತ್ತವೆ! ಎಂಬ ಟೀಕೆಯ ಸಹಿತವಾಗಿ. ಸಾಮಾಜಿಕ ಸುರಕ್ಷಿತತೆ ಕಡಿಮೆಯಾಗುತ್ತ ಬಂದಂತೆ ಕೌಟುಂಬಿಕ ಕಟ್ಟುಗಳು ಬಿಗಿಯಾದವು. ಕನ್ಯೆಯರಿಗೆ ವರನನ್ನು ಹುಡುಕುವದು ಕಷ್ಟತರವಾಯಿತು! ಸೋದರಸಂಬಂಧಿ ವಿವಾಹಗಳು ಅನೇಕ ವರ್ಣಜಾತಿಗಳಲ್ಲೂ ಈ ಪ್ರದೇಶದಲ್ಲಿ ಬಳಕೆಗೆ ಬಂದವು. ಮದುವೆ ಆದಾಕ್ಷಣ ಕನ್ಯೆ, ಸಪಿಂಡತೆ ಕಳೆದುಕೊಂಡು, ಗಂಡನ ಗೋತ್ರ ಪಡೆಯುತ್ತಾಳೆ. ಮುಂದೆ ಅವಳ ತಮ್ಮನಿಗೇ ಮಗಳನ್ನು ಕೊಡುವಂತಾದರೆ ದೋಷವಿಲ್ಲ ಎಂಬ ಸಮರ್ಥನೆ ಬೇರೆ ! ಉತ್ತರ ಮತ್ತು ಪೂರ್ವಭಾರತದಲ್ಲಿ ಮಾತ್ರ ಈ ಎರಡೂ ಸಂಬಂಧಗಳಿಗೆ ಈಗಲೂ ನಿಷೇಧವಿದೆ. ಅರ್ಥಾತ್ ಸೋದರಮಾವನಿಗೇ ಹೆಣ್ಣುಕೊಡುವದಾಗಲಿ ಆತನ ಮಗಳನ್ನು ಮದುವೆಯಾಗುವುದಾಗಲಿ ಸ್ಮೃತಿ ವಿರುದ್ಧವೆಂದು ನಂಬಿಕೆಯಿದೆ.

ii. **ವಿವಾಹದ ವಯಸ್ಸು :** ಹಿಂದುಗಳೆಲ್ಲ ಚಿಕ್ಕವಯಸ್ಸಿನಲ್ಲಿ ಮದುವೆಯಾಗುತ್ತಾರೆ. ಹೀಗಾಗಿ ತಂದೆತಾಯಿಗಳೇ ಮಕ್ಕಳ ಮದುವೆಯ ಏರ್ಪಾಡು ಮಾಡುತ್ತಾರೆಂದು ಅಲ್ಬೆರೂನಿ ಗಮನಿಸಿದ್ದ. ವೇದಕಾಲದಿಂದ ಬೌದ್ಧಯುಗದವರೆಗೆ ದೊರೆಯುವ ಮಾಹಿತಿಯಿಂದ ಕಿಶೋರಾವಸ್ಥೆಯ ಮದುವೆ ಸಾಮಾನ್ಯವಾಗಿತ್ತೆಂಬ ಅಂಶ ನಿಜವಾದರೂ, ಬ್ರಾಹ್ಮಣರ ಮಟ್ಟಿಗೆ ೮ ರಿಂದ ೧೦ ವರ್ಷದೊಳಗೆ ಹುಡುಗಿಯರ ವಿವಾಹವಾಗುವ ಪದ್ಧತಿ ಕ್ರಿ. ಶ.೬ - ೭ನೇ ಶತಕದಿಂದಲೇ ಜಾರಿಯಲ್ಲಿ ಬಂದಿತೆಂದು ಮಹಾಮಹೋಪಾಧ್ಯಾಯ ಕಾಣೆಯವರು ಅಭಿಪ್ರಾಯಪಡುತ್ತಾರೆ. 'ನಗ್ನಿಕಾ' ಅಂದರೆ ಹೆಣ್ಣು ಮಗು ಬತ್ತಲೆ ತಿರುಗಬಹುದಾದ ವಯಸ್ಸು ವಿವಾಹಯೋಗ್ಯ. ೮ನೇ ವರ್ಷದ ಗೌರೀ ವಿವಾಹವೆಂದೂ ಇದರ ಹೆಸರು. ಹೆಣ್ಣುಮಕ್ಕಳಿಗೆ ಉಪನಯನ ಸಂಸ್ಕಾರವಿಲ್ಲ. ವಿವಾಹವೇ ಎಂಟನೆಯ ವರ್ಷಕ್ಕೆ ಮೊದಲ ಸಂಸ್ಕಾರವೆಂದು ಹೇಳಿದರೂ 'ಮಿತಾಕ್ಷರ'ದಲ್ಲಿ ಹೆಣ್ಣಿನ ವಿವಾಹದ ವಯಸ್ಸಿನ ಪ್ರಸ್ತಾಪ ಬರುವದಿಲ್ಲ. ಬಾಲವಿವಾಹವೇ ಪ್ರಚಲಿತವಿದ್ದು ಬ್ರಾಹ್ಮಣ ವೈಶ್ಯರು ಈ ಪದ್ಧತಿ ಅನುಸರಿಸಿದರೂ ೧೨ನೇ ಶತಕದ ಟೀಕಾಕಾರ ಹರದತ್ತನು ವಿವಾಹದ ಮೂರನೆಯ ದಿನ ನಿಷೇಕ ಪ್ರಸ್ಥಕ್ಕೆ ಯೋಗ್ಯವೆಂದು ಹೇಳಿರುವುದರಿಂದ ಕನ್ಯೆಯರು೧೪ - ೧೫ ವರ್ಷದವರು ಇದ್ದಿರಬಹುದಾದ ಸಂಭವವಿದೆ. ಹುಡುಗಿ ದೊಡ್ಡವಳಾದ ನಂತರವೇ ಫಲಶೋಭನದ ಏರ್ಪಾಡು ಆಗುತ್ತಿದ್ದುದು ತೀರ ಇತ್ತೀಚಿನವರೆಗೆ ನಡೆದುಬಂದ ಪರಿಪಾಠ. ಆತನಕ ತಂದೆಯ ಮನೆಯಲ್ಲಿದ್ದ ಆಕೆಯನ್ನು 'ಸ್ವವಾಸಿನಿ' ಎಂದು ಮಿತಾಕ್ಷರಾ ಕರೆದಿದೆ. ಮನು ಸ್ಮೃತಿಯಲ್ಲಿ ಸಮ್ಮತಿ ಪಡೆದು ಬರಬರುತ್ತ ಬಾಲವಿವಾಹವೇ ಸಾಮಾನ್ಯವಾಯಿತು.

ಜೈನರಲ್ಲಿ ಯಶಸ್ತಿಲಕ ಮತ್ತು ನೀತಿವಾಕ್ಯಾಮೃತಗಳು ಸಾರಿದಂತೆ ಹನ್ನೆರಡು ವಯಸ್ಸಿನ ಹುಡುಗಿ ಮತ್ತು ಹದಿನಾರು ವರ್ಷದ ಹುಡುಗರು ಮದುವೆಗೆ ಅರ್ಹರಾಗಿದ್ದರು. ಉಳಿದವರಲ್ಲೂ

ಕೌಟಿಲ್ಯನ ಕಾಲದಿಂದ ಇದು ನಡೆದುಬಂದ ಪದ್ಧತಿಯಾಗಿತ್ತು. ಕ್ಷತ್ರಿಯರಲ್ಲಿ ಮದುವೆಯಾದೊಡನೆ ದಾಂಪತ್ಯಜೀವನ ಪ್ರಾರಂಭವಾಗುತ್ತಿದ್ದುದರಿಂದ ಹರೆಯದ ಮದುವೆ ಪ್ರಚಲಿತವಿತ್ತು ಎಂದು ಹೇಳಬಹುದು. ಮಾನಸೋಲ್ಲಾಸ ಮತ್ತು ಸಂಸ್ಕಾರ ಪ್ರಕಾಶಿಕೆ (ಕ್ರಿ.ಶ. ೧೨೦೦) ಇದನ್ನೆ ಶಿಫಾರಸು ಮಾಡುತ್ತವೆ. ಶಿಲಾಹಾರ ರಾಜಕುಮಾರಿ ಚಂದಲಾದೇವಿ ಚಾಲುಕ್ಯ ೬ವೇ ವಿಕ್ರಮಾದಿತ್ಯನನ್ನು ಸ್ವಯಂವರದಲ್ಲಿ ಆರಿಸಿದ್ದು ಆಕೆಯ ಶೃಂಗಾರಕ್ಕೆ ಯೋಗ್ಯವಾಗಿದ್ದ ವಯಸ್ಸಿನಲ್ಲಿ ಎಂದು ವಿಕ್ರಮಾಂಕದೇವ ಚರಿತ ಹೇಳುತ್ತದೆ. ಕದಂಬ ಕನ್ಯೆ ಮಯಣಲ್ಲ ದೇವಿ ಅರಳಿದ ಯೌವನ ಪ್ರಾಪ್ತವಾದ ಮೇಲೆಯೇ ಗುಜರಾಥದ ಕರ್ಣನನ್ನು ವರಿಸಿದ್ದಳು. ಅಂದರೆ ಅವರಿಬ್ಬರಿಗೂ ಹದಿನಾರರ ಹರೆಯವೆಂದು ಊಹಿಸಬಹುದು.

ಗಂಡಸರೊಂದಿಗೆ ಹೆಗಲು ಕೊಟ್ಟು ದುಡಿಯುವ ಕೃಷಿಕ ವರ್ಗ ಮತ್ತು ಶೂದ್ರ ವರ್ಣದವರಲ್ಲಿ ಹರೆಯದ ಮದುವೆಗಳು ರೂಢಿಯಲ್ಲಿದ್ದವು. ೧೧ನೇ ಶತಕದ ಶಾಸನವೊಂದರಲ್ಲಿ ಹರೆಯದ ಹುಡುಗಿಯರು ತಾವಾಗಿಯೇ ಮದುವೆಯನ್ನು ಸೂಚಿಸಿದ ಪ್ರಸಂಗವೊಂದು ಬರುತ್ತದೆ. ಪಲರೂರಿಗೆ ಹಿಂದಿನಿಂದ ಬಂದ ಒಂದು (ಭೂತಬಲಿ?) ರಾಜಶಾಪವಿತ್ತು. ಹೀಗಾಗಿ ಹಳ್ಳಿಯವರು ಮೃತರಿಗೆ 'ಬೂದುಗೂಳ'ನ್ನು ಕೊಡುವಂತೆ ಇರಲಿಲ್ಲ. ಶಾಂತಿವರ್ಮ ದೊರೆಯು ಆ ಗ್ರಾಮದೊಳಗಿಂದ ಹಾದು ಹೋಗುವಾಗ ತನ್ನ ಆನೆ, ಕುದುರೆಗಳಿಗೆ ಹುಲ್ಲು ಪೂರೈಸಲು ಅಲ್ಲಕುಂದನೆಂಬಾತನನ್ನು ಕಳಿಸುತ್ತಾನೆ. ಆತ ಹೊಲದಲ್ಲಿ ಕೆಲಸಮಾಡುತ್ತಿದ್ದ ಕೊಡಗೂಸುಗಳಿಗೆ ಮೇವನ್ನು ಒದಗಿಸುವಂತೆ ಕೇಳಿಕೊಳ್ಳುತ್ತಾನೆ. ಅವರು ಕೂಡಲೇ ಒಪ್ಪಿಕೊಳ್ಳುತ್ತಾರೆ. ಜೊತೆಗೆ ತಮ್ಮ ಗ್ರಾಮಕ್ಕೆ ಹಾಕಿದ ನಿಷೇಧವನ್ನು ತೆಗೆದು ಹಾಕುವಂತೆ ಅರಸನಿಗೆ ಹೇಳುವಂತೆ ವಿನಂತಿಸಿಕೊಳ್ಳುತ್ತಾರೆ. ಪ್ರತಿಯಾಗಿ ಆತ ತಮ್ಮಲ್ಲಿ ಬೇಕಾದವರನ್ನು ವರಿಸಬಹುದು ಎಂದು ಹೇಳುತ್ತಾರೆ. ಶಾಪದಿಂದ ಗ್ರಾಮಕ್ಕೆ ಮುಕ್ತಿ ದೊರೆಯಿತು. ಆದರೆ ಅಲ್ಲಿ ಮುಂದುವರಿಸಬಹುದಾದ ಕನ್ಯೆಯರ ವಿವಾಹದ ಬಗ್ಗೆ ಶಾಸನ ಏನೂ ಹೇಳುವುದಿಲ್ಲ. ಸಾಕಷ್ಟು ತಿಳುವಳಿಕೆಯ ಪ್ರಾಯದ ಆ 'ಕೊಡಗೂಸು'ಗಳು ಗ್ರಾಮದ ಒಳಿತಿಗಾಗಿ (ಹಿರಿಯರನ್ನೂ ವಿಚಾರಿಸದೇ!) ಅಪರಿಚಿತನನ್ನು ಮದುವೆಯಾಗಲು ಮುಂದುವರಿದಿದ್ದು, ಆ ವರ್ಗದ ವಿವಾಹ ಸ್ವಾತಂತ್ರ್ಯದ ಮಾದರಿಯಾಗಿ ಉಳಿದುಕೊಂಡಿದೆ. ಕೊಡಗೂಸುಗಳ ಗ್ರಾಮಪ್ರೇಮದ ಸಂದೇಶವನ್ನೂ ಬೀರುತ್ತದೆ.

ಶಿವಶರಣೆಯರಂಥ ಜಾಗೃತವರ್ಗ, ಮದುವೆ ವಿಷಯದಲ್ಲಿ ಸ್ವತಂತ್ರ ಧೋರಣೆ ತಾಳಿರಬೇಕು. ಅಕ್ಕಮಹಾದೇವಿ, ಹರೆಯದ ತರುಣಿಯಾಗಿದ್ದಳು. ಒಲಿದುಬಂದ ಕೌಶಿಕನಿಗೆ ಮೂರು ಕರಾರು ಹಾಕಿಯೇ ಮದುವೆಗೆ ಸಮ್ಮತಿಸುವ ಧೈರ್ಯ ತೋರಿದ್ದಳು. ಬೊಂತಾದೇವಿ, ಅವಿವಾಹಿತೆಯಾಗಿಯೇ ಉಳಿದರೆ, ಗೊಗ್ಗವ್ವೆ ತನಗೆ ಬೇಕೆನಿಸಿದಾಗ ಮದುವೆ ಮಾಡಿಕೊಂಡಿದ್ದಳು. ಗುಡ್ಡವ್ವೆ (ವರದಾನಿಯೆಂದೂ ಹೆಸರಿದೆ) ಕಲ್ಯಾಣದ ಕ್ರಾಂತಿಯಲ್ಲಿ ಭಾಗವಹಿಸಿ ಹಲವು ಊರುಗಳಲ್ಲಿ ಸುತ್ತಾಡಿ, ಶರಣರ ಸಂದೇಶ ಬೀರಿ, ನಂತರ ತನ್ನ ಊರಿಗೆ ಹೋಗಿ ತಂದೆತಾಯಿಗಳ ಆದೇಶದಂತೆ, ಮದುವೆ ಮಾಡಿಕೊಂಡು ನೆಲೆಯಾದಳು. ಅವಳ ಸಾಮಾಜಿಕ ಕಾರ್ಯ, ಧಾರ್ಮಿಕ ಸಾಧನೆ ನೋಡಿದರೆ ವಿವಾಹಕಾಲಕ್ಕೆ ಪ್ರೌಢಳೇ ಇದ್ದಿರಬೇಕು ಅನಿಸುತ್ತದೆ.

೯. ಬಹುಪತ್ನಿತ್ವ, ವಿಷಮ ವಿವಾಹ

i. ಬಹುಪತ್ನಿತ್ವ : ಬಹುಪತ್ನಿತ್ವ ರೂಢಿಯಲ್ಲಿತ್ತು. ಆದರೆ ಅದು ಮುಖ್ಯತಃ ಕ್ಷತ್ರಿಯ ವರ್ಗದಲ್ಲಿ, ಅದೂ ರಾಜಕೀಯ ಕಾರಣಗಳಿಗಾಗಿ ಎಂಬುದು ಸ್ಪಷ್ಟ. ಬ್ರಾಹ್ಮಣರು, ವರ್ತಕರು ಏಕಪತ್ನೀ ವ್ರತಸ್ಥರಾಗಿದ್ದರು ಎಂಬುದನ್ನು ವಿದೇಶೀಯ ಪ್ರವಾಸಿಗರು ಗಮನಿಸಿದ್ದರು. ಬಲವಾದ ಕಾರಣವಿಲ್ಲದೇ ಪತ್ನಿಯನ್ನು ತ್ಯಜಿಸುವಂತೆ ಇರಲಿಲ್ಲ. ಏಕೆಂದರೆ ಸಮಾಜ ಅಂಥವರನ್ನು ಗೌರವದಿಂದ ಕಾಣುತ್ತಿರಲಿಲ್ಲ. ಮದ್ಯಪಾನ ಮಾಡುವವಳು, ರೋಗಿಷ್ಟೆ, ಧೂರ್ತೆ, ಬಂಜೆ, ಹಣದುಂದುಮಾಡುವವಳು, ಬರೇ ಹೆಣ್ಣು ಹಡೆಯುವವಳು, ಪುರುಷ ದ್ವೇಷಿಣಿ, ಈ ಕಾರಣಗಳಿಗಾಗಿ ಗಂಡಸು ಮರುಮದುವೆ ಮಾಡಿಕೊಳ್ಳಬಹುದು ಎಂಬುದು ಸ್ಮೃತಿಗಳ ಸೂಚನೆ.

ಹೆಣ್ಣಿನ ಬಂಜೆತನಕ್ಕೆ ಗಂಡಸೂ ಕಾರಣವಿರಬಹುದು ! ಎಂಬುದರ ಅರಿವು ಅಂದು ಇರಲಿಲ್ಲ. ಹೆಚ್ಚೆಚ್ಚು ಹೆಣ್ಣು ಹೆರುವುದನ್ನು ತಪ್ಪಿಸಲು ಸಾಧ್ಯವಿದೆ ಎಂಬುದೂ ಗೊತ್ತಿರಲಿಲ್ಲ. ಇಂಥ ದೋಷಗಳಿಗೆ ಪರಿಹಾರವಿದೆ! ಎಂಬ ಕಲ್ಪನೆಯೂ ಮೂಡದ ದಿನಗಳಲ್ಲಿ ಮಕ್ಕಳಾಗದ್ದಕ್ಕೆ ಮಹಿಳೆಯೇ ಕಾರಣ ಎಂಬ ನಂಬಿಕೆಯೇ ಬಲವಾಗಿದ್ದರೆ ಆಶ್ಚರ್ಯವಿಲ್ಲ. ಗಂಡು ಸಂತಾನ ಬೇಕೇ ಬೇಕು. ಮನೆತನ ಮುಂದರಿಯಬೇಕು. ಪಿಂಡದಾನ ಕಡ್ಡಾಯ. ಪಿತೃಗಳಿಗೆ ರೌರವ ನರಕ ತಪ್ಪಬೇಕು ಎಂಬುದೇ ಸಾರ್ವತ್ರಿಕ ನಂಬಿಗೆಯಾಗಿತ್ತು. ಸಮಾಜ ದುರ್ಬಲವಾಗಬಾರದು ಎಂದು ಸ್ಮೃತಿಕಾರರ ಆಶಯವಾಗಿತ್ತು. ಹೆಣ್ಣಿನ ಪರಾಧೀನತೆಗೆ ಇದರಿಂದ ಒಳ್ಳೆಯ ಪುಷ್ಟಿ ದೊರೆಯಿತು. ಮಕ್ಕಳನ್ನು ಹೆರದಾಕೆ ನಿರಂತರ ನಿಂದೆಗೆ, ದುಃಖಕ್ಕೆ ಎರವಾಗುತ್ತಿದ್ದಳು.

ಸ್ತ್ರೀಯರಿಗೆ ಹಾಕಿದ ನಿರ್ಬಂಧಗಳಿಗೆ ಲೆಕ್ಕವಿರಲಿಲ್ಲ. ಆದರೆ ಗಂಡಸರ ಮಟ್ಟಿಗೆ ಮೀರಿದ ಔದಾರ್ಯವಿತ್ತು. ಎಳೆಯ ಹುಡುಗಿ ಆಕಸ್ಮಾತ್ ವಿಧವೆಯಾದರೆ ಸಹಗಮನ ಮಾಡಬೇಕು. ಇಲ್ಲವೇ ಆಜೀವ ಪರ್ಯಂತ ಸನ್ಯಾಸಿನಿಯ ಕಠಿಣವ್ರತ ಆಚರಿಸಬೇಕು. ಅದೇ ಹೆಂಡತಿಯಾದವಳು ಮೃತಳಾದರೆ, ಆಕೆಯ ಶವಸಂಸ್ಕಾರ ಆದೊಡನೆ ತಡಮಾಡದೇ (ಅವಿಲಂಬಯನ್) ವಿಧುರನು ಎರಡನೇ ವಿವಾಹ ಮಾಡಿಕೊಳ್ಳಬೇಕಂತೆ! ಇದಕ್ಕೆ ಕಾರಣವನ್ನೂ ಕೊಡಲಾಗಿದೆ. ಗೃಹಸ್ಥಾಶ್ರಮವೆಂಬುದು ನಾಲ್ಕೂ ಆಶ್ರಮ (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ)ಗಳಲ್ಲಿ ಮುಖ್ಯವಾದದ್ದು. "ಪ್ರಾಣವಾಯುವನ್ನು ಆಶ್ರಯಿಸಿ ಸರ್ವ

ಜೀವಲೋಕವೂ ಬದುಕುವಂತೆ ಗೃಹಸ್ಥ (ಗೃಹಿಣಿಯೂ ಸೇರಿದಂತೆ) ಆಶ್ರಮವನ್ನು ಇತರ ಆಶ್ರಯಗಳು ಆಶ್ರಯಿಸುತ್ತವೆ"!

ಯಥಾ ವಾಯುಂ ಸಮಾಶ್ರಿತ್ಯ ವರ್ತಂತೆ ಸರ್ವಜಂತವಃ।
ತಥಾ ಗೃಹಸ್ಥಮಾಶ್ರಿತ್ಯ ವರ್ತಂತೆ ಸರ್ವ ಆಶ್ರಮಾಃ॥

ಎಂಬ ಮನುವಾಕ್ಯವನ್ನು ಇತರೇ ಸ್ಮೃತಿಗಳೆಲ್ಲ ಎತ್ತಿಹಿಡಿದಿದ್ದವು. ಅದಲ್ಲದೇ ಸಾಮಾನ್ಯ ವ್ಯಕ್ತಿ (ಗಂಡಸು ಮಾತ್ರ) ಸಂಸಾರದಿಂದ ಪೂರ್ಣ ವಿರಕ್ತನಾಗಲಾರ ಇತರ ಆಶ್ರಮಗಳ ಗುರುತರ ಜವಾಬ್ದಾರಿಯನ್ನು ನಿರ್ವಹಿಸಲು ಗೃಹಿಣಿಯ ಬೆಂಬಲ ಅವನಿಗೆ ಬೇಕೇ ಬೇಕು. ವಿಧುರನಾದವನು ಯಜ್ಞ ಯಾಗ- ಅಗ್ನಿಹೋತ್ರಾದಿ ಯಾವ ಅನುಷ್ಠಾನಗಳನ್ನೂ ಆಚರಿಸಲಾರ. ದಾನಧರ್ಮ ಮಾಡಲೂ ಅರ! ಸ್ವೀಕರಿಸಲೂ ಅರ ! ಹೀಗಾಗಿ ಮರುಮದುವೆಗೆ ಅವಸರ ಮಾಡುತ್ತಿದ್ದರು.

ii.ವಿಷಮ ವಿವಾಹ: ಈ ಮರುಮದುವೆ, ಎಳೆಯ ಹುಡುಗಿಯೊಂದಿಗೇ ಆಗುವುದು ಅನಿವಾರ್ಯವಾಗಿತ್ತು. ಮುದುಕರು, ಮಧ್ಯವಯಸ್ಕರು ಮದುವೆ ಮಾಡಿಕೊಂಡು ತಂದ ಚಿಕ್ಕ ಹುಡುಗಿಯ ಪಾಡು ಹೇಗಿದ್ದಿರಬಹುದು? ಪುರಂದರದಾಸರ ಪದವೊಂದು ಇಂಥ ಎಳೆಯಳ ಪಾಡನ್ನು ಬಣ್ಣಿಸುತ್ತದೆ.

ಮುಪ್ಪಿನ ಗಂಡನ ಒಲ್ಲೆನು ನಾನು
ತಪ್ಪದ ಪಡಿಪಾಟ ಪಡಲಾರೆನಕ್ಕ !
ಮೆತ್ತನೆಯ ಮುದ್ದೆಯ ಮಾಡಲು ಬೇಕು
ಒತ್ತಿ ಒದರಿ ಕೂಗಿ ಕರೆಯಬೇಕು
ಗೋಣಿ ಹಾಸಲುಬೇಕು, ಬೆನ್ನುಗುದ್ದಲುಬೇಕು
ಗೋಣು ಹಿಡಿದು ಮೆಲಕ್ಕೆತ್ತಬೇಕು

ವೃದ್ಧನ ಒದ್ದಾಟ ಕೊನೆಯುಸಿರಿನವರೆಗೂ ಇರುತ್ತಿತ್ತು. ನಂತರ ವಿಧವೆಯಾದಾಕೆಯು ಮುಂಡನಮಾಡಿಸಿಕೊಂಡು ಕೆಂಪು ಸೀರೆಯುಟ್ಟು, ಕಠಿಣ ಸನ್ಯಾಸಿನಿಯ ಬಾಳನ್ನು ತನ್ನ ಕೊನೆ ಉಸಿರಿರುವತನಕ ನಡೆಸಬೇಕಾಗುತ್ತಿತ್ತು.

ಹಿಂದುಗಳಲ್ಲಿ ವಿವಾಹವಿಚ್ಛೇದನ, ಮತ್ತು ವಿಧವಾ ವಿವಾಹವೂ ಇಲ್ಲದಿರುವದು. ಅವೆರಡೂ ಪ್ರಚಲಿತವಿದ್ದ ನಾಡಿನಿಂದ ಬಂದ ಅರಬ್ ವಿದ್ವಾಂಸ ಆಲ್ಬೆರೂನಿಗೆ ವಿಶೇಷವಾಗಿ ಕಂಡಿರಬೇಕು. ಸಮಾಜದ ಅವಕೃಪೆಗೆ ಕಾಯಂ ಗುರಿಯಾಗುತ್ತಿದ್ದುದನ್ನು ತಪ್ಪಿಸಲು, ವಿಧವೆಯಾದವಳು ಸಹಗಮನ ಮಾಡುತ್ತಿದ್ದಳೆಂದು ಆತನ ಅಭಿಪ್ರಾಯ.

ಕ್ರಿಸ್ತಶಕದ ಮೊದಲ ಶತಮಾನಗಳಲ್ಲಿ ವಿಧವಾ ವಿವಾಹ ತಕ್ಕ ಮಟ್ಟಿಗೆ ಪ್ರಚಲಿತವಿದ್ದಂತೆ ತೋರುತ್ತದೆ. ಪುನರ್ಭೂ (ಪುನರ್ ವಿವಾಹಿತೆ)ಳ ಉಲ್ಲೇಖ ವಾತ್ಸ್ಯಾಯನನ ಕಾಮಸೂತ್ರದಲ್ಲಿ ಬರುತ್ತದೆ. ಕ್ರಮೇಣ ಅರಕ್ಷಿತ ಯುಗ ಕಾಣಿಸಿಕೊಂಡು ಅದು ಕೇವಲ

ಗ್ರಂಥಸ್ಥ ವಿಚಾರವಾಗಿ 'ಕಲಿವರ್ಜ' (ಕಲಿಯುಗದಲ್ಲಿ ವರ್ಜಿತ)ವಾಗಿ ಬಿಟ್ಟಿತು. ವಿವಾಹವೆಂದರೆ ಕನ್ಯಾದಾನ, ಕನ್ಯಾದಾನದ ಪುಣ್ಯ ಅತಿ ದೊಡ್ಡದು. ಅದರ ಅಧಿಕಾರವೂ ದೊಡ್ಡದು! ಆ ಅಧಿಕಾರ ಚಲಾಯಿಸದಿದ್ದರೆ, ದಾನದ ಅಧಿಕಾರಿಗಳು ಭ್ರೂಣಹತ್ಯೆಗೆ ಪಾತ್ರರಾಗುತ್ತಾರೆ ಎಂದು ವಿಜ್ಞಾನೇಶ್ವರನು ಎಚ್ಚರಿಸಿದ್ದಾನೆ. ಅಲ್ಲದೇ 'ದಾನ' ಎಂಬುದು ಒಮ್ಮೆಯೇ ಕೊಡಮಾಡುವಂತಹುದು. ಪುನಃ ಕೊಡುವಂತಿಲ್ಲವಲ್ಲ ! ಬಾಲ್ಯ ವಿವಾಹ ಪ್ರಚಲಿತವಿದ್ದ ಯುಗದಲ್ಲಿ ಅನಾಥೆಯಾದವಳು ಸ್ವಯಂವರದ ಅಧಿಕಾರ ಪಡೆದಿದ್ದಳು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಆ ಅಧಿಕಾರವನ್ನು ಚಲಾಯಿಸಿ ತನಗೆ ಇಷ್ಟವಾದ ವ್ಯಕ್ತಿಯನ್ನು ಕನ್ಯೆಯು ವಿವಾಹವಾದ ವಿಚಾರ, ಚರಿತ್ರೆಯಲ್ಲಿ ಸಿಗುವುದಿಲ್ಲ.

• • •

೧೦. ಹೆರಿಗೆ, ಮಕ್ಕಳ ಲಾಲನೆ - ಪಾಲನೆ

ಗಂಡುಮಕ್ಕಳನ್ನು ಹೆರುವದು ನಾರೀಧರ್ಮವೆಂದೂ, ಅದು ಸಾಧ್ಯವಾಗದಾಗ ಗಂಡನಾದವನು ಎರಡನೆಯ ಮದುವೆ ಮಾಡಿಕೊಳ್ಳಬಹುದೆಂದೂ ಸ್ಮೃತಿ ಸಮ್ಮತಿ ಇದ್ದಿತು. ಆದರೆ ಮಕ್ಕಳಾಗದಿದ್ದರೂ ಮರುಮದುವೆ ಮಾಡಿಕೊಳ್ಳದ ಧರ್ಮಾತ್ಮರು ಇದ್ದರು. ಮೊದಲಿನಾಕೆಯ ಅನುಮತಿಯಿಂದಲೇ ಮರುವಿವಾಹವಾಗಿ ಮಕ್ಕಳನ್ನು ಪಡೆದವರು ಸಾಕಷ್ಟು ಜನ ಇದ್ದರು. ದತ್ತುಮಗನನ್ನು ಪಡೆದು, ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸಿಕೊಂಡು ಸಹಧರ್ಮಿಣಿ/ಯರನ್ನು ಚೆನ್ನಾಗಿ ಬಾಳಿಸಿದವರೂ ಇದ್ದರು. ವ್ಯಕ್ತಿಗಿಂತ ಕುಟುಂಬ ಮುಖ್ಯವಿದ್ದ ಯುಗದಲ್ಲಿ , ಗೃಹಿಣಿಯಾದಾಕೆ ತನ್ನ ತ್ಯಾಗದಲ್ಲೇ ಧನ್ಯತೆ ಕಾಣಲು ಯತ್ನಿಸುತ್ತಿದ್ದಳು. ಮಕ್ಕಳಾಗದಾಕೆ, ಆ ಕಾರಣಕ್ಕೇ ಸವತಿಯನ್ನು ಬರಮಾಡಿಕೊಳ್ಳುತ್ತಿದ್ದಳು.

ತಡವಾಗಿ ಮಕ್ಕಳಾಗುವುದನ್ನು ಸಾಮಾನ್ಯವಾಗಿ ಮಹಿಳೆಯರು ಇಷ್ಟಪಡುತ್ತಿರಲಿಲ್ಲ. ಇಂಥವರ ಮನಸ್ಥಿತಿ ಬಿಂಬಿಸುವ ಪ್ರಸಂಗವೊಂದು ರಾಘವಾಂಕನ ಸಿದ್ಧರಾಮ ಚರಿತ್ರದಲ್ಲಿ ಬರುತ್ತದೆ. ಸಿದ್ಧರಾಮನ ತಾಯಿ ಸುಗ್ಗವ್ವೆ, ಐದಾರು ಸಲ ಗರ್ಭ ತಾಳಿದರೂ ಒಂದೂ ನಿಂತಿರಲಿಲ್ಲ. ಆಕೆಯ ನಡುವಯಸ್ಸಿನಲ್ಲಿ ರೇವಣಸಿದ್ಧ ಯೋಗಿಯು ಅವಳ ಊರಾದ ಸೊನ್ನಲಿಗೆಗೆ ಬರುತ್ತಾನೆ. ಅವಳಿಗೆ ಗಂಡುಮಗುವಾಗಲಿದೆ!ಎಂದು ಭವಿಷ್ಯ ನುಡಿದಾಗ ಅವಳ ಉದ್ಗಾರ ಹೀಗಿತ್ತು.

ಎನ್ನ ಹರೆಯಂ ಬಿಟ್ಟು, ಜರೆವಟ್ಟು ಹೊಲೆಗೆಟ್ಟ
ಕೆನ್ನೆ ನರೆದೊಟ್ಟು ಶಿಥಿಲತ್ವವಳವಟ್ಟು ನೆರೆ
ಮುನ್ನಿನಂಗ ವಿಕಾರಮಂ ಬಿಟ್ಟುಹೋಗಿ ಧಾತುಪಲ್ಲಟವಾದವು.
ಇನ್ನು ನಾನೆತ್ತಮಗನಂ ಹಡೆವುದು ?....
ಲೋಕಂ ನಗುವ ಮಾತನಾಡದಿರಿ! ಎಂದು ಉದ್ಗರಿಸುತ್ತಾಳೆ.

"ನನಗೆ ಪ್ರಾಯ ಕಳೆದಿದೆ. ಮುಪ್ಪಡರಿದೆ. ಮುಟ್ಟು ನಿಂತು ಕೆನ್ನೆಗಳಲ್ಲಿ ಸುಕ್ಕುಗಟ್ಟಿದೆ. ದೇಹ ಶಿಥಿಲವಾಗಿದೆ. ಈ ಮೊದಲು ತುಂಬಿಕೊಂಡ ಚಟುವಟಿಕೆಗಳೆಲ್ಲ ನಿಂತಿವೆ. ಜನರು ನಗುವಂಥ ಮಾತು ಹೇಳಬೇಡಿ "ಎನ್ನುತ್ತಾಳೆ.

ಆದರೆ ಯೋಗಿಯ ಭವಿಷ್ಯ ನಿಜವಾಯಿತು. ಸುಗ್ಗವ್ವೆ ಬಸಿರಾದಳು. ಹೆರಿಗೆಯ ಸಮಯ ಪ್ರಾಪ್ತವಾದಾಗ, ನೆರೆಮನೆಯವರಿಗೆಲ್ಲ ಸಂಭ್ರಮವೋ ಸಂಭ್ರಮ!

ಬೆಚ್ಚಗಿನ ಅಂಬಿಲು ಮೈತೊಳೆಯಲು ತನ್ನಿ! ಕರುಳು ಬಳ್ಳಿ ಕತ್ತರಿಸಲು ಕುಡುಗೋಲು ಬರಲಿ, ಅರಳೆ ತಂದೆಯಾ? ಎಣ್ಣೆ ಎಲ್ಲಿ? ಬೇಗ ಬೇಗ ! ಎಂದು ಹೆಂಗಳೆಯರು ಒಳಗೆ ನುಗ್ಗುತ್ತಾರೆ.

ಪ್ರಸವ ವೇದನೆ ಪ್ರಾರಂಭವಾದಾಗ ತೂಗಾಡುವ ಹಗ್ಗವನ್ನು ಗಟ್ಟಿಯಾಗಿ ಹಿಡಿಯುವ, ಬಟ್ಟೆ ಬದಲಾಯಿಸುವ, ನಿಲ್ಲಲು ಶಕ್ತಿ ಸಾಲದೇ ಹೆರಿಗೆಯ ನೋವಿನಿಂದ ತಳಮಳಿಸಿ ಬಾಯ್‌ಬಿಡುವ ಸಂಕಟವನ್ನು ಸುಗ್ಗಲೆ ಅನುಭವಿಸಲಿಲ್ಲ. "ಸೂಲಿಸುವ, ಬಗ್ಗಿಸುವ, ನೋಯಿಸುವ, ನುಲಿವ, ಮರ್ಮ ಸ್ಥಾನಮಂ ನಿಗುಚುವ" ಬಾಲೆಯರ ಹಂಗು ಅವಳಿಗೆ ಬಂದಿರಲೇ ಇಲ್ಲವೆಂದು ಅದೇ ಕೃತಿ ಹೇಳುತ್ತದೆ. ಹೆರಿಗೆ ಸಮಯದಲ್ಲಿ ಆಪ್ತೆಯರು, ಸ್ನೇಹಿತೆಯರು ಸಹಾಯಕ್ಕೆ ನಿಂತು, ತೀವ್ರ ವೇದನೆ ಅನುಭವಿಸುತ್ತಿರುವ ಹೆಣ್ಣನ್ನು ಸಂತೈಸುವದು ಪದ್ಧತಿ. ಶಿಲ್ಪಿಯೊಬ್ಬ ಈ ಸನ್ನಿವೇಶವನ್ನು ಸುಂದರವಾಗಿ ಕಲ್ಲಿನಲ್ಲಿ ಕೊರೆದಿದ್ದಾನೆ. ಇಬ್ಬರು ಮಹಿಳೆಯರು ತೋಳ ಆಧಾರವಿತ್ತು ಹಿಡಿದರೆ ಅವರಲ್ಲಿ ಒಬ್ಬಾಕೆ ಮುಖ ಹಿಡಿದು ಸಂತೈಸುತ್ತಿದ್ದಾಳೆ. ಸೂಲಗಿತ್ತಿಯಾದಾಕೆ ಹೊಟ್ಟೆ ನೀವುತ್ತ ಮಗು ಹೊರಗೆ ಬರಲು ಯತ್ನಿಸುತ್ತಿದ್ದಾಳೆ. ಯೋನಿದ್ವಾರ ವಿಸ್ತರಿಸಿ ಮಗುವಿನ ತಲೆ ಕೂಡ ಕಾಣುವಷ್ಟು ನೈಜವಾದ ಈ ಶಿಲ್ಪ ಬಹುಶಃ ಇಷ್ಟು ವಿವರಗಳನ್ನು ಹೊಂದಿ ನಾಡಿನಲ್ಲೇ ಏಕಮಾತ್ರವಾದ ಹೆರಿಗೆಯ ದಾಖಲೆಯಾಗಿದೆ! (ಭಟಕಳದ ಶಿಲ್ಪಚಿತ್ರ ನಂ.19).ಕ್ಷತ್ರಿಯ ಮಹಿಳೆಯ ಬಾಣಂತಿಯ ಕೋಣೆಯಲ್ಲಿ ಬೂದಿಯ ಗೆರೆಯೆಳೆದು ಅದರ ಮೇಲೆ ಹರಡಿದ ಬಿಳಿ ಸಾಸಿವೆಗಳಿಂದ, ಕಾಡಿಗೆಯನ್ನು ಲೇಪಿಸಿದ, ಕತ್ತಿ, ಗುರಾಣಿ ಮೊದಲಾದ ಆಯುಧಗಳನ್ನು ಅನಿಸಿಟ್ಟ ಗೋಡೆಗಳಿಂದ ಚೆಲುವಾದ ಬೇವಿನ ಚಿಗುರೆಲೆಗಳಿಂದ ಅಲಂಕರಿಸಿಟ್ಟ ಒನಕೆಗಳಿಂದ, ನೇಗಿಲ ಕುಳಗಳಿಂದ ದೀವಿಗೆ, ರಕ್ಷಾಧೂಪಗಳಿಂದ ಅಲಂಕಾರ ಮಾಡಲಾಗುತ್ತಿತ್ತು. ಹೊಸಜೀವ ಉದಯಿಸಿದಾಗ, ರಾಜಮನೆತನದಲ್ಲಿ ಈ ಎಲ್ಲ ವ್ಯವಸ್ಥೆ ದೃಷ್ಟಿ ತಾಗದಂತೆ ಮತ್ತು ಶಸ್ತ್ರಾಸ್ತ್ರಗಳ, ಕೃಷಿ ಜೀವನೋಪಯೋಗಿ ವಸ್ತುಗಳ ರಕ್ಷಣೆ ಹಿಂದಿನಂತೆ ಮುಂದುವರಿಯಲಿದೆ! ಎಂಬ ಶುಭಸೂಚನೆಗಾಗಿ ಈ ವಿಧಿಯಿದ್ದಿರಬೇಕು.



ಚಿತ್ರನಂ.19

ಮಕ್ಕಳ ಆರೈಕೆ : ಮಕ್ಕಳ ಆರೈಕೆಯ ಬಗ್ಗೆಯೂ ಕಾವ್ಯಗಳಲ್ಲಿ ವರ್ಣನೆ ಬರುತ್ತದೆ. ಬಾಯಲ್ಲಿ ಉದಕ ಸೇರದಂತೆ, ಕೈಯನ್ನು ಅಡ್ಡಹಿಡಿದು 'ಒಯ್ಯನೊಯ್ಯನೆ' ನೀರು ಹಾಕಿ ಮೆಲ್ಲನೆತ್ತಿ ಮಗುಚಿ ತೊಡೆಯ ಮೇಲೆ ಹಾಕಿ ಅರಿಶಿನ ಹಚ್ಚಿ ಎರೆದು, ಒರೆಸಿ, ಕಿವಿ ಕಣ್ಣುಗಳನ್ನು ಊದಿ ಬಿಜ್ಜವ್ವೆ (ಶಿವ) ಶಿಶುವಿಗೆ ಆರೈಕೆ ಮಾಡುತ್ತಿದ್ದಳು. ಮೊಲೆ ಕುಡಿಸಿ, ಬೆಕ್ಕು ಹತ್ತಿರ ಸುಳಿಯದಂತೆ ನೋಡಿಕೊಂಡು ಬೆಣ್ಣೆ ಮೊದಲಾದವನ್ನು ಇಡುವಳು. ಕಳಕಳನೆ ಮಗು ಅತ್ತಾಗ ಗಲ್ಲವಿಡಿದು ಸಂತೈಸಿ ಬಟ್ಟಿನಿಂದ ನಿಟಿಗೆ ತೆಗೆದು ಹಾಲನ್ನು ಒಳಲೆಯಿಂದ ಎರೆಯುತ್ತಿದ್ದಳು ಎಂದು ಬಸವಪುರಾಣ ಸಾರುತ್ತದೆ.

ದೀಪದ ಸೊಡರಿನ ಮಸಿಯಿಂದ ಬೊಟ್ಟು ಇಟ್ಟು, ನಿತ್ಯವೂ ದೃಷ್ಟಿಯನ್ನು ನಿವಾಳಿಸಿ ತೆಗೆದು, ಬೆಚ್ಚಗಿನ ಬಟ್ಟೆ ಹೊದಿಸಿ ತೊಟ್ಟಿಲು ತೂಗಿ ಮಲಗಿಸುತ್ತಿದ್ದರು. ಶಿಲ್ಪಗಳಲ್ಲಿ ಮಕ್ಕಳ ತೊಟ್ಟಿಲುಗಳನ್ನು ಕಾಣಿಸಿದ್ದಿದೆ. ತಾಯೊಬ್ಬಳು ಮಗುವನ್ನು ಎತ್ತರಿಸಿ ಹಿಡಿದು ನಗಿಸುವ ದೃಶ್ಯ, ತಾಯ ತೊಡೆಯ ಮೇಲಿದ್ದ ಮಗುವನ್ನು ತಂದೆಯು ಮುದ್ದಾಡುವ ದೃಶ್ಯಗಳನ್ನು ಶಿಲ್ಪಿಗಳು ಸೆರೆಹಿಡಿದಿದ್ದಾರೆ (ಚಿತ್ರ 19, a,b,c,d,e,f,).



ಚಿತ್ರ.19, a,b,c,d,e,f

ಇದೆಲ್ಲ ಅನುಕೂಲವಂತರ ಮನೆಯ ಮಕ್ಕಳ ಮಾತಾಯಿತು. ಬಡವರ, ಕಾರ್ಮಿಕರ ಮಕ್ಕಳು ಹುಟ್ಟುವ ಬೆಳೆಯುವ ಬಗೆ ಇಲ್ಲಿ ಬಂದ ವಿದೇಶೀಯರಿಗೆ ಅಚ್ಚರಿಯ ವಿಷಯವಾಗಿತ್ತು. 'ಅಲ್ಲಿ (ಕರ್ನಾಟಕದಲ್ಲಿ)ತುಂಬ ಸಲೀಸಾಗಿ ಹುಟ್ಟಿ ನಂತರ ಸಹಜವಾಗಿ ಹಾದಿ-ಬೀದಿಯಲ್ಲಿ ಆಡಿಕೊಂಡು ಮಕ್ಕಳು ಬೆಳೆಯುತ್ತವೆ. ಲಂಗೋಟಿ ಹಾಕಿದರೆ ಹಾಕಿದರು. ಇಲ್ಲದಿದ್ದರೆ ಅದೂ ಇಲ್ಲ ! ಎಂದು ಒಬ್ಬಾತ ಬರೆದ. ಕ್ರಿ. ಶ. ಸುಮಾರು ೧೫೮೩-೮೮ ರ ವರೆಗೆ ಭಾರತ ಸಂಚಾರದಲ್ಲಿದ್ದ ಡಚ್ ಪ್ರವಾಸಿ ಲಿನ್‌ಷಾಟೆನ್‌ನ ಅನುಭವ ಸ್ವಾರಸ್ಯಕರವಾಗಿದೆ. ಆತ ಗೋವಾದಿಂದ ಪ್ರಯಾಣ ಕೈಕೊಂಡಾಗ ಬಾಯಾರಿಕೆಯಾಗುತ್ತದೆ. ನೀರು ಕೇಳಲೆಂದು ಕನ್ನಡ (ಕೆನರೀನ್)ಜನಾಂಗಕ್ಕೆ ಸೇರಿದ ಹೊಲೆಯರ ಒಂದು ಗುಡಿಸಲ ಬಳಿ ಹೋಗಿ ಬಗ್ಗಿ ನೋಡುತ್ತಾನೆ. ಒಳಗೆ ಹೆಂಗಸೊಬ್ಬಳು ಆಗತಾನೇ ಹಡೆದ ಮಗುವಿಗೆ ಮರದ ತೊಟ್ಟಿಯಲ್ಲಿದ್ದ ನೀರಿನಿಂದ ಸ್ನಾನ ಹಾಕುತ್ತಿದ್ದಳು. ಯಾರ ಸಹಾಯವಿಲ್ಲದೇ ಆಕೆ ಹಡೆದಿದ್ದಳು. ಮಗುವಿಗೆ ನೀರು ಹಾಕಿ, ಬಾಳೆಲೆಯ ಮೇಲೆ ಮಲಗಿಸಿ, ನಂತರ ನೀರು ಕೊಡುತ್ತೇನೆ ಎಂದಳು. ಆದರೆ ಅದೇ ತಾನೇ ಹಡೆದ ಬಾಣಂತಿಯಿಂದ ನೀರು ಪಡೆಯಲು ಆತ ಇಷ್ಟಪಡದೇ, ಬೇರೆ ಮನೆಗೆ ಹೊರಟುಹೋದ. ಮುಂದಿನ ಉದ್ಗಾರ ಹೀಗಿದೆ " ಈ ರೀತಿ ಬಟ್ಟೆ ಬರೆ ಹಾಕದೇ ಸಾಕಿ ಕೇವಲ ತಣ್ಣೀರಿನಲ್ಲಿ ಸ್ನಾನಮಾಡಿಸಿದ ಮಕ್ಕಳು ಎಲ್ಲರಂತೆ ಚೆನ್ನಾಗಿ ಬೆಳೆದು ನೂರಾರು ವರ್ಷಗಳ ಕಾಲ ತಲೆನೋವು, ಹಲ್ಲು ನೋವುಗಳಿಲ್ಲದೇ ಒಂದು ಹಲ್ಲು ಕೂಡ ಬೀಳದೆ ಬಾಳಿ ಬದುಕುತ್ತವೆ ! "

ಎಂದಿದ್ದರೂ ಪಾಶ್ಚಾತ್ಯರಿಗಿಂತ ಭಾರತೀಯರ ಹಲ್ಲು, ಒಸಡೆಗಳು ಚೆನ್ನಾಗಿಯೇ ಇರುತ್ತವೆ! ಆದರೆ ಇಲ್ಲಿ ಬಾಣಂತಿ ತಾಯಿಯ ಕಷ್ಟ ಸಹಿಷ್ಣುತೆ ಹಾಗೂ ತೀರ ಸಹಜ ಸ್ಥಿತಿಯಲ್ಲಿ ಆಕೆಯಂಥವರು ಮಕ್ಕಳನ್ನು ಹೆತ್ತು, ಸಾಕಿ ಬೆಳೆಸಬಹುದಾದದ್ದು ನೆನಪಿಡುವಂತಹದು. ಲುಡ್ವಿಗೋ ವಾರ್ತಮಾ (೧೫೦೩) ಎಂಬ ಪ್ರವಾಸಿ "ಇಲ್ಲಿಯವರು ಮೂರು ತಿಂಗಳು ಮಕ್ಕಳಿಗೆ ಮೊಲೆಯುಣಿಸಿ ಆಮೇಲೆ ಹಸುವಿನ ಅಥವಾ ಆಡಿನ ಹಾಲು ಹುಯ್ಯುತ್ತಾರೆ, ಈ ಮಕ್ಕಳು ಬೆಳಗಿನಿಂದ ಸಂಜೆಯವರೆಗೆ ಮಣ್ಣಿನಲ್ಲಿ ಬಿದ್ದುಕೊಂಡಿರುತ್ತವೆ. ಎಮ್ಮೆಕರು ಮತ್ತು ಕರಡಿಮರಿಗಳಿಗೂ ಈ ಮಕ್ಕಳಿಗೂ ಏನೂ ವ್ಯತ್ಯಾಸವಿಲ್ಲ! ಆದರೂ ಈ ಮಕ್ಕಳು ನೆಗೆಯುವುದು ಮತ್ತು ಓಡುವುದರಲ್ಲಿ ಎತ್ತಿದ ಕೈ! ಎಂಬುದನ್ನು ಗಮನಿಸಿದ್ದ.

ನಿನ್ನೆ ಮೊನ್ನೆಯವರೆಗೂ ಗ್ರಾಮೀಣ ಮಕ್ಕಳದು ಇದೇ ಸ್ಥಿತಿಯಾಗಿತ್ತು. ಅಷ್ಟೇ ಏಕೆ? ಈಗಲೂ ಕರ್ನಾಟಕದ ರಾಜಧಾನಿಯಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣದ ಸ್ಥಳಗಳಲ್ಲಿ ಮಣ್ಣು ಕಲ್ಲು, ಸಿಮೆಂಟ ಹೊರಲೇಬೇಕಾಗಿ ಬಂದ ಎಳೆಮಕ್ಕಳ ತಾಯಂದಿರು ಮರಳಿನ ರಾಶಿಯ ಮೇಲೆ ಮಕ್ಕಳನ್ನು ಹೀಗೆಯೇ ಬಿಟ್ಟಿರುವುದು ಪರಿಚಿತ ನೋಟವಾಗಿದೆ. ನಮ್ಮದು ಪ್ರಾಚೀನ ಪರಂಪರೆಯ ದೇಶವಲ್ಲವೇ?

೧೧. ಗೃಹಿಣಿಯ ನೋವು-ನಲಿವು

i) ಮನೆವಾಳ್ತೆ

ಮಹಿಳೆಯರಿಗೆ ಕುಟುಂಬವೇ ಯಾವತ್ತೂ ಚಟುವಟಿಕೆಗಳ ಕೇಂದ್ರವಾಗಿತ್ತು. ಹಿಂದಿನಿಂದ ನಡೆದುಬಂದ ದೊಡ್ಡ ಅವಿಭಕ್ತ ಕುಟುಂಬದಲ್ಲಿ ಎಳೆ ವಯಸ್ಸಿನ ಹುಡುಗಿಯರು ಅನ್ಯೋನ್ಯ ಸದಸ್ಯರಾಗಿ ಬಾಳಲು ಕಲಿಯಬೇಕಾಗುತ್ತಿತ್ತು. ಗಂಡನ ಆದರ ವಿಶ್ವಾಸಗಳಿಗೆ ಅತ್ತೆ ಮಾವಂದಿರ, ಬಾವಮೈದುನ, ನೆಗೆಣ್ಣಿಯರ, ನಾದಿನಿಯರ ಅಕ್ಕರೆಗೆ ಪಾತ್ರಳಾದರೇ ಅವಳ ಬಾಳುವೆ ಸುಸೂತ್ರವಾಗಿ ನಡೆಯುತ್ತಿತ್ತು. ಅತ್ತೆಯ ಅಥವಾ ಇತರ ಹಿರಿಯರ ಅವಕೃಪೆಗೆ ಪಾತ್ರಳಾದ ದುರ್ದೈವಿಗೆ ಯಾವ ಉಪಚಾರವೂ ಸಲ್ಲುತ್ತಿರಲಿಲ್ಲ. ಮಕ್ಕಳಾಗದಿದ್ದರಂತೂ ಬವಣೆಗೆ ಮಿತಿ ಇರಲಿಲ್ಲ. ಆಧ್ಯಾತ್ಮಿಕ ಸಂದೇಶದ ಒಳಾರ್ಥ ಹೊತ್ತಿದ್ದರೂ ಅಕ್ಕಮಹಾದೇವಿಯ ವಚನಗಳಲ್ಲಿ ಅಂದಿನ ಸೊಸೆಯ ತಲ್ಲಣದ ಚಿತ್ರವನ್ನು ಕಾಣಬಹುದು.

"ಒಡಕು ಗಂಗಳಲ್ಲಿ ನೀರಂಬಲ ನೀಡಿ
ಹೊಡೆದಳು ನಮ್ಮತ್ತೆ ಮೊರದಲಿ
ಕಡುದುಃಖದಿ ನಾ ಒಲೆಯ ಮುಂದೆ ಕುಳಿತಿರೆ
ಕೋಡಿತನದಲಿ ಬಂದು ಒದ್ದಳಯ್ಯಯ್ಯೋ !

ನೆತ್ತಿಗೆಣ್ಣೆಯಿಲ್ಲದೇ ತಲೆ ಬತ್ತಿಗಟ್ಟಿತು
ವ್ಯರ್ಥಜವ್ವನ ಬಾಡಿ ಹೋದವಲ್ಲ !
ಅತ್ತೆಯಾಸೆಯಿಲ್ಲ ಮಾವನ ಲೇಸಿಲ್ಲ
ಚಿತ್ತವಲ್ಲಭನಲ್ಲಿ ಗುಣವಿಲ್ಲವಯ್ಯೋ

ಹೇಳಿ ಕಳುಹುವೆ ನಾನವ್ವೆಗಳೂರಿಗೆ ನಾಳೆ ಕರಸುವೆ ನಮ್ಮಯ್ಯಗಳ"

ಇನ್ನೊಂದು ಕಡೆ ಬಹುಶಃ ಮಲಮಕ್ಕಳಿದ್ದು ನಡುವಯಸ್ಕನನ್ನು ಮದುವೆಯಾಗಿ ಬಂದ ಎಳೆಯಳ ಗೋಳು ಮಾನವ ಸಂಸಾರದ ರೂಪಕದಲ್ಲಿದೆ.

ಮುನ್ನ ಹುಟ್ಟಿದ ಮೂರು ಮಕ್ಕಳ ಕಾಟ
ಕನ್ನೆಯರೈವರ ಕೂಡಿಕೊಂಡು

ಮನ್ನಣೆಯಿನಿತಿಲ್ಲ ಮೈದುನರ್ಯೆವರ
ಇನ್ನಿರಲಾರೆ ಹೇಳಿ ಎಮ್ಮವರಿಗೆ....

ಎಷ್ಟೇ ನೊಂದುಕೊಂಡರೂ, ಗೋಳಿಟ್ಟರೂ ಮಾಡಿಕೊಟ್ಟ ಮನೆ ತನ್ನದೆಂದು ಎಲ್ಲ ಕಷ್ಟನಷ್ಟಗಳನ್ನು ನುಂಗಿ ಆಕೆ ದಿನ ನೂಕಬೇಕಾಗುತ್ತಿತ್ತು.

ಮನೆವಾಳ್ತೆಗೆ ಕೊನೆಯೆಂಬುದೇ ಇರುತ್ತಿರಲಿಲ್ಲ. ದನಕರುಗಳ ಆರೈಕೆ, ಹಾಲುಹೈನದ ವ್ಯವಸ್ಥೆ, ಅಡುಗೆ, ಧಾನ್ಯ ದವಸಗಳ ಕಾಯ್ದಿರಿಸುವಿಕೆ ಹಿರಿಕಿಯರ ಊಟ-ತಿಂಡಿಯ ಹೊಣೆ ಇವುಗಳಲ್ಲಿ ಬಿಡುವೆಲ್ಲಿ? ಯಂತ್ರ ಸೌಕರ್ಯವಿಲ್ಲದ ದಿನಗಳಲ್ಲಿ ಕುಟ್ಟುವದು, ಬೀಸುವದು, ಕೇರುವದು ಸಾಣಿಸುವದು ತವಡು ತೆಗೆಯವದು, ಮನೆಯ ತೋಟ ಮಾಡುವದು, ಮಡಿಯ ನೀರು ತರುವದು, ಸಾರಿಸುವದು, ಬಣ್ಣ ತೆಗೆಯುವದು, ಬಟ್ಟೆ ಬರೆ ತೊಳೆಯುವದು, ಒಂದೇ, ಎರಡೇ! ಅವಿಭಕ್ತ ಕುಟುಂಬದಲ್ಲಿ ಕೆಲಸಗಳು ಸರಿಯಾಗಿ ಹಂಚಿಹೋಗುತ್ತವೆ ಎಂಬ ಕಲ್ಪನೆ ತಪ್ಪು. ಹಿರಿಯರು ಕಿರಿಯರಿಂದ ಕೆಲಸಮಾಡಿಸುತ್ತಾರೆ. ಅತ್ತೆಯನ್ನು ಅನುಸರಿಸಿ ಇತರ ಹಿರಿಯರೂ ದರ್ಪ ಮಾಡುತ್ತಾರೆ. ಸೌಮ್ಯರಾದವರು ಮನೆಯಲ್ಲಿ ತೊತ್ತಿಗಿಂತ ಕಡೆಯಾಗುತ್ತಾರೆ. ಬಟ್ಟೆಗಳ ರಾಶಿಯೇ ಬಿದ್ದರೂ, ಒಗೆಯಲು ಹೊಳೆಗೆ ಹೊರಗೆ ಹೋಗುವ ಪ್ರಸಂಗವೇ ಚಿಕ್ಕಹುಡುಗಿಯರಿಗೆ ಎಷ್ಟೋ ಉತ್ಸಾಹ ಕೊಡುತ್ತಿತ್ತು. ಮದುವೆ-ಹಬ್ಬ-ಹರಿದಿನಗಳು, ಜಾತ್ರೆಗಳು ಮಹಿಳೆಯರ ದೈನಂದಿನ ಜೀವನದಲ್ಲಿ ಕೊಂಚ ನಲಿವು ಕೊಡುವ ಸಂದರ್ಭಗಳಾಗುತ್ತಿದ್ದವು. ಊರ ದೇವತೆಯ ಉತ್ಸವ ಸಂದರ್ಭದಲ್ಲಿ, ಹೆಂಗಳೆಯರು ಸಾಮೂಹಿಕವಾಗಿ ದುಡಿದು ಭಾಗವಹಿಸುತ್ತಿದ್ದರು. ದೇವಾಲಯಗಳಿಗೆ ಹೋಗುವದು, ಪುರಾಣ, ಹರಿಕಥಾ ಶ್ರವಣ, ಭಜನೆಗಳು, ಆಗೀಗ ಕೈಕೊಳ್ಳುವ ತೀರ್ಥಯಾತ್ರೆಗಳು, ಕೊಂಚ ನೆಮ್ಮದಿ ಕೊಡುತ್ತಿದ್ದವು. ಮಹಿಳೆಯರಷ್ಟೇ ಮುಕ್ತವಾಗಿ ಹಾಡಿ ಕುಣಿದು ಭಾಗವಹಿಸುವ ಪ್ರಸಂಗಗಳೂ ಆಗೀಗ ಇದ್ದವು.

ಅಂಗನೆಯರೆಲ್ಲ ನೆರೆದು ಚಪ್ಪಾಳಿಯಿಕ್ಕುತ
ಮಂಗಳವ ಪಾಡಿ ರಂಗನ ಕುಣಿಸುವರು

ಎಂದು ಪುರಂದರ ದಾಸರು ಹಾಡು ಕಟ್ಟಿದಾಗ ಜನ್ಮಾಷ್ಟಮಿಯಂಥ ಹಬ್ಬ ಹರಿದಿನಗಳಲ್ಲಿ ತಮ್ಮ ಸುತ್ತಮುತ್ತಲಿನ ಗೃಹಿಣಿಯರ ಸಡಗರದ ಹಾಡು, ಕುಣಿದಾಟಗಳನ್ನು ನೆನೆದಿರಬೇಕು! ತಮ್ಮ ತಾಯಂದಿರಿಂದ ಕಲಿತ ಸಂಪ್ರದಾಯದ ಹಾಡುಗಳನ್ನು ಸಾಮೂಹಿಕವಾಗಿ ಹಾಡಿ, ಚಪ್ಪಾಳೆ ಅಥವಾ ಕೋಲ್ಲು ಹಾಕಿ, ತಾವು ಕಲಿತಂಥ ವಾದ್ಯಗಳನ್ನು ನುಡಿಸಿ, ನಾಟಕಗಳನ್ನು ಹೊಂದಿಸಿ, ಆಡಿಸಿ, ನೋಡಿ ಹೆಂಗಳೆಯರು ನಕ್ಕು ನಲಿಯುತ್ತಿದ್ದರು. ಹಾಡುಗಳನ್ನು ಕಲಿಯಲು, ವಿನಿಮಯ ಮಾಡಿಕೊಳ್ಳಲು, ರಂಗೋಲಿ, ಹೊಲಿಗೆಗಳ ಪ್ರಕಾರಗಳನ್ನು ಅರಿಯಲು, ದೇವಸ್ಥಾನದ ಪೌಳಿಗಳು, ಪುರಾಣ ಶ್ರವಣದ ಹೊತ್ತಿಗೆ ದೊರೆತಾಗ ಅನುಕೂಲ

ಮಾಡಿಕೊಡುತ್ತಿದ್ದವು. ಎಲೆ ಹಚ್ಚುವದು, ದೊನ್ನೆ ಮಾಡುವದು, ನೂಲುವದು, ಹೊಲಿಗೆ, ಹೂಬತ್ತಿ ಹೊಸೆಯುವದು, ಬಿಡುವಿನ ವೇಳೆಯ ಚಟುವಟಿಕೆಗಳಾಗಿದ್ದವು.

ii) ಸಾಮೂಹಿಕ ಜೀವನ

ದಕ್ಷಿಣ ಭಾರತದ ಹೆಂಗಳೆಯರೆಲ್ಲ ಹೆಮ್ಮೆಪಡಬಹುದಾದ ಒಂದೇ ವಿಚಾರವೆಂದರೆ ಪರ್ದಾಪದ್ಧತಿಯ ಅಭಾವ. ಕ್ರಿ. ಶ. ಹತ್ತನೆ ಶತಮಾನದ ಹೊತ್ತಿಗೆ ಉತ್ತರಭಾರತದಲ್ಲೂ ಹೆಂಗಸರು ಮೈ, ಮುಖ, ಮುಚ್ಚಿ ಹೊರಗೆ ಹೋಗುವ ಪದ್ಧತಿ ಪ್ರಚಾರದಲ್ಲಿ ಇರಲಿಲ್ಲ. ಅರಬ್ ಪ್ರವಾಸಿ, ಅಬು ಝೈದ್, (ಹತ್ತನೇ ಶತಕದ ಪ್ರಾರಂಭ) "ಭಾರತೀಯ ಅರಸರೆಲ್ಲ ತಮ್ಮ ಅಂತಃಪುರದ ಮಹಿಳೆಯರನ್ನೂ ಇತರ ಹೆಂಗಳೆಯರನ್ನೂ ಮುಖಮುಚ್ಚುವ ಪರದೆಯಲ್ಲಿಡದೇ ಆಸ್ಥಾನಕ್ಕೆ ಬರಮಾಡಿಕೊಳ್ಳುತ್ತಿದ್ದು ಜನಸಾಮಾನ್ಯರು ಯಾವ ಅಡೆತಡೆಗಳಿಲ್ಲದೇ ಅವರನ್ನು ನೋಡಬಹುದಾಗಿತ್ತು!" ಎಂದು ಬರೆದಿದ್ದಾನೆ. ಮನೆಯ ಹೊಸ್ತಿಲು ಎಂದೂ ದಾಟದ, ಒಂದಾನು ವೇಳೆ ಹೊರಹೊರಟರೆ, ಮೈ ಮುಖ ಮುಚ್ಚಿಕೊಳ್ಳುವ ಮಹಿಳೆಯರ ಪ್ರದೇಶದಿಂದ ಬಂದಾತನಿಗೆ ಇದು ಅಚ್ಚರಿಯ ವಿಷಯವಾಗಿತ್ತು. ಹಲವಾರು ನಾಡಿನ ಮಹಿಳೆಯರು ಸಾಲಂಕೃತರಾಗಿ, ಅಶ್ವಾರೋಹಿಗಳಾಗಿ, ಹೇಸರ ಕತ್ತೆ ಏರಿ, ಕೆಲವೊಮ್ಮೆ ನಡೆದು ಕೂಡ ಆಸ್ಥಾನಕ್ಕೆ ಬಂದು ವಿಶೇಷ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದ ವಿಚಾರ ಮಾನಸೋಲ್ಲಾಸದಲ್ಲಿ ಬರುತ್ತದೆ. (ಅಂತಃಪುರದ 'ಶುದ್ಧ' ಹೆಂಗಳೆಯರು ರೇಷ್ಮೆ ಬಟ್ಟೆ ಮುಚ್ಚಿದ ಮೇಣೆಗಳಲ್ಲಿ ಬರುತ್ತಿದ್ದರೂ ಅದು ರಕ್ಷಣಾ ಕ್ರಮವಾಗಿ ಎಂಬುದು ಸ್ಪಷ್ಟ.) ಆ ಮಹಿಳೆಯರ ವೇಷಭೂಷಣಗಳ ವಿವರಗಳೂ ಇವೆ. ಅಂದ ಮೇಲೆ ಸಾಮಾನ್ಯರೆಲ್ಲ ಬೀದಿಯಲ್ಲಿ ನಿಂತು ರಾಜಮನೆತನದವರನ್ನು ಆಗೀಗ ನೋಡುತ್ತಿದ್ದರು.

ಅಮಾತ್ಯರು, ಮಂತ್ರಿ ಸಚಿವರು, ಮಂಡಲಾಧೀಶ್ವರರು, ಸಾಮಂತರು ಮತ್ತು ಬೇರೆ ಬೇರೆ ವಿಭಾಗಗಳ ಮುಖ್ಯಸ್ಥರಿದ್ದ ಆಸ್ಥಾನದಲ್ಲಿ ಅಂತಃಪುರದ ಮಹಿಳೆಯರೂ, ವಿಲಾಸಿನಿಯರೂ, ಪ್ರಸಿದ್ಧ ಗಣಿಕೆಯರೂ ಭಾಗವಹಿಸುತ್ತಿದ್ದುದು ವಿಶೇಷವೆಂದೇ ಹೇಳಬೇಕು. ಅರಸನ ಚಾತುರ್ಯ ಮತ್ತು ಮಾತುಗಾರಿಕೆಯಿಂದ ಹೆಂಗಸರೆಲ್ಲ ಹರ್ಷಚಿತ್ತರಾಗಿರುತ್ತಿದ್ದರು. ಪಾರ್ಶ್ವನಾಥ ಪುರಾಣದಲ್ಲೂ ಮಹಿಳೆಯರು ಒಡ್ಡೋಲಗದ ವ್ಯವಹಾರಗಳಲ್ಲಿ ಪಾಲ್ಗೊಳ್ಳುತ್ತಿದ್ದ ವಿಚಾರ ಬರುತ್ತದೆ. ಮದುವೆಯ ಕಾಲಕ್ಕೆ ಕೂಡ ಕ್ಷತ್ರಿಯ ಕುಮಾರಿಯರು ಮುಸುಕು ಧರಿಸುತ್ತಿರಲಿಲ್ಲ. ಕರ್ನಾಟಕದಿಂದ ಕಾಶ್ಮೀರಕ್ಕೆ ಹೋದ ಅಂದಿನ ಫ್ಯಾಶನ್‌ಗಳಲ್ಲಿ ತಲೆ ಮುಚ್ಚದೇ (ನಿರ್‌ನಿರಂಗಿ) ಸೆರಗು ಹಾಕಿ ಸೀರೆ ಉಡುವದು ಮುಖ್ಯವಾಗಿತ್ತು.

೧೪ನೇ ಶತಮಾನದಲ್ಲಿ ಕರ್ನಾಟಕದ ಮುಸ್ಲಿಂ ಸ್ತ್ರೀಯರು ಕೂಡ ಬುರ್ಖಾ ಧರಿಸದೇ ಇದ್ದದ್ದು ಮಹತ್ವಪೂರ್ಣ ಅಂಶವಾಗಿದೆ. ಹೊನ್ನಾವರವನ್ನು ಸಂದರ್ಶಿಸಿದ ಅರಬ ಪ್ರವಾಸಿ ಇಬ್ನ್-ಎ-ಬತೂತನು ಅಲ್ಲಿಯ ಹುಡುಗಿಯರು ಸುಂದರಿಯರಾಗಿದ್ದು ಮೂಗಿನಲ್ಲಿ ಚಿನ್ನದ ಉಂಗುರಗಳನ್ನು ಧರಿಸುತ್ತಿದ್ದುದನ್ನು ನೋಡಿದ್ದ. ಊರಲ್ಲಿಯ ಪಾಠಶಾಲೆಗಳಿಗೆ ಅವರು ಗೃಹಿಣಿಯರು ಮನೆಗೆ ಸೀಮಿತರಾದಷ್ಟೂ ಸಮಾಜದಲ್ಲಿ ಮನ್ನಣೆಯಿತ್ತು! ಎಂದು ತೋರುತ್ತದೆ. ಆದರೆ ಈ ಕಾರಣಗಳು ನಿಜವಾಗಿದ್ದಾಗ, ಕಡು ನಿರ್ಬಂಧಗಳಿಲ್ಲದೇ ಕನ್ನಡನಾಡಿನ

ಹೆಂಗಳೆಯರು ಓಡಾಡುತ್ತಿದ್ದರು ಎಂದು ತೋರುತ್ತದೆ.ಪತಿಯೊಡನೆ ಪೇಟೆಗೆ ಹೋಗುವುದು ಸಾಮಾನ್ಯವಾಗಿತ್ತು.

ಮನರಂಜನೆ ನೀಡುತ್ತಿದ್ದ ಗಾಯಕಿಯರು ನಟಿ-ನರ್ತಕಿಯರು ಡೊಂಬತಿಯರು ಇತರ ಜಾನಪದ ಕಲಾವಿದೆಯರು ಮುಂತಾದವರಿಗೆ ಊರಿಂದೂರಿಗೆ ಅಲೆಯುವುದು ಅತ್ಯವಶ್ಯವಾಗಿತ್ತು. ಇಂಥ ವರ್ಗಕ್ಕೆ ಶಿಷ್ಟವೆನಿಸಿಕೊಳ್ಳುವ ಸಮಾಜದಲ್ಲಿ ಗೌರವ, ಮನ್ನಣೆಗಳು ಇರಲಿಲ್ಲ.

iii. ಸಾಮೂಹಿಕ ಅಡಿಗೆಯ ಒಂದು ಚಿತ್ರ :

ಜಾತ್ರೆ, ರಥೋತ್ಸವಗಳಂಥ ಸಂದರ್ಭದಲ್ಲಿ ಇಡೀ ಗ್ರಾಮ ಅಥವಾ ಊರೇ ಸಂಭ್ರಮದಿಂದ ದುಡಿದು ಸಾಮೂಹಿಕವಾಗಿ. ಊಟ-ಉಪಚಾರಗಳ ತಯಾರಿ ನಡೆಸುತ್ತಿದ್ದಿತು. ಸಿದ್ಧರಾಮ ಚರಿತೆಯು ಇಂಥ ಒಂದು ಸಂದರ್ಭವನ್ನು ಬಣ್ಣಿಸುತ್ತದೆ. ಸೊನ್ನಲಾಪುರ (ಈಗಿನ ಸೊಲ್ಲಾಪುರ)ದ ಸಿದ್ಧರಾಮನು ವೈಶಾಖ ಪೌರ್ಣಿಮೆಯಂದು ಮಲ್ಲಿಕಾರ್ಜುನ ದೇವಾಲಯದಲ್ಲಿ ಮಂಗಳೋತ್ಸವವನ್ನು ನಡೆಸುವಂತೆ ತನ್ನ ಸಂಗಡಿಗರಿಗೆ ಅಪ್ಪಣೆ ಮಾಡುತ್ತಾನೆ. ಊರವರಲ್ಲಿ ಸಡಗರದ ವಿದ್ಯುತ್ ಸಂಚಾರವಾಯಿತು. ಶಿಷ್ಯರೆಲ್ಲ ಪೇಟೆ-ಪೇಟೆಗಳಲ್ಲಿ ಬತ್ತ ಕುಟ್ಟಿ ಅಕ್ಕಿ ತಯಾರಿಸಲು ಕೊಟ್ಟಣಗಳನ್ನು ಏರ್ಪಡಿಸಿದರು. ದಾರಿದಾರಿಗಳಲ್ಲಿ ಕಹಳೆ ಊದುತ್ತ, ಮದ್ದಳೆ, ಘಂಟೆಗಳನ್ನು ಬಾರಿಸುತ್ತ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಂಡು ಓಡಾಡುತ್ತ ಜನರನ್ನೆಲ್ಲಾ ಕೆಲಸಕ್ಕೆ ಹೊಂದಿಸಿದರು. ವರ್ತಕರು, ಬ್ರಾಹ್ಮಣರು, ಎಲ್ಲರೂ ಬಂದರು. ಭತ್ತ, ರಾಜಾನ್ನದ ಅಕ್ಕಿ, ಗೋದಿಗಳ ರಾಶಿ ರಾಶಿಗಳೇ ಬಂದು ಬಿದ್ದವು. ಕೆಲವರು ಬತ್ತಕುಟ್ಟಿ ಅಕ್ಕಿ ಮಾಡಿದರೆ, ಕೆಲವರು ಗೋದಿ ಬೀಸಿ ಸಜ್ಜಿಗೆ ಮಾಡಿದರು. ಗುರುಸ್ತುತಿ ಹಾಡುತ್ತ, ದುಡಿಯುತ್ತ, ತಮ್ಮನ್ನು ತಾವು ಮರೆತರು. ಮಹಾಮನೆಯ ಉಗ್ರಾಣಕ್ಕೆ ಅಕ್ಕಿ, ಕಣಕದ ರಾಶಿಯನ್ನೇ ತುಂಬಿಸಿದರು. ಆಂಧ್ರದಿಂದ ಬಿಳಿಯ ಹೋರಿಗಳ ಮೇಲೆ ಎಳ್ಳಿನ ಮೂಟೆಗಳನ್ನು ಹೊರಿಸಿ ತಂದರು. ಗಾಣಿಗರು ಅವನ್ನು ಗಾಣದಲ್ಲಿ ಆಡಿಸಿ, ಒಳ್ಳೆಯ ಎಣ್ಣೆಯನ್ನು ಅಸಂಖ್ಯ ಕುಂಭಗಳಲ್ಲಿ ತುಂಬಿಟ್ಟರು. ಎಣ್ಣೆ ಹಿಂಡಿಯನ್ನು ಕಿಚಡಿಗಾಗಿ ಬೇರೆಯೇ ತೆಗೆದು ಇಟ್ಟರು. ಬೆಳ್ಳಿಯ ಪುಡಿಯಂತೆ ಹೊಳೆಯುವ ಸಣ್ಣರವೆಯನ್ನು ಕುಟ್ಟಿ ಕುಟ್ಟಿ ಸಿದ್ಧಪಡಿಸಿದರು.

ಬಳ್ಳಿಯಂತೆ ಕಂಗೊಳಿಸುವ ಸಣ್ಣ ಸೇವಗೆಯ ರಾಶಿಯನ್ನು ತಯಾರಿಸುವಲ್ಲಿ ಹಳ್ಳಿಕಾರ್ತಿಯರೇ ಅಲ್ಲದೇ ಅರಸರ ಹೆಣ್ಣುಮಕ್ಕಳೂ ಸೇರಿ ಪರಡಿ, ಸರವಳಿಗೆ ಮುಂತಾದ ಸೇವಗೆಗಳ ಪ್ರಕಾರಗಳನ್ನು ಹೊಸೆದು ತಯಾರಿಸಿದರು. ಉಪ್ಪು ಸಾಸಿವೆ ಹಾಕಿ ಮಾವಿನಕಾಯಿ, ಅಮಟೆಕಾಯಿಗಳ ಉಪ್ಪಿನಕಾಯಿ, ಹಪ್ಪಳ, ಕುಂಬಳ ಸಂಡಿಗೆ, ನೊರೆ ಸಂಡಿಗೆ, ಹುರಿಸಂಡಿಗೆ, ಬಾಳಕಗಳ ಪ್ರಕಾರಗಳನ್ನೆಲ್ಲ ಅಣಿ ಮಾಡಿ ಸಿದ್ಧರಾಮನಿಗೆ ತಂದು ಒಪ್ಪಿಸಿದರು.

ಶಿವನ ನೈವೇದ್ಯಕ್ಕೆ ಬೇರೆಯಾಗಿಯೇ ತರಗು, ಚಕ್ಕುಲಿ, ಹೂಸಣಂಬ(?) ಹೂರಿಗೆ, ಆರುಬಗೆಯ ಅನ್ನಗಳು, ಫೇಣಿ, ಗಾರಿಗೆ, ಇಡ್ಡಲಿಗೆ, ಆವುಗು, ತಿರೆಸೇವಿಗೆ, ಕರಚೀಕಾಯಿ, ಲಡ್ಡುಗೆ, ಹಾಲುಂಡೆ, ಹುರಣದುಂಡೆಗಳು ತಯಾರಾದವು."

ತೀರ ಇತ್ತೀಚಿನವರೆಗೆ ಗ್ರಾಮವೊಂದರಲ್ಲಿ ವಿವಾಹ, ರಥೋತ್ಸವಗಳು ಜರುಗಿದರೆ, ಗ್ರಾಮಸ್ಥರೆಲ್ಲ ಒಟ್ಟಾಗಿ ದುಡಿದು ಪಾಲುಗೊಳ್ಳುವದು ಸಾಮಾನ್ಯವಾಗಿತ್ತು. ನವನಾಗರಿಕತೆಯ ಬಿಡಿ ಕುಟುಂಬಗಳಿಂದಾಗಿ ಸಮೂಹ ಸಂಸ್ಕೃತಿಯೆಂಬುದು ಮಾಯವಾಗುತ್ತಿದೆ. ಈಗ ಕುಟುಂಬ ಅಥವಾ ಸ್ವಗ್ರಾಮಗಳಲ್ಲಿ ನಡೆಯುವ ಸಮಾರಂಭಗಳು ನಗರದ ಕಲ್ಯಾಣಮಂಟಪಗಳಲ್ಲಿ ನಡೆಯುತ್ತಿವೆ. ಅದಕ್ಕೆ ಹೊಂದಿದ ಭೋಜನದ ಕಾರ್ಯಕ್ರಮವೂ ನಿಗದಿತ ಕಂಟ್ರ್ಯಾಕ್ಟ್ ರೂಪದಲ್ಲಿ 'ಬಫೆ' ಯ ಅತ್ಯಾಧುನಿಕ ರೂಪದಲ್ಲಿ ವಿತರಣೆ ಆಗುತ್ತದೆ.

• • •

೧೨. ವಿಧವೆಯರ ಗೋಳು

ಎಲ್ಲ ಆನಂದಗಳು ಗೃಹಿಣಿಯರಿಗೆ, ಎಳೆಯರಿಗೆ. ಗಂಡನನ್ನು ಕಳೆದುಕೊಂಡ ದುರ್ದೈವಿ ಇವೆಲ್ಲವುಗಳಿಂದ ವಂಚಿತಳಾಗಿರುತ್ತಿದ್ದಳು. ವಿದೇಶೀಯರು ಗಮನಿಸಿದಂತೆ, ಸಹಗಮನ ಮಾಡದ ಹೆಂಗಸರನ್ನು ಅಗೌರವದಿಂದ ಕಾಣುತ್ತಿದ್ದರು. ಗಂಡನನ್ನು ನುಂಗಿದ ಮಾರಿಯೆಂದು ಹೊರಹಾಕುವವರೂ ಇದ್ದರು. ಇಂಥವರು ದಿಕ್ಕಿಲ್ಲದೇ ಅಲೆಯುತ್ತಿದ್ದರು. ಬೀದಿಗೆ ಇಳಿಯುತ್ತಿದ್ದರು.

ವಿದೇಶೀಯರು ಮೇಲ್ನೋಟಕ್ಕೆ ಕಂಡ ಅಥವಾ ಕೇಳಿ ತಿಳಿದುಕೊಂಡ ವೃತ್ತಾಂತಗಳನ್ನು ಬರೆದಿಡುತ್ತಿದ್ದರಿಂದ ಅವರು ಬರೆದದ್ದೆಲ್ಲ ಅಕ್ಷರಶಃ ನಂಬುವಂತಿಲ್ಲ. ಕೆಲವು ಸತ್ಯಾಂಶಗಳನ್ನು ಗುರುತಿಸಬಹುದು. ಆದರೂ ವಿಶ್ವದ ಯಾವುದೇ ಜನಾಂಗದಲ್ಲಿ ಹಿಂದೂಗಳಲ್ಲಿ ಮೇಲು ಜಾತಿಯೆಂದು ಗಣಿಸಲ್ಪಡುವ ವರ್ಗದ ಬಾಲವಿಧವೆಯಂಥ ನಿರಂತರ ದುಃಖದ ಬಾಳುವೆಗೆ ಈಡಾದ ನಾರೀವೃಂದ ನೋಡಲು ಸಿಗುವುದಿಲ್ಲ 'ಮಿತಾಕ್ಷರ'ದಲ್ಲಿ ಮುಂಡನದ ಪ್ರಸ್ತಾಪವಿಲ್ಲದಿದ್ದರೂ ೧೪ನೇ ಶತಮಾನದ ಹೊತ್ತಿಗೆ ಈ ರೂಢಿ, ಬಳಕೆಯಲ್ಲಿ ಬಂದು ಬಿಟ್ಟಿತು. ವಿಧವೆಯಾದಾಕೆ, ಮರಣಪರ್ಯಂತ ಸನ್ಯಾಸಿಯ ಜೀವನ ನಡೆಸಬೇಕು, ಎಂಬರ್ಥದಲ್ಲಿ ಬೌದ್ಧ, ಜೈನ, ಹಿಂದೂ ಧರ್ಮಗಳಲ್ಲೆಲ್ಲ ಪ್ರಚಲಿತವಿದ್ದ ತಲೆ ಬೋಳಿಸುವ ಪದ್ಧತಿಯನ್ನು ಸಲೀಸಾಗಿ ಅಸಹಾಯರಾದ ವಿಧವೆಯರಾದ ಹೆಣ್ಣುಗಳಿಗೆ ಅನ್ವಯಿಸಲಾಯಿತು. ಅಬ್ರಾಹ್ಮಣರಲ್ಲಿ ಮುಂಡನ ಇರಲಿಲ್ಲ. ಆದರೆ ಕುಂಕುಮ ಪುಷ್ಪ, ಆಭರಣ ಧಾರಣೆಯೂ ಇರಲಿಲ್ಲ. ಸನ್ಯಾಸಿಯ ಕಠಿಣವ್ರತ ಒಪ್ಪತ್ತಿನ ಊಟ, ಉಪವಾಸ, ನೇಮ ವ್ರತಗಳು, ನೆಲದ ಮೇಲೆ ಮಲಗುವದು, ಸಾಲದ್ದಕ್ಕೆ ಇಂಥವರ ದರ್ಶನವೇ ಅಪಶಕುನವೆಂದು ಎಣಿಸಲ್ಪಡುತ್ತಿದ್ದುದರಿಂದ ಇತರ ಜನರಿಗೆ ಮುಖ ತೋರಿಸದೇ ಕತ್ತಲೆ ಕೋಣೆಯಲ್ಲಿ ದಿನ ಕಳೆಯುವದು, ಗಾಣದೆತ್ತಿನ ತರಹ ಮನೆಯಲ್ಲಿ ಕೊನೆಯುಸುರಿನವರೆಗೂ ದುಡಿಯುವದು, ಅವಳ ಪಾಡಾಯಿತು. ಪುರಂದರ ದಾಸರಿಗೆ ಕಳವಳವುಂಟು ಮಾಡಿದ ಸನ್ನಿವೇಶ ಹೀಗಿದೆ.

ರಮಣ ನಿಲ್ಲದ ನಾರಿ, ಪರರ ಕಣ್ಣಿಗೆ ಮಾರಿ
ಮಾತು ಕಲಿತರೇನು, ಮಹಜಾಣೆಯಾದರೇನು
ಚಾತುರ್ಯವಿದ್ದರೇನು ಚಲುವೆಯಾದರೇನು

ಹೊರಗೆ ಬರಲಿಕೆ ಸಲ್ಲ ಇದಿರಾಗಿ ಸಲ್ಲ
ಅಡುಗೆಗೆ ಯೋಗ್ಯಳಲ್ಲ ಅತ್ತೆ ಮಗನಿಗೆ ಮೃತ್ಯು ಎನ್ನುವಳು
ಹುಟ್ಟಿದ ಮನೆಯವರು ದೂಷಿಸುವರು ! ಎಷ್ಟು ಹೇಳಲಿ ಬಹಳ
ತುಚ್ಛವನೆ ಮಾಡುವರು
....
ಅತಿಶ್ರಮಪಟ್ಟರೂ ಆದರಿಸರು
ವಿಪರೀತಹಣವಿದ್ದರಪಹರಿಸಿ ತಿಂಬುವರು
ಅತಿದೈನ್ಯದಿಂದ ಬೇಡೆ ಬಾಯ ಬಡಿಸುವರು
ಚಾಕರಿಯ ಮಾಡೆ ಆಚೀಚೆ ಲಾಡುವರು
ರಾಶಿ ಅನ್ನವನುಂಡಳೆಂದು ದೂರುವರು

ಇದಕ್ಕೆ ದಾಸವರೇಣ್ಯರು ಸೂಚಿಸುವ ಪರಿಹಾರವಾದರೂ ಏನು?

ಈಸು ಸೈರಿಸಿಕೊಂಡು ಏಕಾಂತದಲಿ ಕುಳಿತು
ಶ್ರೀಶ ಪುರಂದರ ವಿಠಲನ ನೆನೆಯೆ ನಾರಿ!

ಸಂಯಮ ಸಹನೆ, ತಪಸ್ಸುಗಳು ಹುಲುಮಾನವಜೀವಿಗೆ ಸಾಧ್ಯವೇ? ಎಷ್ಟೋ ಎಳೆಯ ಜೀವಗಳು ದಾರಿತಪ್ಪಿ ಬೀದಿಗೆಳೆಯುತ್ತಿದ್ದರು. ಯುದ್ಧ ಸಂಕಟಗಳು, ಸಾಂಕ್ರಾಮಿಕ ರೋಗಗಳು, ಹಾವು, ಹುಲಿ, ಕಾಡುಪ್ರಾಣಿಗಳಿಂದ ದುರ್ಮರಣ, ಸೋಂಕು ಮೊದಲಾದವುಗಳಿಂದ ಸಂಭವಿಸುತ್ತಿದ್ದ ತರುಣರ ಮರಣಗಳಿಂದಾಗಿ ಬಾಲವಿಧವೆಯರು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತಿದ್ದರು. ಇದು ಶತಕಗಳಿಂದ ಬಂದ ಬ್ರಾಹ್ಮಣವಿಧವೆಯರ ದೀನ ಸ್ಥಿತಿಯಾಯಿತು. ಅವರೆಲ್ಲ ಅವಿಭಕ್ತ ಕುಟುಂಬದಲ್ಲಿ ಬಾಳಿ ಭಸ್ಮವಾಗುತ್ತಿದ್ದರು.

ಹಲವಾರು ಜಾತಿ, ಜನಾಂಗಗಳಿದ್ದ ಕನ್ನಡ ನಾಡಿನಲ್ಲಿ ಆಯಾ ಕುಲ-ಪದ್ಧತಿಯ ವಿವಾಹಗಳು ಪ್ರಚಲಿತವಿದ್ದವು. ಅವರಿಗೆಲ್ಲ ಸ್ಮೃತಿಗಳ ಕಡ್ಡಾಯ ಅನ್ವಯಿಸುತ್ತಿರಲಿಲ್ಲ. ಬಾಲ್ಯವಿವಾಹ ಸಾಮಾನ್ಯವಾಗಿತ್ತು. ಆದರೂ ವಿಧವಾ-ವಿವಾಹ ಅಥವಾ ವಿಚ್ಛೇದನೆ ಹಾಗೂ ನಂತರದ ಪುನರ್ ವಿವಾಹಗಳೂ ಕೆಲವು ಪಂಗಡಗಳಲ್ಲಿ ನಡೆಯುತ್ತಿದ್ದವು. 'ಉಡಕೆ' ಸಂಬಂಧ ಎಂದು ಕರೆಯಲ್ಪಡುವ ಈ ಪದ್ಧತಿ ಕೃಷಿ-ಕಾರ್ಮಿಕ ಜನಾಂಗಗಳಲ್ಲಿ ಇತ್ತು.

ಉದರ ನಿರ್ವಹಣೆಯೇ ಅತಿ ಮುಖ್ಯವಾದ ದೀನ-ದಲಿತರಿಗೆ ಯಾವ ಶಾಸ್ತ್ರವೂ ಬಾಧಿಸುವುದಿಲ್ಲ. ಆದರೆ ಆರ್ಥಿಕ ಸ್ಥಿತಿ ಉತ್ತಮವಾದಂತೆ, ಮೇಲುವರ್ಗದವರನ್ನು ಅನುಕರಿಸುತ್ತ ಹೋಗುವದು, ಇಂಥವರಿಗೆ ರೂಢಿಯಾಗಿ ಬಿಡುತ್ತದೆ! ದುಷ್ಟ ಅಥವಾ ಅನಾಗರಿಕ ಪದ್ಧತಿಗಳಾದ ಸಹಗಮನ ಅಥವಾ ವಿಧವಾ -ತಿರಸ್ಕಾರಗಳು ಸಾಮಾನ್ಯವಾಗಿದ್ದವೆಂದು ವಿಷಾದದಿಂದ ಒಪ್ಪಿಕೊಳ್ಳಲೇಬೇಕಾಗುತ್ತದೆ.

ಹದಿನೇಳನೆಯ ಶತಮಾನಕ್ಕಾಗಲೇ ಸಾಮಾಜಿಕ ಅಸ್ಥಿರತೆ ವ್ಯಾಪಕವಾಗಿ, ಸ್ತ್ರೀಯರ ಮುಖ್ಯವಾಗಿ ಬಾಲವಿಧವೆಯರ ಪಾಡು ಶೋಚನೀಯವಾಯಿತು. ಆಬೆ ಡೂಬಾ ಎಂಬ ಕ್ರೈಸ್ತ ಮಿಶನರಿ ಕಣ್ಣಾರೆ ಕಂಡಂತೆ, ಎಲ್ಲ ಜಾತಿಯ ಜನರಲ್ಲಿ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿಸುವ ಪದ್ಧತಿ ಇತ್ತು. ಸಹಗಮನ, ಮನೆಯ ಊಳಿಗ ಇಂಥವನ್ನು ತಪ್ಪಿಸಲು (ದಯೆ ತೋರಿ!)ಅವರನ್ನು ದೇವಾಲಯಕ್ಕೆ "ಬಿಡುತ್ತಿದ್ದರು" ಮಗು, ಬದುಕಿಕೊಳ್ಳಲಿ ಎಂಬುದು ನಿರಾಶಾಭಾವವಾಗಿತ್ತು ಎಂದು ಡೂಬಾ ಹೇಳಿದ್ದಾನೆ. ಸಮಾಜದಲ್ಲಿ ದೇವದಾಸಿಯರಿಗೆ ತುಂಬ ಬೇಡಿಕೆ ಇದ್ದೇ ಇತ್ತು.

ಆಬೆ ಡೂಬಾ ಮಾತನ್ನು ಪೂರ್ಣತಃ ನಂಬುವಂತಿಲ್ಲವಾದರೂ ಅದರಲ್ಲಿ ಕೊಂಚ ನಿಜಾಂಶ ಇದೆ. ವಿಧವೆಯರನ್ನು ತೀರ ನಿಕೃಷ್ಟವಾಗಿ ಕಾಣುತ್ತಿದ್ದ ತಮ್ಮನ್ನು "ಮೇಲು" ಎಂದು ನಂಬಿದ ವರ್ಗದ ಜನರಲ್ಲಿ, 'ಅವರ ಮುಖ ಕಾಣುವುದೇ ಅಮಂಗಲ! ಅವರು ಕೈಮುಟ್ಟಿದ್ದೆಲ್ಲ ಅವಲಕ್ಷಣವಾಗುತ್ತದೆ. ಅವರು ಇದ್ದ ಮನೆ ನಾಶವಾಗುತ್ತದೆ!' ಎಂಬೆಲ್ಲ ಮೂಢನಂಬಿಕೆಗಳು ಗಟ್ಟಿಯಾಗಿದ್ದವು. ದೇವರೇ ನೋಡಿಕೊಳ್ಳಲಿ! ಎಂದು "ಆರ್ಥಿಕವಾಗಿ ಹಿಂದುಳಿದವರ" ವರ್ಗದವರು, ತಮಗೂ, ತಮ್ಮ ಎಳೆವಯಸ್ಸಿನ ವಿಧವಾ -ಕನ್ಯೆಯರಿಗೂ ಒಳಿತನ್ನು ಹಾರೈಸಿ ದೇವಾಲಯದ ಸೇವೆಗೆ ಬಿಟ್ಟಿರಬಹುದಾದ ಸಾಧ್ಯತೆ ಬಲವಾಗಿತ್ತು.

ದುಡಿದು ಬದುಕುವ ವರ್ಗದವರಲ್ಲಿ, ದುಡಿಯುವ ಕೈಗಳೇ ಮುಖ್ಯವಾಗಿದ್ದವು. ಹೆಣ್ಣು-ಗಂಡೆಂಬ ಅಂತರ ಅಷ್ಟು ಕಾಡುತ್ತಿರಲಿಲ್ಲ. ಮರುಮದುವೆ ಸಾಮಾನ್ಯವಾದ ಜಾತಿಗಳಲ್ಲಿ ವಿಧವಾತನವು ಶಾಪವಾಗಿರಲಿಲ್ಲ.

• • •

೧೩. ಸಹಗಮನ ಪದ್ಧತಿ

ಪತಿಯು ನಿಧನ ಹೊಂದಿದಾಗ ಅದೇ ಚಿತೆಯಲ್ಲಿ ಪತ್ನಿಯು ಧುಮುಕಿ ಸಾವನ್ನಪ್ಪುವ ಪದ್ಧತಿ, ಭಾರತದ ನೆಲದ್ದು ಅಲ್ಲ. ಸರ್ವ ಭಾರತೀಯರಿಗೂ ಮಾನ್ಯವಾದ ಮನುಸ್ಮೃತಿಯಲ್ಲಿ ಸಹಗಮನ ಅಥವಾ ಸತಿ ಹೋಗುವ ಪದ್ಧತಿಯ ಉಲ್ಲೇಖ ಇಲ್ಲ. ಈಗ ಹೆಚ್ಚಿನ ವಿದ್ವಾಂಸರು ಒಪ್ಪಿಕೊಂಡಂತೆ ಈ ಅನಾಗರಿಕ ಪದ್ಧತಿ ಕ್ರಿಸ್ತ ಶಕದ ಪ್ರಾರಂಭದಲ್ಲಿ ಆಗಾಗ್ಗೆ ವಾಯುವ್ಯ ಗಡಿಯಿಂದ ದಾಳಿಯಿಡುತ್ತಿದ್ದ ಕಾಡು ಜನಾಂಗದೊಂದಿಗೆ ಭಾರತಕ್ಕೆ ಕಾಲಿಟ್ಟಿತು. ಸಿಥಿಯನ್ ಟಾರ್ಟರ್ ಜನಾಂಗದಲ್ಲಿ, ಅವರ ಮುಖಂಡನು ಯುದ್ಧ ಇಲ್ಲವೇ ಅಂಥ ಅಪಘಾತದಲ್ಲಿ ಮೃತನಾದರೆ, ಅವನ ಅನುಯಾಯಿಗಳು, ಹೆಂಡತಿ, ವಾಹನ, ಸೇವಕರನ್ನು ಜೀವಂತವಾಗಿ ಹೂಳುವ ಪದ್ಧತಿಯಿತ್ತು. ಭಾರತದ ನೆಲದೊಂದಿಗೆ ಒಂದಾದರೂ ಈ ಪದ್ಧತಿಯನ್ನು ಅವರ ವಂಶಜರು ಬಿಟ್ಟುಕೊಡಲಿಲ್ಲ. 'ವಹ್ನಿಕುಲ' ದವರೆಂದು ಕರೆಯಲ್ಪಡುವ, ಕ್ಷತ್ರಿಯರೆನ್ನಿಸಿಕೊಳ್ಳುವ, ರಜಪೂತ ಕುಲಗಳಲ್ಲಿ ಸತಿಪದ್ಧತಿ ಮುಂದುವರಿಯಿತು. ಬಲುಬೇಗ ಭಾರತದ ಆಳುವ ವರ್ಗಗಳಲ್ಲಿ ಅದು ಜನಪ್ರಿಯವಾಗಿ ಬಿಟ್ಟಿತು. ಮಧ್ಯಯುಗದ ಹೊತ್ತಿಗೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅದು ಹರಡಿ ಹೋಯಿತು.

ಪತಿಯ ಚಿತೆ ಏರುವುದಲ್ಲದೇ, ದೂರದಲ್ಲಿ ಪತಿ ಮೃತನಾದರೆ ಆತನನ್ನು ಅನುಸರಿಸಿ ಅಗ್ನಿಗೆ ತನ್ನನ್ನು ಅರ್ಪಿಸಿಕೊಳ್ಳುವದು 'ಅನ್ವಾರೋಹಣ' ಅಥವಾ 'ಅನುಮರಣ' ಅನಿಸಿಕೊಳ್ಳುತ್ತಿತ್ತು. ಕದಂಬ ಕುಲದ ರವಿವರ್ಮನ ಆರನೆಯ ಶತಮಾನದ ಕವಡಿ ಶಾಸನ, ಈ ಕುರಿತಾದ ಮೊದಲ ಶಾಸನ, ಅವನ ರಾಣಿಯ ಸಹಗಮನ ಸೂಚಿಸುತ್ತದೆ, ಎನ್ನಲಾಗಿದೆ. ಖಚಿತವಾದ ಉಲ್ಲೇಖವಿರುವದು ಕ್ರಿ.ಶ.೯೦೪ ರ ಶಾಸನದಲ್ಲಿ. ಅಂದರೆ ಕರ್ನಾಟಕದಲ್ಲಿ ಹತ್ತನೆಯ ಶತಮಾನದ ಹೊತ್ತಿಗೆ ಸಹಗಮನವು ಸಾಕಷ್ಟು ಬಲವಾಗಿ ಬೇರೂರಿತ್ತು. ಕರ್ನಾಟಕದ ಶಾಸನಗಳು, ಮಾಸ್ತಿಕಲ್ಲುಗಳು, ವೀರಗಲ್ಲುಗಳು ಈ ಅನಾರ್ಯ ಪದ್ಧತಿಯನ್ನು ಸಾರಿ ಸಾರಿ ಹೇಳುವಷ್ಟು ಹೇರಳವಾಗಿವೆ. ಕರ್ನಾಟಕವನ್ನು ಸಂದರ್ಶಿಸಿದ ಹೆಚ್ಚಿನ ವಿದೇಶೀಯರು ಈ ಪದ್ಧತಿಯನ್ನು ಉಲ್ಲೇಖಿಸಿದ್ದಾರೆ. ಜಾನಪದ ಗೀತೆಗಳಲ್ಲೂ ಮಾಸ್ತಿ ಆಚರಣೆಯ ಕಥೆಗಳು ಬರುತ್ತವೆಯಾದ್ದರಿಂದ ಇದು ವರ್ಣ, ವರ್ಗ ಭೇದವಿಲ್ಲದೇ ರೂಢವಾಗಿದ್ದ ಆಚರಣೆ, ಎಂದು ಹೇಳಬಹುದು.

ಯುಗದ ಹಿಂದೆ ಜನಪ್ರಿಯವಾದ ಈ ಘೋರ ಪದ್ಧತಿಗೆ ವೇದ ಕಾಲದಷ್ಟು ಪುರಾತನ ಪುರಾವೆ ಹುಡುಕಲಾಯಿತು. ಶಿವನಿಂದೆಯನ್ನು ಸಹಿಸದ ಸತಿದೇವಿ ತನ್ನ ತಂದೆ ದಕ್ಷಬ್ರಹ್ಮನ ಯಜ್ಞ ಕುಂಡದಲ್ಲಿ ಹಾರಿದಂದಿನಿಂದ 'ಸತಿ' ಪದ್ಧತಿಯ ಪ್ರಾರಂಭ ನಿರ್ಧರಿಸಲಾಯಿತು. ಪುರುಷಪ್ರಾಧಾನ್ಯದ ಸಮಾಜ, ಸ್ತ್ರೀಯರನ್ನು ಹತ್ತಿಕ್ಕಲು ಮಾಡಿದ ಉಪಾಯ ಎನ್ನಲಾಯಿತು. ಜಾತಿಪದ್ಧತಿಯ ವಿರೋಧಿಗಳು, ಮೇಲುವರ್ಗದವರು, ಕೆಳವರ್ಗದವರ ಮೇಲೆ ಹೇರಿದ ದೌರ್ಜನ, ಎಂದು ಸಾರುವಂತೆ ಆಯಿತು. ವಿಧವೆಯರ ಆಸ್ತಿ-ಪಾಸ್ತಿ ದೋಚಲು ಕೈಕೊಂಡ ಕ್ರಮ ! ಎಂದು ಎತ್ತಿ ತೋರಿಸಲಾಯಿತು. ಈ ಎಲ್ಲ ವಾದಗಳಲ್ಲಿಯ ಕೆಲ ಅಂಶಗಳು ನಿಜವೆನಿಸಿದರೂ ಸ್ತ್ರೀಯರಿಗೆ ಅವರ ಚಾರಿತ್ರ್ಯ, ಶೀಲ,ಪಾತಿವ್ರತ್ಯಗಳೇ ಮುಖ್ಯ ಎಂಬ ಅಂಧಶ್ರದ್ಧೆಯೇ ಈ ದುಷ್ಟಪದ್ಧತಿ ಜಾರಿಗೆ ಬರಲು ಕಾರಣವಾಯಿತು ಎಂಬ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ವಿಧವೆಯನ್ನು ಅಮಂಗಲ, ಅನಿಷ್ಟಗಳ ಪ್ರತೀಕವೆನ್ನುವ ಸಮಾಜವೇ, ಮಹಾಸತಿಯಾದವಳನ್ನು ದೇವತೆಯೆಂದು ಹಾಡಿ, ಹೊಗಳಿ ಪೂಜಿಸುತ್ತಿತ್ತು. ಹೀಗಾಗಿ ವಿಧವೆಯ ಗೋಳಿನ ನಿತ್ಯಮರಣವನ್ನು ತಪ್ಪಿಸಲು, ಎಷ್ಟೋ ಎಳೆಯ ಜೀವಗಳು, ದೇವತ್ವಕ್ಕೆ ಏರುವ ಪವಿತ್ರ ಗುರಿಯಿಂದ ಉರಿಯನ್ನು ಅಪ್ಪುವ ಅಸೀಮ ಧೈರ್ಯ ತೋರಿದ್ದಿದ್ದರೆ ಆಶ್ಚರ್ಯವಿಲ್ಲ.

ಜೊತೆಗೆ ಅಂದಿನ ಸ್ಮೃತಿಕಾರರೂ ಇಂಥ ಗಟ್ಟಿ ಹೃದಯದ ಹೆಂಗಳೆಯರನ್ನು ಹಲವು ವಿಧಗಳಲ್ಲಿ ಪ್ರೋತ್ಸಾಹಿಸುತ್ತಿದ್ದರು. ಕರ್ನಾಟಕದ ಖ್ಯಾತ ಸ್ಮೃತಿವ್ಯಾಖ್ಯಾನಕಾರ, ವಿಜ್ಞಾನೇಶ್ವರನು ಸತಿ ಪದ್ಧತಿಯನ್ನು ವೈಭವೀಕರಿಸಿದ್ದಾನೆ. ಹಿಂದಿನ ಹಲವು ವ್ಯಾಖ್ಯಾನಕಾರರು ಬ್ರಾಹ್ಮಣ ಸ್ತ್ರೀಗೆ ಸಹಗಮನ ನಿಷಿದ್ಧವೆಂದಿದ್ದರು. ಆದರೆ ಆತನು ಈ ವಿಷಯದಲ್ಲಿ ಮೀರಿದ ಔದಾರ್ಯ ತೋರಿಸಿದ್ದಾನೆ! ಬ್ರಾಹ್ಮಣಿಯಿಂದ ಚಾಂಡಾಲಿಯವರೆಗೆ ಯಾರೇ ಸಹಗಮನ ಮಾಡಬಹುದು. ಎಂದು ಘೋಷಿಸಿದ್ದಾನೆ. ಮೃತ ಪತಿಯೊಡನೆ ಒಂದೇ ಅಗ್ನಿಯಲ್ಲಿ ಸಹಗಮನ ಮಾಡಿದರೆ, ಆ ಹೆಣ್ಣಿನ ಮಹಾಭ್ಯುದಯವಾಗುತ್ತದೆ ಎಂದು ವ್ಯಾಸ, ಅಂಗೀರಸ, ಶಂಖ, ಹಾರೀತ ಮೊದಲಾದ ಋಷಿ ವಾಕ್ಯಗಳನ್ನೆಲ್ಲ ಉದ್ಧರಿಸಿದ್ದಾನೆ. ಸತಿ ಹೋಗುವ ಸ್ತ್ರೀಯ ತಾಯಿಯ ಕುಲ, ತಂದೆಯ ಕುಲ, ಪತಿಯ ಕುಲದ ಯಾವತ್ತೂ ಪಿತೃಗಳು (ಗತಿ ಕಾಣದೇ ನರಕದಲ್ಲಿ ನುಲಿಯುತ್ತಿರುವವರು!) ಆ ಬಳಿಕ ಸ್ವರ್ಗದಲ್ಲಿ, ನಲಿಯುತ್ತಾರೆ! ಎಂದು ಹೊಗಳಿದ್ದಾನೆ. 'ಕೆಲವರು ಹೇಳುತ್ತಾರೆ - ಮೃತನನ್ನು ಬ್ರಾಹ್ಮಣಿಯು ಅನುಸರಿಸಬೇಕಾಗಿಲ್ಲ. ಅದು ಆತ್ಮಹತ್ಯೆ ಆಗುತ್ತದೆ, ಎಂದು. ಆದರೆ ಪತಿಯೊಡನೆ ಸಹಗಮನ ಮಾಡದಿದ್ದರೆ ಸ್ತ್ರೀಗೆ ಮೋಕ್ಷವಿಲ್ಲ .... ಅಸಂಖ್ಯ ಕೋಟಿ ವರ್ಷಗಳ ಕಾಲ ನರಕದಲ್ಲಿರುವ ಪಿತೃಗಳು ಸಹ, ಸ್ತ್ರೀಯ ಅಗ್ನಿ ಪ್ರವೇಶದಿಂದಾಗಿ ನೇರ ಸ್ವರ್ಗಕ್ಕೆ ಹೋಗುವದನ್ನು ಯಾಕೆ ತಪ್ಪಿಸಬೇಕು? ಎಂಬರ್ಥದಲ್ಲಿ ಸಹಗಮನವನ್ನು ಬಹಳೇ ಪ್ರೋತ್ಸಾಹಿಸಿದ್ದಾನೆ. ಧರ್ಮಶಾಸ್ತ್ರಗಳ ಮಹಾವಿದ್ವಾಂಸ, ಪಿ. ವಿ. ಕಾಣೆಯವರು, ವಿಜ್ಞಾನೇಶ್ವರನ ಸತಿ-ಸಮರ್ಥನೆ ವಿಶೇಷ ವಿನಂತಿಯಂತೆ ಭಾಸವಾಗುತ್ತದೆ! ಎಂದಿದ್ದಾರೆ. ಗರ್ಭಿಣಿ ಮತ್ತು ಚಿಕ್ಕಮಕ್ಕಳ ತಾಯಂದಿರು ಮಾತ್ರ ಸತಿ ಹೋಗಬೇಕಾಗಿಲ್ಲ! ಎಂದು ರಿಯಾಯತಿಯನ್ನು ಮಿತಾಕ್ಷರಕಾರ ತೋರಿದ್ದಾನೆ.

ಇಷ್ಟೆಲ್ಲ ಸಹಗಮನದ ಪರವಾಗಿ ವಾದಿಸಿದರೂ ಕರ್ನಾಟಕದಲ್ಲಿ ಹೆಚ್ಚಿನ ಮಹಿಳೆಯರು ಅದರ ಬಗ್ಗೆ ಒಲವು ತೋರಿಸಿದಂತಿಲ್ಲ. ಕ್ಷಾತ್ರಧರ್ಮ ಅದನ್ನು ಪುರಸ್ಕರಿಸುತ್ತಿತ್ತಾದ್ದರಿಂದ ಕ್ಷತ್ರಿಯರಲ್ಲಿ ಅದು ಪ್ರಚಾರದಲ್ಲಿತ್ತು. ಶೂದ್ರವರ್ಗದವರೂ ಆಳುವ ವರ್ಗಕ್ಕೆ ಸೇರಿದವರಾಗಿದ್ದರೆ ಸತಿ ಹೋಗಲು ಹಿಂದೆ ಮುಂದೆ ನೋಡುತ್ತಿರಲಿಲ್ಲವೆಂದು ಹೆಗ್ಗಡೆದೇವನ ಕೋಟೆಯ ಬೆಳತೂರಿನ ಶಾಸನದಿಂದ ತಿಳಿದುಬರುತ್ತದೆ. ದೇಕಬ್ಬೆಯೆಂಬಾಕೆ ನುಗುನಾಡನ್ನು ಆಳುತ್ತಿದ್ದ ರವಿಗನ ಮಗಳಾಗಿದ್ದಳು. ನವಿಲೆನಾಡಿನ ಮುಖ್ಯಸ್ಥ ಏಚನನ್ನು ಮದುವೆಯಾಗಿದ್ದಳು. ಚೋಳ ಅರಸನ ವ್ಯಕ್ತಿಗತ ವೈರದ ಪ್ರಸಂಗದಲ್ಲಿ ಅವನ ದಾಯಾದಿಗಳಿಂದ ಏಚನು ಕೊಲ್ಲಲ್ಪಟ್ಟ. ಈ ವಿಚಾರ ತಿಳಿದುಬಂದಾಗ ದೇಕಬ್ಬೆ ತನ್ನ ಊರಿನಲ್ಲೇ ಸತಿ ಹೋಗಲು ನಿರ್ಧರಿಸುತ್ತಾಳೆ. ಆಕೆಯ ತಂದೆ, ತಾಯಿ, ಸಂಬಂಧಿಕರೆಲ್ಲ ಸತಿ ಹೋಗಬೇಡ! ಎಂದು ಎಷ್ಟು ಗೋಗರೆದರೂ ಅವಳು ನಿರ್ಧಾರವನ್ನು ಬದಲಿಸುವುದಿಲ್ಲ. 'ತಾನು ಹುಟ್ಟಿದ ಮತ್ತು ಕೊಟ್ಟ ಕುಲಕ್ಕೆ ಕೆಟ್ಟ ಹೆಸರನ್ನು ತಾರೆನೆಂದು, ದಾನಗಳನ್ನೆಲ್ಲ ಕೈಕೊಂಡು, ಕೊಂಡವನ್ನು ನಿರ್ಮಿಸಿಕೊಂಡು ದೇವಲೋಕಕ್ಕೆ ಹೋದಳೆಂದು ಶಾಸನ ಸಾರುತ್ತದೆ. ಇದು 'ಮಿತಾಕ್ಷರ'ದ ಸಮಕಾಲೀನ ಶಾಸನವಾಗಿದೆ (೧೦೫೭).

ದೇಕಬ್ಬೆ ಕುಡಿಯರ ವಂಶಕ್ಕೆ ಸೇರಿದವಳು. ಶೂದ್ರಕುಲದ ಮಹಿಳೆ, ಸತಿಹೋದ ಮೊದಲ ನಿದರ್ಶನ ಆಕೆಯದೆಂದು ಆ ಶಾಸನವನ್ನು ಸಂಪಾದಿಸಿದ ರೆವರೆಂಡ್ ಕಿಟ್ಟೆಲ್ ಹೇಳುತ್ತಾರೆ. ಸತಿ ಹೋಗಲು ಸಮಾಜದ, ಬಳಗದ, ಆಪ್ತೇಷ್ಟರ ಪ್ರೋತ್ಸಾಹ ಇರಲಿಲ್ಲ ಎಂದು ಶಾಸನವು ಸಾರುತ್ತದೆ. ವರ್ಣಭೇದವಿಲ್ಲದೇ ಅಂದಿನ ಸ್ತ್ರೀ, ಸಹಗಮನ ಮಾಡಿ ಮಹಾಸತಿಯಾಗುವ ಆದರ್ಶ ಹೊಂದಿದ್ದಳು, ಎಂದೂ ಸೂಚಿಸುತ್ತದೆ. ಸ್ಮೃತಿ - ವ್ಯಾಖ್ಯಾನಕಾರರು ತಾವಾಗಿ ಹೊಸದನ್ನು ಪ್ರತಿಪಾದಿಸುವದಿಲ್ಲ. ರೂಢಿಯಲ್ಲಿರುವ ಪದ್ಧತಿಯನ್ನು ಎತ್ತಿ ಹಿಡಿಯುತ್ತಾರೆ. ಆದ್ದರಿಂದ ಸತಿ ಪದ್ಧತಿ ಕರ್ನಾಟಕದಲ್ಲಿ ಸಾಕಷ್ಟು ಬಲವಾಗಿದ್ದರಿಂದ ಅದನ್ನೆ ವಿಜ್ಞಾನೇಶ್ವರನು ಸಮರ್ಥಿಸಿದನೆಂದು ತೋರುತ್ತದೆ. ಮುಂದೆ ವಿಜಯನಗರ ಕಾಲದಲ್ಲೂ, ಆ ಬಳಿಕವೂ ಸತಿಪದ್ಧತಿ ಮುಂದುವರಿಯಿತು. ಬ್ರಾಹ್ಮಣ ಸ್ತ್ರೀಯರಲ್ಲೂ ಸತಿ ಹೋಗುವವರು ಇದ್ದರು. ವೈದಿಕ ಬ್ರಾಹ್ಮಣ, 'ಹೈದರ ನಾಮೆ' ಕರ್ತೃ ನಲ್ಲಪ್ಪನ ತಾಯಿ ಸತಿ ಹೋಗಿದ್ದಳು. ದಿವಾನ ಪೂರ್ಣಯ್ಯನು ಕ್ರಿ. ಶ. ೧೮೦೫ರಲ್ಲಿ ಬ್ರಾಹ್ಮಣ ವಿಧವೆಯೊಬ್ಬಳಿಗೆ ಸತಿ ಹೋಗಲು ಅನುಮತಿ ಇತ್ತ ದಾಖಲೆ ಇದೆ. ಮೊಗಲರ ಕಾಲದಿಂದ ಸತಿ ಹೋಗುವ ಮಹಿಳೆ ಆಯಾ ಊರಿನ ಮುಖ್ಯಸ್ಥನ ಅನುಮತಿ ಪಡೆಯಬೇಕಾಗಿತ್ತು. ಜಾನಪದ ಗೀತೆ, ಲಾವಣಿಗಳಲ್ಲಿ ಸತಿ ಹೋಗಲಿದ್ದ ಮಹಿಳೆ, ಊರ ಮುಖ್ಯಸ್ಥನ ಅನುಮತಿ ಪಡೆಯುತ್ತಿದ್ದ ಉಲ್ಲೇಖವಿದೆ.

ಸಜೀವವಾಗಿ ಹೆಂಡತಿಯನ್ನು ಗಂಡನ ಮೃತದೇಹದೊಂದಿಗೆ ಸುಡುವ ಅಥವಾ ಹೂಳುವ ಭಯಾನಕ ಪದ್ಧತಿಯನ್ನು ಈ ನಾಡನ್ನು ನೋಡಬಂದ ವಿದೇಶಿಯರು ಬರೆದು

ಇಟ್ಟಿದ್ದಾರೆ. ಪೋರ್ಚುಗೀಸ ಪ್ರವಾಸಿ ದುಆರ್ತೆ ಬಾರ್ಬೋಸಾನು (ಕ್ರಿ.ಶ. ೧೫೨೧) ತಾನು ಕಂಡಿರಬಹುದಾದ ಸಹಗಮನ ದೃಶ್ಯಗಳನ್ನು ವಿವರವಾಗಿ ಬರೆದಿಟ್ಟಿದ್ದಾನೆ. ಆತ್ಮ ಸಂತೋಷದಿಂದ ಬಡವರಾದವರು, ಅನುಕೂಲಸ್ಥರು, ಕೈಕೊಳ್ಳುತ್ತಿದ್ದ ಧಾರ್ಮಿಕ ವಿಧಿಗಳನ್ನು ಉಲ್ಲೇಖಿಸಿದ್ದಾನೆ. ಸಹಗಮನ ಮಾಡದ ಸ್ತ್ರೀಯರು ಮನೆಯಿಂದ ಅಟ್ಟಲ್ಪಟ್ಟು ದೇವದಾಸಿಯರಾಗುತ್ತಿದ್ದರು ಎಂಬ ಮಾತನ್ನು ಪೂರ್ತಿಯಾಗಿ ನಂಬುವಂತಿಲ್ಲ. ಆದರೆ ನೀರಿನ ಕೊಳಕ್ಕೆ ಧುಮುಕುವಷ್ಟು ಸಂತೋಷದಿಂದ ಮಹಿಳೆ ಉರಿಯುವ ಅಗ್ನಿಕುಂಡದಲ್ಲಿ ಧುಮುಕುತ್ತಿದ್ದುದನ್ನು, ನೆಂಟರಿಷ್ಟರೆಲ್ಲ ಕೈಯಲ್ಲಿದ್ದ ಎಣ್ಣೆ, ತುಪ್ಪ, ಒಣ ಸೌದೆಗಳನ್ನು ಆಕೆಯ ಮೇಲೆ ಹಾಕುತ್ತಿದ್ದುದನ್ನು, ನಂಬಬಹುದಾಗಿದೆ.

ಇಟಾಲಿಯನ್ ಪ್ರವಾಸಿ ಪೀಟ್ರೊ ಡೆಲ್ಲಾವಾಲೆಯು ಕ್ರಿ.ಶ. ೧೬೨೩ರಲ್ಲಿ ಇಕ್ಕೇರಿಯಲ್ಲಿ ಕಂಡ ಸತಿ ಹೋಗಲಿದ್ದ ಮಹಿಳೆಯ ವರ್ಣನೆ ಮಾತ್ರ ನೈಜವಾಗಿದೆ. ಆತ ಆಕೆ ಎರಡು ದಿನ ಮೆರವಣಿಗೆಯಲ್ಲಿ ಹೋದದ್ದನ್ನು ನೋಡಿದ್ದನಲ್ಲದೇ ಆಕೆಯನ್ನು ಕಂಡು ಮಾತನಾಡಿಸಿದ ವಿವರಗಳನ್ನು ಬರೆದಿಟ್ಟಿದ್ದಾನೆ. ಈಕೆ 'ತೆರ್ಲಿಂಗಾ' ತೆಲುಗು ಜಾತಿಯವಳಿದ್ದು ಗಂಡ ಡೋಲು ಬಾರಿಸುವ ಕೆಲಸ ಮಾಡುತ್ತಿದ್ದ. ಈಕೆಯಲ್ಲದೇ ಆತನಿಗೆ ಇನ್ನಿಬ್ಬರು ಹಿರಿಯ ಹೆಂಡಂದಿರಿದ್ದರು. ಈ ಗಿಯಕ್ಕಮನಿಗೆ ಎರಡು ಚಿಕ್ಕಮಕ್ಕಳೂ ಇದ್ದವು. ಆ ಮಕ್ಕಳನ್ನು ತನ್ನ ಸೋದರಮಾವ ಚೆನ್ನಾಗಿ ಸಾಕುತ್ತಾನೆಂದು ಭರವಸೆ ಹೊಂದಿದ್ದಳು. ಪೀಟ್ರೊ, ಆಕೆಯ ಸಂಬಂಧಿಕರನ್ನು ಮಾತನಾಡಿಸಿದ. ಅವರೆಲ್ಲ ಗಿಯಕ್ಕಮಳ ಸತಿ ಹೋಗುವ ನಿರ್ಧಾರದ ಬಗ್ಗೆ ಸಂತೋಷದಿಂದ ಇದ್ದರು. ಯಾರನ್ನಾದರೂ ಬಲಾತ್ಕಾರವಾಗಿ ಸತಿ ಹೋಗುವಂತೆ ಮಾಡುತ್ತಾರೆಯೇ? ಎಂದು ವಿಚಾರಿಸಿದಾಗ ಅಂಥ ಪ್ರಕರಣಗಳು ಕಡಿಮೆ ಎಂದು ಗೊತ್ತಾಯಿತು. ತಾನು ಮಾತ್ರ ಆತ್ಮಸಂತೋಷದಿಂದ ಬಲಿದಾನಕ್ಕೆ ಸಿದ್ಧಳಾದೆ. ಆದರಿಂದ ತನಗೂ ತನ್ನ ಮನೆತನಕ್ಕೂ ಕೀರ್ತಿ ಬರುವದೆಂದು ಗಿಯಕ್ಕಮ ಹೇಳುತ್ತಾಳೆ. ಈ ಕ್ರೂರ ಪದ್ಧತಿಯಿಂದ ನೊಂದ ಪೀಟ್ರೊ ಡೆಲ್ಲಾವಾಲೆ ಆಕೆಗೆ ಕವನದ ಅಶ್ರುತರ್ಪಣ ನೀಡುತ್ತಾನೆ. ತನ್ನಿಂದ ಚಿತೆಯೇರಲು, ಸೌದೆಕೊಳ್ಳಲು ಹಣದ ಭಿಕ್ಷೆ ಎತ್ತಿದ್ದನ್ನು ಉಲ್ಲೇಖಿಸಿದ್ದಲ್ಲದೇ, 'ತನ್ನಿಂದ ಸಾಧ್ಯವಾಗಿದ್ದರೆ, ಆಕೆ ಸಾಯುವುದನ್ನು ತಪ್ಪಿಸುತ್ತಿದೆ' ಎಂದು ಮರುಗಿದ್ದಾನೆ.

ಬಲವಂತದ ಸಹಗಮನ ಹೇರಿದ ಪ್ರಸಂಗಗಳು ಕರ್ನಾಟಕದ ಇತಿಹಾಸದಲ್ಲಿ ದೊರೆಯುವದಿಲ್ಲ. ಮನೆತನದ ಮರ್ಯಾದೆ ಹೆಚ್ಚಿಸುವ ಯತ್ನ ಹಾಗೂ ದೈವತ್ವವನ್ನು ಪಡೆಯು ಹಂಬಲ. ಇವೆರಡೂ ಅಂದಿನ ಸ್ತ್ರೀಯರನ್ನು ಸತಿ ಹೋಗಲು ಪ್ರೇರೆಪಿಸಿರಲು ಸಾಕು. ಮಾನಸಿಕ ಸಿದ್ಧತೆಯನ್ನು ಮಾಡಿಕೊಂಡವರು ಕಲ್ಲೆದೆಯಿಂದ, ಸ್ವಯಂ ಪ್ರೇರಣೆಯಿಂದ, ಚಿತೆಯೇರುತ್ತಿದ್ದರು. ಸಮಾಜದವರು, ಕುಟುಂಬದವರು, ಒತ್ತಾಯ ಮಾಡುವ ಅಮಾನುಷವಾಗಿ ಸಾಯಿಸುವ ಸಂದರ್ಭ ಬರಲಿಲ್ಲ. ಬಂಗಾಲ ಪ್ರಾಂತದ ಮೇಲುವರ್ಗದವರಲ್ಲಿ ಒತ್ತಾಯದ ಸತಿಹೋಗುವದಕ್ಕೆ ಆಸ್ತಿ ಮತ್ತು ಬಂಗಾರ ಕಾರಣವಾಗಿತ್ತು. ಏಕೆಂದರೆ ಅಲ್ಲಿ

ಜೀಮೂತವಾಹನನ 'ದಾಯಭಾಗ'ಪದ್ಧತಿ ಪ್ರಚಾರದಲ್ಲಿತ್ತು. ಅವಿಭಕ್ತ ಕುಟುಂಬದಲ್ಲಿ ಮೃತಪಟ್ಟವನ ಪಾಲು ಆ ಬಳಿಕ ಆತನ ವಿಧವೆಗೆ ಸಂದಾಯವಾಗುತ್ತಿತ್ತು. ಇದನ್ನು ತಪ್ಪಿಸಲು ಇತರ ಸೋದರರು. ಕುಟುಂಬದ ಸದಸ್ಯರು ಕಾತರರಾಗಿರುತ್ತಿದ್ದದ್ದು ಆಶ್ಚರ್ಯವಲ್ಲ. ಹೀಗಾಗಿ ದೊಡ್ಡ ಪ್ರಮಾಣದಲ್ಲಿ ಬ್ರಾಹ್ಮಣರಲ್ಲಿ ಸತಿ ಪದ್ಧತಿ ಅಲ್ಲಿ ರೂಢಿಯಲ್ಲಿತ್ತು. ರಾಜಾರಾಮ ಮೋಹನರಾಯ್‌ರಂಥ ಸುಧಾರಕರು ಮತ್ತು ಹೆಚ್ಚಿನ ಸಹಾನುಭೂತಿಯ ಗವರ್ನರ ಜನರಲ್ ಲಾರ್ಡ ಬೆಂಟಿಂಕ್ ಪ್ರಯತ್ನದಿಂದಾಗಿ 1829ರಲ್ಲಿ ಸತಿ ತಡೆಯಾಜ್ಞೆ ಜಾರಿಗೆ ಬಂದಿತು.

ಇಲ್ಲಿ ನೆನಪಿಡಬೇಕಾದದ್ದು, ದಕ್ಷಿಣದ ರಾಜ್ಯಗಳಲ್ಲಿ ಈ ಕಾಯದೆ ಬಂದಾಗ, ಒಂದಿಷ್ಟೂ ಪ್ರತಿಭಟನೆ ಬರಲಿಲ್ಲ! ಇದು ಧಾರ್ಮಿಕ ವಿಧಿಯಾಗಿ ರೂಪಗೊಂಡಿರಲಿಲ್ಲ. ಜನಪ್ರಿಯವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಸ್ತ್ರೀ ಧನಕ್ಕಾಗಿ ಹೆಣ್ಣನ್ನು ಬಲವಂತವಾಗಿ ಸುಡುವ ಪದ್ಧತಿಯಿದ್ದ ಭಾರತದ ಪೂರ್ವಭಾಗದಲ್ಲೂ ಪ್ರತಿಭಟನೆ ಸೌಮ್ಯರೂಪದ್ದಾಗಿತ್ತು.

ವೇದ ಸಮ್ಮತಿಯಿಲ್ಲದ ಈ ಅನಾಗರಿಕ ಪದ್ಧತಿಗೆ ರಾಷ್ಟ್ರೀಯ ಪುರಸ್ಕಾರ ದೊರೆತದ್ದು ವಿಸ್ಮಯದ, ಆದರೆ ಆಘಾತಕಾರಿ ಪ್ರಸಂಗ. ಶತಮಾನಗಳ ಹಿಂದೆಯೂ ಸಹಗಮನಕ್ಕೆ ವೇದ ಪ್ರಾಮಾಣ್ಯ ಪ್ರಶ್ನಿಸಿದವರು ಇದ್ದರು. ಆಗ ಯಾವನೋ ಪಂಡಿತನು ಋಗ್ವೇದದ XVIIIನೇ ಅಧ್ಯಾಯದ ಸಂಬಂಧಿತ ಋಕ್ಕನ್ನು ಪ್ರಮಾಣವಾಗಿ ಹೇಳಿದ. ಮೃತನ ಪತ್ನಿಯನ್ನು ಆತನ ದಹನ ಕ್ರಿಯೆಯ ಸಂದರ್ಭದಲ್ಲಿ ಮುಂದಾಗಿ ಕರೆದೊಯ್ಯುವಾಗ ಅಗ್ರೆ ಶಬ್ದವನ್ನು 'ಅಗ್ನೆ'ಎಂದು ಮಾರ್ಪಡಿಸಲಾಯಿತು. ವೇದಗಳಲ್ಲಿ ಪ್ರಕ್ಷೇಪಗಳಿಲ್ಲ! ಎಂದು ವಾದಿಸುವವರ ಗಮನ ಅತ್ತ ಹರಿಯಲಿಲ್ಲವೆಂದು ತೋರುತ್ತದೆ. ಬ್ರಾಹ್ಮಣ -ಅಬ್ರಾಹ್ಮಣ, ಕ್ಷತ್ರಿಯ-ಕೃಷಿಕ-ಕಾರ್ಮಿಕರೆಂಬ ವರ್ಗಭೇದವಿಲ್ಲದೇ ಸಾದಾಸತಿಯೂ ಮಹಾಸತಿಯಾಗಬಹುದಾಗಿದ್ದ, ಮಹಾಪುಣ್ಯವನ್ನು ನಿರಂತರವಾಗಿ ಪಡೆಯಬಹುದಾಗಿದ್ದ, ಮೂಢ ನಂಬಿಕೆ ಬಲವಾಗಿ ಬೆಳೆದು ಬಿಟ್ಟಿತು. ಎಳೆಯ ಹುಡುಗಿಯರಿಂದ ಹಣ್ಣುಮುದುಕಿಯವರೆಗೆ ಚಿತೆಯನ್ನೇರಿ ಸೂರ್ಯಲೋಕದಲ್ಲಿ ಪತಿಯನ್ನು ಪುನಃ ಪಡೆದು, ಶಾಶ್ವತ ಸುಮಂಗಲೆಯಾಗಿ ಬಾಳುವ ಕನಸನ್ನು ನನಸಾಗಿಸುವ, ಅದಕ್ಕಾಗಿ ಸುಟ್ಟುಕೊಂಡು ಸಾಯುವ "ಸುಲಭೋಪಾಯ" ತುಂಬ ಆಕರ್ಷಣೀಯವಾಯಿತು.

ಕ್ಷಾತ್ರ ಧರ್ಮ ಪರಿಪಾಲನೆಯ ನೆವದಲ್ಲಿ 'ಜೋಹರ್' (ಸಾಮೂಹಿಕ ಚಿತಾರೋಹಣ) ಹಾಗೂ ಸಹಗಮನ, ಅನುಮರಣಗಳು ರಾಜಸ್ಥಾನದಲ್ಲಿ ಹಲವು ಶತಮಾನ ಮುಂದುವರಿದವು. ಬಂಗಾಲದಲ್ಲಿ ಅವಿಭಜಿತ ಕುಟುಂಬಗಳ ಧನ, ಆಸ್ತಿಯ ಲೋಭದಿಂದಾಗಿ, ಗೃಹಜೀವನದ ಭಾಗವಾಗಿ, ಕಡ್ಡಾಯದ ಸಹಗಮನ ಮುಂದುವರಿದಿತ್ತು. ಇವೆರಡೂ ಅನಿಷ್ಟಗಳು ಕಾಡದಿದ್ದ ಕರ್ನಾಟಕದಲ್ಲಿಯೂ ಸತಿ ಸಂಪ್ರದಾಯ ಗಮನಾರ್ಹವಾದದ್ದಿದೆ. ಆದರೆ ಅದು ಸ್ವಯಂಪ್ರೇರಿತ ಹಾಗೂ ದೈವತ್ವ ಪಡೆಯಲು ಹಾತೊರೆಯುತ್ತಿದ್ದ ಕೆಲ ಕೆಚ್ಚೆದೆಯ ಕನ್ಯೆಯರ ಕುರುಹು ಎಂದು ಹೇಳಬಹುದು. ಮಹಾಸತಿ ದೇವಾಲಯಗಳು ಸಾಕಷ್ಟಿವೆ.

ಕನ್ನಡ ನಾಡಿನ ಉದ್ದಗಲಕ್ಕೂ ಮಾಸ್ತಿಕಲ್ಲುಗಳು ಹರಡಿಕೊಂಡಿವೆ. ಭೂಮಿಯಾಳದಲ್ಲಿ

ಹುದುಗಿಕೊಂಡವು, ಅದೆಷ್ಟೋ! ಅನುಮರಣ ಕೈಕೊಂಡವರ ನೆನಪಿಗೆ ಮಾಸ್ತಿಕಲ್ಲು ನಿಲ್ಲಿಸದೇ ಇರುವ ಸಾಧ್ಯತೆ ಇದೆ. ಇಷ್ಟಾದರೂ ಉತ್ತರದ ರಾಜ್ಯಗಳಿಗಿಂತ ದಕ್ಷಿಣದಲ್ಲಿ, ಅದೂ ಕರ್ನಾಟಕದಲ್ಲಿ ಸಹಗಮನ ಮಾಡಿದವರ ಸಂಖ್ಯೆ ಕಡಿಮೆಯೆಂದೇ ವಿದ್ವಾಂಸರು ಒಪ್ಪುತ್ತಾರೆ. ಜೀವನ ಪರ್ಯಂತ ವೈಧವ್ಯದ ಅಸಹನೀಯ ದಾರುಣ ಜೀವನ ಎದುರಿಸಲಾಗದವರು, ಗಟ್ಟಿ ಮನಸ್ಸಿನಿಂದ ಸತಿ ಹೋಗಲು ಸಕಲ ಸಿದ್ಧತೆ ಮಾಡಿಕೊಂಡು ಧೈರ್ಯದಿಂದ ಚಿತೆಯೇರಿ ಅಮರತ್ವ ಪಡೆಯುವ ಆದರ್ಶದಿಂದ ಮಾನಸಿಕ ತಯಾರಿ ಮಾಡಿಕೊಂಡಿರುತ್ತಿದ್ದರು. ಬಲಾತ್ಕಾರದ ಸಹಗಮನದ ನಿದರ್ಶನಗಳು ಕಂಡುಬರುವುದಿಲ್ಲ.

ಕಷ್ಟಕಾರ್ಪಣ್ಯದಿಂದ, ದುಡಿಮೆಯಿಂದ ಬದುಕುವ ವರ್ಗಗಳಲ್ಲಿ ಗಂಡು ಹೆಣ್ಣಿನ ಸಮಾನತೆ ಕೆಲಮಟ್ಟಿಗೆ ಇರುವುದುಂಟು. ಇಂಥವರಲ್ಲಿ ಗಂಡನು ಸತ್ತರೆ ಅಥವಾ ತ್ಯಜಿಸಿದರೆ ಮರುಮದುವೆಯ ಅವಕಾಶ ಇರುವುದುಂಟು. ಕುಟುಂಬದವರೇ ಇಂಥ 'ಉಡುಕಿ' ವಿವಾಹದ ವ್ಯವಸ್ಥೆ ಮಾಡುತ್ತಿದ್ದರು.

ಸಹಗಮನ ಮಾಡದೆಯೇ ಧಾರ್ಮಿಕ ಜೀವನ ಕೈಕೊಂಡು ದಾನಾದಿಗಳನ್ನು ಮಾಡುತ್ತ ಸಮಾಜಸೇವೆ ಸಲ್ಲಿಸಿದ ವಿಧವೆಯರಾದ ಮಹಿಳೆಯರ ಹೆಸರುಗಳು ಶಾಸನಗಳಲ್ಲಿ ಸಿಗುತ್ತವೆ. ಅತ್ತಿಮಬ್ಬೆ ಅದ್ವಿತೀಯಳಾಗಿದ್ದಳು. ಜಕ್ಕಿಯಬ್ಬೆ, ಆಡಳಿತದಲ್ಲಿ ಆದರ್ಶಪ್ರಾಯಳಾದಳು. ತಿಪ್ಪವ್ವೆ ಎಂಬಾಕೆ, ತನ್ನ ಪತಿಯ ಸಾಲವನ್ನು ಆತನ ಮರಣಾನಂತರ ತೀರಿಸಿದಳು. ಪತಿಯ ನೆನಪಿಗೆ ವೀರಗಲ್ಲುಗಳನ್ನು ನಿಲ್ಲಿಸಿದವರಿದ್ದಾರೆ. ಇನ್ನೇಷ್ಟೋ ಜನ ದೇವಾಲಯ ಕಟ್ಟಿಸುವದರಲ್ಲಿ, ಜೀರ್ಣೋದ್ಧಾರ ಮಾಡಿಸುವಲ್ಲಿ, ಅರವಟ್ಟಿಗೆ, ಬಾವಿ ಅಗೆಸಿ ಲೋಕಕಲ್ಯಾಣದಲ್ಲಿ ಪತಿಯ ಮರಣಾನಂತರ ಸಮರ್ಥ ರೀತಿಯಲ್ಲಿ ಆಳಿ, ಪ್ರಜೆಗಳಿಗೆ ಯೋಗ್ಯ ಮಾರ್ಗದರ್ಶನ ನೀಡಿದ ಅನೇಕ ರಾಣಿಯರು ಆಗಿ ಹೋಗಿದ್ದಾರೆ.

• • •

೧೪. ಸತಿಯ ಸಿಂಗಾರ

ಮಹಾಸತಿಯ ಗೌರವಾರ್ಥ ಸ್ಮಾರಕಗಳನ್ನು ನಿಲ್ಲಿಸುವ ಪದ್ಧತಿ ದೇಶದಲ್ಲೆಲ್ಲ ಇದ್ದುದನ್ನು ಕಾಣಬಹುದು. ಗುಜರಾಥ ಮತ್ತು ಮಧ್ಯಪ್ರದೇಶದ ಕೆಲವು ಜನಾಂಗಗಳಲ್ಲಿ ಕೊರಡನ್ನು ಇದಕ್ಕಾಗಿ ಬಳಸುವದರಿಂದ ಕಾಲಕ್ರಮೇಣ ಅವು ಹುಳ-ಹುಪ್ಪಡಿಗಳಿಗೆ ಆಹುತಿಯಾಗಿ ನಿರ್ನಾಮವಾಗಿ ಬಿಡುವವು. ನಮ್ಮ ರಾಜ್ಯದಲ್ಲಿ ಶಿಲೆಯನ್ನೇ ಹೆಚ್ಚಾಗಿ ಬಳಸಿದ್ದರಿಂದ ಶತಕಗಳಿಂದ ಅವು ಅಚ್ಚಳಿಯದೇ ಉಳಿದುಕೊಂಡಿವೆ. ಅನೇಕ ಸ್ಮಾರಕಗಳಲ್ಲಿ ಸಹಗಮನ ಮಾಡಿಕೊಳ್ಳುವ ಸನ್ನಿವೇಶವನ್ನು ಯಥಾವತ್ತಾಗಿ ಚಿತ್ರಿಸಲಾಗಿದೆ.[1] ಮಂಗಳವಾದ್ಯಗಳು ಮೊಳಗುತ್ತಿರುವಾಗ, ಪರಿವಾರದವರು ಅಗ್ನಿ ಕುಂಡಕ್ಕೆ ಕೊರಡು, ಕರ್ಪೂರ, ಎಣ್ಣೆ ಸೇರಿಸಿ ಪ್ರಜ್ವಲಿಸುವಂತೆ ಮಾಡುತ್ತಿದ್ದರು. ಸತಿ ಹೋಗಲಿದ್ದ ಸ್ತ್ರೀ, ಸರ್ವಾಂಗಭೂಷಿತೆಯಾಗಿ ಗೆಲುವಾಗಿಯೇ ಅಗ್ನಿಪ್ರವೇಶ ಮಾಡುತ್ತಿದ್ದಳು. (೧). ಈ ಸ್ಮಾರಕಶಿಲೆಗಳನ್ನು ನಿಲ್ಲಿಸುವ ಪರಿಪಾಠ ಇದ್ದುದರಿಂದಲೇ ನಮಗೆಲ್ಲ ಸತಿ, ಸಹಗಮನ ಮತ್ತು ಅವರ ಸಿಂಗಾರದ ಬಗ್ಗೆ ಸಚಿತ್ರ ಮಾಹಿತಿ ಸಿಗುವಂತಾಗಿದೆ. ಸ್ಥಿತಿವಂತರು ಮಹಾಸತಿ ಕಲ್ಲುಗಳನ್ನು ತಾವೇ ನಿಲ್ಲಿಸುತ್ತಿದ್ದರು. ಇದು ಪುಣ್ಯದ ಕೆಲಸವೆಂದು ನಂಬಿದ ಊರವರು ಇತರರಿಗೆ ವಿವಿಧ ರೀತಿಯಲ್ಲಿ ಸಕ್ರಿಯ ನೆರವು ನೀಡುತ್ತಿದ್ದರು. ಉತ್ತಮ ಶಿಲ್ಪಿಗಳ ಸೇವೆ ಲಭ್ಯ ಇರುವಲ್ಲಿ ಅತಿ ಸುಂದರ ಸ್ಮಾರಕಗಳನ್ನು ಕಾಣಬಹುದಾದರೂ ಕಾಡು-ಮೇಡುಗಳಲ್ಲಿ, ಕುಗ್ರಾಮಗಳಲ್ಲಿರುವವುಗಳು, ಕೇವಲ ಧಾರ್ಮಿಕ ವಿಧಿಗಾಗಿ ನಿಲ್ಲಿಸಿದವುಗಳು ಎಂಬುದು ನೋಡಿದಾಕ್ಷಣ ಅನಿಸಿಬಿಡುವುದು. ಹೆಚ್ಚಿನ ಸ್ಮಾರಕಗಳನ್ನು ತೀರ ಪರಿಚಿತರ, ಆತ್ಮೀಯರ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ಕಟೆಯಲಾಗುತ್ತಿದ್ದರಿಂದ, ಸತಿಯ ವ್ಯಕ್ತಿತ್ವ, ರೂಪ-ಲಾವಣ್ಯಗಳತ್ತ ಗಮನ ಕೊಡುತ್ತಿದ್ದಿರಬೇಕು. ಶಾಸನಗಳು ಈ ಮಾತನ್ನು ಪುಷ್ಟೀಕರಿಸುತ್ತವೆ. ದೇಕಬ್ಬೆಯ ತಂದೆ ರವಿಗ, ಚಿಕ್ಕಬ್ಬೆಯ ತಂಗಿ ಜಾಬೆ, ಬಮ್ಮಕ್ಕನ ಮಗ ಮಲ್ಲೆಯ, ಕಾಮಾಯಿಯ ಮಾವ ಕೀರ್ತಿಗೊಂಡ ಮೊದಲಾದವರು ತಮ್ಮ ಅತ್ಯಂತ ಆಪ್ತರ ಸವಿನೆನಪಿಗಾಗಿ ಮಾಸ್ತಿಕಲ್ಲುಗಳನ್ನು ಸ್ವತಃ ಕೊರೆಯಿಸಿದರು.[2]

---

1. ಎಪಿಗ್ರಾಫಿಯ ಕರ್ನಾಟಿಕಾ ೪, ಹೆಗ್ಗಡದೇವನ ಕೋಟೆ ೧೮ (ಬೆಳತೂರು)
2. ಅದೇ, ೮, ಸೊರಬ ೪೫೭ (ಬೆನ್ನೂರು)

ಸೂರ್ಯ-ಚಂದ್ರರ ಚಿತ್ರ ಹೊತ್ತು ನಿಂತಂಥವು ಮಾಸ್ತಿಕಲ್ಲುಗಳ ಆಡಂಬರ ರಹಿತ ಶಿಲಾಸ್ತಂಭಗಳು (೨). ಅನೇಕ ದೇವಾಲಯಗಳ ಹೊರಾಂಗಣದಲ್ಲಿ ಇವುಗಳು ಇದ್ದು, ಭಕ್ತಾದಿಗಳಿಗೆ ಅವುಗಳು ಏನು ಎಂದು ತಿಳಿಯದಿದ್ದರೂ ಪ್ರತಿದಿನ ಕುಂಕುಮ, ಅರಿಷಿಣ ಹಾಗೂ ಎಂದಾದರೊಮ್ಮೆ ಎಣ್ಣೆ ತೀಡಿ ಸನ್ಮಾನಿಸುತ್ತಾರೆ. ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಗುಡಿಗಾರರಿಂದ ಕೊರಡಿನ ಸ್ತಂಭ ಮಾಡಿಸುವ ಪರಿಪಾಠವೂ ಇತ್ತು. ಅವುಗಳು ಮಳೆ-ಗಾಳಿ ಬಿಸಿಲುಗಳಿಗೆ ಹಾಳಾಗಬಾರದೆಂದು ಪ್ರತಿವರ್ಷ ಅವುಗಳಿಗೆ ಬಣ್ಣ ಬಳೆಯುವ ಪರಿಪಾಠವೂ ಬೆಳೆದುಬಂದಿದೆ (೩). ಕಂಬದ ನೆತ್ತಿಯ ಮೇಲೆ ಕಲಶ ಮತ್ತು ಸತಿಯ ಬಲಗೈ ಜೋಡಿಸಿದರೆ ಅದು 'ಒಕ್ಕೈ' ಸ್ಮಾರಕ ಎನಿಸಿಕೊಳ್ಳುತ್ತದೆ. (೪) ಒಕ್ಕೈಗಳಲ್ಲಿ ಕಂಡುಬರುವ ವೈವಿಧ್ಯಕ್ಕೆ ಕೊನೆ-ಮೊದಲಿಲ್ಲ. ಆರಕ್ಷಕರು ವಾಹನ ನಿಲ್ಲಿಸಲು ಮಾಡುವಂತಹ ಕೈಯ ಸಂಕೇತವನ್ನು ಗುರುತಿಸಬಹುದು (೫) ಕೆಲವು ಕಡೆ ಕಂಬ ಮತ್ತು ಕೈಗಳ ಮೇಲೆ ಸುಂದರವಾದ ಹೂಬಳ್ಳಿಗಳನ್ನು ಕೆತ್ತಲಾಗಿದೆ. (೬). ಇದು ಸುಮಂಗಲೆಯರ ಸಂಕೇತ ಇದ್ದರೂ ಇರಬಹುದು. ಅಪರೂಪಕ್ಕೆ ತಾಳಿಯಮಾಂಗಲ್ಯ, ಕಂಠಿ, ಸರಿಗೆಗಳು, ಕೈಯ ಆಭರಣಗಳನ್ನು ಕಾಣಬಹುದು. (೭). ಬಹುಪತ್ನಿಯರು ಸತಿಹೋದಾಗ ಪ್ರತಿಯೊಬ್ಬರಿಗೂ ಒಕ್ಕೈ ನಿಲ್ಲಿಸಬಹುದು. ಇಲ್ಲವೇ ಒಂದೇ ಒಂದು ಸ್ತಂಭಕ್ಕೆ ಎರಡು, ಮೂರು ಬಲಗೈ ಜೋಡಿಸಿ 'ಇಕ್ಕೈ', 'ಮುಕ್ಕೈ' (೮) ಎಂದು ಕರೆಯಬಹುದು. ಇವುಗಳನ್ನು ಸ್ವತಂತ್ರವಾಗಿ ಚಿತ್ರಿಸಬಹುದು, ಇಲ್ಲವೇ ಪತಿಯ ವೀರಗಲ್ಲಿನಲ್ಲಿಯೇ ಸೇರಿಸಿರಬಹುದು. ದಂಪತಿಗಳ ಜೀವನದ ಅನೇಕ ಘಟನೆಗಳನ್ನು ಒಂದರಿಂದ ಏಳು ಸ್ತರಗಳಲ್ಲಿ ಮೂಡಿಸಿರುವದು ಸಾಮಾನ್ಯ. ಇವುಗಳು ಅಜರಾಮರವಾಗಿರಬೇಕೆಂದು ಸೂರ್ಯ-ಚಂದ್ರರ ಅಗ್ನಿಕುಂಡದಲ್ಲಿ ಸತಿಹೋಗುವ ಸಿದ್ಧತೆಯಲ್ಲಿರುವದನ್ನು ಪ್ರಥಮಹಂತದಲ್ಲಿ ಚಿತ್ರಿಸಲಾಗಿದೆ.

ಸಕಲ ಸಿಂಗಾರ ಹೊತ್ತು ಬಂದ ನವವಧು, ವರನಿಗೆ ಅತ್ಯಾಕರ್ಷಕವಾಗಿ ಕಂಡರೆ ಆಶ್ಚರ್ಯವಿಲ್ಲ. ಇದರಂತೆ ಸೂರ್ಯಲೋಕದಲ್ಲಿ ತನಗಾಗಿ ಕಾಯುತ್ತಿರುವ ಪತಿಯನ್ನು ಎದುರುಗೊಳ್ಳಲು ಹೊರಟ ಸತಿಗೆ ಪತಿಯನ್ನು ಎದುರುಗೊಳ್ಳುವ ಸಂಭ್ರಮದಲ್ಲಿ ತಾನು ಸರ್ವಾಂಗಭೂಷಿತೆಯಾಗಿ, ಸುಂದರಿಯಾಗಿ ಕಾಣಬೇಕೆಂಬ ಉತ್ಕಂಠೆಯಾದರೆ ಸೋಜಿಗವೇನಿಲ್ಲ. ಸತಿಯ ಈ ಸುಂದರ ರೂಪವನ್ನೇ ಅವಳ ಆಪ್ತೇಷ್ಟರು ಕಲಾಕಾರನಿಂದ ಮಾಸ್ತಿಕಲ್ಲಿನಲ್ಲಿ ಮೂಡಿಬರುವಂತೆ ಪ್ರೇರೇಪಿಸುತ್ತಿದ್ದರು ಎಂಬುದರಲ್ಲಿ ಅನುಮಾನವಿಲ್ಲ. ಈ ಕಾರಣದಿದಂದಲೇ ಬಹುಸಂಖ್ಯಾತ ಸತಿಯರು ಯೌವನವತಿಯರಾಗಿ, ಸುಂದರಿಯಾಗಿ ಚಿತ್ರಿತರಾಗಿದ್ದಾರೆ. (೯). ಸತಿ ಹೋದವರೆಲ್ಲ ಮಾಟವಾದ ಮೈಕಟ್ಟು, ಉಬ್ಬೆದೆ, ಸಿಂಹಕಟಿ, ತಾರುಣ್ಯವನ್ನು ಹೊಂದಿರುತ್ತಿದ್ದರು. (೧೦) ಎಂದು ನಂಬುವದು ಕಷ್ಟ. ಇಕ್ಕೇರಿಯ ಗಿಯಕ್ಕಮಳಿಗೆ ಆರೇಳು ವರ್ಷದ ಮಗ ಮತ್ತು ಚಿಕ್ಕಮಗಳು ಇದ್ದರೆಂದು ಪಿಯೆತ್ರೊ ಡೆಲ್ಲಾ ವಾಲ್ಲೆ ಬರೆದಿಟ್ಟಿದ್ದಾನೆ. ಅದರಂತೆ ಜಿಲ್ಲಾಧಿಕಾರಿ ಸ್ಲೀಮನ್‌ನಿಂದ ಸತಿ ಹೋಗಲು ಅನುಮತಿ ಪಡೆದ ಉಮೇದ್‌ಸಿಂಗನ ಪತ್ನಿಯು ಅರವತ್ತರ ಗಡಿದಾಟಿದ ಮುದುಕಿಯಾಗಿದ್ದಳು. ದುರ್ದೈವದಿಂದ ಇಂಥವರ ಮಾಸ್ತಿಕಲ್ಲುಗಳು ಸಿಗುತ್ತಿಲ್ಲ. ಒಕ್ಕೈ, ಇಕ್ಕೈ, ಮುಕ್ಕೈಗಳನ್ನು ರಚಿಸುವದಕ್ಕಾಗಿ ಸತಿಯರ

ಕೈಗಳಿಗೆ ಹಳದಿ ಇಲ್ಲವೇ ಕುಂಕುಮ ಸವರಿ ಶಿಲೆಯ ಮೇಲೆ ಅವಳ ಹಸ್ತಮುದ್ರೆ ಪಡೆಯುತ್ತಿದ್ದರೆಂದು ನಂಬುವವರೂ ಇಲ್ಲದಿಲ್ಲ.

ಸತಿಯರ ವಿವರವಾದ ಶಿರೋಲಂಕಾರಗಳನ್ನು ಸ್ಮಾರಕಗಳಲ್ಲಿ ಗುರುತಿಸಬಹುದು. ಸಾಮಾನ್ಯವಾಗಿ ಕೇಶರಾಶಿಯನ್ನು ಬಲಮುಡಿಯಾಗಿ ಕಟ್ಟಿಕೊಂಡರೂ (೧೧) ಕಾಮಲಾಪುರದ ಸತಿ ಎಡಮುಡಿ ಹೊಂದಿದ್ದಾಳೆ. ಶಿವಮೊಗ್ಗೆಯ ಜೋಡಿ ಪತ್ನಿಯರ ಮಾಸ್ತಿಕಲ್ಲಿನಲ್ಲಿ ಒಬ್ಬಳು ಎಡಮುಡಿ, ಇನ್ನೊಬ್ಬಳು ಬಲಮುಡಿಯಲ್ಲಿದ್ದಾರೆ. ತಲೆಯ ಎತ್ತರಕ್ಕೆ ಇಲ್ಲವೇ ಬೆನ್ನಿಗೆ ಆತುಕೊಳ್ಳುವಂತಹ ಮುಡಿಗಳನ್ನು ಗುರುತಿಸಬಹುದು. ಇವು ಸದಾಕಾಲ ಸ್ವಸ್ಥಾನದಲ್ಲಿ ಇರುವಂತೆ ಬಾಳೇನಾರು ಇಲ್ಲವೇ ನೂಲಿನಿಂದ ಬಿಗಿದುಕೊಂಡಂತೆ ಭಾಸವಾಗುತ್ತದೆ. ಬೊಮ್ಮನಹಳ್ಳಿಯ ಶಿಲ್ಪಿ ತನ್ನ ಚಾತುರ್ಯವನ್ನು ತೋರಿಸಲು, ಮಾಸ್ತಿಕಲ್ಲಿನ ಹಿಂಬದಿಗೆ ಅವಳ ಉದ್ದ ಕೇಶರಾಶಿಯನ್ನು ಸುಂದರವಾದ ಹೆರಳನ್ನಾಗಿ ಹೆಣೆದಂತೆ ಕೆತ್ತಿ (೧೨) ಅದಕ್ಕೆ ಗೊಂಡೆಯನ್ನೂ ಕಾಣಿಸಿದ್ದಾನೆ. ಪೂಜಾಕಾಲದಲ್ಲಿ ಸತಿಗೆ ಹೂಹಾರಗಳನ್ನು ಜೋಡಿಸುವದಕ್ಕಾಗಿ ಕಲ್ಲಿಗೆ ನಾಲ್ಕು ತೂತುಗಳನ್ನು ನಿರ್ಮಿಸಲಾಗಿದೆ. ಸತಿಯು ಮುಡಿದ ಹೂಗಳು ಹೊಂಬಣ್ಣದವು ಇಲ್ಲವೇ ಬಿಳಿಯವಾಗಿರುತ್ತಿದ್ದವು ಎಂದು ಪ್ರವಾಸಿಗಳ ವರ್ಣನೆಯಿಂದ ತಿಳಿಯುತ್ತದೆ. ಕೇದಿಗೆಗೆ ಹೆಚ್ಚಿನ ಪ್ರಾಧಾನ್ಯವಿದ್ದಂತೆ ತೋರುತ್ತದೆ. ಹೊಸಹಳ್ಳಿಯ ಸತಿ ಕಮಲದಳಗಳಂತೆ ವರ್ತುಲಾಕಾರದಲ್ಲಿ ಮುಡಿದರೆ (೧೩) ಬೊಮ್ಮನಹಳ್ಳಿಯಾಕೆ ಯಕ್ಷಗಾನದ ಸ್ತ್ರೀ ವೇಷದ ಶಿರೋಲಂಕಾರದಂತೆ ಭವ್ಯವಾದುದನ್ನು ಧರಿಸಿದ್ದಾಳೆ. (೧೪). ಉದಯಿಸುವ ಸೂರ್ಯ, ಹುಣ್ಣಿಮೆಯ ಚಂದ್ರ ನೆನಪಾಗುವಂತಹ ಶಿರೋಲಂಕಾರಗಳನ್ನು ಕೇದಿಗೆಯಿಂದ ರಚಿಸಿಕೊಂಡವರೂ ಇಲ್ಲದಿಲ್ಲ. ಧನಿಕರು, ವಿಶೇಷ ಕಲಾಭಿರುಚಿಯುಳ್ಳರು ಗುಡಿಗಾರರಿಂದ ಶ್ರೀಗಂಧದ ತೆಳುವಾದ ಕೇದಿಗೆಯಂತಹ ಪಕಳೆಗಳುಳ್ಳ ಶಿರೋಲಂಕಾರವನ್ನು ಬೀಸಣಿಗೆಯಂತೆ (೧೫) ಎರಡು ಸ್ತರಗಳಲ್ಲಿ ಮುಡಿದಿರುತ್ತಿದ್ದರು. ಕೆಲವರಾದರೂ ಕೇದಿಗೆ ಎಸಳುಗಳನ್ನು ಬೆಂಡು ಮುಂತಾದಕ್ಕೆ ಜೋಡಿಸಿ ಧರಿಸುತ್ತಿದ್ದಿರಬೇಕು. (೧೬) ತಾಳಗುಂದದ ಸತಿ, ಸೇವಂತಿಗೆ ದಂಡೆಯನ್ನು (೧೭) ಶಾಲಾ ವಿದ್ಯಾರ್ಥಿನಿಯಂತೆ ಮುಡಿದು ತನ್ನ ರಸಿಕತೆ ಸಾರಿಕೊಂಡಿದ್ದಾಳೆ. ಸೋಡಿಗದ್ದೆಯ ಕೊರಡು ಮಾಸ್ತಿಯಲ್ಲಿ ಆಡಂಬರ ರಹಿತ ಮುಡಿಯನ್ನು ಕಾಣಬಹುದು. (೧೮)

ವರ್ತುಲಾಕಾರದ ಭವ್ಯ ಬೆಂಡೋಲೆಗಳು ಅಲಂಕರಿಸಿದ್ದರಿಂದ ಅವು ಹೂವಿನಷ್ಟು ಹಗುರವಾಗಿರಬೇಕೆಂದು ಅನಿಸದೇ ಇರದು. ಬೆಳ್ಳಿ ಬಂಗಾರಗಳಿಂದ ರಚಿತವಾಗಿದ್ದರೆ, ತೀರ ತೆಳುವಾಗಿದ್ದಿಬೇಕು. ಧನಿಕರು ಅವುಗಳಿಗೆ ವಜ್ರ, ಕೆಂಪು ಮುತ್ತುಗಳನ್ನು ಹೊಂದಿಸುತ್ತಿದ್ದಿರಬೇಕು ಎಂಬುದನ್ನು ಶಿಲ್ಪಿಗಳು ಸಾರುತ್ತವೆ. ತಿದ್ದಿತೀಡಿದ ಹುಬ್ಬುಗಳು, ಸುಂದರ ಕಣ್ಣುಗಳು, ಆಕರ್ಷಕ ತುಟಿಗಳು-ಇವನ್ನು ಆಕರ್ಷಕವಾಗಿಟ್ಟುಕೊಳ್ಳಲು ಇಂದಿನವರಷ್ಟೇ ಅಂದಿನವರೂ ಲಕ್ಷ್ಯ ಪೂರೈಸುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಸಕಲ ಸತಿಯರ ಮುಖಕಮಲಗಳು ಪ್ರಫುಲ್ಲಿತವಾಗಿ ಚಿತ್ರಿತವಾದರೂ ಒಬ್ಬಿಬ್ಬರ ವದನದಲ್ಲಿ ಮುಗುಳುನಗೆಯನ್ನು ಹೊರಹೊಮ್ಮಿಸುವದರಲ್ಲಿ ಶಿಲ್ಪಿಯು ಅತ್ಯಂತ ಯಶಸ್ವಿಯಾಗಿದ್ದಾನೆಂದು ಅನಿಸದಿರದು. ಕೊರಳಲ್ಲಿ ತೊಟ್ಟ ಮಂಗಳಸೂತ್ರ,

ಮುತ್ತಿನ ಸರಗಳು, ಗೋಪು, ಲಂಬಕಗಳನ್ನು ಸುಲಭವಾಗಿ ಗುರುತಿಸಬಹುದು. ಒಬ್ಬಿಬ್ಬರು ಭುಜಹಾರಗಳನ್ನು ತೊಟ್ಟಿದ್ದಾರೆ. ತೋಳ್ಬಂದಿಗಳು ಒಂದರಿಂದ ಮೂರು ವರ್ತುಲಾಕಾರದ ಪಟ್ಟಿಗಳಿಂದ ರಚಿತವಾಗಿದ್ದು, ಕೆಲವಕ್ಕೆ ಕುಸುರಿನ ಕೆಲಸವಿದೆ. ಬಹುಸಂಖ್ಯಾತ ಸ್ಮಾರಕಗಳಲ್ಲಿ ಬಿಚ್ಚೆದೆಯ ಸತಿಯರೇ ಚಿತ್ರಿತರಾಗಿದ್ದಾರೆ. ಅಪರೂಪಕ್ಕೆ ಕಾಣಸಿಗುವ ಕಸೂತಿಯ ಕುಚವಸ್ತ್ರಗಳು ಅಂದಿನವರ ರಸಿಕತೆಯ ದ್ಯೋತಕವಾಗಿವೆ. ಈಗ ಪ್ರಚಾರದಲ್ಲಿರುವ 'ಚಿಕ್ಕನ್' ನಕ್ಷೆಯಿರುವ ಕುಚವಸ್ತ್ರ ತೊಡುವ ಪದ್ಧತಿ ಅಚ್ಚರಿ ಹುಟ್ಟಿಸುವಂತಹದು (೧೯). ಸೋಡಿಗದ್ದೆಯ ಮಹಾಸತಿಯ ಮರದ ಪ್ರತಿರೂಪಗಳಲ್ಲಿ ಇದೇ ಬಗೆಯ ಹೂಬಳ್ಳಿಯ ಚಿತ್ತಾರವುಳ್ಳ ಕುಪ್ಪಸವನ್ನು ಕಾಣಬಹುದು(೨೦).

ಸಕಲ ಸ್ಮಾರಕಗಳಲ್ಲಿ ಸತಿಯರ ಹಸ್ತಗಳ ಭಂಗಿ, ಸ್ಥಾನಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಆಶೀರ್ವಾದ ಸೂಚಿಸುವಂತೆಯೂ ಈ ಸಂದರ್ಭದಲ್ಲಿ "ಪ್ರಿಯತಮ ನಾನೂ ನಿನ್ನನ್ನು ಹಿಂಬಾಲಿಸುತ್ತಿದ್ದೇನೆ, ನಿಲ್ಲು" ಎಂದು ವಿನಂತಿಸಿಕೊಳ್ಳುವಂತೆಯೂ ಬಲಗೈ ಎತ್ತಿ ಹಿಡಿಯುವುದು ಸಾಮಾನ್ಯ. ತೀರ ಅಪರೂಪಕ್ಕೆ ಎಡಗೈಯನ್ನು ಎತ್ತಿದಂತೆ ತೋರಿಸಲಾಗಿದೆ. (ಇವರು ರೊಡ್ಡಿಯರಿರಬಹುದೇ?). ಉದ್ದವಾದ ಉಗುರುಗಳನ್ನು ಬೆಳೆಸಿಕೊಳ್ಳುವದು ಸ್ತ್ರೀಯರ ಕೈಗಳ ಅಂದವನ್ನು ಹೆಚ್ಚಿಸುತ್ತದೆಂಬ ನಂಬಿಕೆ ಅಂದೂ ಇದ್ದಿರಬಹುದೆಂದು ಈ ಸತಿಕಲ್ಲುಗಳು ಸಾರಿ ಹೇಳುತ್ತವೆ. (೨೧) ವಿವಿಧ ಬೆರಳುಗಳಿಗೆ ಒಂದೊಂದು, ಕೊಲವೊಮ್ಮೆ ಎರಡು ಉಂಗುರಗಳನ್ನು ಧರಿಸುವದು ಸಾಮಾನ್ಯ. ಕೆಲವರು ಹೆಬ್ಬೆರಳುಗಳಿಗೂ ಉಂಗುರವನ್ನು ತೊಟ್ಟಿದ್ದಾರೆ. ಪ್ರತಿ ಕೈಗೆ ಒಂದರಿಂದ ಹತ್ತು ಬಳೆಗಳನ್ನು ಗುರುತಿಸಬಹುದು. ಇವುಗಳನ್ನು ಧಾತು, ಇಲ್ಲವೇ ಗಾಜಿನಿಂದ ಮಾಡುತ್ತಿದ್ದಿರಬೇಕು. ಬಳೆಗಳಲ್ಲಿ ವರ್ತುಲ, ಅರ್ಧ ವರ್ತುಲದವು, ಕುಸುರಿನ ಕೈಗೆಲಸವುಳ್ಳವು ಇವೆ. ಸೋಮೇಶ್ವರನ ಮಾನಸೋಲ್ಲಾಸದಲ್ಲಿ ಇಂಥ ಬಳೆಗಳ ಉಲ್ಲೇಖ ಬರುತ್ತದೆ. ಮದುವಣಗಿತ್ತಿಯರು ಕೈಗಳ ಮೇಲೆ ಮದರಂಗಿ (ಮೆಹಂದಿ) ಯಿಂದ ಚಿತ್ತಾರಗಳನ್ನು ರಚಿಸಿಕೊಳ್ಳುವದು ಈಗ ಸಾಮಾನ್ಯವಾಗಿದೆ. ಹಿಂದಿನ ದಿನಗಳಲ್ಲೂ ಸತಿಯರು ಕೈಗಳ ಮೇಲೆ ಹೂವುಗಳನ್ನು ಚಿತ್ರಿಸಿಕೊಳ್ಳುತ್ತಿದ್ದರೆಂದು ಮಾಸ್ತಿ ಕಲ್ಲುಗಳು ಸಾಕ್ಷಿ ಹೇಳುತ್ತವೆ. ಒಬ್ಬಳು ಗೊಂಡೆ ಹೂ, ಇನ್ನೊಬ್ಬಲು ಮೃದುಮಧುರ ಸೇವಂತಿಗೆ, ಮಗುದೊಬ್ಬಳು ಹಸ್ತವನ್ನೆಲ್ಲ ಆಕ್ರಮಿಸುವ ಪದ್ಮಪುಷ್ಪ ಬಿಡಿಸಿಕೊಂಡಿದ್ದಾರೆ. (೨೨) ತಾತ್ಪೂರ್ತಿಕ ಅಲಂಕಾರಕ್ಕೆ ಅರಿಸಿನ, ಕುಂಕುಮ, ಮೆಂತೆ ಬಳಸಿದರೆ, ಸೂರ್ಯಲೋಕಕ್ಕೆ ಹೋದಾಗಲೂ ತಮ್ಮೊಡನೆ ಈ ನಕ್ಷೆಗಳು ಇರಬೇಕೆಂದವರು ಹಚ್ಚೆ ಹಾಕಿಸಿಕೊಳ್ಳುತ್ತಿರಬೇಕು. ಪತಿಯನ್ನು ಎದುರುಗೊಳ್ಳಲು ಹಣ್ಣು-ಹಂಪಲು ಜೊತೆಗೆ ಒಯ್ಯಬೇಕು ಎಂಬುದರ ಸಂಕೇತವಾಗಿ ಬಲಗೈ ಹೆಬ್ಬೆರಳು ಮತ್ತು ತೋರಬೆರಳ ನಡುವೆ ಲಿಂಬೆಹಣ್ಣು ಹಿಡಿದಿರುವುದು ಸಾಮಾನ್ಯ. ಹೊಂಬಣ್ಣದ ಗಜಲಿಂಬೆ, ಕಂಚಿಹಣ್ಣು, ಮಾದಳ, ಸಕ್ಕರೆಲಿಂಬೆಗಳನ್ನೂ ಬಳಸಿದ್ದಿದೆ. ಇಳಿಬಿಟ್ಟ ಎಡಗೈಯಲ್ಲಿ ಪಾತ್ರೆಯೊಂದನ್ನು ಹಿಡಿದಿರುವುದು ಸಾಮಾನ್ಯ. ಇಂದು ಚೊಂಬು, ಗಿಂಡಿ ತೂಗುಚಂಬು

ಇಲ್ಲವೇ ಪತಿಗೆ ಪ್ರಿಯವಾದ ಪಾನೀಯ-ಮದ್ಯಗಳಿರಬಹುದು. ವಿದೇಶಿ ಪ್ರವಾಸಿಗರು, ಚಿತೆಯನ್ನು ಪ್ರಜ್ವಲಗೊಳಿಸಲು ಆ ಪಾತ್ರೆಯಲ್ಲಿದ್ದ ಎಣ್ಣೆಯನ್ನು ಸುರಿಯುತ್ತಿದ್ದರೆಂದು ಬರೆದಿಟ್ಟಿದ್ದಾರೆ. ಕೆಲವು ಸತಿಯರು ತಮ್ಮ ಸಿಂಗಾರವನ್ನು ಪದೇ ಪದೇ ಸರಿಪಡಿಸುವದಕ್ಕಾಗಿ ಭವ್ಯವಾದ ಗೋಲಾಕಾರದ ಕನ್ನಡಿ ಹಿಡಿದಿರುವುದೂ ಉಂಟು.

ನಮ್ಮ ಪೂರ್ವಜರ ಸೀರೆ ಉಡುವುದರ ವೈವಿಧ್ಯ ನೋಡಬೇಕಾದರೆ, ಮಾಸ್ತಿಕಲ್ಲುಗಳು ಒಳ್ಳೆಯ ಅವಕಾಶ ಕಲ್ಪಿಸಿ ಕೊಡುತ್ತವೆ. ಸಿಂಹಕಟಿ ಹೊಂದಿದವಳು ಮೈಗಂಟುವಂತೆ ಪಾರದರ್ಶಕ ಸೀರೆಯುಟ್ಟು ಸೆರಗನ್ನು ಅರಳುವ ಕಮಲದಂತೆ ಹಿಗ್ಗಿಸಿ ಇಳಿಬಿಟ್ಟಿದ್ದಾಳೆ (೨೩). ಅದಕ್ಕೊಪ್ಪುವ ಸೊಂಟಪಟ್ಟಿ, ಮುತ್ತಿನ ಸರಗಳನ್ನು ತೂಗುಬಿಟ್ಟಿದ್ದಾಳೆ. ಅಂಗಾಂಗಗಳು ಅಷ್ಟೊಂದು ಸುಂದರವಾಗಿ ಇರದವಳು, ಲಂಗದಂತೆ ಉಟ್ಟು ತನ್ನ ಕೊರತೆ ಕಾಣದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದಿರಬೇಕು ! (೨೪). ಕಾಮಲಾಪುರದವಳು ಉಟ್ಟಸೀರೆಯ ಜೊತೆಗೆ ಎಡಬಲದಲ್ಲಿ ಅಂಗವಸ್ತ್ರಗಳನ್ನು ಅಂದವಾಗಿ ಜೋಡಿಸಿ ಉಡುಪಿನ ಆಕರ್ಷಣೆ ಹೆಚ್ಚಿಸುವದರಲ್ಲಿ ಯಶಸ್ವಿಯಾಗಿದ್ದಾಳೆ (೨೫). ಸೀರೆಯ ಮೇಲೆಯೂ ಅಲಂಕಾರಿಕ ಬಟ್ಟೆಯ ಪಟ್ಟಿಯನ್ನು ಬಳಸಿದವರಿದ್ದರು. (೨೬) ಬಳ್ಳಿಗಾವಿಯವಳು ತೆರೆತೆರೆಯಾಗಿ ಸೀರೆಯುಟ್ಟು ನಿರಿಗೆಗಳನ್ನು ಜಲಪಾತದಂತೆ ಹರಿಯ ಬಿಟ್ಟಿದ್ದಾಳೆ. (೨೭). ಕೈಗಳಿಗೆ ಬೆವರು, ಕೊಳೆ ಹತ್ತಿದಾಗ ಒರೆಸಿಕೊಳ್ಳಲು ಬಲಸೊಂಟಕ್ಕೆ ಕರವಸ್ತ್ರವನ್ನು ಸಿಕ್ಕಿಸಿಕೊಂಡದ್ದನ್ನು ಗುರುತಿಸಬಹುದು (೨೮) ದೃಢಕಾಯಳು, ಮೈಕಟ್ಟು ಎದ್ದು ಕಾಣುವಂತೆ ಬಿಗಿದು ಸೀರೆ ಉಟ್ಟಿದ್ದಾಳೆ. ತಾಳಗುಂದದವಳು ಬಹಳಷ್ಟು ನಿರಿಗೆಗಳನ್ನು ಹಾಕಿ ಉಟ್ಟಿದ್ದರಿಂದ ರಾಜಸ್ಥಾನಿಗಳ ಲಂಗದಂತೆ ಕಾಣುತ್ತದೆ. ಸತಿಯರೆಲ್ಲ ಸರಪಣಿ, ಗೆಜ್ಜೆಗಳಿಂದ ತಮ್ಮ ಪಾದಗಳನ್ನು ಅಲಂಕರಿಸಿಕೊಂಡರೂ ಶಿಲ್ಪಿಗಳಲ್ಲಿ ಅವುಗಳ ರಚನೆಯನ್ನು ಗುರುತಿಸುವದು ಕಷ್ಟವಾದದ್ದು; ಕೆಲವರಾದರೂ ಸುತ್ತುಂಗರವನ್ನು ಕಾಲ್ಬೆರಳಿಗೆ ತೊಟ್ಟಿದ್ದಾರೆ. ಸಕಲ ಸತಿಯರೂ ಬರಿಗಾಲಿನಲ್ಲಿ ಇದ್ದಾರೆ.


ಸಹಸ್ರ ವರ್ಷಗಳಿಂದಲೂ ಈ ಕ್ರೂರ ಪದ್ಧತಿ ಮಹಿಳೆಯರನ್ನು ಆಕರ್ಷಿಸುತ್ತ ಬಂದದ್ದು ವಿಸ್ಮಯಪಡುವಂತಹುದು ಹೀಗೇಕೆ ? ಎಂಬುದಕ್ಕೆ ಉತ್ತರ, ನಮ್ಮ ಸಮಾಜ ವಿಧವೆಯರನ್ನು ನಡೆಸಿಕೊಳ್ಳುವ ರೀತಿಯಲ್ಲಿ ಅಡಗಿರಬಹುದು ಎನಿಸುತ್ತದೆ. ವಿಧವೆಯರ ಜೀವನ ಹೋಲಿಸಿದಾಗ ಸತಿಯರಿಗೆ ಸಲ್ಲುವ ಮಾನ-ಮರ್ಯಾದೆ, ಗೌರವಗಳಿಗೆ ಕೊನೆ ಮೊದಲಿರಲಿಲ್ಲ. ಇಡೀ ಸಮಾಜವೇ ಅವಳಲ್ಲಿಯ ದೈವತ್ವವನ್ನು ಗುರುತಿಸಿ, ಆದರಾತಿಥ್ಯ, ಪೂಜೆ-ಪುನಸ್ಕಾರಗಳನ್ನು ಸಲ್ಲಿಸುತ್ತಿತ್ತು. ತಿರುಗಿ ಯೌವ್ವನವತಿಯಾಗಿ ಸುಮಂಗಲಿಯಂತೆ ಸಿಂಗರಿಸಿಕೊಂಡು ಮದುವಣಗಿತ್ತಿಯಂತೆ ಮೆರವಣಿಗೆಯಲ್ಲಿ ಮೆರೆದಾಡಬಹುದಾಗಿತ್ತು. ಸೂರ್ಯಲೋಕದಲ್ಲಿ ಪತಿಯೊಡನೆ ಪುನಃ ಆನಂದದಿಂದ ನಿರಂತರವಾಗಿ ಕಾಲ ಕಳೆಯಬಹುದೆಂಬ ಕುರುಡು ನಂಬಿಕೆ ಬೇರೆ! ಪ್ರತಿ ನಿಮಿಷವೂ ಸತ್ತು ಬದುಕುವ ವಿಧವೆಯ ಬಾಳಿಗಿಂತ ಅರೆಕ್ಷಣದಲ್ಲಿ ಸತಿ ಹೋಗಿ ಶಾಶ್ವತವಾಗಿ ದೇವಿಯಂತೆ ಪೂಜಿಸಲ್ಪಡುವ ಅವಕಾಶವೇನು ಚಿಕ್ಕದೇ? ಅಂಥ ಅವಕಾಶವನ್ನು ಹುಸಿ ಹೋಗಗೊಡಬಹುದೇ?

ಮನೆತನಗಳಿಗೂ ಸಮಾಜಕ್ಕೂ ಗೌರವ ತರುವ ಸಹಗಮನ ವಿಧಿ ಹೆಚ್ಚಿನ ಹೆಂಗಳೆಯರಿಗೆ ಅದು ಎಷ್ಟೇ ಭಯಾನಕವಾಗಿದ್ದರೂ ಆಕರ್ಷಿಸಿದ್ದರೆ ಏನು ಆಶ್ಚರ್ಯ?[3]

ಅಸಂಖ್ಯ ಊರುಗಳಲ್ಲಿ ಪೂಜೆ ಪುನಸ್ಕಾರ ಪಡೆಯುತ್ತಿರುವ ಮಾಸ್ತಿಕಟ್ಟೆ, ಮಾಸ್ತಿ ಕಲ್ಲು, ಮಹಾಸತಿಯರ ದೇವಾಲಯಗಳಿವೆ. ಸತತ ರೋಗಗ್ರಸ್ತರು, ಬಂಜೆಯರು, ಜೀವನದಲ್ಲಿ ಅತೀವ ಕಷ್ಟ ಕಾರ್ಪಣ್ಯಗಳಿಗೆ ತುತ್ತಾದವರು, ಅವುಗಳ ಪರಿಹಾರಕ್ಕೆ ಮಹಾಸತಿಯರಿಗೆ ಹರಕೆ ಹೊತ್ತು ಪೂಜಿಸುತ್ತಾರೆ. ಘಟ್ಟದ ರಸ್ತೆ ಏರುವಾಗ, ಇಲ್ಲವೇ ಇಳಿಯುವಾಗ ದಾರಿಯಲ್ಲಿಯ ಮಾಸ್ತ್ಯಮ್ಮನಿಗೆ ಸುಗಮ ಪ್ರವಾಸದ ಆಶೀರ್ವಾದ ಕೇಳಲು ಪ್ರವಾಸಿಗರೆಲ್ಲ ಹೋಗುವ ಪರಿಪಾಠವಿದೆ. ಉತ್ತರಕನ್ನಡ ಜಿಲ್ಲೆಯ ವೆಂಕಟಾಪುರದಲ್ಲಿ ಮಾಸ್ತಿ ಸ್ಮಾರಕದ ಜೊತೆಗೆ ಸಂಗಮರವರಿ ಶಿಲೆಯಲ್ಲಿ ಸುಂದರವಾದ ವಿಗ್ರಹ ಕಟೆಯಿಸಿ, ಭಕ್ತರಿಂದ ಪೂಜೆಯ ಏರ್ಪಾಡು ಮಾಡಿದ್ದಾರೆ. ಅದೇ ಜಿಲ್ಲೆಯ ಭಟಕಳ ತಾಲೂಕಿನ ಸೋಡಿಗದ್ದೆಯಲ್ಲಿ ಇಂದಿಗೂ ಮಾಸ್ತಿಯ ಹರಕೆ ನಿರ್ಮಿಸುವ ಕಲೆ ಜೀವಂತವಾಗಿ ಉಳಿದುಕೊಂಡಿದೆ. ಅಲ್ಲಿಯ ಸತಿ ಮಲ್ಲಮ್ಮಳಿಗೆ ಕೊರಡಿನ ವಿಗ್ರಹದ ಹರಕೆ ಹೊರುವದು ವಾಡಿಕೆ. ಅನೇಕ ತಲೆಮಾರುಗಳಿಂದ ಆ ಹಳ್ಳಿಯಲ್ಲಿಯೇ ಸ್ಥಾಯಿಯಾದ ಗುಡಿಗಾರರೇ ಇವುಗಳನ್ನು ಸಿದ್ಧಮಾಡುವರು. ಸಾಲಾಗಿ ನಿಲ್ಲಿಸಿದ ಈ ವಿಗ್ರಹಗಳನ್ನು ನೋಡಿದಾಗ (೨೯) ಇನ್ನಿತರ ಶಿಲಾಸತಿಯರೊಂದಿಗೆ ಇರುವ ಸಾಮ್ಯ ಗೋಚರಿಸದಿರದು. ಕೇದಿಗೆಯ ಶಿರೋಲಂಕಾರ ಮೂಗು, ಕಿವಿ, ಕೊರಳ ಅಲಂಕಾರಗಳು, ಕಲಾಪತ್ತಿನ ಕುಪ್ಪಸ, ಸೀರೆ (೩೦, ೩೧) ಬಲಗೈಯಲ್ಲಿ ಹಿಡಿದ ಲಿಂಬೆ ಹಣ್ಣು, ಎಡಗೈಯಲ್ಲಿ ಹಿಡಿದ ಎಣ್ಣೆಯ ಪಾತ್ರೆಗಳನ್ನು ನೋಡುತ್ತಿದ್ದಂತೆ, ಮದುಮಗಳಾಗಿ ಮೆರೆದು ಮಹಾಸತಿಯರಾಗಿ ಮಿಂಚಿಹೋದ ನಾರೀ ಸಮೂಹವೇ ಕಣ್ಣಿಗೆ ಕಟ್ಟಿದಂತಾಗುತ್ತದೆ.

• • •

3. ಸತಿಯ ಸಿಂಗಾರದ ಬಗ್ಗೆ ಸಂಶೋಧನೆ ನಡೆಸಿದಾಗ, ಈ ಪದ್ಧತಿ ಉಳಿದು, ಬೆಳೆದು ಕಂಡುಬಂದ ಕಾರಣಗಳಿವು. ಇದರಿಂದ ಸಹಗಮನ ಪದ್ಧತಿಯನ್ನು ವೈಭವೀಕರಿಸುತ್ತೇನೆ, ಇಲ್ಲವೇ ಪ್ರತಿಪಾದಿಸುತ್ತಿದ್ದೇನೆ ಎಂದು ಯಾರೂ ಅರ್ಥೈಸಬಾರದು. ನಮ್ಮ ಸಮಾಜ ಇದೊಂದು, ಹೆಂಗಳೆಯರಿಗೆ ಕೊಡಮಾಡಿದ ಶಾಪ ಎಂದು ತಿಳಿದುಕೊಂಡವರಲ್ಲಿ ಮೊದಲಿಗಳು.









೧೧




೧೩




೧೪



೧೭



೧೫



೧೬



೧೮



೧೯



೧೯




೨೦

೨೧



೨೨






೧೩ ೧೪ ೧೫ ೧೬ ೧೭ ೧೮



೧೯

೨೦





೨೧

೧೫. ವೇಶ್ಯಾವರ್ಗ

ವೇಶ್ಯಾವೃತ್ತಿ ಪ್ರಪಂಚದಲ್ಲೇ 'ಅತಿ ಪುರಾತನ ವೃತ್ತಿ' ಎಂದು ಕರೆಯಲ್ಪಡುತ್ತದೆ. ತುಂಬ ಪ್ರಾಚೀನಯುಗದಿಂದ ಯುದ್ಧದಲ್ಲಿ ಗೆಲ್ಲಲ್ಪಟ್ಟ ಜನಾಂಗಗಳ ಸ್ತ್ರೀಯರನ್ನು ದಾಸಿಯರನ್ನಾಗಿಸುವದು, ಬಳಿಕ ಲೈಂಗಿಕ ಶೋಷಣೆಗೆ ಗುರಿಪಡಿಸುವದು ನಡೆದು ಬಂದ ರೂಢಿ. ಆದರೆ ಹಣಕ್ಕಾಗಿ ದೇಹವ್ಯಾಪಾರದ ಪದ್ಧತಿ ಬರಲು ಸಾಕಷ್ಟು ಶತಮಾನಗಳ ಕಳೆದಿರಲು ಸಾಕು. ವೇದಕಾಲಕ್ಕೆ ವೇಶ್ಯಯರು ಇದ್ದರು, ಆದರೆ ವೇಶ್ಯಾವೃತ್ತಿ ಇರಲಿಲ್ಲ. ಎನ್ನುವವರಿದ್ದಾರೆ. ಪುಂಶ್ಚಲೀ, ಸಾಧಾರಣಾ, ವಿಜರ್ಜರಾ, ಮುಂತಾದ ಶಬ್ದಗಳು ವೇಶ್ಯೆಯನ್ನು ಸೂಚಿಸುತ್ತವೆ. ನಗರಗಳು ಬೆಳೆದು, ಅರಸರ, ಆಢ್ಯರ, ವಿಲಾಸಮಯ ಬೇಡಿಕೆಗಳನ್ನು ಪೂರೈಸಲಿಕ್ಕೆ, ಮನರಂಜನೆಗೆ, ಹಲವು ಕಲೆಗಳನ್ನು ರೂಢಿಸಿಕೊಂಡ ನಾರೀವರ್ಗಕ್ಕೆ ಹೆಚ್ಚೆಚ್ಚು ಬೇಡಿಕೆ ಬರಲಾರಂಭಿಸಿತು. ಕ್ರಮೇಣ ಗಣಿಕಾವರ್ಗ ರೂಪಗೊಂಡಿತು. ಸಮಾಜದ ಸ್ವಾಸ್ಥ್ಯವನ್ನು ರಕ್ಷಿಸಿಕೊಂಡು ಬರುವದರ ಜೊತೆಗೆ, ಇಂದಿಗೆ ಶಿಷ್ಟಕಲೆಗಳಾಗಿ ಉಳಿದು ಬಂದಿರುವ ಸಂಗೀತ, ನೃತ್ಯ, ನಾಟಕಾದಿ ಕಲೆಗಳನ್ನು ಈ ವರ್ಗ ಉಳಿಸಿ, ಬೆಳೆಸಿಕೊಂಡಿದೆ. ಹೀಗಾಗಿ ಈ ವೃತ್ತಿಯ ಪ್ರಾಚೀನತೆಯೊಂದಿಗೆ ಅದರ ವಿವಿಧ ಹಂತಗಳನ್ನು, ಕನ್ನಡ ನಾಡಿನಲ್ಲಿ ಅದು ಪಡೆದು ಕೊಂಡ ವಿವಿಧರೂಪಗಳನ್ನು ಅರಿತು ಕೊಳ್ಳುವ ಯತ್ನವನ್ನು ಮಾಡಬಹುದು.

ಪುರಾಣ ಮತ್ತು ಸ್ಮೃತಿಗಳಲ್ಲಿ ವೇಶ್ಯೆಯರನ್ನು 'ಪಂಚಚೂಡಾ' ಎಂದು ಕರೆಯಲಾಗಿದೆ. ಅವರೆಲ್ಲ ಅಪ್ಸರೆಯರ ಕುಲಕ್ಕೆ ಸೇರಿದವರು ಎನ್ನಲಾಗಿದೆ. ಅಂದರೆ ಇವರೆಲ್ಲ ಅಪ್ಸರೆಯರಂತೆ ಲೈಂಗಿಕ ಸ್ವಾತಂತ್ರ್ಯ ಉಳ್ಳವರು, ದೇವವರ್ಗಕ್ಕೆ ಸಮೀಪದವರು, ಎಂಬ ಕಲ್ಪನೆಯಿತ್ತು. ತಪೋನಿರತನ್ನು ಚಂಚಲ ಹುಲುಮನುಜರನ್ನಾಗಿಸಲು, ಅಪ್ಸರೆಯರನ್ನು ದೇವತೆಗಳು ಬಳಸುತ್ತಿದ್ದ ಅನೇಕ ಉದಾಹರಣೆಗಳಿವೆ. ಹೀಗಾಗಿ ದೇವಲೋಕದಲ್ಲಿ ಅಪ್ಸರೆಯರಂತೆ ಗಣಿಕೆಯರ ಸ್ಥಾನ, ಸಮಾಜದಲ್ಲಿ ಉನ್ನತವಾಗಿಯೇ ಇತ್ತು. ಶಿಕ್ಷಣದಲ್ಲಿ, ವಿವಿಧ ಕಲೆಗಳಲ್ಲಿ, ಪರಿಣತಿ ಪಡೆಯುವ ಅವಕಾಶಗಳು ಅವರಿಗೆ ದೊರೆಯುತ್ತಿದ್ದವು.

ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈ ವರ್ಗ ಗೌರವದ ಸ್ಥಾನವನ್ನು ಪಡೆದಿತ್ತು. ಅನೇಕ ಗಣಿಕೆಯರು ಸಂಘಗಳಿಗೆ ಕೊಡುಗೈದಾನ ಮಾಡಿದ ಸನ್ಯಾಸಿನಿಯರಾದ, ವಿಚಾರಗಳು ಬೌದ್ಧ ಸಾಹಿತ್ಯದಲ್ಲಿ ಬರುತ್ತವೆ. ಮುಂದೆ ಬೌದ್ಧಧರ್ಮ ಅಳಿದು ಹಿಂದೂಧರ್ಮದ ಪುನಶ್ಚೇತನವಾದಾಗ ಮೂರ್ತಿಪೂಜೆ ಕಾಣಿಸಿಕೊಂಡಿತು. ದೇವದೇವತೆಗಳಿಗೆ ದೊಡ್ಡ ದೊಡ್ಡ

ದೇವಾಲಯಗಳು ರೂಪಗೊಂಡವು. ರಾಜವರ್ಗಕ್ಕೆ ಮೀಸಲಾಗಿದ್ದ ಭೋಗ ವಿಲಾಸಗಳನ್ನು ತಂತಮ್ಮ ದೇವತೆಗಳಿಗೆ ಕೊಡಮಾಡುವ ಸಂಪ್ರದಾಯ ಬೆಳೆಯಿತು. ಛತ್ರ - ಚಾಮರ, ಅಭ್ಯಂಜನ, ನೈವೇದ್ಯ, ಸಂಗೀತ, ನೃತ್ಯಾದಿ ಸೇವೆಗಳೆಲ್ಲ ದೇವತಾ ಪ್ರತಿಮೆಗಳಿಗೆ ಸಂದಾಯವಾಗಲಾರಂಭಿಸಿತು. ಇಂಥ ಸೇವೆಗಳಿಗೆ ಯುವತಿಯರ ಸೇರ್ಪಡೆಯಾಗಲಾರಂಭಿಸಿತು. 'ದೇವದಾಸಿ'ಯರ ವರ್ಗ ರೂಪಗೊಂಡಿತು. ಭಾರತದ ಹಾಗೂ ಕರ್ನಾಟಕದ ಹಲವಾರು ಕಲೆಗಳು ಉಳಿದು ಬರಲಿಕ್ಕೆ ಈ ವರ್ಗವು ಕಾರಣವಾಗಿದೆ. ಆದ್ದರಿಂದ ಅವರ ಕೊಡುಗೆಯನ್ನು ಬೇರೆಯಾಗಿ ಸ್ಮರಿಸಿಕೊಳ್ಳುವದು ಉಚಿತ.

ಗಣಿಕೆಯರು, ಸೂಳೆಯರು, ಪಾತ್ರದವರು, ವಾರಾಂಗನೆಯರು : ಅರಸರ ಆಸ್ಥಾನಗಳಲ್ಲಿ, ಕವಿ, ಗಮಕಿ, ವಾಗ್ಮಿಗಳ ಜೊತೆಗೆ ಗಣಿಕೆಯರಿಗೆ ಯೋಗ್ಯಸ್ಥಾನವಿದ್ದದ್ದು ಕನ್ನಡ ಕಾವ್ಯಗಳಲ್ಲಿ ಕಂಡುಬರುವದರಿಂದ, ಸಮಾಜದಲ್ಲಿ ಅವರಿಗೆ ಪ್ರತಿಷ್ಠಿತ ಸ್ಥಾನ ಇದ್ದದ್ದು ಸ್ಪಷ್ಟ. ವಡ್ಡಾರಾಧನೆಯಲ್ಲಿ 'ಪೆಂಡವಾಸದ ಸೂಳೆಯರ' ಉಲ್ಲೇಖ, ಕನ್ನಡ ಸಾಹಿತ್ಯದಲ್ಲಿ ಅತಿ ಪುರಾತನವಾದದ್ದು, ಎನ್ನುತ್ತಾರೆ.

ಬಾದಾಮಿ ಚಾಲುಕ್ಯರ ಕಾಲದ ಶಾಸನವೊಂದರಲ್ಲಿ (ಕ್ರಿ.ಶ. ೬೫೯) ವಿಜಯ ಮಹಾದೇವಿ ಎಂಬ 'ಬೊಡ್ಡಿ' ತನ್ನನ್ನು 'ಪ್ರಿಯ ಮಹಿಷಿ'ಎನಿಸಿಕೊಂಡಿದ್ದಾಳೆ. ಅರಸ ವಿಜಯಾದಿತ್ಯನ ಮಹಾಕೂಟದ ಕ್ರಿ.ಶ. ೭೩೩ ರ ಶಾಸನದಲ್ಲಿ 'ವಿನಾಪೋಟಿ' ಎಂಬ ಸೂಳೆ (ಬಹುವಚನದಲ್ಲಿ ಸೂಳೆಯರ್ ಎಂದು ಕರೆಯಲಾಗಿದೆ.) ತನ್ನನ್ನು ಮಹಾರಾಜಾಧಿರಾಜ ಪರಮೇಶ್ವರ ಭಟಾರರ ಪ್ರಾಣವಲ್ಲಭೆ' ಎಂದು ಕರೆಸಿ ಕೊಂಡಿದ್ದಾಳೆ. ಸಹಜವಾಗಿಯೇ ರಾಜನ ಉಪಪತ್ನಿಯಾದಾಕೆ ತನ್ನನ್ನು 'ಸೂಳೆ' ಎಂದು ಕರೆಸಿಕೊಂಡದ್ದು ನೋಡಿದರೆ ಆ ಕಾಲದಲ್ಲಿ ಈಗಿನಂತೆ ಆ ಶಬ್ದ ನಿಂದಾತ್ಮಕವಾಗಿರಲಿಲ್ಲವೆಂದು ತೋರುತ್ತದೆ. ಚಾಲುಕ್ಯರಂತೆಯೇ ರಾಷ್ಟ್ರಕೂಟರ ಕಾಲಕ್ಕೂ ಪೋಟಿ, ಪೊಡ್ಡಿ, ಬೊಡ್ಡಿ, ಸೂಳೆಯರು ಮಾಡಿದ ದಾನಶಾಸನಗಳ ವಿವರಗಳಿವೆ. ಕೆಲವು ದಾನಿಗಳ ತಾಯಿ- ಅಜ್ಜಿಯರ ಹೆಸರೂ ಬಂದಿದೆ. ದೇವಾಲಯದ ಸೂಳೆಯರ ಕಂಭದ ಸೂಳೆಯರ ಉಲ್ಲೇಖ ಹಲವೆಡೆ ಕಂಡುಬರುತ್ತದೆ.

i. ದೇವಾಲಯದ ಸೂಳೆಯರು : ದೇವರ ಸೇವೆಗೆಂದು ಹೆಣ್ಣುಮಕ್ಕಳನ್ನು ಬಿಡುವ ಪದ್ಧತಿ ೧೦ ನೇ ಶತಮಾನದ ಮೊದಲೇ ಪ್ರಾರಂಭವಾಗಿರಲು ಸಾಕು. ಹೀಗೆ ಹೆಣ್ಣುಗಳನ್ನು ಕೊಡಮಾಡುವದರಿಂದ ಉಂಟಾಗುವ ಪುಣ್ಯ ಪ್ರಾಪ್ತಿಯ ಉಲ್ಲೇಖ, ಅಗ್ನಿ, ಮತ್ತು ಭವಿಷ್ಯ, ಪುರಾಣದಲ್ಲಿ ಬರುತ್ತದೆ. ವಿವಿಧ ಹರಕೆಗಳನ್ನು ಹೆತ್ತವರು ವೈಯಕ್ತಿಕವಾಗಿ ತಮ್ಮ ಅಥವಾ ಇತರರ ಹೆಣ್ಣುಮಕ್ಕಳನ್ನು ಸೇವಾರ್ಥ ದೇವಾಲಯಗಳಿಗೆ ಕೊಡಮಾಡಿದರೆ, ಉಳ್ಳವರು ದೇವಾಲಯಗಳನ್ನು ಕಟ್ಟಿಸಿ ಸಂಗೀತ- ನೃತ್ಯಗಳಲ್ಲಿ ಪರಿಣತೆಯರನ್ನು ನೇಮಿಸುತ್ತಿದ್ದರು. ಚಾಲುಕ್ಯದಂಡನಾಯಕ, ಮಹಾ ದೇವಯ್ಯನು, ಇಟ್ಟಿಗೆಯಲ್ಲಿ ಮಹಾದೇವ ಮತ್ತು ಚಂದಲೇಶ್ವರ ದೇವಾಲಯಗಳನ್ನು ಕಟ್ಟಿಸಿ, ಒಳ್ಳೆಯ ರೂಪವತಿಯರನ್ನು ಆಯ್ದು ತಂದು, ಪುರವರ್ಗದ ಸೂಳೆಯರನ್ನಾಗಿಸಿದ ವಿಷಯವನ್ನು ಕ್ರಿ. ಶ. ೧೧೧೨ ರ ಶಾಸನವೊಂದು

ಸಾರುತ್ತದೆ. ದೇವಾಲಯಕ್ಕೆ ಸೂಳೆಯನ್ನು ಕೊಡಮಾಡುವದು ಆರ್ಥ್ಯರಿಗೆ ಪ್ರತಿಷ್ಠೆಯ ವಿಚಾರವಾಗಿದ್ದಂತೆ, 'ಪುರವರ್ಗದ ಸೂಳೆ'ಯಿನಿಸಿಕೊಳ್ಳುವದು ಆ ಹೆಂಗಳೆಯರಿಗೆ ಹೆಚ್ಚಿನ ಅಂತಸ್ತಿನ ವಿಷಯವಾಗಿದ್ದರಬಹುದೇ? ಬೌದ್ಧಕಾಲದ 'ನಗರವಧು'ಗಳಂತೆ ಈ ಪುರದ ಸೂಳೆಯರ ಸ್ಥಾನ ಮಾನಗಳು ಹೆಚ್ಚಿನವು ಇರಬಹುದೇ? ಎಂಬುದು ವಿಚಾರಕ್ಕೆ ಎಡೆ ಮಾಡಿಕೊಡುತ್ತದೆ.

ದೇವಸ್ಥಾನಗಳು ಪೌರ ಆಡಳಿತಕ್ಕೆ ಒಳಪಡುತ್ತಿದ್ದವು. ಹೀಗಾಗಿ ಇಂಥ 'ಸೂಳೆಯರಿಗೆ' ಸಂಬಳ, ಯೋಗ್ಯ ಸ್ಥಾನ ಮಾನಗಳು, ಸಲ್ಲುತ್ತಿದ್ದಿರಬಹುದು. ದೇವಾಲಯದ ಸೇವೆಗಳಲ್ಲಿ ಅಂಗಭೋಗ (ಸ್ನಾನ, ಪುಷ್ಪ, ವಸ್ತ್ರಧಾರಣೆ, ಪೂಜೆ, ನೈವೇದ್ಯ, ತಾಂಬೂಲ ಸೇವೆ) ಹಾಗೂ ರಂಗ ಭೋಗ (ಸಂಗೀತ, ನೃತ್ಯ, ಪಾತ್ರ ನಾಟ್ಯ, ನಾಟಕಗಳು) ಸೇವೆಗಳು ಉಲ್ಲೇಖಿಸಲ್ಪಟ್ಟಿದೆ. ಈ ರೀತಿಯಲ್ಲಿ ದೃಶ್ಯ ಹಾಗೂ ಶ್ರವ್ಯ ಕಲಾಮಾಧ್ಯಮಗಳ ಸೇವೆ, ದೇವಾಲಯದ ದೇವತೆಗೆ ಸಲ್ಲುತ್ತಿತ್ತು. ಕಂಬದ ಸೂಳೆಯರ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ದೇವಾಲಯಗಳಲ್ಲಿ ಬೇರೆಬೇರೆ ದಿಕ್ಕುಗಳ ಕಂಬಗಳ ಬಳಿ ಅವರ ಸೇವೆಯನ್ನು ನಿರ್ದಿಷ್ಟ ಪಡಿಸಿರಬಹುದಾದ ಸಾಧ್ಯತೆಯನ್ನು ಡಾ। ಚೆನ್ನಕ್ಕ ಎಲಿಗಾರ ಅವರು ತಮ್ಮ 'ಶಾಸನಗಳಲ್ಲಿ ಸ್ತ್ರೀ ಸಮಾಜ' ಎಂಬ ಪುಸ್ತಕದಲ್ಲಿ ಚರ್ಚಿಸಿದ್ದಾರೆ.

ii. ಪಾತ್ರದವರು : ದೇವರ ರಂಗಭೋಗದ ಸೇವೆಗೆ 'ಪಾತ್ರ'ದವರೂ ಇರುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ತೀರ ಇತ್ತೀಚಿನವರೆಗೆ 'ಪಾತರದಾಕಿ' ಎಂದು ಕರೆಯಲ್ಪಡುವ ವರ್ಗ ಇತ್ತು. ಬಹುಶಃ ಇವರೆಲ್ಲ ತೀರ ಹಿಂದಿನ ಕಾಲದಿಂದಲೂ ದೇವಾಲಯಗಳಲ್ಲಿ ನೃತ್ಯ - ನಾಟಕಾದಿಗಳ ಸೇವೆಯನ್ನು ದೇವರಿಗೆ ಕೊಡಮಾಡುತ್ತಿದ್ದ ವಂಶಜರಾಗಿದ್ದರು. ಕಿಟ್ಟೆಲ್ ಕೋಶದಲ್ಲಿ 'ಪಾತ್ರ' ಶಬ್ದ ವೇಷಧರಿಸಿ ಅಭಿನಯಾದಿಗಳನ್ನು ಮಾಡುವ ವ್ಯಕ್ತಿಯೆಂದು ಗುರುತಿಸಲ್ಪಟ್ಟಿದೆ. ಕರ್ನಾಟಕದ ಹಲವಾರು ದೇವಾಲಯಗಳಲ್ಲಿಯ ಶಾಸನಗಳಲ್ಲಿ ಈ ಪಾತ್ರವರ್ಗ, ವಿಶೇಷವಾಗಿ ಉಲ್ಲೇಖಿಸಲ್ಪಟ್ಟಿದ್ದು, ಆಯಾ ದೇವತೆಯ ಪೌರಾಣಿಕ ಉಲ್ಲೇಖಕ್ಕೊ, ಜನರ ರಂಜನಾರ್ಥಕ್ಕೋ ಏರ್ಪಡುವ ನೃತ್ಯ - ನಾಟಕಾದಿಗಳನ್ನೊಳಗೊಂಡ ದೃಶ್ಯಗಳನ್ನು ಅವರು ಅಭಿನಯಿಸುತ್ತಿದ್ದರು. ಆದರೆ ದೇವಾಲಯದ ಸೂಳೆಯರಿಗಿಂತ ಅವರು ಭಿನ್ನವಾಗಿದ್ದರು. 'ರಾಯಪಾತ್ರಚೂಡಾಮಣಿ' ಎಂಬ ಬಿರುದು ಪಡೆದ ಮಂಗಾಯಿ, ಬಸದಿ ಕಟ್ಟಿಸಿದ್ದಳು. ಕ್ರಿಯಾಶಕ್ತಿ ಪಂಡಿತದೇವರ ಮಗಳು ಪಟ್ಟಸಾಹಣಿ ಮಲ್ಲಯ್ಯನ ಹೆಂಡತಿ 'ಪಾತ್ರಚೂಡಾಮಣಿ' ಎಂಬ ಬಿರುದು ತಳೆದಿದ್ದಳು ಪಾತ್ರದವರ ಮುಖ್ಯಸ್ಥವಾಗಿರುವದು ಗೌರವದ ವಿಷಯವಾಗಿತ್ತು. 'ಪಾತ್ರ' ಶಬ್ದ ಆಗ ಹೀನ ಅರ್ಥವನ್ನು ಹೊಂದಿದ್ದಿಲ್ಲ.

iii. ವಾರಾಂಗನೆಯರು : ದೇವಾಲಯದ ಸೇವಾವರ್ಗಕ್ಕಿಂತ ಭಿನ್ನವಾದದ್ದು ವಾರಾಂಗನೆಯರ; ಗಣಿಕೆಯರ ಅಥವಾ ವೇಶ್ಯೆಯರ ವರ್ಗ, ಕೆಲವೊಮ್ಮೆ ಇವರನ್ನೆಲ್ಲ ಪ್ರತ್ಯೇಕಿಸುವುದು ಕಷ್ಟದ ಕೆಲಸ ! ಕನ್ನಡ ಕಾವ್ಯಗಳಲ್ಲೆಲ್ಲ, ಕಡ್ಡಾಯವಾಗಿದ್ದ ಅಷ್ಟಾದಶ ವರ್ಣನೆಗಳಲ್ಲಿ ವೇಶ್ಯಾ

ವರ್ಣನೆ ಬಂದೇ ಬರುತ್ತಿತ್ತು. ಆದರೆ ಅವುಗಳಲ್ಲಿ ನಿಜವಿರಬಹುದಾದ ಅಂಶಗಳನ್ನು, ಶಾಸನಗಳ ವಿವರಗಳೊಂದಿಗೆ ತೌಲನಿಕವಾಗಿ ನೋಡಿದಾಗ, ಸಮಕಾಲೀನ ಸಮಾಜದ ಚಿತ್ರಗಳು ದೊರೆಯುವದುಂಟು. ಪಂಪನ ವಿಕ್ರಮಾರ್ಜುನ ವಿಜಯದ ವೇಶ್ಯಾವಾಟಿಕೆಯ ವರ್ಣನೆ ವಿನೋದಮಯವಾಗಿ ಇದ್ದಂತೆ, ಅಲ್ಲಿಯ ಕೆಲ ಪದ್ಧತಿಗಳನ್ನೂ ನಮೂದಿಸುತ್ತದೆ.

ಇಂದಿನ ಡೋರ್ ಬೆಲ್ (Call - bell) ತರಹ ಅಂದಿನ ವೇಶ್ಯೆಯರ ಮನೆಯ ಮುಂದೆ ಗಂಟೆಗಳಿರುತ್ತಿದ್ದವು. ಹೇರಳವಾದ ಹಣ, ಬಗೆ ಬಗೆಯ ರತ್ನಾಭರಣಗಳನ್ನು, ತಂದು ಧಾರಾಳವಾಗಿ ಕಸ್ತೂರಿಯನ್ನು ಲೇಪಿಸಿಕೊಂಡು, 'ಸೀಗುರಿ' ಎಂಬ ಅಲಂಕೃತ ಕೊಡೆಯನ್ನು ಹಿಡಿದು, ತಮ್ಮ ಶೌರ್ಯ - ತ್ಯಾಗಗಳನ್ನು ಹೊಗಳುವ ಸಂಗಡಿಗರಿಂದ ಕೂಡಿಕೊಂಡು ಕೋಟಿಹೊನ್ನು ಕೊಡಿಸುತ್ತೇವೆ! ಎಂದು ಬಡಾಯಿ ಕೊಚ್ಚುತ್ತ ಬರುವ ರಾಜವಿಟರು ಗಂಟೆ ಬಾರಿಸುತ್ತಿದ್ದರು ಎಂದು ಮಹಾಕವಿ ಪಂಪನು ಹೇಳಿದ್ದಾನೆ. ಸುಳ್ಳು ಮಾತನಾಡುವ ವಿಟರು ಎಂದಿನಂತೆ ಸಾಕಷ್ಟು ಸಂಖ್ಯೆಯಲ್ಲಿ ಇದ್ದರು.

ವೇಶ್ಯಾಸ್ತ್ರೀಯರನ್ನು ಒಲಿಸಿಕೊಳ್ಳಲು ಬರುವವರಲ್ಲಿ ಬಗೆಬಗೆಯ ಜನರು ಇರುತ್ತಿದ್ದರು. ಕಾದದ ಶೌರ್ಯ ಇಲ್ಲದಕುಲ, ಕಾಣದ ತ್ಯಾಗ, ಓದದ ಓದು ತಿಳಿಯದ ವಿದ್ಯೆ, ಸಲ್ಲದ ಜಾಣ್ಮೆ, ಕಲಿಯದ ಕಲಿಕೆ, ಮಾತುಗಾರಿಕೆ ಅರಿಯದ ದಡ್ಡರು (ಎಗ್ಗರು), ವೇಶ್ಯಾವಾಟಿಕೆಯಲ್ಲಿ ಕಂಡು ಬರುತ್ತಿದ್ದರು. ದಡ್ಡರು ಬಂದರೆ, ಚತುರೆಯರಾದ ಗಣಿಕೆಯರು ಕೂಡಲೇ ಅವರನ್ನು ಗುರುತಿಸಿಕೊಂಡು ರಹಸ್ಯಭಾಷೆಯಲ್ಲಿ ತಂತಮ್ಮಲ್ಲೇ ಆಡಿಕೊಂಡು ಶಿವನ ಮುಂದಿನ ನಂದಿಯನ್ನು ಹೋಲುವ ಆತನನ್ನು ಕಾಡಿಸಿ ಹಂಗಿಸಿಕಳಿಸಿ ಬಿಡುತ್ತಿದ್ದರು.

ಕೆಲವರು ಪ್ರಿಯತಮ ನನ್ನ ಉಳಿಸಿಕೊಳ್ಳುಲು ಕಣ್ಣೀರು ಹಾಕಿ, ಶರಣಾಗತಿಯ ಮೊರೆ ಹೊಕ್ಕರೆ, ಕೆಲವರು ತಮ್ಮ ವೇಶ್ಯೆಯಲ್ಲಿ ಬೇಸರಗೊಂಡು ಜಾರಿ ಕೊಳ್ಳುವ ವಿಧಾನವನ್ನು ಯೋಚಿಸುತ್ತಿದ್ದರು. ಧನದಾಸೆಗೆ ಮುದುಕನನ್ನು ಬರಮಾಡಿಕೊಂಡ ಒಬ್ಬಾಕೆ" ಮುದುಕನು ಗೊರಕೆ ಹೊಡೆದರೆ, ಬೆಟ್ಟಗಳು ಬಿರಿಯುತ್ತವೆ. ಸುರಿಯುವ ಜೊಲ್ಲು ಲೋಳಿಯಾಗಿ ಪ್ರವಾಹವಾಗಿ ಹರಿಯುತ್ತದೆ. ಕೆಮ್ಮಿದರೆ ನನ್ನ ತೋಳೊಳಗೇ ಜೀವ ಬಿಡುತ್ತಾನೋ ಅನಿಸುತ್ತದೆ. ಆತ ಬಂದು ಚಿನ್ನವನ್ನು ಸುರಿದರೂ ಹಲ್ಲಿಲ್ಲದ ಬಾಯಿಯ ದುರ್ಗಂಧವನ್ನು ಯಾರು ತಾನೇ ಸಹಿಸಬೇಕು? ಎಂದು ನಗಿಸುತ್ತಿದ್ದಳು. ಮುಗ್ಧರಾದ ಕೆಲವರ ಮಾತು, ನೋಟ, ತುರುಬುಗಳ ಹುಂಬ (ಗಾಂಪ) ರೀತಿಯನ್ನು ಸುಸಂಸ್ಕೃತರೆಂದು ನಟಿಸುವ ವಿಟರು ಟೀಕಿಸಿ ನಗುತ್ತಿದ್ದರು.

ಎಳೆಯವಯಸ್ಸಿನ ವೇಶ್ಯೆಯರಿಗೆ ತಾಯಂದಿರಾಗಲಿ, ಕುಂಟಣಿಯರಾಗಲಿ ಆಗಾಗ ಬುದ್ಧಿ ಹೇಳುತ್ತಿದ್ದರು. "ನಿನ್ನನ್ನು ನೋಡುವ ವಿಟರು ಆಸೆ ಪಡುವಂತೆ ಒನಪು ಬೆಡಗುಗಳಿಂದ ನೋಡಬೇಕು, ಚೆನ್ನಾಗಿ ಮಾತನಾಡುವವರೊಡನೆ ಬೆದರಿದಂತೆ ನಟಿಸಬೇಕು. ಹಣವನ್ನು ಕೊಡುವವರ ಕಾಮ ಹೆಚ್ಚುವಂತೆ ನೋಡಿಕೊಳ್ಳಬೇಕು" ಒಬ್ಬಾಕೆ ಹೇಳಿದರೆ ಇನ್ನೊಬ್ಬಾಕೆ, ಒಬ್ಬನನ್ನೇ ಪ್ರೀತಿಸಿ ಇತರ ರೊಡನೆ ಕನ್ಯೆಯಂತೆ ನಡೆದುಕೊಳ್ಳುತ್ತೀಯೇ! ನಿನ್ನ ಈ ಗುಟ್ಟು ತಿಳಿದರೆ ಇತರ ವಿಟರು ಏನನ್ನೂ ಕೊಡಲಿಕ್ಕಿಲ್ಲ! ಎಂದು ಗದರಿಸುತ್ತಿದ್ದಳು.

ವೇಶ್ಯಾಸ್ವಭಾವ, ಬೆಡುಗುಬಿನ್ನಾಣಗಳ ಪರಿಯನ್ನು ಹಲವಾರು ಕಾವ್ಯಗಳು ಹಲವು ಬಗೆಯಲ್ಲಿ ವರ್ಣಿಸಿವೆ. ಒನಪುವೈಯ್ಯಾರಗಳನ್ನು ಮೈಗೂಡಿಸಿಕೊಳ್ಳುವದನ್ನು ಅನುಭವಸ್ಥ ಹೆಂಗಳೆಯರು, ಮುಗ್ಧೆಯರಿಗೆ ಹೇಳಿಕೊಡುತ್ತಿದ್ದರು.

iv. ವೇಶ್ಯಾ ನಿವಾಸಗಳು : ಊರಿನ ಉತ್ತಮ ವಸತಿ ಭಾಗದಲ್ಲಿ ಇರುತ್ತಿದ್ದ ಭವನಗಳಲ್ಲಿ ಶುಭ್ರವಾದ ಮೇಲ್ಹಾಸು, ಗದ್ದುಗೆಗಳು, ಮಲಗುಗನ್ನಡಿ, ಸುವಾಸಿತ ದ್ರವ್ಯಗಳನ್ನು ಸಿಂಪಡಿಸುವ ಕಾಳಾಂಜಿ, ಹಾಸುಮಂಚ, ಉಯ್ಯಾಲೆ ಬೀಸಣಿಗೆ, ಸುಗಂಧಗಳ ತಟ್ಟೆ ಅಂಜನದ ಕರಂಡಕ, ವೀಳ್ಯದ ಸಲಕರಣೆಗಳು ಇಂಪಾದ ಸದ್ದು ಮಾಡುವ ಪಾದುಕೆಗಳು, ಪಂಜರದ ಗಿಣಿಗಳು ಇರುತ್ತಿದ್ದವು. ಗೋಡೆಗಳ ಮೇಲೆ ಸುಂದರ ಚಿತ್ರಗಳು ಇರುತ್ತಿದ್ದುವು.

ಮನೆಗಳ ಉಪ್ಪರಿಗೆ ಮೇಲೆ ಲೆತ್ತ, ಚದುರಂಗದಾಟಗಳ ವ್ಯವಸ್ಥೆ ಇರುತ್ತಿತ್ತು. ಅಲ್ಲಿ ಕೆಲವರು ವೀಣೆ ನುಡಿಸಿದರೆ, ಕೆಲವರು ನೃತ್ಯ ಕಲಿಯುತ್ತಿದ್ದರು. ಇತರ ವಾದ್ಯಗಳನ್ನು ಕಲಿಯುವವರೂ ಅಲ್ಲಿದ್ದರು. ಕೆಲವರು ಕಾಮಶಾಸ್ತ್ರ ಓದುತ್ತಿದ್ದರು. ಇನ್ನೂ ಕೆಲವರು ವೇಶ್ಯಾ ವಿಡಂಬನೆಯ ಕಥೆಗಳನ್ನು ಕೇಳುತ್ತಿದ್ದರು. ಹೆಚ್ಚಿನ ಯುವತಿಯರು ಚೆನ್ನಾಗಿ ಅಲಂಕರಿಸಿ ಕೊಂಡು, ನಲ್ಲರೊಡನೆ ಗೋಷ್ಠಿಯೊಳಗೆ ಇರುತ್ತಿದ್ದರು.

ಸಂಸ್ಕೃತ ಕೃತಿಗಳಂತೆ ವೇಶ್ಯೆಯರ ವಿವಿಧ ಕಲೆಗಳ ಪರಿಣತಿ ಮತ್ತು ಬೌದ್ಧಿಕ ಚಾತುರ್ಯ ಮೆರೆಸುವ ಕಾವ್ಯವಾಚನ, ಸಮಸ್ಯಾಪೂರ್ತಿ, ದುರ್ವಾಚಕ ಯೋಗ, ಅಥವಾ ಕಠಿಣಶಬ್ದಗಳ ಸಾಲುಗಳನ್ನು ಅಡೆತಡೆ ಇಲ್ಲದೇ ಪೂರ್ತಿಗೊಳಿಸುವದು, ಹತ್ತು ಹಲವು ರಂಜನಾ ವಿಧಾನಗಳು ಕನ್ನಡ ಕಾವ್ಯಗಳಲ್ಲಿ ಇಲ್ಲ. ಆದರೂ ಪದ್ಮರಾಜಪುರಾಣದಲ್ಲಿ ಮದನಾಗಮ (ಕಾಮಶಾಸ್ತ್ರ) ಕೇಳುವ ಭರತನಾಟ್ಯವನ್ನು ಪರಿಕಿಸುವ, ಚತುರೋಕ್ತಿಗಳನ್ನು ತಿಳಿದ ಕೊಳ್ಳುವ, ಸಂಗೀತ ಕಲಿಯುವ, ವೀಣೆಗಳನ್ನು ಬಾಜಿಸುವ, ಬಿನ್ನಣದ ಮಾತು ಆಡುವ, ಶೃಂಗಾರ ಕಾವ್ಯಗಳನ್ನು ಓದಿಸುವ, ನಾಟಕದ ರಸವನ್ನು ಅನುಭವಿಸುವ, ಅಲಂಕಾರ ಶಾಸ್ತ್ರಗಳಿಗೆ ಅನುಗುಣವಾಗಿ ರಚಿಸಿದ ಕವಿತೆಗಳನ್ನು ಸವಿಯುವ "ಸುಪ್ರೌಢ ಸುದತಿಯ'ದರು ವೇಶ್ಯಾವಾಟಿಕೆಯಲ್ಲಿ ಕಂಡುಬರುತ್ತಿದ್ದರು ಎಂಬ ವರ್ಣನೆ ಇದೆ. ಕನಕದಾಸರ ಮೋಹನತರಂಗಿಣಿಯ ಪ್ರಕಾರ, ಗೀತಗಾಯಕಿಯರು, ಹಸ್ತಿವಾವುಜ, ವೀಣೆ ಮದ್ದಳೆ, ರಾವಣಹಸ್ತೆ, ಕಿನ್ನರಿ, ಜಂತ್ರ, ಹುಡುಕ್ಕ ಕಠಿಣವಾದ ಸ್ವರಮಂಡಲ ಮುಂತಾದವನ್ನು ನುಡಿಸ ಬಲ್ಲ ಸಕಲವಿದ್ಯಾಸ್ತ್ರೀಯರು ಇದ್ದರು. 'ಎಲ್ಲಾ ಕಲೆಗಳ ಮೂಲಾಗ್ರವ ನೆರೆ ಬಲ್ಲಂಥ' ವಾರನಾರಿಯರಿದ್ದರು.

ವಾದ್ಯ - ವಾದನ, ಗಾನ, ಕಾಮಶಾಸ್ತ್ರಗಳ ವಿಧಾನಗಳಲ್ಲಿ ಪರಿಣತರಲ್ಲದೇ ನಾನಾ ದ್ಯೂತ (ಜೂಜಿನ) ಆಟಗಳಲ್ಲೂ ಈ ನಾರಿಯರು ಬಲ್ಲಿದರಾಗಿದ್ದರು. ಅವರ ವೃತ್ತಿಯಲ್ಲಿ ಹಣ ಸೆಳೆಯುವದೇ ಮುಖ್ಯವಾದರೂ, ಅದನ್ನು ರೂಢಿಸಿ ಕೊಳ್ಳಲು ಹಲವಾರು ನವಿರಾದ ಉಪಾಯಗಳನ್ನು ಅವರು ರೂಢಿಸಿಕೊಳ್ಳಬೇಕಾಗುತ್ತಿತ್ತು. ಲೆತ್ತ, ಜೂಜುಗಳಲ್ಲಿ ಅವರು ಚತುರರಿರುತ್ತಿದ್ದರು.

ವೇಶ್ಯಾವರ್ಣನೆ ಕಾವ್ಯದ ಕಡ್ಡಾಯದ ವರ್ಣನೆಗಳಲ್ಲಿ ಒಂದಾಗಿ ಬೆಳೆದು ಬಂದರೆ, ಅರಸರಿಗೆ 'ವೇಶ್ಯಾ ಭುಜಿಂಗ' ನೆನಿಸಿಕೊಳ್ಳುವದು ಹೆಮ್ಮೆಯ ವಿಚಾರವಾಗಿತ್ತು. ಅಮೋಘವರ್ಷ ನೃಪತುಂಗನಿಗೆ ಸಹಸ್ರಾಲಂಕೃತ ಗಣಿಕಾವೃಂದ ಇದ್ದರೆ, ಹೊಯ್ಸಳ ದೊರೆ ನರಸಿಂಹನು ಮೂರನೂರ ಎಂಭತ್ನಾಲ್ಕು ಹೆಣ್ಣುಗಳಿಗೆ ಒಡೆಯನಾಗಿದ್ದನಂತೆ!

ಇವೆಲ್ಲ ಅತಿಶಯೋಕ್ತಿಯ ಬಿರುದುಗಳಾಗಿದ್ದರೂ, ವೇಶ್ಯಯರಿಗೂ ಒಡೆಯನಾಗಿದ್ದೇನೆಂದು ಹೇಳಿಕೊಳ್ಳುವದು ಸಂಭ್ರಮದ ವಿಚಾರವಾಗಿತ್ತು. ಜೊತೆಗೆ, ನಂತರದ, ಅಂದರೆ ೧೮ನೆ ಶತಮಾನದ ಬಳಿಕದ ಕಳಂಕ, ಹಿಂದಿನ ಯುಗದ ವಾರಾಂಗನೆಯರಿಗೆ ತಟ್ಟಿರಲಿಲ್ಲ, ಎಂಬುದು ಸ್ಪಷ್ಟವಾಗುತ್ತದೆ.

ತಾರುಣ್ಯದಲ್ಲಿ ತಮ್ಮ ಮಾತಿನ ಮೋಡಿ, ಕಲಾಪರಿಣತಿ, ಕಪಟತೆ, ಚಾತುರ್ಯಗಳಿಂದ ಜೀವನ ನಡೆಸಿದವರಿಗೆ ಮುದಿವಯಸ್ಸಿನಲ್ಲಿ ವಿಟರನ್ನು ಆಕರ್ಷಿಸುವದು ಬಲು ಕಷ್ಟದ್ದಾಗುತ್ತಿತ್ತು.

ಮಸಿಗಪ್ಪಡವನಡಸಿ ತುರುಬಿಟ್ಟು
ನರೆದಲೆಗೆ ಮುಸುಕಿಟ್ಟು ಬಿದ್ದ ಪರ್ಮೊಲೆಗಳಿಗೆ
ರವಕೆಯಂ ಸಸಿನೆಬಿಗಿದು ಎವೆಯುದಿರ್ದ
ಕಣ್ಗೆ ಕಾಡಿಗೆಯಚ್ಚು ಸದೆ ಸೊಪ್ಪ ನಣಿಲೊಳಡಸಿ
ಮುಸುಡುಗಾಣದ ತೆರದಿ ಹಿಂದೆ ಸೊಡರಿಟ್ಟು ನೆರೆ
ನಸಿದರಾಗದಿ ಕೊಳೆತ ಹಾಡ ಬಗಳುತ ಗಂಡು
ವೆಸರು ಸುಳಿಯಲು ಬಾರೊಯೆನ್ನಾಣೆಯಂಬ ಮುದುಪಾಳಿ
ರ್ದಳ್ ಒಂದು ದೆಸೆಯಲಿ . . . .

ನರೆಗೂದಲು ಕಾಣದಂತೆ ಮಸಿಗಪ್ಪಡವನ್ನು ತುರುಬಿಗೆ ಸುತ್ತಿ, ಮುಖದ ಸುಕ್ಕಕಾಣದಂತೆ ಸರಿಯಾಗಿ ಮುಸುಕು ಎಳೆದು, ಜೋಲು ಬಿದ್ದು ಮೊಲೆಗಳು ಎದ್ದು ನಿಲ್ಲುವಂತೆ ಬಿಗಿಯಾಗಿ ರವಕೆಬಿಗಿದು, ಎವೆ ಉದುರಿದ ಕಣ್ಣುಗಳಿಗೆ ಕಾಡಿಗೆಯನ್ನು ಎರಚಿ, ಕೋಣೆಯನ್ನು ಸೊದೆಸೊಪ್ಪುಗಳಿಂದ ನಸುಗತ್ತಲು ಮಾಡಿ, ಮುಖಕಾಣದಂತೆ ಹಿಂಬದಿಗೆ ದೀಪ ಇಟ್ಟು. ಗೊಗ್ಗರಧ್ವನಿಯಲ್ಲಿ ಕೊಳೆತ ಹಾಡು ಹಾಡುತ್ತ ಗಂಡುಪ್ರಾಣಿ ಸುಳಿದರೆ ಕರೆಯುವ ಮುದಿ ಸೂಳೆಯ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಕವಿ ರಾಘವಾಂಕನು ಚಿತ್ರಿಸಿದ್ದಾನೆ.

v. ತೊತ್ತು : ಸಂಸ್ಕೃತದ ದಾಸಿಗೆ ಸಮಾನವಾದ ಈ ಕನ್ನಡ ಶಬ್ದ, ಸಮಾಜದಲ್ಲಿ ಯಾವಸ್ಥಾನಮಾನವೂ ಇಲ್ಲದೇ ಇನ್ನೊಬ್ಬರ ಸೇವೆಯಲ್ಲೆ ಸವೆಯುತ್ತಿದ್ದ ನಿರ್ಭಾಗ್ಯೆಯನ್ನು ಸೂಚಿಸುತ್ತಿರಲು ಸಾಕು. ಕೆಲವು ತೊತ್ತುಗಳನ್ನು ಲೈಂಗಿಕವಾಗಿ ಬಳಸಿಕೊಂಡರೂ ಅವರಿಂದ ಜನಿಸಿದ ಮಕ್ಕಳಿಗೆ ಉಪಜೀವನದ ವ್ಯವಸ್ಥೆ ಮಾಡಿದ ಹೆಣ್ಣುಮಕ್ಕಳಂತೆ, ತೊತ್ತಿನಮಕ್ಕಳಿಗೂ ವೃತ್ತಿಯನ್ನು ಕಲ್ಪಿಸಿದ, ಶಾಸನಗಳಿವೆ.

ದೇವರ ತೊತ್ತಾಗಿ, ಅನೇಕ ಜನ ಸೇವೆ ಸಲ್ಲಿಸುತ್ತಿದ್ದರು. ತನ್ನನ್ನು ಕಲಿ ದೇವರ ತೊತ್ತು ಎಂದು ಕರೆದುಕೊಂಡ ಪಾತ್ರದ ಸಿರಿಯವ್ವೆ, ದೇವತೆಗೆ ದೀಪದ ಸೇವೆಯ ವ್ಯವಸ್ಥೆ ಮಾಡಿದ್ದಳು. ನಂಬಿಯಕ್ಕ, ಪಂಪಾಕ್ಷೇತ್ರಕ್ಕೆ ಬಂದು ಸ್ವಪ್ರೇರಣೆಯಿಂದ ವಿರೂಪಾಕ್ಷನ ಊಳಿಗ ಕೈಕೊಂಡಿದ್ದಳು. ಶಾಸನ ಕಾವ್ಯಗಳ ಉಲ್ಲೇಖದಿಂದ ತೊತ್ತುಗಳನ್ನು ವಸ್ತುಗಳಂತೆ ಕೊಳ್ಳುವ ಪದ್ಧತಿಯೂ ಇತ್ತೆಂದು ತಿಳಿಯುತ್ತದೆ. ಅತಿ ನಿಮ್ನಸ್ತರದಲ್ಲಿದ್ದ ತೊತ್ತಿನ, ದಾಸ ಅಥವಾ ದಾಸಿಯ ಸ್ಥಾನವನ್ನು ಸುಧಾರಿಸಲು ಬಸವಣ್ಣನವರು ಶ್ರಮಿಸಿದರು. ಅರಸನ ಮನೆಯಲ್ಲಿ ಅರಸಿಯಾಗಿರ್ಪುದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರ್ಪುದು ಲೇಸಯ್ಯ! 'ತಾರೊ ಅಫ್ಪುವಣೆಯ, ನೀಡು ಪತ್ರಯ, 'ಲಿಂಗಕ್ಕೆ ಬೋನವ ಹಿಡಿ ಕೂಡಲ ಮಹಾಮನೆಯಲ್ಲಿ ಒಕ್ಕಿದುಣ್ಣು ತೊತ್ತೇ!' ಎಂಬರು ಎಂದು ಉದ್ಗರಿಸಿದರು. 'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಕೊಂಬುದೇಯೋಗ್ಯ' ಎಂದು ಹುಟ್ಟಿಗೂ, ಯೋಗ್ಯತೆಗೂ ಸಂಬಂಧವಿಲ್ಲವೆಂದು ಮನಗಾಣಿಸಲು ಹವಣಿಸಿದರು. ಕೊನೆಗೆ

ಚನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲ ಸಂಗಮ ದೇವರ ಸಾಕ್ಷಿಯಾಗಿ' ಎಂದು ಇನ್ನಿಬ್ಬರು

ಶರಣರೊಂದಿಗೆ ತಮ್ಮ ವಿನೀತಭಾವ ತೋರಿಸಿಕೊಳ್ಳುವದರ ಜೊತೆಗೆ ಈ ವರ್ಗದವರನ್ನು ದೂರವಿರಿಸುವದು ಸಲ್ಲವೆಂದು ಸೂಚಿಸಿದರು. ದಲಿತವರ್ಗಕ್ಕೆ ಅಂತಸ್ತನ್ನು ಕೊಡಲು ಯತ್ನಿಸಿದರು.

ಬಸವಣ್ಣನವರ ಕಾಲಕ್ಕೆ ಆಗಲೇ ಶ್ರೀಮಂತವರ್ಗದ ಗಣಿಕೆಯರನ್ನು ಹೊರತುಪಡಿಸಿ, ವೇಶ್ಯಾವರ್ಗವನ್ನು (ತೊತ್ತ ಸೇರಿದಂತೆ) ಸಮಾಜ ಕೀಳಾಗಿ ನೋಡುತ್ತಿದ್ದುದು ಸ್ಪಷ್ಟ. ವೇಶ್ಯೆಯ ಮಗಳು ವೇಶ್ಯೆಯಾಗಿಯೇ ಜೀವನ ಸವೆಸಿದರೆ, ಗಂಡುಮಕ್ಕಳು ಎದುರಿಸ ಬೇಕಾಗಿದ್ದ ನಿಂದೆ ತಿರಸ್ಕಾರಗಳಿಗೆ ಎಣೆಯಿರಲಿಲ್ಲ.

ವಿದೇಶೀಯರು ಕಂಡ ವೇಶ್ಯೆಯರು, ದೇವದಾಸಿಯರು : ಪರ್ಶಿಯ ದೇಶದ ರಾಯಭಾರಿಯಾಗಿ ಕ್ರಿ. ಶ. ೧೪೪೨ ರಲ್ಲಿ ವಿಜಯನಗರಕ್ಕೆ ಬಂದಿದ್ದ ಅಬ್ದುರ್ ರಝಾಕ್‌ನು ವೇಶ್ಯೆಯರ ನಿವಾಸಕ್ಕೆ ಮೀಸಲಾಗಿದ್ದ ಬೀದಿಯನ್ನು ವರ್ಣಿಸಿದ್ದಾನೆ. ಈ ವೇಶ್ಯಾಗೃಹಗಳ ಭವ್ಯತೆಯನ್ನು, ಯುವತಿಯರ ಸೌಂದರ್ಯವನ್ನು ಹಾವ ಭಾವವಿಲಾಸಗಳನ್ನು ವರ್ಣಿಸಲು ಸಾಧ್ಯವಿಲ್ಲ! ಎಂದು ಉದ್ಗರಿಸಿದ್ದಾನೆ.

ಬೀದಿಯ ಎರಡೂ ಕಡೆಗೆ ಸಿಂಹಾಸನೋಪಾದಿಯಲ್ಲಿ ಪೀಠಗಳಿದ್ದು ಸಿಂಹ, ಹುಲಿ, ಚಿರತೆ, ಮತ್ತಿತರ ಪ್ರಾಣಿಗಳ ಅತ್ಯಂತ ನೈಜವಾದ ಚಿತ್ರಗಳಿದ್ದವು. ಮಧ್ಯಾಹ್ನದ ಬಳಿಕ ಭವ್ಯವಾಗಿ

ಸಿಂಗರಿಸಿದ ತಂತಮ್ಮ ಗೃಹಗಳ ಮುಂದಿನ ಪೀಠಗಳಲ್ಲಿ ಸರ್ವಾಲಂಕಾರ ಭೂಷಿತೆಯರಾದ ಯುವತಿಯರು, ದಾಸಿಯರೊಂದಿಗೆ ಕುಳ್ಳಿರುತ್ತಿದ್ದರು. ಯಾರು ಬೇಕಾದರೂ ಬಂದು ಇಷ್ಟಪಟ್ಟ ಯುವತಿಯೊಡನೆ ಕಾಲ ಕಳೆಯಬಹುದಾಗಿತ್ತು. ನಗರದ ಏಳು ಕೋಟೆಯ ಒಳಗೂ ಅನೇಕ ವೇಶ್ಯಾಗೃಹಗಳಿದ್ದವು. ವೇಶ್ಯಾಗೃಹಗಳ ತೆರಿಗೆಯಿಂದ ಅರಸನಿಗೆ ಆದಾಯವಿತ್ತೆಂದು ರಝಾಕ ಹೇಳಿದ್ದಾನೆ. ಕೌಟಿಲ್ಯನ ಕಾಲದಲ್ಲೂ ವೇಶ್ಯಾವ್ಯವಸಾಯದ ಮೇಲೆ ನಿಯಂತ್ರಣವಿದ್ದು ಅವರಿಂದ ರಾಜಭಂಡಾರಕ್ಕೆ ದೊಡ್ಡ ಆದಾಯವಿತ್ತು. ಈ ವರ್ಗದ ತುಂಬ ಸಿರಿವಂತರಿಂದ ತೆರಿಗೆ ಪಡೆಯಬಹುದಾಗಿದ್ದ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಅವರ ಆಭರಣರಾಶಿ ಕಣ್ಣು ಕುಕ್ಕುವಂತೆ ಇತ್ತು ಎಂದು ತುಂಬ ಸಮೀಪದಿಂದ ವಿಜಯನಗರದ ನವರಾತ್ರಿ ವೈಭವವನ್ನು ನೋಡಿದ ಪೋರ್ಚುಗೀಸ್ ಪ್ರವಾಸಿ ಡೋಮಿಂಗೂ ಪೈಸ್ (ಕ್ರಿ. ಶ. ೧೫೨೦)ನು ವರ್ಣಿಸಿದ್ದಾನೆ. ಈ ಸ್ತ್ರೀಯರು ತಮ್ಮ ದೇಹದ ಮೇಲೆ ಧರಿಸಿದ ವಿಪುಲ ಸಂಪತ್ತನ್ನು ಯಾರು ತಾನೇ ಯಥಾರ್ಥವಾಗಿ ಅಳೆಯ ಬಲ್ಲರು ? ವರ್ಣಿಸಬಲ್ಲರು ? ಅಷ್ಟೊಂದು ವಜ್ರ, ಮಾಣಿಕ್ಯ, ಮುತ್ತುಗಳ ಕಂಠಾಭರಣಗಳು, ಕಡಗಗಳು, ನಡುಪಟ್ಟಿ, ಕಾಲ್ಗಡಗಗಳು ! ಅರ್ಥಾತ್ ಇಂಥ ವೃತ್ತಿಯ ಸ್ತ್ರೀಯರಿಗೆ ಇಷ್ಟು ಐಶ್ವರ್ಯ ಹೇಗೆ ಬಂತೆಂಬ ಬಗ್ಗೆ ಅಚ್ಚರಿಯಾಗುತ್ತದೆ. ಆದರೆ ಅವರಿಗೆ ಕೊಡಲ್ಪಟ್ಟ ಹೊಲಗಳು, ಮೇಣೆಗಳು, ಬಹಳಷ್ಟು ಸೇವಕಿಯರು, ಮತ್ತು ವರ್ಣಿಸಲಾಗದಷ್ಟು ವಸ್ತುಗಳಿವೆ. ಒಂದು ನೂರುಸಾವಿರ ಬಂಗಾರದ ನಾಣ್ಯಗಳನ್ನು ಪಡೆದಿರುವಳೆಂದು ಹೇಳಲಾದ ಸ್ತ್ರೀಯೊಬ್ಬಳು ಈ ನಗರದಲ್ಲಿದ್ದಾಳೆ. ಅವರನ್ನು ನೋಡಿದ್ದರ ಮೇಲಿನಿಂದ ನಾನು ಈ ಮಾತನ್ನು ನಂಬುತ್ತೇನೆ' ಎಂದು ಉದ್ಗರಿಸಿದ್ದ.

ಈ ವರ್ಗಕ್ಕೆ ಇದ್ದ ಪ್ರತಿಷ್ಠಿತ ಮಾನವನ್ನೂ ಪೈಸ್ ಗಮನಿಸಿದ್ದ. ರಾಜನ ಪರಿವಾರದೆದುರು ವೀಳ್ಯ ಹಾಕಿಕೊಳ್ಳುವ ಅಧಿಕಾರ ಇದ್ದವರೆಂದರೆ ಇವರು ಮಾತ್ರ. ಸಂಗೀತ-ನೃತ್ಯಾದಿಗಳನ್ನು ರೂಢಿಸಿಕೊಂಡ ವರ್ಗವಾಗಿದ್ದು, ಅಂತಃ ಪುರದೊಳಗೆ ಅವರಿಗೆಲ್ಲ ಮುಕ್ತ ಪ್ರವೇಶ ಇತ್ತು.

ಗಣಿಕೆಯರಿಗೆ ರಾಜಾಶ್ರಯ, ಶ್ರೀಮಂತರ ಕೃಪಾಕಟಾಕ್ಷ ಇದ್ದು ಅವರಿಗೆ ತೆರಿಗೆಯ ವಿಮುಕ್ತಿ ಇದ್ದಿರಲಿಕ್ಕಿಲ್ಲ! ದೇವಸ್ಥಾನಗಳಲ್ಲಿಯ ಶಾಸನಗಳೂ ಸೂಳೆವಣ, ಸೂಳೆದೆರೆ, ಕನ್ನಡಿದೆರೆ ಮುಂತಾದವನ್ನು ಉಲ್ಲೇಖಿಸುತ್ತವೆ.

ಕರ್ನಾಟಕವನ್ನು ಉದ್ದಗಲಕ್ಕೂ ಸಂಚರಿಸಿ ಇಲ್ಲಿಯ ಜನಜೀವನವನ್ನು ನಿಕಟವಾಗಿ ನೋಡಿ ವೃತ್ತಾಂತಗಳನ್ನು ಬರೆದಿಟ್ಟ ಹಲವರು ವಿದೇಶೀಯರಲ್ಲಿ, ದು ಆರ್ತೆ ಬಾರ್ಬೋಸಾ, ಮತ್ತು (ಕ್ರಿ.ಶ. ೧೫೧೬) ಆಬ್ಬೆಡೂಬಾ (ಕ್ರಿ. ಶ. ೧೭೭೩-೧೮೪೦) ಪ್ರಮುಖರಾಗಿದ್ದಾರೆ. ಇವರಿಬ್ಬರ ನಡುವಣ ಎರಡು ಶತಮಾನಗಳ ಅಂತರ ಗಮನಿಸಿದರೆ ದೇವದಾಸಿಯರ ವರ್ಗ, ಏಕ ಪ್ರಕಾರವಾಗಿ ನಡೆದು ಬಂದಿದೆ, ಅನಿಸುತ್ತದೆ. ಡೂಬಾ ಮಾತ್ರ ಕ್ರೈಸ್ತ ಮಿಶನರಿಯಾಗಿದ್ದು, ಮೂವತ್ತು ವರ್ಷಗಳ ಕಾಲ, ಕರ್ನಾಟಕ -ತಮಿಳು ನಾಡಿನ ಜನಜೀವನದ ಆಂತರಿಕ ಬೇದ ಭಾವವನ್ನು ಗುರುತಿಸಬಲ್ಲವನಾಗಿದ್ದ. ಇವರಿಂದ ಮತ್ತು ಈ ಕಾಲಾಂತರದಲ್ಲಿ ಕರ್ನಾಟಕ

ಸಂದರ್ಶಿಸಿದ ಇತರ ವಿದೇಶಿಯರ ವೃತ್ತಾಂತಗಳಿಂದ, ದೇವಾಲಯಗಳಿಗೂ, ದೇವದಾಸಿಯರಿಗೂ ಇದ್ದ ಅವಿನಾ ಸಂಬಂಧದ ಕೆಲವು ಹೊಳಹುಗಳನ್ನು ಪಡೆಯಬಹುದಾಗಿದೆ. ಆದರೆ ಆ ಕಾಲಕ್ಕಾಗಲೇ ದೇವದಾಸಿ ಹಾಗೂ ವೇಶ್ಯೆಯರ ನಡುವಿನ ಅಂತರ ಕಡಿಮೆಯಾಗಿತ್ತು. ಡೂಬಾ ಅಂತೂ ದೇವದಾಸಿಯನ್ನು ಜನ ಸೂಳೆಯೆಂದೇ ಕರೆಯುತ್ತಿದ್ದರೆಂದು ಹೇಳಿರುವ. ಎಲ್ಲ ಜಾತಿಯ ಜನರಲ್ಲೂ ಹೆಣ್ಣುಮಕ್ಕಳನ್ನು ದೇವರಿಗೆ ಬಿಡುವ ಪದ್ಧತಿಯಿತ್ತು. ಇದಲ್ಲದೇ ಕಾಯಿಲೆ, ಆಪತ್ತು, ಮಕ್ಕಳಾಗದಿದ್ದುದು, ಆದರೂ ಬದುಕದೇ ಉಳಿದವು, ಇಂಥ ಕಾರಣಗಳಿಗೆ ಈ ಶತಮಾನದಲ್ಲೂ ಹೆಣ್ಣುಮಕ್ಕಳನ್ನು ಯಲ್ಲಮ್ಮನಿಗೆ "ಬಿಟ್ಟ"ಉದಾಹರಣೆಗಳಿದ್ದಾಗ ಶತಮಾನಗಳ ಹಿಂದಿನ ಪರಿಸ್ಥಿತಿ ಹೇಗಿದ್ದಿರಬಹುದು?

ತುಂಬಕಾಲ ಡಚ್ ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಅನಾಮಧೇಯನೊಬ್ಬನು ತನ್ನವರಿಗೆ ಬರೆದ ಪತ್ರದಲ್ಲಿ ತನಗೆ ಚೆನ್ನಾಗಿ ಗೊತ್ತಿದ್ದ ಮಹಿಳೆಯೊಬ್ಬಳ ಬಗ್ಗೆ ಬರೆದಿದ್ದಾನೆ. ಆಕೆಗೆ ಹುಟ್ಟಿದ ಮಕ್ಕಳೆಲ್ಲ ಸತ್ತು ಹೋಗುತ್ತಿದ್ದವು. ತನಗೆ ಹೆಣ್ಣು ಹುಟ್ಟಿದರೆ, ದೇವಸ್ಥಾನದಲ್ಲಿ ದೇವದಾಸಿಯಾಗಿ ಮಾಡುವದಾಗಿ ಹರಕೆಹೊತ್ತಳು. ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಗಳು ಮುಂದೆ ಹೆಸರಾಂತ ವೇಶ್ಯೆಯಾದಳು' ಇದರಿಂದ ಇಲ್ಲಿಯ ಜನರ ನಂಬಿಕೆ ಎಂತಹದು? ಸಿಗುವ ಪ್ರತಿಫಲ ಎಂತಹದು? ಎಂಬದನ್ನು ತನ್ನ ನಾಡಿನವರ ಊಹೆಗೆ ಬಿಟ್ಟಿದ್ದಾನೆ. ಆದರೆ ಈ ನಾಡಿನವರಿಗೆ ಅದು ಪವಿತ್ರ ಫಲ! ಹರಕೆ ಮುಟ್ಟಿಸಿದ ಧನ್ಯತೆ! ಎಂದು ಆ ವಿದೇಶಿಗನಿಗೇನು ಗೊತ್ತು?

ಅಂದಿನ ಯುಗದಲ್ಲಿ ದೇವದಾಸಿಯರಿಗೆ ತುಂಬ ಬೇಡಿಕೆ ಇದ್ದಂತಿದೆ. ಬಾರ್ಬೋಸಾ ಗಮನಿಸಿದಂತೆ ಪ್ರತಿ ದೇವಾಲಯದಲ್ಲಿ ದೇವರ ಸೇವೆಯಲ್ಲೇ ೫೦ ರಿಂದ ೧೦೦ ದೇವದಾಸಿಯರಿರುತ್ತಿದ್ದರು. ನಿರ್ದಿಷ್ಟ ಪಡಿಸಿದ ಸಮಯದಲ್ಲಿ ದೇವಾಲಯದಲ್ಲಿ ಸಂಗೀತ - ನೃತ್ಯ ಸೇವೆ ಸಲ್ಲಿಸಿ, ಬಳಿಕ ತಮಗೆ ಇಷ್ಟ ಬಂದ ರೀತಿಯಲ್ಲಿ ಕಾಲ ಕಳೆಯುತ್ತಾರೆ' ಎಂದು ಆತನು ಬರೆದಿಟ್ಟರೆ, ಡೂಬಾ, ಅವರೆಲ್ಲ ವಾಸ್ತವದಲ್ಲಿ ವೇಶ್ಯೆಯರೇ ಆಗಿದ್ದರು., ಅಂದಿದ್ದಾನೆ. ಬೇರೆ ಬೇರೆ ರೀತಿಯಲ್ಲಿ ಅವರನ್ನು ಬಳಿಸಿಕೊಳ್ಳಲಾಗುತ್ತಿತ್ತು. ಶ್ರೀಮಂತರು ದೊಡ್ಡ ವ್ಯಕ್ತಿಗಳನ್ನು ನೋಡಲು ಹೋಗುವಾಗ ಈ ದೇವದಾಸಿಯರನ್ನು ಒಯ್ಯುತ್ತಿದ್ದರು ಎಂದಿದ್ದಾನೆ. ವಾರವಧುಗಳು ಅಥವಾ ದೇವದಾಸಿಯರು ಎಲ್ಲ ಮಂಗಲ ಪ್ರಸಂಗಗಳಲ್ಲೂ ಉಪಸ್ಥಿತರಿದ್ದು, ಪೂರ್ಣಕುಂಭ ಹೊತ್ತು ಬೇರೆ ರಾಜ್ಯದಿ ಅರಸರು, ಮಾಂಡಳಿಕರನ್ನಾಗಿಯೂ ಬರಮಾಡಿಕೊಳ್ಳುವ ಪದ್ಧತಿ, ರಾಷ್ಟ್ರಕೂಟರ ಕಾಲದಿಂದಲೂ ರೂಢಿಯಲ್ಲಿತ್ತು.

ಹಿಂದಿನ ಶತಮಾನಗಳಲ್ಲಿ ಸಾಹಿತ್ಯ, ಚರ್ಚೆಗಳು, ಸಂಗೀತಗೋಷ್ಠಿಗಳು ಗಣಿಕೆಯರ ವಾರ ಯೋಷಿತೆಯರ ಸದನಗಳಲ್ಲಿ ನಡೆಯುವದು ಸಾಮಾನ್ಯವಾಗಿತ್ತು. ಏಕೆಂದರೆ ಈ ವರ್ಗ ಓದು - ಬರಹ, ಇತರ ಕಲಾಪರಿಣತಿಗಳತ್ತ ವಿಶೇಷ ಲಕ್ಷ್ಯಪೂರೈಸಬೇಕಿತ್ತು. ಹೀಗಾಗಿ ಬಲ್ಲಿದೆಯಾರಾದ ಅವರೂ ಇಂಥ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ೧೮ ನೇ ಶತಮಾನದಲ್ಲೂ; ದೇವದಾಸಿಯರೆಲ್ಲ ತಾನು ಕಂಡಂತೆ ವಿದ್ಯಾವಂತರಿರುತ್ತಿದ್ದುದನ್ನು ಡೂಬಾ

ದೃಢಪಡಿಸಿದ್ದಾನೆ. "ಓದು ಬರಹಗಳೆಲ್ಲ ಹಾಡು ಕುಣಿತಗಳೊಂದಿಗೆ ದೇವದಾಸಿಯರಿಗಷ್ಟೇ ಮೀಸಲು! ಬೇರೆ ಹೆಂಗಸರು ಇದನ್ನೆಲ್ಲ ಮಾಡುವದು ಮರ್ಯಾದೆಯಲ್ಲ, ಎಂದು ಹಿಂದುಗಳು ನಂಬುತ್ತಾರೆ" ಎಂದಿದ್ದಾನೆ.

ಸೈನಿಕರ ಮನರಂಜನೆಗೆಂದೇ ಐದಾರು ಸಾವಿರ ಹೆಣ್ಣು ಮಕ್ಕಳನ್ನು ವಿಜಯನಗರದ ಅರಸರು ಸಂಬಳದ ಮೇಲೆ ನೇಮಿಸಿಕೊಳ್ಳುತ್ತಿದ್ದರು. ಅವರೆಲ್ಲ ನೃತ್ಯ - ಸಂಗೀತಗಳಲ್ಲಿ ನುರಿತವರು. ಇವರಿಲ್ಲದೇ ಸೈನಿಕರು ಯುದ್ಧಮಾಡಲಾರರು. ಒಮ್ಮತದಿಂದ ಇರಲಾರರು ! ಎಂದು ಬಾರ್ಬೋಸಾ ಗಮನಿಸಿದ್ದನ್ನು ರಾಜರು ತುಂಬ ಹಿಂದೆಯೇ ಮನಗಂಡಿದ್ದರಿಂದ ಸೈನ್ಯದೊಂದಿಗೇ ವಾದ್ಯ - ವಾದನಗಳೊಂದಿಗೆ ವಾರಾಂಗನಾ, ಸೈನ್ಯ, ಹೊರಡುತ್ತಿದ್ದದು ಆಶ್ಚರ್ಯವಲ್ಲ. ಮೊಗಲ್ ಮತ್ತಿತರ ಮುಸ್ಲಿಂ ಅರಸರೂ ಈ ಪದ್ಧತಿಯನ್ನು ಅನುಕರಿಸಿದ್ದು ವಿಶೇಷ!

ಎಲ್ಲ ದೇವಸ್ಥಾನಗಳಲ್ಲೂ ಸಿಬ್ಬಂದಿಯ ಸಂಬಳವನ್ನು ಸಲ್ಲಿಸುವಷ್ಟು ಉತ್ಪನ್ನವಿರುತ್ತಿರಲಿಲ್ಲ. ಸಹಜವಾಗಿಯೇ, ದೇವದಾಸಿಯರು ಯಾರಾದರೊಬ್ಬ ಶ್ರೀಮಂತ ಯಜಮಾನನನ್ನು ಆಶ್ರಯಿಸುವದು ಅನಿವಾರ್ಯವಾಗಿತ್ತು. ಇಂಥವರ ಮಕ್ಕಳು ತಾಯಿಯಿಂದ, ದೇವಾಲಯ ಸಿಬ್ಬಂದಿಯಿಂದ, ಇಲ್ಲವೇ ಖಾಸಗಿ ರೀತಿಯಲ್ಲಿ ನೃತ್ಯ - ಸಂಗೀತ ತರಬೇತಿ ಪಡೆದು ಒಳ್ಳೆಯ ಕಲಾವಿದೆಯರಾಗಿ ಮಾರ್ಪಡುತ್ತಿದ್ದರು. ಈ ಕಲಾವಿದೆಯರನ್ನು ವೇಶ್ಯೆಯರೊಂದಿಗೆ ಡೂಬಾ ಸಮೀಕರಿಸಿದ್ದು ದುರದೃಷ್ಟಕರ.

ಡೂಬಾ ಗಮನಿಸಿದ ಒಂದು ವಿಚಾರ ಹೇಳಲೇಬೇಕು " ಇವರೆಲ್ಲ ಅಂದಚೆಂದನ ಅಲಂಕಾರ ಮಾಡಿಕೊಂಡು, ಹೂಮುಡಿದುಕೊಂಡು ಪುರುಷರನ್ನು ಆಕರ್ಷಿಸುತ್ತಾರೆ. ಆದರೆ ಯುರೋಪಿನ ವೇಶ್ಯೆಯರಿಗೆ ಹೋಲಿಸಿದರೆ ಈ ದೇವದಾಸಿಯರ ನಡತೆ, ಮರ್ಯಾದೆಯಿಂದ ಕೂಡಿದ್ದು, ಎಂದು ಹೇಳಬಹುದು. ಯುರೋಪಿನ ವೇಶ್ಯೆಯರ ಮಾತು, ವರ್ತನೆ, ಗಿರಾಕಿಗಳನ್ನು ಕರೆಯುವಾಗ ಆಡುವ ಕೆಟ್ಟ ಮಾತುಗಳು ತೀರ ಕೆಳದರ್ಜೆಯವು! ಇಂಡಿಯಾದಲ್ಲಿ ಮೈತುಂಬ ಬಟ್ಟೆ ಹಾಕಿಕೊಂಡವರೆಂದರೇ ದೇವದಾಸಿಯರು ! ದೇಹದ ಯಾವ ಅಂಗವೂ ಕಾಣದಂತೆ ಎಚ್ಚರಿಕೆ ವಹಿಸುತ್ತಾರೆ. ಆದರೆ ಇದು ಪುರುಷರನ್ನು ಆಕರ್ಷಿಸುವ ಒಂದು ನವುರಾದ ವಿಧಾನ ಎನ್ನಬಹುದು. ತೋರದ್ದನ್ನು ನೋಡುವ ಆಸೆ ಈ ಪುರುಷರಿಗೆ ಇರುವದನ್ನು ಅರಿತ ಈ ದೇವದಾಸಿಯರು ಬೇಕೆಂದೇ ಮೈಮುಚ್ಚಿಕೊಂಡಿರುತ್ತಾರೆ. ಇವರ ಈ ವರ್ತನೆ ಇಂಡಿಯಾದ ಸ್ತ್ರೀಯರ ಗುಣಕ್ಕೆ ತಕ್ಕಂತೆ ಇದೆ. ಇಲ್ಲಿಯ ಸ್ತ್ರೀಯರು ಎಷ್ಟೇ ಕೆಟ್ಟವರಿರಲಿ, ಬಹಿರಂಗದಲ್ಲಿ ತುಂಬ ಸಭ್ಯತೆಯಿಂದ ನಡೆದುಕೊಳ್ಳುತ್ತಾರೆ. ಎಂಥ ನಾಚಿಕೆ ಗೆಟ್ಟ ವೇಶ್ಯೆಯೂ, ಪುರುಷನನ್ನು ಬೀದಿಯಲ್ಲಿ ನಿಲ್ಲಿಸಿ ಮಾತನಾಡುವದಿಲ್ಲ. ಹಾಗೆಯೇ ಯಾವ ಗಂಡಸೂ ಆಕೆಯನ್ನು ರಸ್ತೆಯಲ್ಲಿ ಮಾತನಾಡಿಸುವದಿಲ್ಲ"

• • •

೧೬. ಸ್ತ್ರೀಸಂರಕ್ಷಣೆ; ಸ್ಮೃತಿಯು ರೂಪಿಸಿದಂತೆ

ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ (ಕ್ರಿ. ಶ. ೧೦೭೦-೧೧೨೬) ಬದುಕಿದ್ದ ವಿಜ್ಞಾನೇಶ್ವರನು 'ಮಿತಾಕ್ಷರಾ' ಎಂಬ ಟೀಕೆಯನ್ನು ಯಾಜ್ಞವಲ್ಕ್ಯಸ್ಮೃತಿಗೆ ಬರೆದಿದ್ದಾನೆ. ಸ್ವತಂತ್ರ ಭಾರತ ತನ್ನದೇ ನ್ಯಾಯದಾನ ಪದ್ಧತಿ ರೂಪಿಸುವ ತನಕ, ಇಡೀ ದೇಶಕ್ಕೆ (ಬಂಗಾಲ ಹಾಗೂ ಕೇರಳ ಬಿಟ್ಟರೆ), ಸಾಮಾಜಿಕ ನ್ಯಾಯದಾನದಲ್ಲಿ 'ಮಿತಾಕ್ಷರಾ' ಪ್ರಮಾಣ ಗ್ರಂಥವಾಗಿತ್ತು. ಸ್ತ್ರೀಧನ, ಆಸ್ತಿ ವಿಭಜನೆ, ದತ್ತಕ ವಿಧಿ ಮುಂತಾದವಕ್ಕೆ ಬ್ರಿಟಿಶರು ಮಿತಾಕ್ಷರಾದ ವ್ಯಾಖ್ಯಾನವನ್ನು ಶಿಫಾರಿಸು ಮಾಡುತ್ತಿದ್ದರು. ಇಲ್ಲಿ ನಾಲ್ಕು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ೧) ಸ್ತ್ರೀ ಧನ, ೨)ಕೆಲ ಸಾಮಾಜಿಕ ರಿಯಾಯತಿ ಗಳು ೩)ಉಪ ಪತ್ನಿಯರಿಗೆ ಅನುಕೂಲಗಳು ೪) ಲೈಂಗಿಕ ದೌರ್ಜನ್ಯಕ್ಕೆ ಶಿಕ್ಷೆ.

ನ್ಯಾಯ ಸಮ್ಮತವಾಗಿ ದೊರೆಗಳು ಆಳುತ್ತಿದ್ದ ಕಾಲದಲ್ಲಿ, ಸ್ಮೃತಿಗಳ ಹೇಳಿಕೆಗೆ ಹೆಚ್ಚಿನ ಮಾನ್ಯತೆ ಇತ್ತು. ಹೀಗಾಗಿ ವಿಜ್ಞಾನೇಶ್ವರನು ಬರೆದಿಟ್ಟ ವ್ಯಾಖ್ಯಾನ, ಕೇವಲ ತಾಳೇಗರಿ-ಗ್ರಂಥಸ್ಥವಾಗಿ ಉಳಿಯದೇ, ಸ್ತ್ರೀಯರ ಹಿತರಕ್ಷಣೆಗಾಗಿ ಬಳಸಲ್ಪಡುತ್ತಿತ್ತು, ಎಂದು ಭಾವಿಸ ಬಹುದು! ಈ ಶತಮಾನದಲ್ಲಿ ನಮ್ಮ ಸಂವಿಧಾನ - ನ್ಯಾಯಾಂಗಗಳು ಸ್ತ್ರೀಯರಿಗೆ ಕಲ್ಪಿಸಿದ ಅನುಕೂಲತೆಗಳ ಮತ್ತು ಅವು ವಾಸ್ತವಿಕವಾಗಿ ಬಳಕೆಯಲ್ಲಿ ಬಂದಿರುವ ಸಾಧ್ಯತೆಯ ಹಿನ್ನೆಲೆಯಲ್ಲಿ ಈ ಅಂಶಗಳನ್ನು ನೋಡಬೇಕಾಗಿದೆ.

i) ಸ್ತ್ರೀಧನ

ಸ್ತ್ರೀಧನ : ಸ್ತ್ರೀಧನದ ಕಲ್ಪನೆ ಪ್ರಾಚೀನಕಾಲದಲ್ಲಿ ಯುಗದಿಂದ ಯುಗಕ್ಕೆ ವಿವಿಧ ರೂಪತಾಳಿದ್ದು ಕಂಡುಬರುತ್ತದೆ. ಕಿಸ್ತಶಕದ ಮೊದಲ ಶತಕಗಳಲ್ಲಿ ಸ್ತ್ರೀಧನವೆಂದರೆ, ಆಕೆ ಮದುವೆಯ ಮೊದಲು ಮತ್ತು ಆ ನಂತರ ಹೊಂದಿದ ಚರಾಚರ ಆಸ್ತಿ' ಎಂದು ಕಾತ್ಯಾಯನನು ವ್ಯಾಪಕವಾದ ವ್ಯಾಖ್ಯೆ ನೀಡಿದ್ದ. ಕಾಣೆಯವರ ಅಭಿಪ್ರಾಯದಲ್ಲಿ ಶತಮಾನಗಳಲ್ಲಿ ಸ್ತ್ರೀಯರ ಪಾಲಿನ ಆಸ್ತಿ ಬೆಳೆಯುತ್ತ ಹೋಗಿ, ಅದಕ್ಕೆ ಕಡಿವಾಣ ಹಾಕಬೇಕಾದ ಕಾಲವೊದಗಿ ಸ್ತ್ರೀಧನದ ಮೂಲ ಕಲ್ಪನೆ ಬದಲಾಯಿತು. ಬರುಬರುತ್ತ ಮಹಿಳೆಯ ಆಸ್ತಿ ಯೆಂದರೆ, ದನಕರು, ಮೇಣೆ, ಆಳುಕಾಳು, ಒಡವೆ, ಬಟ್ಟೆಬರೆ, ಪಾತ್ರೆಗಳಿಗೆ ಸೀಮಿತವಾಯಿತು. ವೈಧವ್ಯದ ಸಂದರ್ಭದಲ್ಲಿ ಆಕೆಗೆ ಒಪ್ಪತ್ತಿನೂಟದ ಮತ್ತು ವರ್ಷಕ್ಕೆರಡು ಸೀರೆಯ ಅಶನಾರ್ಥಕ್ಕೆ ಸ್ತ್ರೀಧನ, ಸೀಮಿತವಾದ ಉದಾಹರಣೆಗಳಿವೆ!

ಮನುವಿನ ಕಾಲಕ್ಕೆ ಸ್ತ್ರೀಧನದ ಮೊತ್ತ ಸಾಕಷ್ಟು ಇದ್ದಿರಬೇಕು. ಸ್ತ್ರೀಧನ ಎತ್ತಿ ಹಾಕಿದವರನ್ನು ಅರಸನು ಪತ್ತೆ ಹಚ್ಚಿ ಶಿಕ್ಷಿಸಬೇಕು ಅಷ್ಟೆ ಅಲ್ಲ ಅದಕ್ಕೆ ಸಂಬಂಧಿತ ಬಡ್ಡಿಯನ್ನೂ ಕೊಡಿಸಬೇಕು ಎಂದು ಸ್ಪಷ್ಟವಾಗಿ ಅವನು ಹೇಳಿದ್ದು, ಯಾಜ್ಞವಲ್ಕ್ಯನೂ ಅದನ್ನು ಸಮರ್ಥಿಸುತ್ತಾನೆ. 'ವೃದ್ಧಿ' ಅಥವಾ ಬಡ್ಡಿಯ ಉಲ್ಲೇಖ ವಿರುವದರಿಂದ ಒಡವೆ, ಬಟ್ಟೆ ಬರೆ ಪಾತ್ರೆ, ಗೋಧನವಲ್ಲದೇ ಹಣವೂ ಆಸ್ತಿಯ ಪಾಲೆಂದು ಹೆಣ್ಣಿಗೆ ಸಂದಾಯವಾಗುತ್ತಿದ್ದುದು ಸ್ಪಷ್ಟ.

ಟೀಕಾಕಾರ, ವಿಜ್ಞಾನೇಶ್ವರನು, ತಂದೆಯಾದವನು ತನ್ನ ಆಸ್ತಿಯನ್ನು ಸ್ವಂತ ಇಚ್ಛೆಯಿಂದ ಪುತ್ರರಿಗೆ ಸಮಾನವಾಗಿ ಭಾಗಮಾಡಿ ಕೊಟ್ಟಾಗ, ಪತ್ನಿಗೂ ಅಷ್ಟೇಪಾಲು ಕೊಡಬೇಕು ಎಂಬ ಯಾಜ್ಞವಲ್ಕ್ಯನ ಅಭಿಪ್ರಾಯವನ್ನು ಎತ್ತಿಹಿಡಿದ. ೧೦ ಶತಮಾನಗಳ ಮೊದಲಿನ ಋಷಿ ಮತವನ್ನು ಮಧ್ಯಯುಗದಲ್ಲಿ ಬಿಗಿಗೊಳ್ಳುತ್ತ ಬಂದ ಸಮಾಜಕ್ಕೆ ಅನ್ವಯಿಸುವಂತೆ ವ್ಯಾಖ್ಯಾನ ನೀಡಿ ತನ್ನ ಉದಾರ ಮನೋಭಾವವನ್ನು ಪ್ರಕಟಿಸಿದ್ದಾನೆ.

ತಲೆತಲಾಂತರವಾಗಿ ಬಂದ ಸ್ತ್ರೀಧನ, ಮದುವೆಯ ಹೆಣ್ಣಿಗೆ ಸಲ್ಲಲೇ ಬೇಕಿತ್ತು. ಇಂಥ ಧನ ಪಡೆಯದಿದ್ದಲ್ಲಿ, ಗಂಡನ ಆಸ್ತಿಯ ಪಾಲಿನ ಅರ್ಧದಷ್ಟು ಪತ್ನಿಗೆ ಹೋಗುತ್ತಿತ್ತು.

ತಾಯಿಯ ಸ್ತ್ರೀಧನ, ನೇರವಾಗಿ ಹೆಣ್ಣುಮಕ್ಕಳಿಗೆ ಹೋಗುತ್ತಿತ್ತು. ಕನ್ಯೆಯರು ಇರದಿದ್ದರೆ ಮಾತ್ರ ಗಂಡು ಮಕ್ಕಳಿಗೆ ಹೋಗುತ್ತಿತ್ತು. ಗಂಡನಿಗೂ ನೇರವಾಗಿ ಸ್ತ್ರೀಧನದ ಮೇಲೆ ಅಧಿಕಾರವಿರಲಿಲ್ಲ. ಬರಗಾಲ, ಧರ್ಮಕಾರ್ಯ, ಕಾಯಿಲೆಗಳಂಥ ಸಮಯದಲ್ಲಿ ಮಾತ್ರ ಸ್ತ್ರೀಧನ, ಬಳಸಬಹುದಾಗಿತ್ತು. ತಾಯಿಯ ಸ್ತ್ರೀತ್ವದ ಅಂಶ, ಹೆಣ್ಣು ಮಕ್ಕಳಲ್ಲಿ ಹರಿದು ಬರುತ್ತದೆ. ಹೀಗಾಗಿ ಅವಳ ಸಂಪತ್ತಿಗೆ ಅವರು ಬಾಧ್ಯಸ್ತರು, ಎಂದು ವಿಜ್ಞಾನೇಶ್ವರ ಹೇಳಿದ್ದಾನೆ. ಕನ್ಯಾಶುಲ್ಕದ ಪದ್ಧತಿಯಿತ್ತು. ಏಕೆಂದರೆ ಮದುವೆಯ ಸಮಯದಲ್ಲಿ ವರನ ಪಕ್ಷದಿಂದ ಸ್ವೀಕರಿಸಿದ ಶುಲ್ಕವನ್ನು ವಿವಾಹವು ಸಂಪನ್ನವಾದ ಹೊತ್ತಿಗೆ ಪೂರ್ತಿಯಾಗಿ ಆ ವಿವಾಹಿತ ಮಗಳಿಗೇ ಕೊಡಬೇಕು, ಎಂದು ನಿರ್ದೇಶಿಸಲಾಗಿದೆ.

ವರದಕ್ಷಿಣೆಯ ಉಲ್ಲೇಖ ಮಿತಾಕ್ಷರಾದಲ್ಲಿ ಇಲ್ಲ. ಈ ದುಷ್ಟ ಪದ್ಧತಿ, ನಂತರದ ಬೆಳವಣಿಗೆಯಿರಬೇಕು.

ಯುರೋಪಿನಲ್ಲಿ 'ಮ್ಯಾರಿಡ್ ವಿಮೆನ್ಸ್ ಪ್ರಾಪರ್ಟಿ ಎಕ್ಟ್' ಅಥವಾ ವಿವಾಹಿತ ಮಹಿಳೆಯರ ಆಸ್ತಿ ಮಸೂದೆ ಬಳಕೆಯಲ್ಲಿ ಬಂದದ್ದು ಕ್ರಿ. ಶ. ೧೮೮೬ ರಲ್ಲಿ. ಆ ತನಕ ಪಾಶ್ಚಾತ್ಯ ಹೆಂಗಳೆಯರಿಗೆ ಕಾಯದೆ ಪ್ರಕಾರ ಸ್ವತಂತ್ರವಾಗಿ ಯಾವ ಆಸ್ತಿ ಅಥವಾ ಹಣಕ್ಕೂ ಹಕ್ಕು ಇರಲಿಲ್ಲ, ಎಂಬುದನ್ನು ನೆನಪಿಸಿಕೊಂಡಾಗ, ಸ್ಮೃತಿಕಾರರು ಸಹಸ್ರಾರು ವರ್ಷ ಮೊದಲೇ ಭಾರತೀಯನಾರಿಯ ಈ ಹಕ್ಕನ್ನು ಗುರುತಿಸಿದ್ದರು. ಅಷ್ಟೇ ಅಲ್ಲ, ಹೆಣ್ಣಿನಿಂದ ಹೆಣ್ಣಿಗೆ ತಲೆ ತಲಾಂತರಗಳಿಂದ ಅದು ಸೇರ್ಪಡೆಯಾಗುವ ವ್ಯವಸ್ಥೆಯನ್ನೂ ಮಾಡಿದ್ದರು ಎಂಬುದು ಸ್ಪಷ್ಟ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಕೊಂಚವಾದರೂ ಆರ್ಥಿಕ ಭದ್ರತೆ ನೀಡುವ ಕ್ರಮವಾಗಿತ್ತು ಅದು. ಶತಮಾನಗಳ ಸಾಮಾಜಿಕ ಏರು ಪೇರುಗಳಲ್ಲಿ ಸ್ತ್ರೀಧನದ ವಿಶ್ಲೇಷಣೆಯೂ

ಬದಲಾಗುತ್ತ ಸ್ಮೃತಿವಾಕ್ಯವನ್ನು ಪಾಲಿಸಗೊಡದವರು, ಸ್ಮೃತಿ ವಾಕ್ಯಗಳನ್ನು ತಿರಿಚಿ ವ್ಯಾಖ್ಯಾನಿಸುವವರು, ಬುಹುಸಂಖ್ಯೆಯಲ್ಲಿದ್ದಾಗ, ಸ್ತ್ರೀಧನದ ಮಟ್ಟಿಗೆ ವ್ಯಾಖ್ಯಾನಕಾರ ವಿಜ್ಞಾನೇಶ್ವರ ಉದಾರಿಯಾಗಿದ್ದ.

ಸೊತ್ತಿನ ಅಥವಾ ಆಸ್ತಿಯ ವಿಭಜನೆಗೆ ಯಾವ ಧಾರ್ಮಿಕ ಹಿನ್ನೆಲೆಯೂ ಇಲ್ಲ!' ಎಂಬರ್ಥದಲ್ಲಿ ಲೌಕಿಕಂ ಏವ ಸ್ವತ್ವಂ (ಸೊತ್ತು ಲೌಕಿಕವಾದದ್ದು) ಎಂದು ಸ್ಪಷ್ಟಪಡಿಸಿದ. ಪ್ರತಿ ವಿಚಾರಕ್ಕೂ ಧರ್ಮವನ್ನೇ ಉದ್ಧರಿಸುತ್ತಿದ್ದ ಯುಗದಲ್ಲಿ ಆಸ್ತಿಯಿದ್ದ ಜನ, ತಮಗೆ ಇಷ್ಟವಿದ್ದಂತೆ ವಿಭಜನೆಮಾಡಲು ವಿಜ್ಞಾನೇಶ್ವರನು ಅವಕಾಶ ಮಾಡಿ ಕೊಟ್ಟ ಸ್ತ್ರೀಯರಿಗೆ ತೋರಿಸಿದ ಪಾಲು ಕಡಿಮೆ ಎನಿಸಿದರೂ ಇದು ಕಡಿಮೆ ಯಾಗುತ್ತ ಹೋದದ್ದೇ ಒಳ್ಳೆಯದಾಯಿತು. ಬಂಗಾಲದ ಸ್ಮೃತಿಕಾರ ಜೀಮೂತವಾಹನನು ಅವಿಭಕ್ತ ಕುಟುಂಬದ ವಿಧವೆಗೆ, ಮಗು ಇಲ್ಲದ ಪತಿ ಪಾಲಿನ ಆಸ್ತಿಯ ಹಕ್ಕನ್ನು ಕೊಡಮಾಡುವ ಔದಾರ್ಯ ತೋರಿದ್ದೇ ಅವಳ ಪಾಲಿಗೆ ಉರಿಯುವ ಅಗ್ನಿಯಾಗಿ ಪರಿಣಮಿಸಿತು! ಏಕೆಂದರೆ ಸತಿಹೋಗಲು ಅವಳ ಮೇಲೆ ಒತ್ತಡಬರಲಾರಂಭಿಸಿತು. ಮೃತನ ಬಂಗಾರ. ಆಸ್ತಿಗಳೇ ಇದಕ್ಕೆ ಕಾರಣವೆಂದು ಬೇರೆ ಹೇಳಬೇಕಿಲ್ಲ. ಹೀಗಾಗಿ ಬಂಗಾಲ ಮತ್ತು ಜೀಮೂತ ವಾಹನನ ದಾಯಭಾಗ ಪದ್ಧತಿ ಪ್ರಚಲಿತವಿದ್ದ ಪ್ರದೇಶದಲ್ಲಿ ಬಲವಂತದ ಸತಿ ಪದ್ಧತಿ ತೀರ ಸಾಮಾನ್ಯವಾಗಿ ಬಿಟ್ಟಿತು. ರಾಜಾರಾಮ ಮೋಹನ ರಾಯ್ ಮುಂತಾದ ಸುಧಾರಕರು ಮತ್ತು ಬ್ರಿಟಿಷ ಆಡಳಿತ ವರ್ಗ ಸೇರಿ ಅದನ್ನು ಕೊನೆಗಾಣಿಸಬೇಕಾಯ್ತು. ಸತಿ ನಿಷೇಧ ಪದ್ಧತಿಗೆ ಉಳಿದ ಯಾವ ರಾಜ್ಯಗಳಿಂದಲೂ ವಿರೋಧ ಬರಲಿಲ್ಲ. ಅಲ್ಲೆಲ್ಲ ಮಿತಾಕ್ಷರಾದ ಆಸ್ತಿವಿಭಜನೆ ಪದ್ಧತಿಯೇ ಜಾರಿಯಲ್ಲಿದ್ದು, ಸ್ತ್ರೀಧನಕ್ಕಾಗಿ ಹೆಣ್ಣನ್ನು ಬಲವಂತವಾಗಿ ಸುಡುವಷ್ಟು ಅದರ ಪ್ರಮಾಣ ಹೆಚ್ಚಿರಲಿಲ್ಲ!

ವಿಜಯನಗರ ಕಾಲಕ್ಕೆ ಸ್ತ್ರೀಧನವು ಇಳಿಮುಖವಾಗುತ್ತ ಬಂದಿತ್ತು. ಬಳಿಕ ಒಡವೆ ಪಾತ್ರೆಬಟ್ಟೆ ಬರೆಗಳಾದಿ ಅಂದರೆ 'ಚರ'ಕ್ಕೆ ಅಷ್ಟೇ ಸೀಮಿತವಾಗಿ ಬಿಟ್ಟಿತು.

೨. ಕೆಲವು ರಿಯಾತಿಗಳು

"ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದು ಈಗ ಕ್ಲೀಶೆ ಆಗಿರುವ ಮನೋಘೋಷಣೆಯನ್ನು "ಕ್ವಚಿದಪಿ ಸ್ತ್ರೀಣಾಂ ನೈವ ಸ್ವಾತಂತ್ರ್ಯಂ" ಎಂದು ಯಾಜ್ಞವಲ್ಕ್ಯ ಸ್ಮೃತಿಯೂ ಎತ್ತಿ ಹಿಡಿಯುತ್ತದೆ. ವಿಜ್ಞಾನೇಶ್ವರನು ಈ ಸ್ಮೃತಿಗೆ ಬರೆದ ಟೀಕೆಯಲ್ಲಿ ಮದುವೆಗೆ ಮೊದಲು ತಂದೆ, ನಂತರ ಪತಿ, ವಾರ್ಧಕ್ಯದಲ್ಲಿ ಮಕ್ಕಳು, ಸ್ತ್ರೀಯರನ್ನು ರಕ್ಷಿಸಬೇಕು. ಇವರೆಲ್ಲರ ಅಭಾವದಲ್ಲಿ ಜ್ಞಾತಿಗಳು ರಕ್ಷಣೆ ನೀಡಬೇಕು. ಅವರಾರೂ ಇಲ್ಲದಿದ್ದಾಗ ಸ್ತ್ರೀಯರ ರಕ್ಷಣೆ ಅರಸನ ಹೊಣೆ! ಎಂದು ಸ್ಪಷ್ಟವಾಗಿ ಹೇಳುತ್ತಾನೆ. ರಕ್ಷಣೆ ಎಂದರೆ ಸ್ತ್ರೀಯನ್ನು ತಂದೆ ಅಥವಾ ಪತಿ ಆದವನು 'ಅಕಾರ್ಯ ಕರಣಾತ್ ರಕ್ಷೇತ್'- 'ಸಲ್ಲದ ಚಟುವಟಿಕೆಗಳಿಂದ ರಕ್ಷಿಸಬೇಕು ಎನ್ನುತ್ತಾನೆಯೇ ಹೊರತು ಸಲ್ಲದ ಅಂಥ ಚಟುವಟಿಕೆಗಳು ಯಾವವು? ಎಂದು

ವಿವರಿಸಿಲ್ಲ! ಅವನ್ನು ಆಯಾ ಪುರುಷರೇ ನಿರ್ಧರಿಸಲು ಪೂರ್ಣ ಸ್ವಾತಂತ್ರ್ಯ ಇದ್ದಂತಿದೆ ! ಆದರೆ ಸ್ತ್ರೀಯರಿಗೆ ಸಲ್ಲಬೇಕಾದ ಗೌರವದ ಕುರಿತು ಉಲ್ಲೇಖಿಸಲು ಸ್ಮೃತಿಕಾರನು ಮರೆತಿಲ್ಲ.

೧) ಹಿಂದಿನಕಾಲದಿಂದಲೂ ನಡೆದು ಬಂದ ರೀತಿಯಂತೆ, ವೃದ್ಧ, ಭಾರಹೊತ್ತವ, ರಾಜ, ಯೋಗಿ, ಸ್ನಾತಕರಂತೆಯೇ ಸ್ತ್ರೀಯರಿಗೆ ಮೊದಲು ದಾರಿ ಬಿಟ್ಟು ಕೊಡಬೇಕಿತ್ತು.

೨) ಮದುವೆಯಾಗಲಿದ್ದ ಕನ್ಯೆಯ ಕುರಿತು ವೃಥಾ ದೋಷಾರೋಪಣೆ ಮಾಡಿದರೆ, ಸುಳ್ಳು ಸುದ್ದಿ ಹರಡಿದರೆ, ಶಿಕ್ಷೆಯಿತ್ತು.

೩) ಹೆಣ್ಣು ಮಕ್ಕಳಿಗೆ ಗಲ್ಲು ಶಿಕ್ಷೆಯಿರಲಿಲ್ಲ.

೪) ಯಾವ ವರ್ಣದ ಹೆಣ್ಣು ಮಕ್ಕಳೂ ಕರ ಕೊಡಬೇಕಾಗಿರಲಿಲ್ಲ.

೫) 'ದಿವ್ಯ' ಪರಿಕ್ಷೆಗಳಲ್ಲಿ ಕ್ರೂರವಾದವನ್ನು ಅವರಿಗೆ ಕೊಡುತ್ತಿರಲಿಲ್ಲ.

೬) ಪತಿತನ ಮಗ ಪತಿತನಾದರೂ ಮಗಳು ಪತಿತಳಲ್ಲ, ಆಕೆಗೆ ಸಲ್ಲಬೇಕಾದ ಒಡವೆ-ವಸ್ತ್ರಗಳನ್ನು ಕೊಟ್ಟು ಸವರ್ಣೀಯನಿಗೆ ಮದುವೆ ಮಾಡಿಕೊಡುವದು ತಂದೆಯ ಹೊಣೆ. ತಂದೆಯ ಪಾಪ, ಮಗಳಿಗೆ ತಟ್ಟುತ್ತಿರಲಿಲ್ಲ.

ಇವೆಲ್ಲ ಔಪಚಾರಿಕ ಅಥವಾ ಗ್ರಂಥಸ್ಥವಾಗಿ ಮಾತ್ರ ಉಳಿದ ಗೌರವದ ಸಂಕೇತಗಳು! ಎಂದು ಭಾವಿಸಿದರೂ ಸ್ತ್ರೀಯರಿಗೆ ಸಲ್ಲಬೇಕಾಗಿದ್ದ ಆಸ್ತಿ ಅಥವಾ ಹಣದ ಕುರಿತಾಗಿ ವಿಜ್ಞಾನೇಶ್ವರನು ಔದಾರ್ಯ ತೋರಿದ್ದಾನೆ.

೩. ಉಪಪತ್ನಿಯರಿಗೆ ಅನುಕೂಲಗಳು : ವೇಶ್ಯೆಯರಿಗೆ ಲೈಂಗಿಕ ಸ್ವಾತಂತ್ರ್ಯ ಇದ್ದರೂ ವೇಶ್ಯಾಗಮನ ಅಪರಾಧವೆಂದು ಸ್ಮೃತಿಗಳು ಸಾರಿದ್ದರಿಂದ ಕೆಲವು ವರ್ಗಗಳಲ್ಲಿ ಮದುವೆಯಾಗಲು ಸಾಧ್ಯವಾಗದಾಗ, ತಾವು ಇಷ್ಟಪಟ್ಟ ಹೆಣ್ಣು ಮಕ್ಕಳನ್ನು ಗೃಹಸ್ಥರು ಉಪ ಪತ್ನಿಯಾಗಿಸುವ ಪದ್ಧತಿ ಬಳಕೆಯಲ್ಲಿ ಬಂದಿತು. ಅವರು ಧರ್ಮಪತ್ನಿಯಾಗುವಂತೆ ಇರಲಿಲ್ಲವಾದರೂ ಸಮಾಜದಲ್ಲಿ ಪ್ರತ್ಯೇಕವಾದ ಗೌರವದ ಸ್ಥಾನ ಕಲ್ಪಿಸಿಕೊಡುವ ಪ್ರಯತ್ನವಿತ್ತು. ಅಗ್ನಿಸಾಕ್ಷಿಯಾಗಿ ಅಲ್ಲದಿದ್ದರೂ ಸಮಾಜಸಾಕ್ಷಿಯಾಗಿ ಕೈಹಿಡಿದಾಕೆಗೆ ಗೃಹಸ್ಥನಾದವನು, ಹೊಟ್ಟೆ ಬಟ್ಟೆಯ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿತ್ತು. ಇವರಲ್ಲಿ 'ಅವರುದ್ಧಾ' ಹಾಗೂ 'ಭುಜಿಷ್ಯಾ' ಎಂಬ ಎರಡುವರ್ಗಗಳಿದ್ದವು. ಅವರುದ್ಧಾ ಸ್ತ್ರೀಯರು, ಶ್ರೀಮಂತರ ವಾಡೆಗಳಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಭುಜಿಷ್ಯಾ ಹೆಣ್ಣುಮಕ್ಕಳು ಶ್ರೀಮಂತರ ಕೃಪಾಪೋಷಿತರಿದ್ದರೂ ವಾಡೆಯ ಹೊರಗಡೆಗೆ ಇರುತ್ತಿದ್ದರು. ಅವರನ್ನು ಇತರರು ಬಯಸಿದರೆ, ತಡವಿದರೆ ಶಿಕ್ಷೆಯಿರುತ್ತಿತ್ತು. ಈ ರೂಢಿ ಶತಮಾನಗಳಲ್ಲಿ ನಡೆದು ಬಂದು ಒಂದು ಜಾತಿಯೇ ಹುಟ್ಟಿಕೊಂಡಿತ್ತು. ಇಂಥ ಮಹಿಳೆಯರಿಗೆ ಅಶನಾರ್ಥದ ಅನುಕೂಲ ಇದ್ದೇ ಇರುತ್ತಿತ್ತು. 'ಮಿತಾಕ್ಷರಾ'ದಲ್ಲಿ ಈ ಅನುಕೂಲವನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಈ ಆಧಾರದ ಮೇಲೆಯೇ 'ಹಿಂದೂ ಕೋಡ್' ಬಳಕೆಯಲ್ಲಿ ಬರುವತನಕ 'ಅವರುದ್ಧಾ' ವರ್ಗದ ಉಪಪತ್ನಿಯರಿಗೆ ಆಸ್ತಿಯ ಹಕ್ಕು ಕೊಡಮಾಡಿ, ಅದನ್ನು ಬ್ರಿಟಿಷ್

ಆಡಳಿತ ಕಾಲದಲ್ಲಿ ಪ್ರಿವಿಕೌನ್ಸಿಲ್‌ದವರು ಎತ್ತಿಹಿಡಿದ ಪ್ರಸಂಗಗಳನ್ನು ಪಿ. ವಿ. ಕಾಣೆಯವರು ತಮ್ಮ 'ಧರ್ಮ ಶಾಸ್ತ್ರದ ಚರಿತ್ರೆಯಲ್ಲಿ ಎತ್ತಿ ಉಲ್ಲೇಖಿಸಿದ್ದಾರೆ.

೪. **ಸ್ತ್ರೀ- ದೌರ್ಜನ್ಯದ ಕಡಿವಾಣ :** ಸಾಮಾನ್ಯವಾಗಿ ಆದರ್ಶ ಗೃಹಜೀವನವನ್ನೇ ಬೋಧಿಸುವ ಸ್ಮೃತಿ ಗ್ರಂಥಗಳು ವೇಶ್ಯಾವೃತ್ತಿಯನ್ನು ಖಂಡಿಸಿದರೆ ಆಶ್ಚರ್ಯವಿಲ್ಲ. ಆದರೆ ಅಂಥ ದುರದೃಷ್ಟೆಯರಿಗೆ ಸಾಮಾಜಿಕ ರಕ್ಷಣೆಯಿರುತ್ತಿತ್ತು, ಎಂಬುದು ಗಮನಾರ್ಹ. ಸವರ್ಣದ ಸ್ತ್ರೀಯರು (ಹೆಚ್ಚಾಗಿ ಬಾಲವಿಧವೆಯರು) ವೇಶ್ಯೆ ಅಥವಾ ದಾಸಿಯಾಗುವ ಸಾಧ್ಯತೆ ಇತ್ತು. ಸ್ವೈರಿಣಿ (ಸ್ವಂತ ಇಚ್ಛೆಯಿಂದ ಹೊರಬಂದಾಕೆ) ಅಬ್ರಾಹ್ಮಣಿ, ವೇಶ್ಯಾ, ದಾಸಿ, ನಿಷ್ಕಾಸಿನಿ (ಹೊರಹಾಕಲ್ಪಟ್ಟವಳು), ಎಂದು ಈ ವರ್ಗದ ವಿಭಜನೆ ಮನುಸ್ಮೃತಿ ಕಾಲದಿಂದಲೂ ನಡೆದುಬಂದಿತ್ತು. ಆದರೆ ಇವರೆಲ್ಲ ಕಾಮಿಸುವ ಸಾಮಾನ್ಯರಿಗೆ ಸುಲಭವಾಗಿ ಲಭ್ಯರಲ್ಲ ! ಎಂದು ವ್ಯಾಖ್ಯಾನಕಾರ, ವಿಜ್ಞಾನೇಶ್ವರನು ಎಚ್ಚರಿಸಿದ್ದಾನೆ!ಇನ್ನು ಉಪಪತ್ನಿಯಾಗಿರಿಸಿಕೊಂಡ ಮಹಿಳೆಯ ರಕ್ಷಣೆಯ ಜವಾಬ್ದಾರಿ ಆಯಾ ಗಂಡಸಿಗೆ ಸೇರಿತ್ತು.

ಈಗಿನ 'ಸೆಕ್ಸ್‌ವರ್ಕರ್ಸ್' ಅಥವಾ ಅಂದಿನ ಯುಗದಲ್ಲಿ ಹೊಟ್ಟೆ ಪಾಡಿಗೆ ಅಲ್ಲದೇ ವೇಶ್ಯಾವೃತ್ತಿಯನ್ನು ಕೈಕೊಳ್ಳಬೇಕಾಗಿ ಬಂದ ಸ್ತ್ರೀಯರಿಗೆ ದಂಡವಿತ್ತು. ಹಣಕ್ಕೆ ಬಳಿಗೆ ಬಂದವರ ಮೇಲೂ ಬಲಾತ್ಕಾರ ಮಾಡಿದರೆ, ಹಲ್ಲು -ಉಗುರುಗಳಿಂದ ಗಾಯಮಾಡಿದರೆ ಶಿಕ್ಷೆಯಿತ್ತು. ದಣಿದವರು, ವ್ಯಾಧಿಗ್ರಸ್ತರು ಮತ್ತು ರಾಜಕಾರ್ಯದಲ್ಲಿ ಇದ್ದವರಿಂದ ಹಣಪಡೆದರೂ ಸಂಭೋಗಕ್ಕೆ ಒಪ್ಪದಿದ್ದರೆ ಆ ಬೆಲೆವೆಣ್ಣಿಗೆ ಶಿಕ್ಷೆಯಿರಲಿಲ್ಲ.

ಪರಸ್ತ್ರೀಯಿಂದ ಸುಖಪಡೆದು ನಂತರ ಹಣಕೊಡದವನಿಂದ ನಿರ್ದಿಷ್ಟಪಡಿಸಿದ ಹಣದ ಎಂಟು ಪಟ್ಟು ದಂಡದ ಮೊತ್ತವನ್ನು ಆ ಹೆಣ್ಣಿಗೆ ಕೊಡಿಸಬೇಕು ಮತ್ತು ಅಷ್ಟೇ ಮೊತ್ತದ ರಾಜದಂಡವನ್ನು ತಪ್ಪಿತಸ್ಥನು ತೆರಬೇಕು ಎಂದು ಮಿತಾಕ್ಷರಾ ವಿಧಿಸುತ್ತದೆ ! ಅದರಂತೆ ಮೊದಲಿಗೇ ಹಣ ಪಡೆದು ಕರಾರು ಪಾಲಿಸದಿದ್ದರೆ ಆ ಹೆಂಗಸೂ ಶಿಕ್ಷಾರ್ಹಳಾಗುತ್ತಿದ್ದಳು. ಪ್ರವ್ರಾಜಿತೆ (ಸನ್ಯಾಸಿನಿ)ಯನ್ನು ಬಲಾತ್ಕರಿಸಿದರೆ ದೊಡ್ಡ ಶಿಕ್ಷೆ ಆಗುತ್ತಿತ್ತು.

ವಿಕೃತ ಕಾಮವ್ಯವಹಾರ (ಅಯೋನೌ ಗಚ್ಛತಃ) ದಂಡನೀಯವಾಗಿತ್ತು. ಮಾನವ ಸ್ವಭಾವದ ವಿಕೃತಿಗಳನ್ನು ಗುರುತಿಸಿ, ಶಿಕ್ಷಾರ್ಹವಾಗಿಸಿದ್ದು ಗಮನಾರ್ಹವಾಗಿದೆ

ದೇವದಾಸಿಯರ ಉಲ್ಲೇಖ ಇಲ್ಲ! ಈ ಕಾಲಕ್ಕೆ ದೊಡ್ಡ ದೊಡ್ಡ ದೇವಸ್ಥಾನಗಳನ್ನು ಕಟ್ಟಿಸಿ ಸೂಳೆಯರನ್ನು, ಪಾತ್ರದವರನ್ನು, ದಾಸಿಯರನ್ನು ದೇವಸ್ಥಾನಕ್ಕೆ ಬಿಡುವುದನ್ನು ನೋಡಿದ್ದಾಗಿದೆ. ಆದರೆ ತೀರ ಇತ್ತೀಚಿನವರೆಗೆ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಿದ್ದ 'ಮಿತಾಕ್ಷರಾ' ಈ ಬಗ್ಗೆ ಏನೂ ಉಲ್ಲೇಖಿಸದಿರುವುದು ಮಹತ್ವದ ಅಂಶವಾಗಿದೆ. ಪುರಾಣಗಳೆಲ್ಲ ದೇವದಾಸಿ ಪದ್ಧತಿಯನ್ನು ಪುರಸ್ಕರಿಸಿದರೂ, ಸ್ಮೃತಿಗ್ರಂಥಗಳು ಮೌನತಾಳಿವೆ. ಆದ್ದರಿಂದ ಈ ಪದ್ಧತಿಗೆ ಸ್ಮೃತಿಸಮ್ಮತಿ ಇರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಸಹಸ್ರಾರು ವರ್ಷಗಳಿಂದ ನಡೆದು ಬಂದು ಸಮಾಜದ ಅವಿಭಾಜ್ಯ ಅಂಗವಾಗಿದ್ದರೂ ಹೆಣ್ಣುಗಳನ್ನು ದೇವಸ್ಥಾನಕ್ಕೆ

ಬಿಟ್ಟು ಪರೋಕ್ಷ ವೇಶ್ಯಾವೃತ್ತಿಯೆಂದು ಗಣಿಸಲ್ಪಟ್ಟ ಪದ್ಧತಿಯನ್ನು, ದೇಶವೇ ಮಾನ್ಯ ಮಾಡಿದಂಥ ಮಿತಾಕ್ಷರ ಸಂಹಿತೆ ಪುರಸ್ಕರಿಸಲಿಲ್ಲ! ಎನ್ನುವದು ಮಧ್ಯಯುಗದ ಸಾಮಾಜಿಕ ಜೀವನದಲ್ಲಿ ವಿಸ್ಮಯಕಾರಿ ಅಂಶವಾಗಿದೆ.

• • •

೧೭. ಹಿಂದಿನವರ ಕಣ್ಣಲ್ಲಿ ಸ್ತ್ರೀ

i) ಶಾಸನಗಳಲ್ಲಿ ಕಂಡರಿಸಿದಂತೆ : ಬ್ರಹ್ಮಶಿವನೆಂಬ ೧೨ನೇ ಶತಮಾನದ, ಜೈನಕವಿ, ತನ್ನ ಸಮಯಪರೀಕ್ಷೆಯಲ್ಲಿ 'ಅರುಗುಲಿವೆಂಡಿ'ರ ಲಕ್ಷಣಗಳನ್ನು ಹೇಳಿದ್ದಾನೆ. ನಿಜವಾದ ಧರ್ಮವನ್ನು ಬಿಟ್ಟು, ಕಲ್ಲುಮರಗಳನ್ನು ಪೂಜಿಸುವದು, ನೆರೆಮನೆಯವರು ಜಾತ್ರೆಗೆ ಕರೆದಾಗ ಗಂಡನು ಕಳಿಸದಿದ್ದರೆ, ಅವನನ್ನು ನಿಂದಿಸುವದು, ಜೈನಮುನಿಗಳಿಗೆ ದಾನಾದಿಗಳನ್ನು ನೀಡದಿರುವುದು, ಮಗನ ವ್ಯಸನಗಳಿಗೆ ವೆಚ್ಚ ಮಾಡುವುದು, ಮೊದಲಾದವುಗಳನ್ನು ಗೃಹಿಣಿಯಾದವಳು ತಪ್ಪಿಸಬೇಕಿತ್ತು. ಆದರ್ಶಪತ್ನಿಯಂತೆ ಆದರ್ಶ ತಾಯಿಯಾದವಳು, ಕೆಲವೊಂದು ಗುಣಗಳನ್ನು ಪ್ರಯತ್ನಪೂರ್ವಕ ಬೆಳೆಸಿಕೊಳ್ಳಬೇಕಾಗುತ್ತಿತ್ತು. ಇಂಥ ತಾಯಂದಿರ ಬಗ್ಗೆ ಮಕ್ಕಳಾದವರು ಹೆಮ್ಮೆಪಟ್ಟುಕೊಂಡು ಸಾರ್ವಜನಿಕವಾಗಿ ಅಭಿನಂದಿಸುತ್ತಿದ್ದರು. ರಟ್ಟ ಮಾದಿರಾಜನ ಕ್ರಿ. ಶ. ೧೨೨೮ರ ಶಾಸನವು ಆತನ ತಾಯಿ ಮಾಳಲ ದೇವಿಯ ಗುಣಗಾನ ಮಾಡುತ್ತದೆ. ಹೆಂಗಸರಲ್ಲಿ ಕುಟಿಲೆ, ಕುಮಾರ್ಗೆ, ಕುತ್ಸಿತೆ, ಕುರೂಪಿ, ಕುಭಾಗ್ಯೆ, ಕುಶೀಲೆ, ಜಿಹ್ವಾಲಂಪಟೆ ಶಠೆ, ಧೂರ್ತೆ, ದುರ್ಗುಣೆ, ದುರ್ವಿನೀತೆ ದುಷ್ಟೆ, ಕಷ್ಟೆ ಮುಂತಾದವರಿದ್ದು ಇಂಥ "ಅಟಮಟಗಾತಿ"ಯರಿಂದ ಮಾಳಲದೇವಿ ತುಂಬ ಭಿನ್ನವಾಗಿದ್ದಳು. ಕೆಲವರು ಮನೆಯಲ್ಲಿ ಬೇಕಾದಷ್ಟು ಸಾಮಾನು ಇದ್ದರೂ ಇಲ್ಲವೆನ್ನುತ್ತ ಸ್ವಾರ್ಥದಿಂದ ಹಣವನ್ನು ಶೇಖರಿಸುತ್ತಿದ್ದರು. ಕೆಲವರು ತಮ್ಮ ಪತಿ ಮತ್ತು ಮಕ್ಕಳಿಗೂ ಸರಿಯಾಗಿ ಇಕ್ಕದೇ ಜೀವಿಸುವದನ್ನು ರೂಢಿಸಿಕೊಂಡಿದ್ದರು. ಮನೆಗೆ ಅತಿಥಿಗಳು ಬಂದರೆ ಮನೆಯೊಳಗೆ ಅಡಗಿಕೊಳ್ಳುತ್ತಿದ್ದರು. ಎದುರಿಗೆ ಸಿಕ್ಕರೆ ನೀವಾರು ? ಎಂದು ಕೇಳಿ ಪರಿಚಯವಿಲ್ಲದವರಂತೆ ನಟಿಸುತ್ತಿದ್ದರು. ನಾನಾ ನೆವಗಳಿಂದ ಮನೆಬಿಟ್ಟು ಹೊರಗೆ ಅಲೆಯುವವರಲ್ಲದೇ ಕೆಲವರು ಪತಿಗೆ ವಿಷವಿಕ್ಕಿ ಆತ ಕ್ಷಯ, ಕಾಮಳೆ, ಪಾಂಡು ಗುಲ್ಮ ಮೊದಲಾದ ರೋಗಗಳಿಂದ ಅತಿಕೃಶನಾಗಿ ನರಳುವಂತೆ ಮಾಡುತ್ತಿದ್ದರು. ಇಂಥ ದುಶ್ಚರಿತ್ರೆಯರಿಗೂ ಮಾಳಲದೇವಿಗೂ ಎಷ್ಟು ಅಂತರವಿತ್ತೆಂದು ಶಾಸನ ಕವಿ ಉದ್ಗರಿಸಿದ್ದಾನೆ !

ವಿಜಯನಗರದ ಪ್ರೌಢದೇವರಾಯನ ಮಂತ್ರಿ ಲಕ್ಷ್ಮೀಧರಾಮಾತ್ಯನು ತನ್ನ ಉದಾರ ವ್ಯಕ್ತಿತ್ವದ ಬೆಳವಣಿಗೆಗೆ ತಾಯಿ ಸಿಂಗಲೆಯು ಹೇಗೆ ಕಾರಣಳಾಗಿದ್ದಳು, ಎಂದು ಶಾಸನ ರೂಪದಿಂದ ನೆನೆಸಿಕೊಂಡಿದ್ದು ಸುಪರಿಚಿತವಾಗಿದೆ. ತಾನು ಶಿಶುವಿದ್ದಾಗ ಹಾಲು ಕುಡಿಸುತ್ತಲೇ ತಾಯಿ, ಕಿವಿಗೆ ಎರೆದ ಉಪದೇಶಾಮೃತವನ್ನು ಮುಂದೆ ಜೀವನದಲ್ಲಿ ಸಾರ್ಥಕವಾಗಿ ಬಳಸಿದ

ಬಗ್ಗೆ ಆತನು ಅಭಿಮಾನ ತಾಳಿದ್ದಾನೆ. 'ಕೆರೆಯನ್ನು ಕಟ್ಟಿಸು, ಬಾವಿಯನ್ನು ಸವೆಸು, ದೇವಾಲಯಗಳನ್ನು ಮಾಡಿಸು. ಸೆರೆಸಿಕ್ಕಿದ ಅನಾಥರನ್ನು ಬಿಡಿಸು. ಮಿತ್ರರಿಗೆ ಸಹಾಯ ನೀಡು. ನಂಬಿದವರಿಗೆ ಆಶ್ರಯ ನೀಡು. ಶಿಷ್ಯರನ್ನು ರಕ್ಷಿಸು ಎಂದೆಲ್ಲ ಕಿವಿಯಲ್ಲಿ ತಾಯಿ ಉಸುರಿದ ಮಾತುಗಳನ್ನು ಮುಂದೆ ಆತ ನಿಜವಾಗಿಸಿದ. ಎಳೆತನದಲ್ಲಿಯೇ ಲೋಕಕಲ್ಯಾಣದ ತರಬೇತಿಗೆ ಕಾರಣಳಾಗಿದ್ದ ಮಾತೆಗೆ ಶಾಸನವೊಂದನ್ನು ಸಡಿಲಿಸಿ ಕೃತಜ್ಞತೆ ಸಲ್ಲಿಸಿದ.

ಚಾಲುಕ್ಯ ಹಾಗೂ ಹೊಯ್ಸಳ ರಾಣಿಯರು ಹಾಗೂ ರಾಜಮನೆತನದ ಹೆಂಗಳೆಯರು ಆದರ್ಶಪ್ರಾಯರಾಗಿದ್ದರೆಂದು ಶಾಸನಗಳು ಸಾರುತ್ತವೆ. ಅವೆಲ್ಲ ರಾಣಿಯರು ಅಥವಾ ಅವರ ಆಶ್ರಿತರು ನಿಲ್ಲಿಸಿದವುಗಳೇ ಆದ್ದರಿಂದ ಅತಿಶಯೋಕ್ತಿಗಳಿಂದ ಕೂಡಿದವು ಇದ್ದರೆ ಆಶ್ಚರ್ಯವಿಲ್ಲ ! ಒಂದನ್ನು ಮಾತ್ರ ಅದರ ವೈಶಿಷ್ಟ್ಯಕ್ಕಾಗಿ ಗಮನಿಸಬಹುದು. ಹೊಯ್ಸಳ ವೀರಬಲ್ಲಾಳ ಮಂತ್ರಿ ಚಂದ್ರಮೌಳಿ ಎಂಬಾತನು ಶೈವನಾದರೂ ಆತನ ಹೆಂಡತಿ ಆಚಲೆ ಜೈನಳು. (ಇಂಥ ಅಂತರ್‌ಮತೀಯ ವಿವಾಹಗಳು ಆ ಯುಗದಲ್ಲಿ ಸಾಮಾನ್ಯವಾಗಿದ್ದು ಸುಖದಾಂಪತ್ಯಕ್ಕೆ ಅಡ್ಡಿಯೊಡ್ಡುತ್ತಿರಲಿಲ್ಲ) ಶ್ರವಣಬೆಳ್ಗೊಳದ ಶಾಸನದ ವಿವರಗಳಿಂದ ಆಕೆ ಒಬ್ಬ ಅಸಾಧಾರಣ ಮಹಿಳೆಯಿದ್ದಿರಬೇಕು ಅನ್ನಿಸುತ್ತದೆ. ಅವಳಿಗೆ ಯೋಗ್ಯ ಪತಿಯಾಗಲು (ಅರ್ಹತ್‌ಕಾಂತ) ಚಂದ್ರಮೌಳಿಯು ವಿಶೇಷ ಪ್ರಯತ್ನಪಟ್ಟಂತೆ ತೋರುತ್ತದೆ. ಗೌರಿದೇವಿ ಅನೇಕ ತಪಗಳನ್ನು ಮಾಡಿ ಚಂದ್ರಮೌಳಿ (ಶಿವ)ನನ್ನು ಪಡೆದಳು. ಆದರೆ ಈ ಚಂದ್ರಮೌಳಿಯೋ ಹಲವು ಜನ್ಮಗಳಲ್ಲಿ ತಪಸ್ಸು ಮಾಡಿ ಆಚಲೆಯನ್ನು ಪಡೆದ. (ಫಲವುಂಬುವದೊಳ್ ನಿರಂತರಂ ಸಾರತಪಂಗಳಂ ಪಡೆದು ತಾಂ ನೆರೆದಂ ಗಡ) ಎಂದು ಶಾಸನ ಸಾರುತ್ತದೆ! ಪ್ರಸಿದ್ಧ ರಾಜನ ಮಂತ್ರಿಯೊಬ್ಬ ಸಾರ್ವಜನಿಕವಾಗಿ, ತನ್ನ ಹೆಂಡತಿಯನ್ನು ಕುರಿತು ಬರೆಯಿಸಿದ ಈ ಶಾಸನದ ಹೇಳಿಕೆ ಮಧ್ಯಯುಗದ ಸಾಮಾಜಿಕ ಸ್ಥಿತಿ-ಗತಿಗಳನ್ನು ಊಹಿಸಿದಾಗ ಸಾಮಾನ್ಯವೇನೂ ಅಲ್ಲ. ಧೀಮಂತರ ವರ್ಗದಲ್ಲಿ ಸ್ತ್ರೀಯರ ಬಗ್ಗೆ ಹೆಚ್ಚಿನ ಗೌರವ-ಆದರಗಳು ಇದ್ದೇ ಇದ್ದವು.

ii) ಸಾಹಿತ್ಯದಲ್ಲಿ ಚಿತ್ರಿಸಿದಂತೆ :

"ಪುರುಷರಂತೆ ಸ್ತ್ರೀಯರೂ ಕವಿಯಾಗಬಲ್ಲರು. ಸಂಸ್ಕಾರವೆಂಬುದು ಇಬ್ಬರಿಗೂ ಸಮಾನ, ಸಹಜವೆಂದು ಘೋಷಿಸಿದ ಕವಿ ಅಲಂಕಾರಶಾಸ್ತ್ರಜ್ಞ ರಾಜಶೇಖರನು ಸ್ವತಃ ಸಾಹಿತಿ ಪತ್ನಿಯನ್ನು ಹೊಂದಿದ್ದ. ಎಗ್ಗಿಲ್ಲದೇ ಸ್ತ್ರೀಯರು ಬರೆದ ಕಾವ್ಯಭಾಗಗಳನ್ನು ಉದಾಹರಣೆಯಾಗಿ ತನ್ನ ಕಾವ್ಯ ಮೀಮಾಂಸೆಯಲ್ಲಿ ಉದ್ಧರಿಸಿದ್ದ. ಇಂಥ ಧೀಮಂತರು ಸ್ತ್ರೀ ಪುರುಷ ಸಮಾನತೆಯಲ್ಲಿ ವಿಶ್ವಾಸವಿಟ್ಟವರು, ಕರ್ನಾಟಕದಲ್ಲಿ ಇದ್ದಿರಬಹುದಾದರೂ ಅವರ ಧ್ವನಿ ಇತರರಿಗೆ ತಲುಪಿರಲಾರದು! ಕರ್ನಾಟಕಕ್ಕೇ ವಿಶೇಷವಾದ ವೀರಶೈವ ಕ್ರಾಂತಿಯಲ್ಲಿ ಶರಣರೊಂದಿಗೆ ಬೌದ್ಧಿಕ, ಆಧ್ಯಾತ್ಮಿಕ, ಸಮಾನತೆ, ಸಾಧಿಸಿದ ಹಲವು ವನಿತೆಯರು ಆಗಿಹೋಗಿದ್ದಾರೆ.


ಮೊಲೆಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ -ಗಂಡೋ ರಾಮನಾಥಾ ?

ಎಂದು ಪ್ರಶ್ನಿಸಿದವಳು ಗೊಗ್ಗವ್ವೆ. ಆದರೂ ಜನ್ಮತಃ ಸ್ತ್ರೀಯರ ಸ್ವಭಾವ ಚಂಚಲವೆಂದೂ ನದಿಯು ಸಮುದ್ರದಲ್ಲಿ ಲೀನವಾಗುವಂತೆ ಮದುವೆಯ ನಂತರ ಆಕೆಯ ವ್ಯಕ್ತಿತ್ವ ಪತಿಯಲ್ಲಿ ಲೀನವಾಗುತ್ತದೆ ಎಂದು ಸಮಾಜದ ದೊಡ್ಡ ವರ್ಗ ನಂಬುತ್ತಿತ್ತು. ಹೆಚ್ಚಿನ ಜೈನಕವಿಗಳು ಸ್ತ್ರೀಯರ ಬಗ್ಗೆ ಅನಾದರವನ್ನೇ ತಾಳಿದ್ದರು. 'ಅಂದಾಗಲಿ, ಇಂದಾಗಲಿ ನಿಜವಾಗಿ ತಮ್ಮ ಪತಿಗೆ ಹಿತವನ್ನೇ ಬಯಸುವ ಸ್ತ್ರೀಯರು ದುರ್ಲಭರು, ಕುಲಟೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ! ಎಂದು ಕವಿ ಪಾರ್ಶ್ವ ತನಗಿಂತ ಮೊದಲಿನ ಜೈನ ಕವಿಗಳ ಅಭಿಪ್ರಾಯವನ್ನೇ ಉದ್ಧರಿಸಿದ್ದ 'ಚಪಳತ್ವಂ ಸ್ತ್ರೀಗೆ' ಎಂಬುದು ಸಾಮಾನ್ಯ ನಂಬುಗೆಯಾಗಿತ್ತು.

"ಸ್ತ್ರೀಯರು ನಿಯಂತ್ರಣದಲ್ಲಿದ್ದರೇ ಸರಿಯಾಗಿ ಬಾಳುತ್ತಾರೆ. ಇಲ್ಲದಿದ್ದರೆ ಸಂದರ್ಭ ದೊರೆತಾಗ ಗೌರವಿಸಬೇಕಾದ ಕುಲದ ಉನ್ನತಿಯನ್ನೇ ಮರೆತು ದೋಷತುಂಬಿದ ಪುರುಷನೊಡನೆ ಸೇರುವರು." (ಕುಲಮಂ ಕಾಯಲ್ ಮರೆದುಂ ನೆರೆದಪರೇ ದೋಷದೂಷಿತ ಮತಿಗಳ್) ಎಂದು ಕೆಲವರು ನಂಬುತ್ತಿದ್ದರು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುಸಮರ್ಥನೆ ಸಾಮಾನ್ಯವಾಗಿತ್ತು.

ಸ್ತ್ರೀ ಪುರುಷರಿಬ್ಬರಿಗೂ ಕಟ್ಟುನಿಟ್ಟಾದ ಗೃಹಜೀವನ ಬೋಧಿಸಿದ ಸಮಾಜದಲ್ಲಿ ಕೂಡ ಹಾದರ, ವ್ಯಭಿಚಾರಗಳು ಇದ್ದೇ ಇದ್ದವು. ಸೈನಿಕರಂಥ ವೃತ್ತಿಯವರು ತುಂಬ ಕಾಲ ಮನೆ ಬಿಟ್ಟು ಹೊರಗೆ ಇರುವ ಸಂದರ್ಭಗಳು ಅನೇಕ ಇರುತ್ತಿದ್ದವು. ಇಂಥವರ ಎಳೆವಯಸ್ಸಿನ ಹೆಂಡಂದಿರು ದೌರ್ಬಲ್ಯಕ್ಕೊಳಗಾಗುವದು ಸ್ವಾಭಾವಿಕವಾಗಿತ್ತು. ಭಟಕಳದ ಶಿಲ್ಪಿಯೊಬ್ಬ ಇಂಥ ಪ್ರಸಂಗವನ್ನು ಒಂದೇ ಶಿಲ್ಪದಲ್ಲಿ ತುಂಬ ಅರ್ಥಗರ್ಭಿತವಾಗಿ ರೂಪಿಸಿದ್ದಾನೆ. ತನ್ನ ಪ್ರಿಯಕರನೊಡನೆ ತೀರ ನಿಕಟ ಸಂಪರ್ಕದಲ್ಲಿದ್ದಾಗ ಆಕೆಯ ಪತಿ ಇದ್ದಕ್ಕಿದ್ದಂತೆ ಪ್ರವೇಶಿಸುತ್ತಾನೆ. ಅಪರಿಚಿತನನ್ನು ಕೊಲ್ಲಲು ಆತ ಖಡ್ಗ ಹಿರಿದದ್ದು. ಬಟ್ಟೆಯಿಲ್ಲದ ಸ್ತ್ರೀ ಆತನಿಗೆ ಕೊಲ್ಲದಿರುವಂತೆ ಪ್ರಾರ್ಥಿಸಿಕೊಳ್ಳುವದು, ಆಕೆಯ ಸ್ನೇಹಿತ ಕಕ್ಕಾವಿಕ್ಕಿಯಾಗಿ ಶಿಕ್ಷೆಗೆ ಸಿದ್ಧನಾದಂತೆ ತೋರುವದು ನೈಜವಾಗಿದೆ. (ಚಿತ್ರ ಫಲಕ 22)ಹೆಣ್ಣನ್ನು ದಂಡಿಸುವದು ತೀರ ಸಾಮಾನ್ಯ ಘಟನೆಯಾಗಿತ್ತು. (ಚಿತ್ರ ಅದೇ)

ಅರಸರಲ್ಲಿ, ಆಳುವ ವರ್ಗದವರಲ್ಲಿ ಶೈವ, ವೈಷ್ಣವ, ಜೈನ ಮತಭೇದವಿಲ್ಲದೇ ವಿವಾಹಗಳು ನಡೆಯುತ್ತಿದ್ದವೆಂದು ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯ ಜಾಕಲದೇವಿ ವಿಷ್ಣುವರ್ಧನ-ಶಾಂತಲೆ, ಚಂದ್ರಮೌಳಿ-ಆಚಲೆಯರ ಆದರ್ಶ ದಾಂಪತ್ಯದಿಂದ





247



248

i. ವ್ಯಭಿಚಾರಕ್ಕೆ ದಂಡನೆ

ii. ಸ್ತ್ರೀಗೆ ಶಿಕ್ಷೆ ತೀರ ಸಾಮಾನ್ಯವಾಗಿತ್ತು

ತಿಳಿದುಕೊಳ್ಳಬಹುದಾಗಿದೆ. ಪ್ರತಿ ವ್ಯಕ್ತಿಗೂ ತನ್ನ ದೈವ ನಂಬಿಕೆಯಂತೆ ನಡೆಯುವ, ಆರಾಧಿಸುವ ದೇವತೆಯನ್ನೇ ಪೂಜಿಸುವ ಸ್ವಾತಂತ್ರ್ಯವಿದೆ ! ಎಂದು ನಂಬಿದ ದೇಶದಲ್ಲಿ, ದೇವನೊಬ್ಬ ನಾಮ ಹಲವು, ಎಂಬ ಸನಾತನ ರೂಢಿಯನ್ನು ತನ್ನದಾಗಿಸಿಕೊಂಡ ವರ್ಗಕ್ಕೆ ತೊಂದರೆ ಇರಲಿಲ್ಲ. ಆದರೆ ಜನಸಾಮಾನ್ಯರಲ್ಲಿ ಒಂದೇ ಮನೆಯಲ್ಲಿ ಪ್ರತಿ ಸದಸ್ಯನ ಆಚಾರ-ವಿಚಾರ, ನಿಲುವುಗಳು ಬೇರೆ ಬೇರೆಯಾಗಿದ್ದರೆ ಹೊಂದಾಣಿಕೆ ಹೇಗೆ ಸಾಧ್ಯ ?

ಹೆಂಡತಿ ಮಾಹೇಶ್ವರಿ ಗಡ
ಗಂಡಂಜೈನಂ ಗಡವನ ಮಕ್ಕಳ್ಗಡ
ಮಾರ್ತಂಡಂಗೆ ಭಕ್ತರೆನಿಪಾ
ಭಂಡಂಗುತ್ತಮದ ಜೈನವೆಸರೆಂತೆಗಂ?

ಹೆಂಡತಿ ಮಹೇಶ್ವರನ ಉಪಾಸಕಿ, ಗಂಡ ಜೈನ, ಮಕ್ಕಳು ಸೂರ್ಯ ಮಾರ್ತಂಡನ ಉಪಾಸಕರಾದರೆ ಉತ್ತಮ ಜೈನರಾಗುವದು ಹೇಗೆ ? ಎಂದು ಒಬ್ಬ ಕವಿ ಸಂದೇಹ ವ್ಯಕ್ತಪಡಿಸಿದರೆ,

ಗಂಡ ಶಿವಲಿಂಗದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ ಮಾಂಸ
ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ !

ಎಂಬ ಬಸವೇಶ್ವರ ವಚನದಲ್ಲಿ ವಿಷಮ ನಂಬಿಕೆಗಳು ಬೇರೂರಿದಲ್ಲಿ ಮಾನಸಿಕ ಪರಿವರ್ತನೆ ಸಾಧ್ಯವಿಲ್ಲ ! ಎಂಬ ಧ್ವನಿಯಿದೆ.

ವೀರಶೈವ ಅನುಭಾವಿಗಳಲ್ಲಿ ಹೆಚ್ಚಿನವರಿಗೆಲ್ಲ ಅನುಕೂಲ ಸತಿಯರು ಇದ್ದರು. ಬಸವ-ನೀಳಾದೇವಿ, ಮೋಳಿಗೆಯ ಮಾರಯ್ಯ-ಮಹದೇವಿ, ದಾಸಿಮಯ್ಯ-ದುಗ್ಗಳೆ, ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ ಇವರುಗಳ ದಾಂಪತ್ಯ ಶತಕಗಳಿಂದ ಲಿಂಗ ಸಮಾನತೆಯ ಆದರ್ಶ ಸಾರುತ್ತ ನಿಂತಿದೆ. "ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ! ಎಂದು ಹೆಣ್ಣನ್ನು ದೈವತ್ವಕ್ಕೇರಿಸಿದ ಸಂದೇಶ, ಕಲ್ಯಾಣದ ಕ್ರಾಂತಿಯ ನಂತರ ಮುಂದರಿಯಲೇ ಇಲ್ಲ. ಶತಕಗಳವರೆಗೂ ಸಾಧಾರಣವಾಗಿ ಹೆಣ್ಣು ಉಸಿರುಗಟ್ಟಿಸುವ ವಾತಾವರಣದಲ್ಲಿ ತನ್ನತನವನ್ನು ಗುರುತಿಸುವ ಯತ್ನದಲ್ಲೇ ಕಳೆದಳು. ಒಂದು ವರ್ಗಕ್ಕೆ (ಅರಸರು, ಆಡಳಿತ ವರ್ಗ) ವಿದ್ಯೆ ಕಲೆಗಳ ಅಭ್ಯಾಸಕ್ಕೆ ಅಭಿವ್ಯಕ್ತಿಗೆ ಅವಕಾಶವಿದ್ದರೂ ಅದು ಕೆಲವರಿಗೇ ಮೀಸಲಾಗುವಂತೆ ಜಾಗೃತಿ ವಹಿಸಲಾಗಿತ್ತು. ಹೆಣ್ಣು ಜನ್ಮ ಕೀಳು ! ಎಂಬ ಭಾವನೆ ಮುಂದುವರಿಯಿತು.

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು ?

ಎಂದು ಸಾಹಿತ್ಯ ಕೃತಿಯೊಂದರ ಮೂಲಕ ತೋಡಿಕೊಂಡ ಸಂಚಿಯ ಹೊನ್ನಮ್ಮನ ಆಕ್ರೋಶ ಶತಮಾನಗಳಲ್ಲಿ ಕನ್ನಡಿತಿಯರ ಮೂಕ ಅನಿಸಿಕೆಯ ಧ್ವನಿಯಾಗಿದೆ.

ಇಷ್ಟಿದ್ದರೂ ತನ್ನ ಪಾಲಿಗೆ ಬಂದ ಬಾಳಿನಲ್ಲಿ, ತನಗೆ ಸಾಧ್ಯವಾದ ರೀತಿಯಲ್ಲಿ ಕುಟುಂಬಕ್ಕೆ, ಸಮಾಜಕ್ಕೆ ನೆರವಾಗಲು ಸರ್ವರೀತಿಯಲ್ಲಿ ಯತ್ನಿಸಿ, ಹಿರಿಯರಿಗೆ ಎದುರಾಡದೇ ಗಂಡನಿಗೆ ಅನುಕೂಲೆಯಾಗಿ ಮಕ್ಕಳನ್ನು ಚೆನ್ನಾಗಿ ಬೆಳೆಸುವತ್ತ ಗಮನ ನೀಡಿ ಅಂದಿನವರ ನೀತಿ-ಆದರ್ಶಗಳನ್ನು ಅನುಸರಿಸುವಂತೆ ನೋಡಿಕೊಂಡು, ಕೈಲಾದ ದಾನಧರ್ಮಗಳನ್ನು ಮಾಡಿ ಬಾಳನ್ನು ಬೆಳಗಿಸಲೆತ್ನಿಸಿದ ಗೃಹಿಣಿಯರ ಕುರಿತು ಹೆಚ್ಚಿನ ವಿವರಗಳು ದೊರೆಯುವದಿಲ್ಲ. ಆದರೇನಂತೆ ? ಬಹುಸಂಖ್ಯಾತರಾದ ಇವರೇ ಸಮಾಜದ, ಕುಟುಂಬದ / ಕನ್ನಡ ಸಮಾಜದ ಬೆನ್ನೆಲುವಾಗಿದ್ದರು, ಎಂಬುದನ್ನೂ ಮರೆಯುವಂತಿಲ್ಲ !

ಹೀಗೆ ಹೆಣ್ಣಿನ ಬಗ್ಗೆ ಹಲವು ಭಿನ್ನಾಭಿಪ್ರಾಯಗಳು ಬಳಕೆಯಲ್ಲಿ ಇದ್ದವು. ಆದರೆ ಅರ್ಧನಾರೀಶ್ವರನನ್ನು ಪೂಜಿಸುವ ದೇಶದಲ್ಲಿ, ಶಕ್ತಿ ದೇವತೆಯನ್ನು ಬಗೆಬಗೆಯಲ್ಲಿ ಆರಾಧಿಸುವ ನಾಡಿನಲ್ಲಿ, ಎಲ್ಲರೂ ಹೆಣ್ಣನ್ನು ಕೀಳಾಗಿ ಕಾಣುತ್ತಿದ್ದರು ಎನ್ನಲು ಬಾರದು. ಇಂದಿನ ಸ್ತ್ರೀವಾದ, ಸ್ತ್ರೀ ಪುರುಷ ಸಮಾನತೆಯ ಹಾಗೂ ಸ್ಪರ್ಧೆಯ ವಿಚಾರಗಳು ಅಂದಿನವರನ್ನು ಬಾಧಿಸಲಿಲ್ಲ. ಪಾರ್ವತಿ ಪರಮೇಶ್ವರರನ್ನು ಏಕಾಕೃತಿಯಲ್ಲಿ ಕಟೆದ ಬಾದಾಮಿ ಚಾಳುಕ್ಯರ ಅಮೋಘ ಶಿಲ್ಪವೊಂದು ಕಣ್ಣೆದುರು ಬರುತ್ತದೆ. ಸ್ತ್ರೀ ಪುರುಷರು ಸ್ಪರ್ಧಿಗಳಲ್ಲ. ಒಬ್ಬರಿಗೊಬ್ಬರು ಪೂರಕಶಕ್ತಿಗಳು ಎಂದು ನಂಬಿದ ವಿದ್ಯಾವರ್ಗ ಹಿಂದೆಯೂ ಇತ್ತು. ಹೆಣ್ಣಿನ ಸುಪ್ತ ಚೇತನದ ಅರಿವು ಚೆನ್ನಾಗಿದ್ದ ಕವಿ ಹೀಗೆ ಉದ್ಗರಿಸಿದ್ದಾನೆ.

"ನೆಲೆದಪ್ಪಿದೆಡೆಗೆ ಮತಿ ಸಂ
ಚಲಿಸಿರ್ದಡೆ ಗನ್ಯದೇಶ ಮಾದೆಡೆಗೆ ಖಳರ್
ಮುಳಿವೆಡೆಗೆ ಬುದ್ಧಿವೇಳಲ್
ಕುಲವಧುವೇ ಕಾರಣಂ"

"ಗಂಡಸು ಎಷ್ಟೇ ಸ್ವೇಚ್ಛೆಯಿಂದ ನಡೆಯಲಿ, ನೆಲೆತಪ್ಪಿದಾಗ ! ಬುದ್ಧಿ ತಿರುಗಿದಾಗ, ದೇಶಾಂತರದಲ್ಲಿದ್ದಾಗ, ದುಷ್ಟರು ಸಿಟ್ಟಿಗೆದ್ದಾಗ, ಗಂಡಸಿಗೆ ಬುದ್ಧಿ ಹೇಳಲು, ಕುಲವಧುವೊಬ್ಬಳೇ ಸಮರ್ಥಳು!" ಇದು ಅನುಭವ -ಸಿದ್ಧವಾದ ಮಾತು. ಮೇಲೆ ಕಾಣಿಸಿದ ಸಂಕಟ ಪ್ರಸಂಗಗಳಲ್ಲಿ ಗಂಡಸಿಗಿಂತ ಅದೆಷ್ಟೊಪಟ್ಟು ಹೆಚ್ಚಿನ ತಾಳ್ಮೆಯನ್ನು ಹೆಣ್ಣಾದವಳು ತೋರ್ಪಡಿಸುತ್ತಾಳೆ. ಇದನ್ನು ಒಪ್ಪಿಕೊಂಡು ಪದ್ಯರೂಪದಲ್ಲಿ ಪ್ರಕಟಪಡಿಸಿದವನು ಗಂಡಸೇ ಅಲ್ಲವೇ?

• • •



ಡಾ. ಜ್ಯೋತ್ಸ್ನಾ ಕಾಮತ್ ಎಮ್. ಎ. ಡಿ. ಎಡ್. ಪಿ. ಎಚ್.ಡಿ. (೧೯೩೭ –)

ಅಖಿಲಭಾರತ ಆಕಾಶವಾಣಿಯಲ್ಲಿ ಮೂವತ್ತು ವರ್ಷ ಸೇವೆ ಸಲ್ಲಿಸಿ ಬೆಂಗಳೂರು ಕೇಂದ್ರದ ನಿರ್ದೇಶಕಿಯಾಗಿ ನಿವೃತ್ತರಾಗಿರುವ ಶ್ರೀಮತಿ ಜ್ಯೋತ್ಸ್ನಾ ಕಾಮತರು ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿ ತಳೆದವರು. 'ಮಧ್ಯಯುಗದ ಕರ್ನಾಟಕದ ಸಾಮಾಜಿಕ ಜೀವನ' ಎಂಬುದರ ಕುರಿತು ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಜಿ. ಎಸ್. ದೀಕ್ಷಿತರ ಮಾರ್ಗದರ್ಶನದಲ್ಲಿ ೧೯೭೨ ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಇವರು ಬರೆದ ೧೦ ಗ್ರಂಥಗಳಲ್ಲಿ ಆರು, ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟಿವೆ. ಉಳಿದವು ವಿನೋದ ಹಾಗೂ ಲಲಿತ ಪ್ರಬಂಧಗಳು. ಇವರ 'ಕರ್ನಾಟಕ ಶಿಕ್ಷಣ ಪರಂಪರೆ' ೧೯೮೮ ನೇ ವರ್ಷದ ಅತ್ಯುತ್ತಮ ಸೃಜನೇತರ ಕೃತಿಯೆಂದು ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾಗಿದೆ. ವಿದ್ಯುನ್ಮಾನ ಮಾಧ್ಯಮದ ಮೂಲಕ ಕನ್ನಡ ನುಡಿಯ ಸೇವೆಗೆ ೧೯೯೨ ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸಂದಾಯವಾಗಿದೆ. ಇವರು ೨೦೦೧ ನೇ ವರ್ಷ ಉಡುಪಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ೧೫ ನೇ ವಾರ್ಷಿಕ ಅಧಿವೇಶನದ ಸರ್ವಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದರು.

ಶತಮಾನಗಳಲ್ಲಿ ಕನ್ನಡ ಮಹಿಳೆಯರ ಸ್ಥಾನಮಾನಗಳ ಕುರಿತು ವಿಶೇಷ ಅಧ್ಯಯನ ನಡೆಸಿದ ಡಾ. ಜ್ಯೋತ್ಸ್ನಾ ಕಾಮತರು "ಕೈಗನ್ನಡಿಯಲ್ಲಿ ಕನ್ನಡಿತಿ" ಎಂಬ ಈ ಸಂಕಲನದಲ್ಲಿ ಆಡಳಿತ, ರಣರಂಗ, ಲಲಿತಕಲೆ. ಆಧ್ಯಾತ್ಮ, ಜನಸೇವೆ, ಶಿಕ್ಷಣ ಕ್ಷೇತ್ರಗಳಲ್ಲಿ ಮಹಿಳಾ ಸಾಧನೆಯನ್ನು ಪರಿಚಯಿಸಿದ್ದಾರೆ. ಅದರಂತೆ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಸ್ವಂತಿಕೆ ಮೆರೆದವರ ದೈನಂದಿನ, ಸಾಮೂಹಿಕ ಜೀವನದ, ತುಡಿತದ, ಚಿತ್ರಗಳನ್ನು ಕೊಡಲು ಹವಣಿಸಿದ್ದಾರೆ. ಮನೆತನಕ್ಕಾಗಿ, ಸಮಾಜಕ್ಕಾಗಿ, ನಾಡಿಗಾಗಿ, ಜೀವನ ಸವೆಸಿ, ಬೆಳಕಿಗೆ ಬಾರದೇ ಅದೆಷ್ಟು ಮಹಿಳಾ ಮಣಿಯರಾಗಿ ಹೋಗಿದ್ದಾರೋ ! ಇಲ್ಲಿ ಕಾಣಿಸಿರುವ ಹತ್ತಾರು ಚಿತ್ರಗಳು, ಕಿರಿದಾದ ಕೈಗನ್ನಡಿಯಲ್ಲಿ ಮಾತ್ರ ಅಸ್ಪಷ್ಟವಾಗಿ ಗೋಚರಿಸುವಂಥ ಕನ್ನಡಿತಿಯರ ಚಿತ್ರಗಳಾಗಿವೆ.